ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಸಾಧನೆ

ಸಂಪುಟ 3
ಸಂಚಿಕೆ 1
ಜನವರಿ – ಮಾರ್ಚ್ 1974

ಸಾಧನೆ

ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

SADHANE: Kannada Quarterly of the Bangalore University, Bangalore
Vol. 3 No. 1 January-March 1974

Chief Editor: Dr. G. S. Shivarudrappa

ಪ್ರಧಾನ ಸಂಪಾದಕರು :
ಡಾ. ಜಿ. ಎಸ್. ಶಿವರುದ್ರಪ್ಪ

ಸಂಪಾದಕರು :
ಡಾ. ಎಂ. ಚಿದಾನಂದಮೂರ್ತಿ
ಡಾ. ಪಿ. ಎಸ್. ವೆಂಕಟಸ್ವಾಮಿ ಶೆಟ್ಟಿ
ಡಾ. ಸೂರ್ಯನಾಥ ಕಾಮತ್

ವಾರ್ಷಿಕ ಚಂದಾ : ರೂ. 6–00
ರೂ. 4–00 [ವಿದ್ಯಾರ್ಥಿಗಳಿಗೆ]

ಪ್ರಕಾಶಕರು : ಕೆ. ಸಿ. ಶಿವಪ್ಪ
ಉಪ-ನಿರ್ದೇಶಕ, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-560039

ಮುದ್ರಕರು :
ಬೆಂಗಳೂರು ವಿಶ್ವವಿದ್ಯಾಲಯ ಮುದ್ರಣಾಲಯ, ಬೆಂಗಳೂರು-560039

ಪರಿವಿಡಿ

ಇತಿವೃತ್ತ

ವೇಣುಗೋಪಾಲ ಸೊರಬ

ಯಾರೊ ಹೇರಿದ ಬದುಕು
ನನಗೆ ನಾನೇ ಹೊಣೆ ?
ಈ ಸುತ್ತುಮುತ್ತಲಿನ ಕಲ್ಲು ಮಣ್ಣು
ಹಸುರು ಹೊಳೆ ಬೆಟ್ಟದ ಕೋಡು
ಪ್ರಪಾತ ವಾತ ಪ್ರೇತ
ನನ್ನೊಳಗೂ ಇದೆಯೇನು ?
ನಾನೆ ಬಯಸಿದ್ದೇನು ?

ಕಣ್ಣು ಮುಚ್ಚಿ
ಇಡೀ ವಿಶ್ವವನ್ನೇ
ಅಡ್ಡಗಾಲು ಹಾಕಿ ತಬ್ಬಿ
ಹೆಣ ಹೊತ್ತ ಹಾಗೆ
ಹೆಗಲಿಗೇರಿಸಲೆ ? ಕಂಡ ಕಂಡಲ್ಲೆಲ್ಲ
ನೇಗಿಲು ನುಗ್ಗಿ ಬೀಜಾವಾಪನ ಮಾಡಿ
ಹುರಿಯೋಡು ತಲೆಗೆ
ತಲೆ ತಲಾಂತರಕ್ಕೆ
ಮಾಡಬೇಕೇನು ಶ್ರಾದ್ಧ ?
ಬಾರಿಸಬೇಕೇನು ವಾದ್ಯ ಅವನದ್ಧ ?

ನಾನನುಭವಿಸುತ್ತೇನೆ ಎನ್ನುವುದು ಸುಳ್ಳು
ಅನುಭವಿಸಲಾರದ ಜಳ್ಳು ಜನವೇದನೆಗೆ
ವೇದ್ಯವೆ ಬದುಕು ? ಹುಟ್ಟಿದ್ದಕ್ಕೂ
ಜನ್ಮ ಸಂಸ್ಕಾರ ಮುಟ್ಟಿ ಕೆಡವಿದ್ದಕ್ಕೂ
ಯಾರ ಯಾರ ಮುಚ್ಚಳಿಕೆ ? ಯಾರ ಸಾಕ್ಷಿ ?

ಮೂಡಿದರೆ ಮೂಡು
ಕಾಡಿದರೆ ಕಾಡು

ಸಂಭಾವ್ಯತೆಯ ಕೇಡು
ಇದರ ನಡುಕಲ ಬದುಕು
ಸವೆದ ಮಾರ್ಗದ ಉದ್ದ ಸವೆದ ನಾಣ್ಯ
ಬದುಕೆಂಬುದಿತ್ತು
ಬದುಕೆಂಬುದಿರಬಹುದು
ಮತ್ತೆ ಬರಬಹುದು ಅಸ್ತಿತ್ವಕ್ಕೆ
ಈಗಿಲ್ಲ
ಅನುಭವಿಸಿ ಸಾರಥ್ಯವಹಿಸಿ
ನಟಿಸಿ ನಾಡನು ಬೆಳಸಿ
ಇದ್ದುದೇ ಬದುಕೆಂದು ಸಾರುವಂತಹ ಶೌರ್ಯ

ಯಾರು ಹೊರಟರೊ ಎಲ್ಲೊ
ನಾನಿಲ್ಲಿ ಈಗ ಸಿಕ್ಕು ತೊಳಲುತ್ತಿರುವೆ
ಈ ಹೊರೆಯ ಮುಂದಿನ ಹೆಗಲಿಗನುವದಿಸಿ
ಇಲ್ಲಿಗೇ ಕೈ ತೊಳೆದುಕೊಳ್ಳೋಣವೆನಿಸಿದರೂ
ಈ ಅನಿಸಿಕೆಯ ಹಿಂದೆ ನಿಂತವರು
ಈ ಅನಿಸಿಕೆಗೆ ಮಾತು ಕೊಟ್ಟವರು
ಚರ್ಮಕ್ಕೆ ಮೆರುಗು ಕೊಟ್ಟು ನಾಮ ಬಳಿದವರು
ಕಿತ್ತು ಎಸೆದವರು ಯಾರು ?

ಇಂದಿನಭಿಷೇಕಕ್ಕೆ ಇಂದು ಸಂತೃಪ್ತಿ
ನಾಳೆ ಎಂದಿಗೂ ನಾಳೆ
ಹೋಳು ಹೋಳೆ
ಈ ಗಾಜು ಮನೆಯಲ್ಲಿ ನಿಂತವರು
ನಿನ್ನೆ ಇಂದು ನಾಳೆಗಳ
ಗೆರೆ ಎಳೆದು ಅನಾಸಕ್ತಿಗೆ ರೂಪ ಕಳೆದಿದ್ದಾರೆ
ಚೇಷ್ಟೆಯೇ ಬದುಕಾಗಿ ಕವನ ಹೊಸೆದಿದ್ದಾರೆ
ಹಲ್ಲು ಮಸೆದಿದ್ದಾರೆ ಜಿದ್ದಿಗಿಳಿದಿದ್ದಾರೆ

ಅಮೂರ್ತಕ್ಕೆ ನೀನು ಹೇಳುವ ರೂಪಕೊಟ್ಟು
ನೀನು ಹೇಳುವ ಮಾತುಕೊಟ್ಟು
ನಾನೇಕೆ ಗುಲಾಮನಾಗಲಿ ಹೇಳು ?
ಇಲ್ಲದ್ದರಿಂದ ಇದ್ದದ್ದು ಬಂದರೆ

ಇಲ್ಲಪ್ಪನಿಂದ ಇದ್ದಪ್ಪ ಆದರೆ
ನಾನು ನೀನು ಏನಾಗುತ್ತಿದ್ದೇವೆ ?
ಏನಾಗಿ ಏನು ನಡೆಸಿದ್ದೇವೆ ?

ಜಿಜ್ಞಾಸುಗವನೇ ವೃತ್ತ
ಅವನೇ ಕೇಂದ್ರ ಬಿಂದು
ಅವನಿಂದು ಘುಂದುಗಳ ವೊತ್ತ
ವೊಲದ ಕೋಡಿನ ವೃತ್ತ
ಕಂಡೂ ಕಂಡೂ ಇತಿಮಿತಿಯು
ಶಿಸ್ತನೆಣಿಸದೆಯೆ
ಮಧ್ಯಸ್ಥನಾಗಿ
ಔದಾರ್ಯಕ್ಕೆ ನಿರ್ಮಾಯಕ್ಕೆ
ಗಾಳಿಯಾಡುವ
ಭೂತಚೇಷ್ಟೆಯಾಡುವ

ಇರುವ ಪ್ರಪಂಚಗಳ ಬಳಗಕ್ಕೆ
ಎದುರು ನಿಂತರೂ
ಸತಾಯಿಸುವ ಗುಹ್ಯಕ್ಕೆ
ವೊನೆಗೆ ನನೆಗೆ ಅರಸಿಕೆಗೆ
ಒಗ್ಗುದಾಣಕ್ಕೆ
ಚಿತ್ರಕೂಟಕ್ಕೆ ವೈಶಂಪಾಯನನ ಸದಸ್ಸಿಗೆ
ಕುಂಭಮೇಳಕ್ಕೆ ಜೋಳದ ಪಾಳಿಗೆ
ವೊಳೆ ಹೊಡೆದು ನಿಲ್ಲಿಸಿದೆ ಬದುಕು

ನಾನೇಕಾಕಿ
ಇತಿವೃತ್ತವೆಂದು ಕಂಡರಿಸಲಾಗದ
ಆತ್ಮವೃತ್ತವಲ್ಲದ

ಹೆಜ್ಜೆ ಹೆಜ್ಜೆಗೂ ಏರಿದಂತೆಲ್ಲ
ಜತೆಜತೆಗೆ ಕೆಳಕ್ಕೆ ದೂಡುವ
ಸಮ್ಮತವಲ್ಲದ ಸ್ವಾಸ್ಥ್ಯವಿಲ್ಲದ
ಪರಂಪರೆಗೆ ಸೆಡ್ಡುಹೊಡೆಯುವ
ಮಾಧ್ಯಾಹ್ನಿಕಕ್ಕೆ ವೈಜ್ಞಾನಿಕವೆನ್ನುವ

ಸಂಧ್ಯೆಗೆ ಸಾಮಗಾನಕ್ಕೆ ಸಲ್ಲಾಪಿಸುವ
ತಿಲ್ಲಾನ ಕುಣಿವ
ಮಾಂಸಮಜ್ಜೆಯ ದರ್ಬಾರು ವಿಜೃಂಭಿಸುವ

ಅಂಕುರಾರ್ಪಣಕ್ಕೂ
ಕೈಸನ್ನೆಗೂ
ಅವ್ಯಕ್ತಗುಂಭಕ್ಕೂ
ಪ್ರವಹಿಸುವ ಸಮಷ್ಟಿ ಸ್ವಾರ್ಥಕ್ಕೂ
ನಿಷ್ಠೆ ಕರ್ತವ್ಯಕ್ಕೂ
ಸೋಮಾರಿ ಔದಾರ್ಯಕ್ಕೂ
ಸಾಮೂಹಿಕ ಹತ್ಯಾಕಾಂಡಕ್ಕೂ
ಹೊಸ ಜಗತ್ತಿನ ಉದಯಕ್ಕೂ
ಎರಡಿಲ್ಲದಂತೆ ಮಾಗಿ ಮುಗಿಯುವುದಕ್ಕೂ
ಛಿದ್ರವಿಚ್ಛಿದ್ರ ಹರಡಿಹಂಚುವುದಕ್ಕೂ

ನಡುವಿನ ಕಂದರದ
ಅನ್ವೇಷಣೆಗೆ ತೊಡಗಿ
ಹೊರಟಾಗ, ಅದೇ ನನ್ನ
ಇತಿವೃತ್ತ

ವಿಮರ್ಶಕನು ಕೇಳಬೇಕಾದ ಪ್ರಶ್ನೆಗಳು

ವಿ. ಕೃ. ಗೋಕಾಕ್

ಒಂದು ಕಲಾಕೃತಿಯ ನೈಜ, ಅನನ್ಯ ಅನುಭವವನ್ನು ಪಡೆಯಬೇಕೆಂದು ನಮ್ಮಾಸೆಯಾಗಿದೆಯೆಂದಿಟ್ಟುಕೊಳ್ಳೋಣ. ಅದಕ್ಕಾಗಿ ಬೇಕಾದ ತೆರೆದ ಮನಸ್ಸು, ವ್ಯುತ್ಪತ್ತಿ, ಕಲಾವಿದನ ತತ್ವ-ಧೋರಣೆಗಳ ಬಗ್ಗೆ ತಿಳುವಳಿಕೆ, – ಎಲ್ಲ ಇದೆಯೆಂದು ಗ್ರಹಿಸೋಣ. ಆಗ ಮುಂದೆ ನಾವು ಮಾಡಬೇಕಾದುದೇನು ? ಆ ಕೃತಿ ಸಾಹಿತ್ಯದ ಯಾವುದೇ ಪ್ರಕಾರದ್ದಾಗಬಹುದು. ಅದರ ಯುಗ ಯಾವುದೇ ಇದ್ದು ಅದರ ತತ್ವ ಏನೇ ಇರಬಹುದು. ಆದರ ರಸಾನುಭವವನ್ನು ಪಡೆಯುವದು ಹೇಗೆ ?

ಈ ವಿಧಾನ ಸಂಕೀರ್ಣವಾಗಿದೆ. ಅನುಭವದ ಸತ್ಯ-ಸೌಂದರ್ಯಗಳನ್ನು ಅನನ್ಯವಾಗಿ ಹಾಗು ಪೂರ್ಣವಾಗಿ ಸವಿಯಬೇಕೆಂದರೆ ಈ ವಿಧಾನದ ಸ್ವೀಕಾರ ಅನಿವಾರ್ಯವಾಗುತ್ತದೆ.

ಒಂದು ಕಾವ್ಯದ ಅರ್ಥ, ಅಂತರಾರ್ಥ, ಚಿತ್ರಸೃಷ್ಟಿ, ಜೀವನ ದೃಷ್ಟಿ, ಭಾವ, ಶೈಲಿ, ಛಂದಸ್ಸು ಮೊದಲಾದ ಅಂಗಗಳಿಗೆ ಸಂಬಂಧಿಸಿದ – ನಮಗೆ ಹೊಳೆದ ಸಂಗತಿಗಳನ್ನು ನಾವು ಮೊದಲು ಸಂಗ್ರಹಿಸಬೇಕಾಗುತ್ತದೆ. ನಮ್ಮ ಅಂತಃಕರಣ ವನ್ನು ತಟ್ಟಿದ ಅಂಶಗಳನ್ನು ಗುರುತು ಹಾಕಿಕೊಳ್ಳಬೇಕಾಗುತ್ತದೆ. ಇಂತಹ ಅಂಶ ಗಳಲ್ಲಿ ಒಂದೊಂದು ಕಾವ್ಯಾಂಗದ ಬಗ್ಗೆ ಯಾವ continuity ಇಲ್ಲವೆ ಸೂತ್ರವನ್ನು ನಾವು ಕಾಣುತ್ತೇವೋ ಅದನ್ನು ಲಕ್ಷ್ಯದಲ್ಲಿಡಬೇಕಾಗುತ್ತದೆ. ಸಾಹಿತ್ಯದಲ್ಲಿ ಯಾವ ಮಾರ್ಗದ ಲಕ್ಷಣ ಇವು, ಆ ಮಾರ್ಗದ ತತ್ವ-ಧೋರಣೆಗಳೇನು, ಈ ಕೃತಿಯಲ್ಲಿ ಅವು ಹೇಗೆ ವ್ಯಕ್ತವಾಗಿವೆಯೆಂಬುದನ್ನು ನಿಷ್ಕರ್ಷಿಸಬೇಕಾಗುತ್ತದೆ.

ಎರಡನೆಯದಾಗಿ ಆ ಕಾವ್ಯದಲ್ಲಿ ಅಭಿವ್ಯಕ್ತಿಯನ್ನು ಪಡೆದ ಸ್ಫೂರ್ತಿ-ದರ್ಶನ ಗಳ ಮೂಲ ಹಾಗು ಪರಿಸರವನ್ನು ನಾವು ಪರಿಗಣಿಸಬೇಕಾಗುತ್ತದೆ. ಯಾವ ಐತಿ ಹಾಸಿಕ ಒತ್ತಡಗಳಿಂದ ಕವಿಗೆ ಈ ಅನುಭವ ಬಂತು ? ಯಾವ ಕಾಲಮಾನಕ್ಕೆ ಆತ ಹೊಂದಿಕೊಂಡಿದ್ದಾನೆ ? ಆ ಕಾಲ-ಪರಿಸ್ಥಿತಿಯ ಪ್ರಭಾವ ಕವಿಯ ಮೇಲೆ ಏನಾಗಿದೆ? ಸುತ್ತಣ ರಾಜಕೀಯ ಸಾಮಾಜಿಕ ಪರಿಸ್ಥಿತಿ ಅವನ ಅಂತಃಕರಣವನ್ನು ಯಾವ ರೀತಿ ಯಲ್ಲಿ ಕೆರಳಿತು ? ಸಮಾಜದ ಯಾವ ವರ್ಗ-ವಿಭಾಗಗಳನ್ನು ಅವನು ಹೊಂದಿಕೊಂಡಿ ದ್ದಾನೆ ? ಅಲ್ಲಿಯ ರೂಢಿ-ಸಂಪ್ರದಾಯಗಳಿಂದ ಅವನ ದೃಷ್ಟಿ ಎಷ್ಟರ ಮಟ್ಟಿಗೆ

ರೂಪಿತವಾಯಿತು ? ಅವನು ಹುಟ್ಟಿ ಬೆಳೆದ ಕುಟುಂಬದ ಸ್ಥಿತಿ-ಗತಿಗಳೇನು ? ಅಲ್ಲಿ ಕವಿ ಯಾವ ರೀತಿಯಲ್ಲಿ ಬೆಳೆದ ? ಶಿಕ್ಷಣದಿಂದ ಅವನ ಮೇಲಾದ ಪರಿಣಾಮವೇನು ? ಒಟ್ಟಾರೆ ಅವನ ಚರಿತ್ರೆಯಲ್ಲಿಯ ದೈವೀ-ದುರ್ದೈವೀ ಘಟನೆಗಳು ಅವನ ಅನುಭವಕ್ಕೆ ಯಾವ ತಿರುವನ್ನು ಕೊಟ್ಟವು ? ಕವಿಯ ಚಿತ್ತವೃತ್ತಿ ವಿಶೇಷವಾವುದು ? ಮನೋವಿಶ್ಲೇಷಣದ ದೃಷ್ಟಿಯಿಂದ ಅವನ ವ್ಯಕ್ತಿತ್ವದ ಚಿತ್ರಣ ಎಂಥದಾಗಬಲ್ಲದು ?

ಸಮಕಾಲೀನ ಸಾಹಿತಿಯನ್ನು ಕುರಿತು ಈ ಎಲ್ಲ ಮಾಹಿತಿ ನಮಗೆ ದೊರೆಯಲಿಕ್ಕಿಲ್ಲ. ದೊರೆತದ್ದೆಲ್ಲ ಬೇಕು. ಒರ್ವ ಸಾಹಿತಿಯನ್ನು ಪರೀಕ್ಷಿಸುವದೆಂದರೆ ಒಂದು ಸಸಿಯನ್ನು ಅಭ್ಯಸಿಸಿದಂತೆ. ಅದನ್ನು ನೆಲದಿಂದ ಕಿತ್ತು ತೆಗೆದರೆ ಅದರ ಬೇರುಗಳ ಮೇಲೆಲ್ಲ ಮಣ್ಣಿನ ಪೆಂಟೆಯಿರುತ್ತದೆ. ಆ ಮೂಲ ಇಲ್ಲವೆ ಅನುಭವವನ್ನು ತಿಳಿಯಲಿಕ್ಕೆ ಈ ಮಣ್ಣು ಮುಖ್ಯವಿಲ್ಲ. ಆದರೂ ಬೇರು ಹಿಡಿದುಕೊಂಡಿದ್ದ ಮಣ್ಣಿನಿಂದ ಆ ಬೇರಿನ ಗಾತ್ರ-ಒಲವು-ತಿರುಳುಗಳನ್ನು ತಿಳಿಯಲು ಸಹಾಯವಾಗುತ್ತದೆಂದು ಬೇರೆ ಹೇಳಬೇಕಿಲ್ಲ.

ಆಮೇಲೆ ಮೂರನೆಯದಾಗಿ ಕವಿಯು ಆಯ್ದುಕೊಂಡ ವಸ್ತುವನ್ನು ಕುರಿತು ವಿಚಾರಿಸಬಹುದು. ತನ್ನ ಅನುಭವದ ಅಭಿವ್ಯಕ್ತಿಗಾಗಿ ಕವಿ ಈ ವಸ್ತುವನ್ನೇ ಆಯ್ದುಕೊಂಡದ್ದೇಕೆ ? ಅದು ಅವನ ನಿರೀಕ್ಷಣೆಯಲ್ಲಿ ಬಂದದ್ದೋ ಇಲ್ಲವೆ ಬೇರೆ ಬೇರೆ ಕಥೆಪುರಾಣಗಳಿಂದ ಕಡ ತಂದಿದ್ದೋ ? ಅನುಭವದ ಯಾವ ಯಾವ ಪೈಲುಗಳಿಗೆ ಆ ವಸ್ತು ಪಾರದರ್ಶಕವಾಗಿದೆ ? ಯಾವ ಯಾವ ಪೈಲುಗಳಿಗೆ ಕುರುಡಾಗಿದೆ ? ತನ್ನ ಅನುಭವ ಇಲ್ಲವೆ ಕಾಣ್ಕೆಗೆ ಅಳವಡುವಂತೆ ಅದರಲ್ಲಿ ಯಾವ ಮಾರ್ಪಾಟುಗಳನ್ನು ಕವಿ ಮಾಡಿಕೊಂಡಿದ್ದಾನೆ ? ಅವನ ತತ್ವದ ಸರಣಿ ಕೃತಿಯಲ್ಲಿ ಹೇಗೆ ಮೂಡಿದೆ ? ನೇರವಾಗಿ ಎಲ್ಲಿಯಾದರೂ ಬಂದಿದೆಯೋ ಇಲ್ಲವೆ ಬರಿ ಭಾವನಾಲಹರಿ, ಕಥಾವಸ್ತು ಇಲ್ಲವೆ ಸನ್ನಿವೇಶಗಳ ಮೂಲಕ ವ್ಯಕ್ತವಾಗಿದೆಯೊ ? ತತ್ವದ ನಿರೂಪಣೆಯಿಂದ ಅನುಭವ-ಕಾಣ್ಕೆಗಳ ಅಭಿವ್ಯಕ್ತಿಗೆ ಭಂಗ ಬಂದಿರುವದೋ ಹೇಗೆ ? ಯಾವ ಜೀವನದೃಷ್ಟಿ ಇಲ್ಲವೆ ದೃಷ್ಟಿಗಳನ್ನೂ ಭಾವನಾಲಹರಿ ಇಲ್ಲವೆ ಮೂಡುಗಳನ್ನೂ ಕವಿ ಇಲ್ಲಿ ವ್ಯಕ್ತಗೊಳಿಸಿದ್ದಾನೆ ? ಅವುಗಳ ದ್ವಾರಾ ಯಾವ ಕಾಣ್ಕೆ ಇಲ್ಲವೆ ದರ್ಶನವನ್ನು ಕವಿ ಇಲ್ಲಿ ಸೆರೆ ಹಿಡಿದಿದ್ದಾನೆ ?

ಇದಾದ ಮೇಲೆ ನಾಮರೂಪದ ಕಡೆಗೆ ಹೊರಳುತ್ತೇವೆ. ಭಾಷೆಯ ಯಾವ ಒಳ ಭೇದವನ್ನು—ಯಾವ ವಾಕ್ಯರಚನೆಯ ರೀತಿಯನ್ನು—ಯಾವ ವಿಶಿಷ್ಟ ವರ್ಗಗಳ ಶಬ್ದಗಳನ್ನು – ಕವಿ ಉಪಯೋಗಿಸಿದ್ದಾನೆ ? ಅದರಿಂದ ನಿರೂಪಣೆ ಯಶಸ್ವಿಯಾಗಿದೆಯೆ ? ಇಲ್ಲದಿದ್ದರೆ ಕಾರಣವೇನು ? ಶೈಲಿ ಹೇಗಿದೆ ? ಪ್ರತಿಮಾ ಸೃಷ್ಟಿಯ ವಿಶಿಷ್ಟತೆಗಳೇನು ? ಲಘು, ಪ್ರಾಸಾದಿಕ, ಗಂಭೀರ, ವಿದ್ವತ್‌ಪ್ರಚುರ - ಇವೇ

ಮೊದಲಾದ ಪ್ರಕಾರಗಳಲ್ಲಿ ಈ ಪ್ರಕಾರ ಯಾವುದು ? ವಿನೋದ, ವಿಡಂಬನೆ, ಕಟಕಿ, ಐರನಿ, ಅನ್ಯೋಕ್ತಿ, ಲಿರಿಕಲ್ ಅಲ್ಲಲ್ಲಿ ವರ್ಣನೆ–ರಂಜನೆಯ ಭಾಗ, ಸುಭಾಷಿತ; ಯಾವ ಗುಣಗಳು ಈ ಶೈಲಿಯಲ್ಲಿ ಕಂಡುಕೊಂಡಿವೆ ? ರಚನಾಕ್ರಮದ ವಿಶೇಷವೇನು ? ಪಾತ್ರಸಮುದಾಯ, ವಾಸ್ತವಿಕ ಇಲ್ಲವೆ ಕಲ್ಪಿತ ಹಿನ್ನೆಲೆ, ಹೀಗೇನಾದರೂ ಅಂಶಗಳಿದ್ದರೆ ಅವುಗಳ ಚಲಾವಣೆ ಎಷ್ಟು ಯಶಸ್ವಿಯಾಗಿದೆ ? ಎದ್ದು ಕಾಣುವಂತಹ ದೃಶ್ಯ ಇಲ್ಲವೆ ಸನ್ನಿವೇಶಗಳಿವೆಯೇ ? ಯಾವ ಸಾಹಿತ್ಯ ಪ್ರಕಾರ ಇಲ್ಲವೆ ಉಪಪ್ರಕಾರವನ್ನು ಕವಿ ಬಳಸಿದ್ದಾನೆ ? ಅದಕ್ಕೇನಾದರೂ ಪರಂಪರೆ ಇದೆಯೆ ? ಇದ್ದರೆ ಅದರಲ್ಲಿ ಯಾವ ಹೊಸ ಬೆಳವಣಿಗೆ ಕಾಣುತ್ತವೆ ? ಉಪಯೋಗಿಸಿದ ತಾಳಲಯದ ಲಕ್ಷಣಗಳೇನು ? ಅದರಲ್ಲೇನಾದರೂ ಹೊಸತನ ವಿದೆಯೇ ? ಕೃತಿಯನ್ನು ಇಡಿಯಾಗಿ ಓದಿದಾಗ ಅದರ ಪಾಠಕ್ರಮದಲ್ಲಿ ಪಾಠಾಂತರ ಗಳೇನಾದರೂ ಇವೆಯೆ ? ಕ್ಲಿಷ್ಟತೆಗಳು ಅಲ್ಲಲ್ಲಿ ಕಾಣಿಸಿಕೊಂಡರೆ ಅವುಗಳಿಗೆ ಕಾರಣವೇನು ? ಕ್ಲಿಷ್ಟತೆ ಅರ್ಥದ್ದೋ ಪ್ರತಿಮಾ ಸೃಷ್ಟಿಯದೋ ತತ್ವದ್ದೋ ಶೈಲಿಯದೋ ಭಾಷೆಯದೋ ಇಲ್ಲವೆ ವಸ್ತುವಿನದೋ ? ಇವೆಲ್ಲ ಪ್ರಶ್ನೆಗಳಿಗೆ ಒಂದು ಸ್ಪಷ್ಟ ಉತ್ತರ ದೊರೆತಾಗ ಕಲಾಕೃತಿಯಲ್ಲಿ ವ್ಯಕ್ತವಾದ ಅನುಭವ-ಕಾಣ್ಕೆಯ ವೈವಿಧ್ಯ ಹಾಗು ಏಕಸೂತ್ರತೆಯ ಅರಿವು ನಮಗಾಗುತ್ತದೆ.

ಇಲ್ಲಿ ತುಲನಾತ್ಮಕ ವಿಮರ್ಶೆಯ ಸಹಾಯದಿಂದ ಕವಿಯ ಕಾಣ್ಕೆಯ ಅನನ್ಯ ಸತ್ಯ-ಸೌಂದರ್ಯಗಳನ್ನು ಅನುಭವಿಸಲು ನಮಗೆ ಇನ್ನಿಷ್ಟು ಅನುಕೂಲವಾಗುತ್ತದೆ. Goethe ನ Faust ಹಾಗೂ ಮಾರ್ಲೋನ Doctor Faustus ; ಶೇಕ್ಸ್‌ಪಿಯರನ Antony and Cleopatra ಹಾಗು ಡ್ರ್ಯಾಯ್‌ಡನ್ನನ All for Love ಎಂಬ ಕೃತಿ ಗಳನ್ನು ಹೋಲಿಸಿ ನೋಡುವದರಿಂದ ಆಯಾ ಕವಿಯ ಪ್ರತಿಭೆಯ ಮೇಲೆ ವಿಶಿಷ್ಟ ಬೆಳಕು ಬೀಳುತ್ತದೆ. ಇಲ್ಲಿ ನೆನಪಿಡಬೇಕಾದ ಇನ್ನೂ ಒಂದು ಮಾತಿದೆ. ಒಂದೇ ವಸ್ತುವಿನ ಮೇಲೆ ಇಬ್ಬರು ಕವಿಗಳು ಬರೆದಿದ್ದರೂ ಅವರು ಬೇರೆ ಮೂಡುಗಳಲ್ಲಿ ಬರೆದಿರಬಹುದು. ಬರಿ ವಸ್ತುಸಾಮ್ಯದ ಮೇಲಿಂದ ತುಲನೆ ಸಾಧ್ಯವಾಗುವದಿಲ್ಲ. ಗಾತ್ರ–ಗುಣ–ಪ್ರತಿಭೆಯ ವಿವಿಧ ಪೈಲುಗಳ ನಿರೂಪಣೆ, ಇವುಗಳಲ್ಲಿ ಸಾಮ್ಯವಿದ್ದರೆ ವಸ್ತು ಬೇರೆಯಾದರೂ ನಡೆದೀತು. ಇಬ್ಬರು ಕವಿಗಳ ಶ್ರೇಷ್ಠತಮ ಕೃತಿಗಳನ್ನು ಹೋಲಿಸಿ ನೋಡಿದರೆ ಅವರವರ ವಿಶಿಷ್ಟ ಪ್ರತಿಭೆಯ ಅರಿವಾಗುತ್ತದೆ. ಶೆಲ್ಲಿ–ಕೀಟ್ಸ್, ಟೆನಿಸನ್,–ಬ್ರೌನಿಂಗ್, ಎಲ್ಲಟ್–ಯೇಟ್‌ಸ್ , ಹೀಗೆ ಕವಿಗಳ ತುಲನೆಯೂ ಕೂಡ ಉದ್ಬೋಧಕವಾಗಿರುತ್ತದೆ.

ಒಂದು ಕಲಾಕೃತಿಯನ್ನು ಕುರಿತು ಕೇಳಬೇಕಾದ ವಿಮರ್ಶಾತ್ಮಕ ಪ್ರಶ್ನೆಗಳನ್ನು ಆರು ಗುಂಪುಗಳಾಗಿ ಮೇಲೆ ವರ್ಗೀಕರಿಸಲಾಗಿದೆ. ಇವುಗಳಲ್ಲಿ ಹದಿನೆಂಟು ವಿಷಯ ಗಳು ಅಡಕವಾಗಿರಬಹುದು. ಒರ್ವ ಕವಿಯ ಇಲ್ಲವೆ ಒಂದು ಕೃತಿಯ ಪೂರ್ಣ

ರಸಾಸ್ವಾದವನ್ನು ಸಾಧಿಸಬೇಕಾದರೆ ಎಂತಹ ಸಂಕೀರ್ಣ ವಿಧಾನವನ್ನು ಅನುಸರಿಸ ಬೇಕಾಗುತ್ತದೆಂಬುದು ಮೇಲಿಯೇ ಕಾಣುತ್ತದೆ. ಈ ಷಡ್ವರ್ಗಗಳ ಪ್ರಶ್ನೆಗಳಿಗೆ ಸಮರ್ಪಕ ಉತ್ತರಗಳನ್ನು ಒಂದು ದೃಷ್ಟಿಯಿಂದ ಶಾಸ್ತ್ರೀಯವಾಗಿ ಕಂಡು ಹಿಡಿದಾಗ ಆ ಕವಿ–ಕೃತಿಗಳ ತಿರುಳು, ಪ್ರತಿಭೆ ಹಾಗು ದರ್ಶನದ ಬಗ್ಗೆ ಒಂದು ಸ್ಪಷ್ಟ ನಿರ್ಧಾರಕ್ಕೆ ನಾವು ಬರುತ್ತೇವೆ. ಇದನ್ನು ಬೇಕಾದರೆ ನಾವು 'ತೀರ್ಪು' ಎಂದು ಕರೆಯಬಹುದು. ಆದರೆ ಈ ತೀರ್ಪು ಕೊನೆಯದಲ್ಲ. ಅದು ಶ್ರೇಷ್ಠ ವಿಮರ್ಶಕನದಾಗಿ ಅದಕ್ಕೆ ಹೈಕೋರ್ಟ್‌ನ ತೀರ್ಪೆಂದು ಹೇಳಬಹುದಾದರೂ ಅದರ ಮೇಲೊಂದು ಸುಪ್ರೀಮ್ ಕೋರ್ಟ್ ಇದ್ದೇ ಇದೆ. ಕಾಲಪುರುಷನೇ ಅಲ್ಲಿಯ ಮುಖ್ಯ ನ್ಯಾಯಾಧೀಶ. ಆತ ಕಮಿಟೆಡ್, ಅಲ್ಲ. ಆತನ ನ್ಯಾಯ ನಿಷ್ಠುರತೆ ಅನುಪಮವಾದುದು.

ಆದರೆ ಕಾಲ ವ್ಯಕ್ತಿಯಲ್ಲ. ಎಲ್ಲ ಯುಗಗಳ ಹಾಗು ಎಲ್ಲ ವರ್ಗಗಳಲ್ಲಿಯ ವ್ಯಕ್ತಿಯ ಸಮೂಹವೇ ಕಾಲಪುರುಷನಾಗಿದ್ದಾನೆ. ಯಾವ ವ್ಯಕ್ತಿಯ ವಿಮರ್ಶೆಯೂ 'ತೀರ್ಪಾ'ಗಲಾರದು. ಶಾಸ್ತ್ರೀಯ ವಿಧಾನ ಏನೇ ಆದರೂ ಅದೆಲ್ಲ ಓರ್ವ ವ್ಯಕ್ತಿಯ ಅಭಿಪ್ರಾಯ,–ವರ್ಣಕ ವಿಮರ್ಶೆ. ಈ ವರ್ಣಕ ವಿಮರ್ಶೆಯನ್ನು ತೀರ್ಪಿನಂತೆ ತೀರ್ಪಿನ ಭಾಷೆಯಲ್ಲಿಯೂ ಬರೆಯುವವರಿದ್ದಾರೆ. ಆದರೆ ಏನೇ ಹೇಳಿದರೂ ವಿಮರ್ಶೆ ಕೊನೆಗೆ ವರ್ಣಕವಾಗುವದರಿಂದ ಅದನ್ನು ಸೃಜನಶೀಲ ಸಾಹಿತ್ಯಿಕ ಭಾಷೆಯಲ್ಲಿ ಬರೆಯುವದೇ ಒಳ್ಳೆಯದು. ಅದರಲ್ಲಿ ಶಾಸ್ತ್ರ–ಪ್ರತಿಭೆ–ರಸಾನುಭವಗಳು ಬೇರೆತಿರುತ್ತವೆ. ವಿಮರ್ಶೆಯೂ ಸಾಹಿತ್ಯದ ಒಂದು ಪ್ರಕಾರವಾಗಿದೆ. ಅದರಲ್ಲಿ ಸಾಹಿತ್ಯದ ಶುದ್ಧಿ ಹಾಗು ಮಿಶ್ರಣ–ಎರಡೂ ಕಂಡು ಬರುತ್ತವೆ. ಜೀವನವನ್ನು ಅನುಭವಿಸಿ ಕವಿ ಬರೆದಿರುವದು ಕಾವ್ಯವಾದರೆ ಸಾಹಿತ್ಯವನ್ನು ಅನುಭವಿಸಿ ವಿಮರ್ಶಕನು ಬರೆದಿರು ವದೂ ಕಾವ್ಯವಾಗುತ್ತದೆ. ತಾನು ಬರೆದ ವಿಮರ್ಶೆಗಳಲ್ಲಿ ವಿಮರ್ಶಕ ಕವಿಯಾಗಿರ ಬೇಕು. ಕಾವ್ಯವನ್ನು ಕುರಿತು ಬರೆದ ವಿಮರ್ಶೆಯು ಶಾಸ್ತ್ರವೂ ಕಾವ್ಯವೂ ಕೂಡಿಯೇ ಆದಾಗ ಅದು ಶ್ರೇಷ್ಠ ವಿಮರ್ಶೆಯಾಗುತ್ತದೆ.

ರಾಮಧಾರೀಸಿಂಹ ದಿನಕರ್

ಎಂ. ಕೆ. ಭಾರತೀರಮಣಾಚಾರ್

ಅರವತ್ತೈದು ವರ್ಷದ ಕವಿ ದಿನಕರರವರಿಗೆ ಭಾರತೀಯ ಸಂಸ್ಕೃತಿ, ಸಭ್ಯತೆ–ಇತಿಹಾಸ, ದರ್ಶನ ಎಲ್ಲಾ ಅತ್ಯಾಕರ್ಷಕವಾದುವು. ಇವರ **"ಸಂಸ್ಕೃತಿ ಕೇ ಚಾರ್ ಅಧ್ಯಾಯ"** ಎಂಬ ಉದ್ಗ್ರಂಥವು ಇದಕ್ಕೆ ಸಾಕ್ಷಿ. ಇದೇ ಬಗೆಯ ಸಂಸ್ಕೃತಿ ಪ್ರೇಮವನ್ನು ಅವರ ಕಾವ್ಯಗಳಲ್ಲೂ ನೋಡಬಹುದು.

ದಿನಕರ್ ಹುಟ್ಟಿದ್ದು 1908 ರಲ್ಲಿ. ಬಿಹಾರ ಪ್ರಾಂತದ ಗಂಗಾನದೀ ದಂಡೆಯಲ್ಲಿರುವ ಮುಂಗೇರ್ ಜಿಲ್ಲೆಗೆ ಸೇರಿದ ಸಿಮಿರಿಯಾ ಎಂಬ ಹಳ್ಳಿಯಲ್ಲಿ. ಪ್ರಾರಂಭಿಕ ವಿದ್ಯಾಭ್ಯಾಸವು ಹುಟ್ಟಿದೂರಿನಲ್ಲಿ ನಡೆಯಿತು. ಮಾಧ್ಯಮಿಕ ಶಿಕ್ಷಣ ಮೊಕಾಮಾ ಘಾಟ ಹೈಸ್ಕೂಲಿನಲ್ಲಿ ಅನಂತರ ಪಾಟ್ನಾ ವಿಶ್ವವಿದ್ಯಾಲಯದಿಂದ ಪದವೀಧರರಾಗಿ ಕೆಲಕಾಲ ಸರ್ಕಾರೀ ಹುದ್ದೆಯಲ್ಲಿದ್ದರು. ಅಧ್ಯಾಪಕರಾಗಿ, ಅನಂತರ ಸಬ್‌ರಿಜಿಸ್ಟ್ರಾರ್ ಆಗಿ ಮತ್ತೆ ಕಾಲೇಜಿನ ಪ್ರಾಧ್ಯಾಪಕರಾಗಿ ಕೊನೆಗೆ ಸ್ವತಂತ್ರ ಬರಹಗಾರರಾಗಿ ಜೀವನವನ್ನು ನಡೆಸಿದರು. ಭಾಗಲ್‌ಪುರ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿಯೂ ಇದ್ದರು. ಹಿಂದೀ ಬಗ್ಗೆ ಸಲಹೆಯನ್ನು ಕೊಡುವವರಲ್ಲಿ ಒಬ್ಬರಾಗಿ ಕೆಲಸ ಮಾಡುತ್ತಿದ್ದಾರೆ.

ಸನ್ 1921 ರ ಅಸಹಕಾರ ಚಳುವಳಿಯಲ್ಲಿ ದಿನಕರಜೀಯವರು ಧುಮುಕಿದರು. ಅಂದಮೇಲೆ ಇವರ ರಾಷ್ಟ್ರಪ್ರೇಮವು ಕೇವಲ ಪುಸ್ತಕದ ಬದನೆಕಾಯಿಯಾಗಿ ಬೆಳೆಯದೆ ಅವಶ್ಯಕವೆನಿಸಿದರೆ ಏನೊಂದು ತ್ಯಾಗಕ್ಕೂ ಸಿದ್ಧವೆನ್ನುವ ಸಕ್ರಿಯ ರೂಪವನ್ನು ತಾಳಿದೆ. ಈ ಬಗೆಯ ಮನೋಧರ್ಮವನ್ನು ಅವರ ಸಾಹಿತ್ಯದಲ್ಲಿ ನೋಡಬಹುದಾಗಿದೆ.

ರಾಷ್ಟ್ರೀಯ ಜಾಗರಣಕ್ಕಾಗಿ ಗಾಂಧೀಜೀಯವರು ನಡೆಸಿದ ಚಳುವಳಿಗಳಿಂದ ಪ್ರೇರಣೆಯನ್ನು ಪಡೆದು ದಿನಕರಜೀಯವರು ಜನಜಾಗೃತಿಯನ್ನುಂಟು ಮಾಡಲು ಕ್ರಾಂತಿಯ ಕಹಳೆಯನ್ನು ಊದಿದ್ದಾರೆ. ದಿವ್ಯವೂ ಭಾಗ್ಯವೂ ಉಜ್ವಲವೂ ಸನಾತನವೂ ಆದ ಭಾರತೀಯ ಸಂಸ್ಕೃತಿಯು ಹಿಮವಂತನಂತೆ ನಿಷ್ಕ್ರಿಯವಾಗಿ ತಣ್ಣಗೆ ಮಲಗಿರುವುದನ್ನು ಕಂಡು ಕಲಕಿದ ಅಂತಃಕರಣದಿಂದ ವಿಚಲಿತವಾಗಿ ಕವಿವಾಣಿ ಹಿಮವಂತನನ್ನು ಬಡಿದೆಬ್ಬಿಸಲು "ಜಾಗೋ ಫಿರ್ ತುಮ್ ಏಕ್ ಬಾರ್" ಎಂದು

ಕೂಗಿ ಕರೆದಿದೆ. ಲೋಕದ ಕಲ್ಯಾಣ ಸಾಧನೆಗಾಗಿ ವ್ಯಕ್ತಿಗತ ಸುಖಸಮೃದ್ಧಿಯನ್ನು ತ್ಯಜಿಸಿ ತಪಸ್ಸಿಗೆ ತೆರಳಿದ ಗೌತಮನನ್ನು ಆಹ್ವಾನಿಸುತ್ತಾ ಜಗತ್ತಿಗೆ ಬಂದೊದಗಿದ ವಿಪತ್ತಿನಿಂದ ಪಾರುಮಾಡಲು ಕನವರಿಸಿದೆ. ಈ ಕವಿ ಹೃದಯವು ಯುದ್ಧದ ನೈತಿಕ ಭೂಮಿಕೆಯನ್ನು ವಿಶ್ಲೇಷಿಸಲು ಹೊರಟು "ಕುರುಕ್ಷೇತ್ರ" ವನ್ನು ರಚಿಸಿ ಯಾಚನೆಯಿಂದ ಅಪಹೃತವಾದ ಸತ್ಯವು ಎಂದಿಗೂ ಲಭಿಸದು, ಅದು ದುಷ್ಟ ಸ್ವಾರ್ಥದ ತಲೆಯನ್ನು ಮೆಟ್ಟುವ ಕ್ಷಾತ್ರಕ್ಕಲ್ಲದೆ ಒಲಿಯದು ಎಂದು ಸಂದೇಶವನ್ನು ಸಾರಿದೆ. ದಿನಕರಜೀಯವರು ಭಾರತದ ಪುನರುಜ್ಜೀವನಕ್ಕೆ ಪರುಶುರಾಮನ ಆದರ್ಶವೇ ಮತ್ತೆ ಮೂಡಿ ಬರಬೇಕೆಂದು ನಂಬಿದ್ದಾರೆ. ಒಂದೆಡೆ ಕ್ಷಾತ್ರ, ವೀರ್ಯ ಶೌರ್ಯ ಶಕ್ತಿ, ಪರಾಕ್ರಮ. ಇನ್ನೊಂದೆಡೆ ತ್ಯಾಗ, ತಪಸ್ಸು ಮತ್ತು ಆತ್ಮ ಬಲ, ಇವೆರಡೂ ಹಾಲು ಜೇನಿನಂತೆ ಮಧುರವಾಗಿ ಬೆರೆತಲ್ಲಿ ಭಾರತದ ಭವಿಷ್ಯವು ಉಜ್ವಲ ವಾಗುವುದೆಂಬ ನಂಬುಗೆಯನ್ನು ಹೊಂದಿದ್ದಾರೆ. ಸ್ವತಂತ್ರ ಭಾರತದ ಮುಂದೆ ಪರುಶುರಾಮನ ಆದರ್ಶವನ್ನು ಮಂಡಿಸುವಲ್ಲಿ ಕವಿ ಕಲ್ಪನೆಯಲ್ಲಿ ಭಾರತವು ಶಕ್ತಿಯುತ ರಾಷ್ಟ್ರವಾಗಿ ಬೆಳೆಯಬೇಕೆಂತಲೂ ಜೊತೆಗೆ ಶಾಂತಿಯ ಮೂರ್ತಿಯಾಗಿ ವಿಶ್ವದಲ್ಲಿ ಎಲ್ಲರ ಚಿತ್ತವನ್ನು ಸೆಳೆಯುವಂತಾಗಬೇಕೆಂತಲೂ ಇದೆ.

ದಿನಕರಜೀಯವರ ಈ ಉಜ್ವಲ ರಾಷ್ಟ್ರಪ್ರೇಮದ ಕುರುಹಾಗಿ ಜನತೆಯು ಅವರನ್ನು ನಮ್ಮ ಪಾರ್ಲಿಮೆಂಟಿನ ಹಿರಿಯರ ಸಭೆಗೆ ಆರಿಸಿ ಗೌರವಿಸಿತು. ಪದ್ಮ ಭೂಷಣ ಎಂಬ ಪ್ರಶಸ್ತಿಯನ್ನು ಕೊಟ್ಟು ಜನತಾ ಸರ್ಕಾರವು ಕೃತಜ್ಞತೆಯನ್ನು ಸೂಚಿಸಿತು.

ದಿನಕರಜೀಯವರದು ಅದಮ್ಯ ವ್ಯಕ್ತಿತ್ವ. ಅತೀತದೊಂದಿಗೆ ಹೊಂದಿಕೊಂಡು, ವರ್ತಮಾನ ಕಾಲದ ಸಮಸ್ಯೆಗಳನ್ನು ಬಿಡಿಸುತ್ತಾ ಭವಿಷ್ಯವನ್ನು ಉಜ್ವಲಗೊಳಿಸ ಬೇಕೆಂಬ ನಿಷ್ಟೆ ನಿಲುವು. ಅವರು ಪ್ರಾಂತೀಯ, ರಾಷ್ಟ್ರೀಯ ಮುಂತಾದ ಎಲ್ಲೆ ಗಳನ್ನು ಹಂತ ಹಂತವಾಗಿ ದಾಟಿ ಈಗ ಅಂತರರಾಷ್ಟ್ರೀಯ-ಅಲ್ಲ ವಿಶ್ವ ಬಂಧುತ್ವದ ಆದರ್ಶವನ್ನು ಮೈಗೂಡಿಸಿಕೊಂಡಿದ್ದಾರೆ. ಅವರು ಈ ಅಂತರರಾಷ್ಟ್ರೀಯ ಪ್ರಜೆಯ ಸ್ವರೂಪವನ್ನು "ಅರ್ಧನಾರೀಶ್ವರ" ನಲ್ಲಿ ಕಂಡಿದ್ದಾರೆ. ಈ ವಿಶ್ವಪ್ರಜೆಯು ಪುರುಷೋಚಿತವಾದ ಪೌರುಷ, ತೇಜ, ತ್ಯಾಗ ಮುಂತಾದ ಸದ್ಗುಣಗಳನ್ನೂ ಸಾರಿ ಸುಲಭವಾದ ದಯೆ, ಸ್ನೇಹ, ಸಹಾನುಭೂತಿ ಮುಂತಾದ ಕೋಮಲ ಭಾವವನ್ನೂ ಹೃದಯಂಗಮ ಮಾಡಿಕೊಂಡ ಅರ್ಧನಾರೀಶ್ವರನಾಗಬೇಕು. ಆಗ ಈ ಜಗತ್ತೇ ಸ್ವರ್ಗವಾಗುವುದೆಂದು ನಂಬಿದ್ದಾರೆ. ಈ ಅರ್ಧನಾರೀಶ್ವರನ ಡಮರೂ ನಿನಾದದಿಂದ ಈಗ ಜೀವನವನ್ನು ಸೆರೆ ಹಿಡಿದು ತನ್ನ ತೋಳ್ತೆಕ್ಕೆಯಲ್ಲಿಟ್ಟುಕೊಂಡಿರುವ ಸ್ವಾರ್ಥ ನೆಂಬ ಕಾಳಿಂಗನ ಹೆಡೆಯ ಮೇಲೆ ಜನಗಣಮನ ಅಧಿನಾಯಕನಾದ ಶ್ರೀಕೃಷ್ಣನು ಪುಟ್ಟ ಪುಟ್ಟ ಹೆಜ್ಜೆಯನ್ನಿಡುತ್ತ ಕುಣಿಯತೊಡಗುವನು. ಅವನ ಅಧರ ಪಟಲದ

ಮೇಲೆ ಪವಡಿಸಿರುವ ಮುರುಳಿಯು ಜೀವನದಾಯಿಸಿಯಾದ ಅಮೃತವೃಷ್ಟಿಯನ್ನು ಸುರಿಸಿ ಈ ವಿಷಘರನ ಬಾಧೆಯಿಂದ ಕಂಗೆಟ್ಟ ಜಡಚೇತನರನ್ನು ಬಾಳಿ ಬದುಕುವಂತೆ ರಕ್ಷಿಸುವುದು. ಹೀಗೆ ಸ್ವತಂತ್ರ ಭಾರತವನ್ನೂ ಅದರ ವಿಶ್ವ ರಾಜಕೀಯ ಸಾಂಸ್ಕೃತಿಕ ಕ್ಷೇತ್ರದ ಹೊಣೆಗಾರಿಕೆಯನ್ನೂ ದಿನಕರಜೀಯವರು "ವ್ಯಾಲ ವಿಜಯ" ವೆಂಬ ಕವಿತೆಯಲ್ಲಿ ಚಿತ್ರಿಸಿರುತ್ತಾರೆ.

ಈಗ ಜ್ಞಾನಪೀಠದಿಂದ ಒಂದು ಲಕ್ಷ ರೂಗಳ ಬಹುಮಾನವನ್ನು ಪಡೆದಿರುವ ಗ್ರಂಥ "ಉರ್ವಶೀ"– ಇದನ್ನು 1961ನೇ ಇಸ್ವಿ ಜೂನ್ ತಿಂಗಳಲ್ಲಿ ಬರೆದು ಪ್ರಕಟಿಸಿದ್ದರು. ಇದಕ್ಕೆ ಪೂರ್ವದಲ್ಲಿ ಸುಮಾರು ಎಂಟು ವರ್ಷಗಳ ಕಾಲ ಸತತವಾಗಿ ಊರ್ವಶೀ ಮತ್ತು ಪುರೂರವರ ಪ್ರಣಯವನ್ನು ಕುರಿತು ಮನನ ಮಾಡಿದ್ದಾರೆ. ಮಥನ ಮಾಡಿದ್ದಾರೆ. ಈ ಸಂಬಂಧದಲ್ಲಿ ವೇದ, ಪುರಾಣ, ಇತಿಹಾಸ, ಸಾಹಿತ್ಯ ಕ್ಷೇತ್ರಗಳಲ್ಲಿ ದೊರೆಯುವುದೆಲ್ಲವನ್ನೂ ಅಧ್ಯಯನ ಮಾಡಿದ್ದಾರೆ. ಮಾನವ ಜೀವನದ "ಋತ"ದೊಂದಿಗೆ ತಮಗೆ ಗೋಚರವಾದ "ಸತ್ಯ"ವನ್ನು ಹೊಂದಾಣಿಸಲು ಯತ್ನಿಸಿದ್ದಾರೆ.

ವಿಕ್ರಮೋರ್ವಶೀಯ ನಾಟಕದಲ್ಲಿ ಕಾಳಿದಾಸನು ಸ್ವರ್ಗವು ಸಮೃದ್ಧಿಯ ಬರಡುತನವನ್ನು ಸಹಿಸಲಾಗದೆ ಕ್ಷಣಿಕ ತೃಪ್ತಿಯಲ್ಲಿ ಮೈಮನವನ್ನು ತಣಿಸಬಲ್ಲ ಮರ್ತ್ಯ ಪ್ರೇಮಕ್ಕಾಗಿ ಧರೆಗಿಳಿದು ಬಂದುದನ್ನು ನಾಟಕೀಯವಾಗಿ ಚಿತ್ರಿಸಿದ್ದಾನೆ. ಅದೇ ಚೌಕಟ್ಟನ್ನು ಅಳವಡಿಸಿಕೊಂಡು ಅದೇ ಜಾಡನ್ನು ಹಿಡಿದು ದಿನಕರಜೀಯವರು ಪೂರೂರವಾ ಮತ್ತು ಊರ್ವಶಿಯರ ಪ್ರೇಮ ನಿರೂಪಣೆಯನ್ನು "ಊರ್ವಶಿ"ಯಲ್ಲಿ ಮಾಡಿದ್ದಾರೆ. ಆದರೆ ಅದು ಕೇವಲ ಪ್ರೇಮ ಕಾವ್ಯವಾಗಿಲ್ಲ. ಅದರಲ್ಲೊಂದು ಮೂಲ ಭೂತ ಸಮಸ್ಯೆ ಅಡಗಿದೆ.

ಮಾನವನ ವ್ಯಕ್ತಿತ್ವದಲ್ಲಿ ಮೂರು ಅಂಶಗಳಿವೆ. 1. ಜೀವತತ್ತ್ವ 2. ಬುದ್ಧಿ ತತ್ತ್ವ 3. ಆತ್ಮತತ್ತ್ವ. ಇವುಗಳಲ್ಲಿ ಪುರುಷಾರ್ಥಗಳೆಂದು ಪ್ರಸಿದ್ಧವಿರುವ ಅರ್ಥ ಕಾಮಗಳು ಜೀವ ತತ್ತ್ವವನ್ನು ಆಧಾರಿಸಿಕೊಂಡಿವೆ. ಧರ್ಮ ಎಂಬುದು ಆತ್ಮತತ್ತ್ವವನ್ನು, ಬುದ್ಧಿ ತತ್ತ್ವವು ಈ ಮೂರು ಪುರುಷಾರ್ಥಗಳ ಸಮತೋಲನವನ್ನು ಸಾಧಿಸುವ ಸಹಚರಿಯಂತಿದೆ.

ಸೌಂದರ್ಯಪ್ರಜ್ಞೆ, ಕಲಾಭಿರುಚಿ, ಪ್ರೇಮ ಮುಂತಾದುವು ಜೀವತತ್ತ್ವದಿಂದ ಉದ್ಗಮಿಸಿದರೂ ಆತ್ಮತತ್ತ್ವದ ಕಡೆ ಉತ್ತರೋತ್ತರ ಮುನ್ನಡೆದಷ್ಟು ಸಾಫಲ್ಯತೆಯನ್ನು ಪಡೆಯುತ್ತದೆ. ಅಂತೆಯೇ ಧರ್ಮವು ಆತ್ಮತತ್ತ್ವದಲ್ಲಿ ಜನಿಸಿದರೂ ಅದು ಜೀವ ತತ್ತ್ವವನ್ನು ಆವರಿಸಿ, ಸುಸಂಸ್ಕಾರವನ್ನೂ, ಸುರುಚಿಯನ್ನೂ ಮೂಡಿಸುವಲ್ಲಿ ಯಶಸ್ಸನ್ನು ಗಳಿಸಿದಾಗ ಸಾರ್ಥಕ ವೆನ್ನಿಸುತ್ತದೆ.

ಕಾಮವು ಜೀವತತ್ತ್ವದ ಪ್ರಮುಖಶಕ್ತಿ. ಹೆಣ್ಣು ಗಂಡಿನ ಪರಸ್ಪರ ಆಕರ್ಷಣೆಯಲ್ಲಿ ಹೊರ ಹೊಮ್ಮುವ ಈ ಶಕ್ತಿಯು ಅದಮ್ಯವಾದದು. ಈ ಶಕ್ತಿಯ ಉದಾತ್ತೀಕರಣವು ಅತ್ಯವಶ್ಯಕವಾದುದು. ಆಗಲೇ ಇದು ಜಡ ಜಗತ್ತಿನಿಂದ ಮೇಲೆ ಪುಟಿದು ಅಲೌಕಿಕತ್ತ್ವವನ್ನು ಪಡೆಯುತ್ತದೆ. "ಫಿಸಿಕಲ್" ಎಲ್ಲೆಯನ್ನು ದಾಟಿ "ಮೆಟಫಿಸಿಕಲ್" ಎಲ್ಲೆಯನ್ನು ಪ್ರವೇಶಿಸುತ್ತದೆ. ಈ ಬಗೆಯ ಉದಾತ್ತೀಕೃತ ಕಾಮವನ್ನು ಪ್ರೇಮವೆನ್ನುತ್ತಾರೆ. ಈ ಪ್ರೇಮವೇ ಜೀವನದಲ್ಲಿ ಆನಂದಕ್ಕೆ ಕಾರಣವಾಗಿದೆ. ಉದ್ದೇಶ ರಹಿತವಾದ ಮಾನವ ಜೀವನದ ಅನೇಕಾನೇಕ ಉದಾತ್ತ ಚಟುವಟಿಕೆಗಳ ಕೇಂದ್ರವಾಗಿರುತ್ತದೆ. ಮಾನವೀಯ ಗುಣಗಳ ವಿಕಾಸಕ್ಕೆ ಆಧಾರವಾಗಿದೆ.

ಪುರೂರವ ಮತ್ತು ಊರ್ವಶಿಯರ ಪ್ರೇಮವು ಈ ಬಗೆಯ ಉದಾತ್ತೀಕೃತ ಕಾಮವಾದುದರಿಂದಲೇ ಕೇವಲ ಐಂದ್ರಿಯವಾಗಿರದೆ ಮೇಲೇರುತ್ತದೆ. ಅತೀಂದ್ರಿಯತ್ವವನ್ನು ಸಾಧಿಸಲು ಮುನ್ನಡೆಯುತ್ತದೆ.

ಮಾನವನು ಮರ್ತ್ಯ ಲೋಕದ ಸುಖ ಸಮೃದ್ಧಿಯಲ್ಲಿದ್ದರೂ ದೇವತ್ವ ಪ್ರಾಪ್ತಿಗೆ ಹಂಬಲಿಸುತ್ತಾನೆ. ಪುರೂರವ ಈ ಮಾನವನ ಪ್ರತಿನಿಧಿ.

ಊರ್ವಶೀ ದೇವಲೋಕದಿಂದ ಧರೆಗಿಳಿದು ಬಂದ ನಾರಿ. ಮರ್ತ್ಯದ ಸುಖಕ್ಕಾಗಿ ಹಂಬಲಿಸಿ ಬಂದಿದ್ದಾಳೆ. ಇವಳು ಸ್ತ್ರೀ ಪ್ರತಿನಿಧಿ.

ಮಾನವನಲ್ಲಿ ಮೇಲೇಳಬೇಕೆಂಬ–ದೇವತ್ತ್ವವನ್ನು ಪಡೆಯಬೇಕೆಂಬ ಹಂಬಲವೂ ಇದೆ. ಇಂದ್ರಿಯ ಜನಿತ ಸುಖದ ಆಕರ್ಷಣೆಯೂ ಇದೆ. ಇವೆರಡರ ತಿಕ್ಕಾಟದಲ್ಲಿ ಮಾನವ ತೊಳಲುತ್ತಿದ್ದಾನೆ.

ಆತ್ಮತತ್ತ್ವವು ಮಾನವನನ್ನು ಮೇಲಕ್ಕೆ ಸೆಳೆದರೆ, ಜೀವತತ್ತ್ವವು ಧರೆಗೆ ಎಳೆಯುತ್ತದೆ. ಇದರಿಂದಲೇ ಮಾನವನ ಜೀವನದಲ್ಲಿ ಸಂಘರ್ಷ ಸಾಗಿದೆ. ಈ ಸಂಘರ್ಷದಲ್ಲೇ ಮಾನವನ ವೈಯಕ್ತಿಕ ಹಾಗೂ ಸಾಮಾಜಿಕ ವಿಕಾಸದ ಇತಿಹಾಸ ವನ್ನೂ ಕಾಣಬಹುದಾಗಿದೆ.

ಮಾನವನು ಆತ್ಮತತ್ತ್ವವನ್ನು ಈಶ್ವರ, ಬ್ರಹ್ಮ ಮುಂತಾಗಿ ಚಿತ್ರಿಸಿಕೊಂಡು ಅದರ ಸಾಕ್ಷಾತ್ಕಾರಕ್ಕಾಗಿ ಸನ್ಯಾಸವನ್ನು ವಿಹಿತವೆಂದು ಸ್ವೀಕರಿಸಿದ್ದಾನೆ. ಜೀವತತ್ತ್ವ ವನ್ನು ಪ್ರಕೃತಿ ಎಂದು ಬಣ್ಣಿಸಿ ಅದು ಮಾಯೆ, ಮಿಥ್ಯೆ ಮತ್ತು ಅಮಂಗಳವೆಂದು ಹಳಿದಿದ್ದಾನೆ.

ಮಾನವನು ಇವೆರಡನ್ನೂ ಸಮಂಜಸವಾಗಿ ಸಾಧಿಸಿ ಸಾಮರಸ್ಯವನ್ನುಂಟು ಮಾಡಿಕೊಳ್ಳಲಾರನೆಂಬ ಭಾವನೆಗೆ ಬಲಿಯಾಗಿದ್ದಾನೆ.

ಆದ್ದರಿಂದಲೇ ಊರ್ವಶೀ ಪುರೂರವನನ್ನು ಕೇಳುತ್ತಾಳೆ- "ಈಶ್ವರ ಹಾಗೂ ಪ್ರಕೃತಿ ಎಂಬುದು ಎರಡು ಭಿನ್ನ ಭಿನ್ನ ತತ್ತ್ವಗಳೇ ? ಇವೆರಡು ತತ್ತ್ವಗಳೂ ಪರಸ್ಪರ ಪೂರಕಗಳೋ ? ವಿರೋಧಿಗಳೊ ? ಎರಡರಲ್ಲೂ ಸಾಮರಸ್ಯ ಸಾಧ್ಯ ವಿಲ್ಲವೆ ? ಪ್ರಕೃತಿಯು ಈಶ್ವರನ ಶತ್ರುವೆ ? ಅಥವಾ ಈಶ್ವರನು ಪ್ರಕೃತಿಯನ್ನು ದೂರೀಕರಿಸಿರುವನೆ ?

ಈ ಬಗೆಯ ಚಿರಂತನ ಜಿಜ್ಞಾಸಾವೃತ್ತಿಯಿಂದ ಪ್ರೇರಣೆಯನ್ನು ಪಡೆದು ಅಧ್ಯಯನ ಹಾಗೂ ಮನನದಿಂದ ಮೈದುಂಬಿ ಹೊರಬಂದಿರುವ "ಪದ್ಯನಾಟಕ" ಈ "ಉರ್ವಶೀ".

ದಿನಕರಜೀಯವರ ಈ ಕೃತಿಯನ್ನು "ಸರ್ವಾಂಗಪೂರ್ಣಕಾವ್ಯಸೃಷ್ಟಿ" ಎಂಬು ದಾಗಿ ಇನ್ನೊಬ್ಬ ಜ್ಞಾನಪೀಠದ ಪುರಸ್ಕಾರವನ್ನು ಪಡೆದ ಸುಮಿತ್ರಾನಂದಪಂತಜೀ ಯವರು ಹೇಳಿದ್ದಾರೆ.

ಆಚಾರ್ಯ ಹಜಾರೀಪ್ರಸಾದ ದ್ವಿವೇದೀಜೀಯವರು ದಿನಕರಜೀಯವರು ಬರೆದಿರುವ ಕುರುಕ್ಷೇತ್ರ, ರಶ್ಮಿರಥೀ ರೇಣುಕಾ, ಹುಂಕಾರ್, ರಸವಂತೀ, ನೀಮ್‌ಕೇ ಪತ್ತೇ ಮುಂತಾದ ಕಾವ್ಯಗಳಲ್ಲಿ ಶ್ರೇಷ್ಠತಮವಾದುದು ಉರ್ವಶೀ. ಇದು ದಿನಕರಜೀಯವರ "ಮೇರುಕೃತಿ" ಎಂದು ವರ್ಣಿಸಿದ್ದಾರೆ. ಈ ಸರ್ವಶ್ರೇಷ್ಠ ರಚನೆಯನ್ನು ಕುರಿತು ಡಾಕ್ಟರ್ ಹರಿವಂಶರಾಯ್ ಬಚ್ಚನ್‌ರವರು "ನಭೂತೋ" ಎಂದಿದ್ದಾರೆ.

ಒಟ್ಟಿನಲ್ಲಿ ಮನು-ಶ್ರದ್ಧಾ-ಇಡಾ-ಇವರ ಆಖ್ಯಾನವನ್ನು ಆಧರಿಸಿ ರಚಿತವಾದ ಕಾಮಾಯನೀ (ಜಯಶಂಕರ ಪ್ರಸಾದಜೀಯವರು ಬರೆದದ್ದು) ಮಾನವ ಜಗತ್ತಿನ ಕರ್ಮಕಾಂಡದ ತರ್ಕಬದ್ಧ ಸೋದ್ದೇಶ ಸಾಧನೆಯ ಪ್ರತೀಕವಾಗಿದ್ದರೆ, ಪುರೂರವ-ಉರ್ವಶೀ ಮತ್ತು ಔಶೀನರೀ- ಆಖ್ಯಾನವು ಸೌಂದರ್ಯ ಸಂಸ್ಕೃತಿ ಹಾಗೂ ಕಲಾ ಪಕ್ಷದ ನಿರುದ್ದೇಶ ಆನಂದ ಸಾಧನೆಯ ಪ್ರತೀಕವಾಗಿದೆ. ಕಾಮಾಯನೀ ಮತ್ತು ಉರ್ವಶೀ ಪರಸ್ಪರ ಪೂರಕ ಕಾವ್ಯಗಳಂತಿವೆ.

ಕನ್ನಡ ಕವಿಗಳ ಭಾಷಾಪ್ರಜ್ಞೆ

ಜಿ. ಎಸ್. ಶಿವರುದ್ರಪ್ಪ

ತನ್ನ ಅಂತರಂಗದ ಅಸ್ಪಷ್ಟವಾದ ಅನುಭವಗಳ ಒತ್ತಡಕ್ಕೆ ಒಂದು ಸ್ಪಷ್ಟವಾದ ರೂಪವನ್ನು ಕೊಟ್ಟು ತನ್ನನ್ನು ತಾನು ಕಂಡುಕೊಳ್ಳುವುದಕ್ಕೆ ಮತ್ತು ತನ್ನ ಅನುಭವವನ್ನು ಅನ್ಯರ ಅನುಭವವನ್ನಾಗಿ ಮಾಡುವುದಕ್ಕೆ ಕವಿಗಿರುವ ಒಂದೇ ಸಾಧನ ಭಾಷೆ. ಈ ಭಾಷೆ ಎಂಬುದು ಕವಿಯಿಂದ ಆಚೆಯದು: ಶಿಲ್ಪಿಗೆ ಕಲ್ಲು ಹೇಗೋ ಹಾಗೆ, ಚಿತ್ರಕಾರನಿಗೆ ಬಣ್ಣ ಹೇಗೋ ಹಾಗೆ. ಒಂದು ಭಾಷೆಯನ್ನು ಆಡುವ ಒಂದು ಸಾಮಾಜಿಕ ಪರಿಸರದಲ್ಲಿ, ಬದುಕುವ ಕವಿ, ಆ ಸಾಮಾಜಿಕ ವ್ಯವಹಾರದ ಭಾಷೆಯನ್ನು ತನ್ನ ಕಾವ್ಯಾಭಿವ್ಯಕ್ತಿಯ ಮಾಧ್ಯಮವನ್ನಾಗಿ ಮಾಡಿಕೊಳ್ಳುವುದು ಸಹಜ. ಈ ಭಾಷೆ, ಒಬ್ಬ ಕವಿ ಬರೆಯುತ್ತಿರುವ ಪರಿಸರದಲ್ಲಿ ಎಷ್ಟೋ ಕಾಲದಿಂದ ಜನರ ವ್ಯಾವಹಾರಿಕ ಭಾಷೆ ಮಾತ್ರವಾಗಿರದೆ, ಕಾಲದಿಂದ ಕಾಲಕ್ಕೆ ಅನೇಕ ಕವಿಗಳ ಅಭಿವ್ಯಕ್ತಿಯಲ್ಲಿ ಹೊಸ ಹೊಸ ರೂಪಾಂತರಗಳನ್ನೂ ಪಡೆದದ್ದಾಗಿರುತ್ತದೆ. ಎಂದರೆ, ವರ್ತಮಾನದ ಕವಿಯ ಹಿಂದೆ, ಒಂದು ಕಾವ್ಯಭಾಷೆಯ ಪರಂಪರೆ ಇರುತ್ತದೆ; ಎರಡನೆಯದಾಗಿ, ತನ್ನ ಸಮೀಪ ಕಾಲೀನವಾದ ಹಾಗೂ ಸಮ ಕಾಲೀನವಾದ ಇತರ ಕವಿಗಳು, ತಾನು ಬದುಕುವ ಪರಿಸರದ ಭಾಷೆಯನ್ನು ಹೇಗೆ ತಮ್ಮ ಕಾವ್ಯಾಭಿವ್ಯಕ್ತಿಗೆ ಬಳಸಿಕೊಳ್ಳುತ್ತಿದ್ದಾರೆ ಎಂಬುದರ ಅರಿವೂ ಇರುತ್ತದೆ; ಮೂರನೆಯದಾಗಿ ತನ್ನ ಕಾಲದ ವ್ಯಾವಹಾರಿಕ ನೆಲೆಯಲ್ಲಿ, ಯಾವ ಯಾವ ಪ್ರಾದೇಶಿಕ ವೈಲಕ್ಷಣ್ಯಗಳಿಂದ ಜನದ ಆಡು ಮಾತು ಬಳಕೆಯಲ್ಲಿದೆ ಎಂಬುದರ ಪ್ರಜ್ಞೆಯೂ ಕವಿಗೆ ಇರಬೇಕಾಗುತ್ತದೆ. ಈ ಹಿನ್ನೆಲೆಯ ಅರಿವಿಲ್ಲದೆ ಯಾವ, ನಿಜವಾದ ಕವಿಯೂ ತನ್ನ ವಿಶಿಷ್ಟಾಭಿವ್ಯಕ್ತಿಯನ್ನು ನಿರ್ಮಿಸಿಕೊಳ್ಳಲಾರ.

ಕಾವ್ಯದ ಭಾಷೆ ಹೇಗಿರಬೇಕು ಎನ್ನುವ ಬಗೆಗೆ ಭಾರತೀಯ ಆಲಂಕಾರಿಕರು ಎಂದೂ ಗೊಂದಲಕ್ಕೆ ಈಡಾಗಿಲ್ಲ. ಕಾವ್ಯದ ಭಾಷೆ, ಕವಿಯಾದವನು ಬಳಸುವ ಭಾಷೆ; ಕವಿ ಭಾಷೆಯನ್ನು ತನ್ನ ಭಾವಾಭಿವ್ಯಕ್ತಿಗೆ ಬಳಸುವುದರಲ್ಲಿ ವಿದಗ್ಧನಾದವನು. ಆದಕಾರಣ ಕಾವ್ಯದ ಉಕ್ತಿ ಭಾಷೆಯ ಪ್ರಯೋಗದಲ್ಲಿ ವಿಶೇಷ ಪರಿಣತನಾದವನು ಬಳಸುವ ಭಾಷೆ.[1] ಯಾವ ಯಾವ ಪದಗಳು ಯಾವ ವಿಶೇಷಾರ್ಥ

[1] ವೈದಗ್ಧ್ಯ ಭಂಗಿ ಭಣಿತಿ : ಕುಂತಕ Vakrokti Jivita : Ed. Sushil Kumar De : Preface p. xxvii

ವನ್ನು ವ್ಯಂಜಿಸಲು ತಕ್ಕವು ಎಂಬುದನ್ನು, ಆತ ಪ್ರತ್ಯಭಿಜ್ಞೆಯಿಂದ ಗುರುತಿಸಬಲ್ಲವನು.[2] ಎರಡನೆಯದಾಗಿ ಕಾವ್ಯದ ಭಾಷೆ ಲೋಕದ ಭಾಷೆಯಿಂದ ಹಾಗೂ ಶಾಸ್ತ್ರದ ಭಾಷೆಯಿಂದ ಭಿನ್ನವಾದದ್ದು.[3] ಲೋಕದ ಭಾಷೆ ಒಂದು ರೀತಿಯಲ್ಲಿ ಗ್ರಾಮ್ಯವಾಗಿರುತ್ತದೆ; ಕೇವಲ ವ್ಯಾವಹಾರಿಕ ಪ್ರಯೋಜನದ ಮಿತಿಯಲ್ಲಿ ಬದ್ಧವಾಗಿರುತ್ತದೆ. ಶಾಸ್ತ್ರದಲ್ಲಾದರೆ ಭಾಷೆ, ನೇರವಾಗಿ, ನಿರಲಂಕಾರವಾಗಿ, ನಿರ್ದಿಷ್ಟವಾದ ವಿಷಯವನ್ನು ಸ್ಪಷ್ಟವಾಗಿ ಬುದ್ಧಿಗೆ ಮುಟ್ಟಿಸುವ ಉದ್ದೇಶದ್ದಾಗಿರುತ್ತದೆ. ಕಾವ್ಯದ ಭಾಷೆಯಾದರೋ ಈ ಎರಡೂ ರೀತಿಯಿಂದ ಬೇರೆಯಾಗಿ, ರಸಾನುಭವವನ್ನು ಕಟ್ಟಿಕೊಡುವ ಕಾಯಕದಲ್ಲಿ ತೊಡಗುತ್ತದೆ.* ಈ ಕಾರಣದಿಂದ ಕಾವ್ಯದ ಭಾಷೆ 'ಅಕ್ಲಿಷ್ಟವಾಗಿರಬೇಕು, ಅಗ್ರಾಮ್ಯವಾಗಿರಬೇಕು, ರಸಸ್ಫುಟವಾಗಿರಬೇಕು'.[4] ಎನ್ನುತ್ತಾನೆ ಬಾಣ.

ಆದರೆ ತನ್ನ ಕಾವ್ಯದ ಭಾಷೆ ಹೇಗಿರಬೇಕು ಎನ್ನುವುದನ್ನು ನಿರ್ಣಯಿಸಬೇಕಾದವನು ಕವಿಯೇ ಹೊರತು, ಆಲಂಕಾರಿಕರಲ್ಲ. ಯಾಕೆಂದರೆ ತನ್ನ ವಿಶಿಷ್ಟಾಭಿವ್ಯಕ್ತಿಯನ್ನು ರೂಪಿಸಿಕೊಳ್ಳುವಲ್ಲಿ ಕವಿ ಭಾಷೆಯೊಂದಿಗೆ ದೊಡ್ಡ ಹೋರಾಟವನ್ನೇ ಹೂಡಿ, ಅದನ್ನು ಪಳಗಿಸಿ, ತನ್ನ ಅನುಭವದ ಅಭಿವ್ಯಕ್ತಿಯ ಮಾಧ್ಯಮವನ್ನಾಗಿ ಮಾಡಿಕೊಳ್ಳಬೇಕಾಗುತ್ತದೆ. ಎಲ್ಲ ಕಾಲದಲ್ಲೂ ಭಾಷೆಯನ್ನು ಮುರಿದು ಕಟ್ಟುವ, ಕಟ್ಟಿ ಮುರಿಯುವ ಪ್ರಯತ್ನಗಳು ನಡೆದೇ ಇವೆ. ಪ್ರತಿಯೊಬ್ಬ ನಿಜವಾದ ಕವಿಯೂ ತನ್ನ ಕಾಲದ ಆವಶ್ಯಕತೆಗೆ ಅನುಗುಣವಾಗಿ, ಭಾಷೆಯನ್ನು ರೂಪಿಸಿಕೊಳ್ಳುತ್ತಾನೆ. ಹೀಗೆ ರೂಪಿಸುವಲ್ಲಿ, ಎಲ್ಲ ಕಾಲದ ನಿಜವಾದ ಕವಿಗಳ ಧೋರಣೆ, ಕಾವ್ಯದ ಭಾಷೆ ಆಡುನುಡಿಗೆ ಸಮೀಪವಾಗಿರಬೇಕು; ಕಾವ್ಯಕ್ಕೆ ಆಡು ಮಾತಿನ ಸತ್ವವನ್ನು ತುಂಬಬೇಕು ಎನ್ನುವುದೇ ಆಗಿದೆ ಎಂಬುದು ಸ್ವಾರಸ್ಯವಾದ ಸಂಗತಿಯಾಗಿದೆ.

ಕನ್ನಡ ಸಾಹಿತ್ಯದ ಇತಿಹಾಸವನ್ನು ನೋಡಿದರೆ ಈ ಮಾತು ಇನ್ನೂ ಸ್ಪಷ್ಟವಾಗುತ್ತದೆ. ಒಂದು ಕಾಲಕ್ಕೆ ಜನ ಭಾಷೆಗೆ ಸಮೀಪವಾಗಿದ್ದ ಕಾವ್ಯದ ಭಾಷೆ ಬರ

---

[2] ಆನಂದವರ್ಧನ: ಧ್ವನ್ಯಾಲೋಕ : ೧–೮

[3] Vakrokti Jivita. Ed. Sushil Kumar De : Preface P. xxv.

* "A statement may be used for the Sake of *reference*, true or false, which it casces. This is the *scientific* use of Language. But it may also be used for the Sake of effects in emotion and attitude ... This is the *emotive* use of Language" I. A. Richards : Principles of Literary criticism : P. 267

[4] V. Raghavan : Some cencepts of Alankara Shastra : P. 93.

ಬರುತ್ತಾ ಪಾಂಡಿತ್ಯಮಯವಾಗಿ, ಕ್ಲಿಷ್ಟವಾಗಿ, ಕೆಲವರ ಸ್ವತ್ತಾಗಿ ಗದ್ದುಗೆಯನ್ನೇರಿ ಕೂತುಬಿಡುತ್ತದೆ. ಆಗ ಅದು 'ಪಂಡಿತರುಂ ವಿವಿಧ ಕಳಾ ಮಂಡಿತರುಂ' ಕೇಳತಕ್ಕ ಕೃತಿ ಮಾತ್ರವಾಗುತ್ತದೆ. ಆದರೆ ಈ ಕಾಲ ಬದಲಾಗುತ್ತದೆ. ಪಟ್ಟಭದ್ರ ಪ್ರತ್ಯೇಕತೆಯ ನೆಲೆಯಿಂದ ಭಾಷೆಯನ್ನು ಬಿಡಿಸಿ, ಎಲ್ಲರಿಗೂ ತಿಳಿಯುವಂತೆ, ಪಂಡಿತರಲ್ಲದವರೂ ಕೃತಿ ರಚನೆ ಮಾಡಲು ಸಾಧ್ಯವಾಗುವ, ಆಡು ಮಾತಿಗೆ ಸಮೀಪವಾಗುವ ರೀತಿಯಲ್ಲಿ ಕಾವ್ಯ ರಚಿತವಾಗಬೇಕೆಂಬ ಧೋರಣೆ ತಲೆ ಎತ್ತಿ ನಿಲ್ಲುತ್ತದೆ. ಇಂಥ ಸಂದರ್ಭವೇ ಸಾಹಿತ್ಯದಲ್ಲಿ ಕ್ರಾಂತಿಘಟ್ಟವಾಗುತ್ತದೆ. ಆಧುನಿಕ ಕಾವ್ಯವನ್ನು ಬಿಟ್ಟು ನೋಡುವುದಾದರೆ, ನಮ್ಮ ಹಿಂದಿನ ಸಾಹಿತ್ಯದ ಬೆಳವಣಿಗೆಯ ಕ್ರಾಂತಿಘಟ್ಟಗಳನ್ನು ಗಮನಿಸಿದರೆ ಎಲ್ಲೆಲ್ಲಿ ಕಾವ್ಯ ರಾಜಾಶ್ರಯದ ಹಂಗನ್ನು ಹರಿದುಕೊಂಡು ನಿಂತಿದೆಯೋ ಅಲ್ಲೆಲ್ಲಾ ಕಾವ್ಯದ ಭಾಷೆ ಬಹುಮಟ್ಟಿಗೆ ಆಡುನುಡಿಗೆ ಸಮೀಪವಾಗಿ, ಸಹಜ ಸೌಂದರ್ಯವನ್ನು ಪ್ರಕಟಪಡಿಸಿಕೊಂಡಿದೆ.

ಹೊಸಗನ್ನಡದ ನವೋದಯ ಕವಿಗಳ ಧೋರಣೆಗಳು ಇಂಗ್ಲೆಂಡಿನ ರೋಮ್ಯಾಂಟಿಕ್ ಕವಿಗಳ ಧೋರಣೆಗಳಿಂದ ಪ್ರೇರಣೆಗೊಂಡವು. ಇಂಗ್ಲೆಂಡಿನ ರೊಮ್ಯಾಂಟಿಕ್ ಕಾವ್ಯದ ಪ್ರಮುಖ ಕವಿಯಾದ ವರ್ಡ್ಸ್ ವರ್ತ್ ತನ್ನ ಕಾವ್ಯದ ಧೋರಣೆಗಳಲ್ಲಿ "ಜನದ ಯಥಾವತ್ತಾದ ಆಡು ಮಾತಿನ ಭಾಷೆಯನ್ನು ಬಳಸುವುದೂ" ("to adopt the very language of men") ಒಂದು ಎಂದು ಉದ್‌ಘೋಷಿಸಿದ.[5] ಅನಂತರದ ಇಂಗ್ಲೆಂಡಿನ ನವ್ಯ ಕವಿಗಳ ಧೋರಣೆ, ರೊಮ್ಯಾಂಟಿಕ್ ಕವಿಗಳಿಗಿಂತ, ತೀರಾ ಪ್ರತಿಭಟನಾತ್ಮಕವಾದ ರೀತಿಯಲ್ಲಿ ಭಿನ್ನವಾಗಿದ್ದರೂ ಕಾವ್ಯದ ಭಾಷೆ ಆಡು ನುಡಿಯ ಸತ್ವವನ್ನು ಒಳಗೊಂಡಿರಬೇಕು ಎಂಬುದನ್ನು ಒತ್ತಿ ಹೇಳಿದ್ದು ಸ್ವಾರಸ್ಯವಾದ ಸಂಗತಿಯಾಗಿದೆ.

ಪ್ರತಿಯೊಬ್ಬ ಕವಿಯೂ ಬರೆಯುವುದು, ತನ್ನ ಸಮಕಾಲೀನರಿಗಾಗಿ ಮತ್ತು ಸಮಕಾಲೀನ ಭಾಷೆಯಲ್ಲಿ. ಅವನ ಉದ್ದೇಶ ತನ್ನ ಅನುಭವಗಳನ್ನು ತನ್ನ ಕಾಲದವರೊಂದಿಗೆ ಹಂಚಿಕೊಳ್ಳುವುದು. ಹಾಗೆ ಮಾಡಬೇಕಾದರೆ ಅವನ ಕಾವ್ಯದ

---

[5] Wordsworth : Poetry and Poetic Diction :
English Critical Essays (Ninteenth Century)
Ed. Edmund D. Jones P. 7
ಇವನಿಗಿಂತ ಹಿಂದೆ 14ನೇ ಶತಮಾನದ ಚಾಸರ್, ಹೀಗೆ ಹೇಳುತ್ತಾನೆ :

I speak plainly and with no concealings
And give account of all their words and dealings
Using their very phrase as they fell.
Canterbury Tales : Prologue. P. 45-115-7

ಭಾಷೆ, ಅವನ ಕಾಲದ ಆಡು ನುಡಿಗೆ ತೀರ ಸಮೀಪವಾಗಿರಬೇಕು, ಆಡು ನುಡಿಯ ಸತ್ವವನ್ನು ಒಳಗೊಳ್ಳಬೇಕು. ಆದರೆ ಈ ಮಾತಿನ ಅರ್ಥ ಜನ ಬಳಸುವ ಆಡು ನುಡಿಯಷ್ಟೆ ಅವನ ಕಾವ್ಯದ ಭಾಷೆಯು ಸಮಸ್ತವೂ ಆಗುತ್ತದೆ ಎಂದು ಅಲ್ಲ. ಕವಿ ಒಂದು ಭಾಷೆಯ ಪರಂಪರೆಯಲ್ಲಿ ಬರೆಯುವುದರಿಂದ, ಆ ಭಾಷೆಗಿರುವ ಪಾರಂಪರಿಕ ಸತ್ವವನ್ನು ಪೈಗೂಡಿಸಿಕೊಂಡು, ತನ್ನದೇ ಆದ ಅಭಿವ್ಯಕ್ತಿಯನ್ನು ನಿರ್ಮಾಣ ಮಾಡಿಕೊಳ್ಳುತ್ತಾನೆ. ಈ ನಿರ್ಮಿತಿಯಲ್ಲಿ ಕಾವ್ಯದ ಭಾಷೆ ಆಡು ಮಾತಿಗೆ ಸಮೀಪ ವಾಗಿರುವಂತೆ ನೋಡಿಕೊಳ್ಳುವುದು ಆತನ ಜವಾಬ್ದಾರಿಗಳಲ್ಲಿ ಒಂದು.[6] "ಈ ಜವಾಬ್ದಾರಿಯನ್ನು ಕಾವ್ಯ ಮಾರ್ಗದಲ್ಲಿ ಬದಲಾವಣೆಯಾದ ಕಾಲದಲ್ಲೆಲ್ಲ ಕವಿಗಳು ಹೇಳುತ್ತಾ ಬಂದಿದ್ದಾರೆ. "Every revolution in poetry, ought to be and sometimes anounce itself as a return to comman speech".[7] ಎಂದು ಟಿ. ಎಸ್. ಇಲಿಯಟ್ ಹೇಳಿದ ಮಾತು ಯಥಾರ್ಥವಾಗಿದೆ.

ಇವತ್ತಿನ ಕನ್ನಡ ಕಾವ್ಯದ ಧೋರಣೆ, ಕಾವ್ಯಭಾಷೆಯನ್ನು ಕುರಿತು ಇಂಗ್ಲೆಂಡಿನ ನವ್ಯ ಕವಿಗಳ ಧೋರಣೆಯ ಪ್ರತಿಧ್ವನಿಯಾಗಿದೆ. ಇಂದಿನವರ ಪ್ರಕಾರ 'ಕಾವ್ಯದ ಭಾಷೆ ಆಡುಮಾತಿಗೆ ಸಮೀಪವಾಗಿರಬೇಕು'— ಎನ್ನುವುದು. ಹಾಗಾಗ ಬೇಕಾದರೆ ಅದು—

(ಅ) ಪಾಂಡಿತ್ಯಮಯವಾದ ಶಬ್ದಜಾಲದಿಂದ ಹೊರತಾಗಬೇಕು.
(ಆ) ಗದ್ಯದ ಸತ್ವವನ್ನು ಒಳಗೊಳ್ಳಬೇಕು.
(ಇ) ಸಂಗೀತದ ಸಾಹಚರ್ಯದಿಂದ ಪಾರಾಗಬೇಕು.
(ಈ) ನಾಟಕೀಯ ಅಂಶಗಳನ್ನು ಒಳಗೊಳ್ಳಬೇಕು.
(ಉ) ಹಿಂದಿನ ಕೃತಕ ಛಂದೋ ರೂಪಗಳನ್ನು ಮುರಿದು ಮುಕ್ತ ಛಂದಸ್ಸಿನಲ್ಲಿರಬೇಕು.

ಒಟ್ಟಿನಲ್ಲಿ ಹೇಳುವುದಾದರೆ 'ಕಾವ್ಯ ಆಡುನುಡಿಗೆ ಸಮೀಪವಾಗಿರಬೇಕು' ಎನ್ನುವುದೆ ಬಹುಶಃ ಎಲ್ಲ ಕಾಲದ ಗಟ್ಟಿಮುಟ್ಟಾದ ಧೋರಣೆಯಾಗಿದೆ.

2

ನಮ್ಮ ಕನ್ನಡ ಕಾವ್ಯಪರಂಪರೆಯಲ್ಲಿ ಕಾವ್ಯಭಾಷೆ ಹೇಗಿರಬೇಕು ಎನ್ನುವ ಬಗೆಗೆ ಕವಿಗಳು ಕಾಲದಿಂದ ಕಾಲಕ್ಕೆ ಏನಾದರೂ ವಿಚಾರ ಮಾಡಿದ್ದಾರೆಯೇ?

---

6 "......it is the poet's business to use the Speech which he finds about him, that with which he is most familiar" T.S. Eliot : Selected Prose : P. 59

7 T.S. Eliot. Selected Prose : P. 58

ತಮ್ಮ ಕಾವ್ಯಭಾಷೆಯನ್ನು ರೂಪಿಸಿಕೊಳ್ಳುವಲ್ಲಿ ಅವರು ಎದುರಿಸಬೇಕಾಗಿ ಬಂದ ಆತಂಕಗಳು, ಸವಾಲುಗಳು ಯಾವುವು? ನಮ್ಮ ಆಧುನಿಕರು ಕಾವ್ಯಭಾಷೆಯ ಬಗೆಗೆ ಪ್ರಕಟಿಸುವ ಧೋರಣೆಗಳು, ಕೇವಲ ಇವರಿಗೆ ಮಾತ್ರ ವಿಶಿಷ್ಟವಾದವುಗಳೆ ಅಥವಾ ನಮ್ಮ ಹಿಂದಿನ ಕವಿಗಳಿಗೂ ಇದೇ ಬಗೆಯ ಧೋರಣೆಗಳೇನಾದರೂ ಇದ್ದುವೆ—ಎಂಬುದು ಪರಿಶೀಲಿಸಬೇಕಾದ ವಿಷಯವಾಗಿದೆ.

ಕನ್ನಡದಲ್ಲಿ ಕಾವ್ಯರಚನೆ ಯಾವಾಗ ಪ್ರಾರಂಭವಾಯಿತೆಂದು ಹೇಳುವುದು ಸಾಧ್ಯವಿಲ್ಲವಾದರೂ. ಹತ್ತನೆಯ ಶತಮಾನದ ವೇಳೆಗೆ ಕನ್ನಡ ಕಾವ್ಯಭಾಷೆಯ ಮೇಲೆ ಸಂಸ್ಕೃತದ ದಟ್ಟವಾದ ಪ್ರಭಾವವಿತ್ತೆಂಬುದನ್ನು ಯಾರಾದರೂ ಗುರುತಿಸಬಹುದಾಗಿದೆ. ಕವಿರಾಜಮಾರ್ಗಪೂರ್ವದ ಶಾಸನಗಳನ್ನು ನೋಡಿದರೂ ಈ ವಿಷಯ ಸ್ಪಷ್ಟವಾಗಿದೆ. ಅತಿ ಪ್ರಾಚೀನವೆಂದು ಭಾವಿಸಲಾದ ಹಲ್ಮಿಡಿ ಶಾಸನದ ಭಾಷೆ ಪೂರ್ವದ ಹಳಗನ್ನಡದ ಗದ್ಯವಾಗಿದ್ದರೂ, ಸಂಸ್ಕೃತ ಭಾಷೆಯ ಪೂರ್ಣ ಪ್ರಭಾವಕ್ಕೆ ಒಳಗಾಗಿರುವುದನ್ನು ನೋಡಿದರೆ, ಕನ್ನಡ ಭಾಷೆಯ ಮೇಲೆ ಸಂಸ್ಕೃತದ ಪ್ರಭಾವ ಕ್ರಿ. ಶ. 450 ಕ್ಕಿಂತ ಹಿಂದೆಯೆ ಎಷ್ಟು ಗಾಢವಾಗಿತ್ತೆಂಬುದು ತಿಳಿಯುತ್ತದೆ. ಕ್ರಿ. ಶ. 450ರ ತಾಳಗುಂದ ಶಾಸನವಾಗಲಿ, ಕ್ರಿ. ಶ. 634ರ ಐಹೊಳೆ ಶಾಸನವಾಗಲಿ ಕಾವ್ಯಮಯವಾದ ಸಂಸ್ಕೃತದಲ್ಲಿ ರಚಿತವಾಗಿವೆ. ಕ್ರಿ. ಶ. 700ರ ಶ್ರವಣಬೆಳುಗೊಳದ ಶಾಸನದ ಛಂದಸ್ಸು ಸಂಸ್ಕೃತದಿಂದ ಕನ್ನಡ ತೆಗೆದುಕೊಂಡ ಮಹಾಸ್ರಗ್ಧರಾದಿ ಅಕ್ಷರ ವೃತ್ತಗಳಲ್ಲಿದೆ. ಕನ್ನಡ ಸಾಹಿತ್ಯದ ಆರಂಭ ಕಾಲವೇ ಸಂಸ್ಕೃತಮಯವಾಗಿರುವುದನ್ನು ನೋಡಿದರೆ, ಮುಂದಿನ ಕವಿಗಳು ಕನ್ನಡದಲ್ಲಿ ತಮ್ಮ ಕಾವ್ಯಭಾಷೆಯನ್ನು ರೂಪಿಸಿಕೊಳ್ಳುವುದರಲ್ಲಿ ಇದ್ದ ದೊಡ್ಡ ಆತಂಕ ಸಂಸ್ಕೃತದ್ದು. ನಮ್ಮ ಕನ್ನಡ ಕವಿಗಳ ಮುಖ್ಯವಾದ ಸಮಸ್ಯೆ ಎಂದರೆ, ಕನ್ನಡ ಕಾವ್ಯಭಾಷೆಯಲ್ಲಿ ಸಂಸ್ಕೃತವನ್ನು ಎಷ್ಟರಮಟ್ಟಿಗೆ ಉಳಿಸಿಕೊಳ್ಳಬೇಕು ಎನ್ನುವುದು. ಹೀಗಾಗಿ ಸಂಸ್ಕೃತದ ಬಗ್ಗೆ ಕನ್ನಡ ಕಾವ್ಯಪರಂಪರೆಯಲ್ಲಿ ಕನ್ನಡ ಕವಿಗಳು ತೋರಿದ ಪ್ರತಿಕ್ರಿಯೆಗಳೇ ನಮ್ಮ ಕವಿಗಳ ಭಾಷಾಪ್ರಜ್ಞೆಯನ್ನು ಗುರುತಿಸುವ ಮೂಲಮಾನವಾಗಿದೆ. ಈ ಪ್ರತಿಕ್ರಿಯೆ ಸ್ಥೂಲವಾಗಿ ಮೂರು ರೀತಿಯದಾಗಿದೆ.

1) ಸಂಸ್ಕೃತವನ್ನು ಕನ್ನಡ ಕಾವ್ಯರಚನೆಗೆ ಒಂದು ಆತಂಕವೆಂದು ಭಾವಿಸದೆ, ಅನುಕೂಲವೆಂದೇ ಭಾವಿಸಿದ ಪಂಡಿತ ಕವಿಗಳ ಧೋರಣೆ.

2) ಕನ್ನಡದಂತೆಯೇ ಸಂಸ್ಕೃತವೂ ನಮ್ಮದು. ಆದರೆ ಅದು ಕನ್ನಡದ ಸೊಗಸನ್ನು ಕಬಳಿಸದಂತೆ ನೋಡಿಕೊಂಡು, ಸಂಸ್ಕೃತದ ಸೊಗಸನ್ನು ಕನ್ನಡದ ಆಡುನುಡಿ (ದೇಸಿ) ಯೊಂದಿಗೆ ಹೊಂದಿಸಿ ಒಂದು ಸಮನ್ವಯವನ್ನು ಸಾಧಿಸುವುದು ಭಾಷೆಯ ಶ್ರೀಮಂತಿಕೆಯ ದೃಷ್ಟಿಯಿಂದ ಒಳ್ಳೆಯದು—ಎಂಬ ಉದಾರ ಧೋರಣೆ.

3) ಕನ್ನಡ ಭಾಷೆಗೆ ತನ್ನದೇ ಆದ ಒಂದು ಸತ್ವವಿರುವಾಗ, ಸಂಸ್ಕೃತದ ಸಂಪರ್ಕವನ್ನು ದೂರವಿರಿಸಿ ಅಚ್ಚಗನ್ನಡದಲ್ಲಿ, ಆಡುನುಡಿಗೆ ಸಮೀಪವಾಗಿರುವಂಥ ರೀತಿಯಲ್ಲಿ ಕಾವ್ಯಭಾಷೆಯನ್ನು ರೂಪಿಸಿಕೊಳ್ಳಬೇಕು ಎನ್ನುವ ಧೋರಣೆ.

3

ಸಂಸ್ಕೃತವನ್ನು, ಕನ್ನಡ ಕಾವ್ಯರಚನೆಗೆ ಒಂದು ಆತಂಕವೆಂದು ಭಾವಿಸದೆ, ಅನುಕೂಲವೆಂದೇ ತಿಳಿದ ಪಂಡಿತ ಕವಿಗಳ ಧೋರಣೆಗೆ ಮುಖ್ಯ ಕಾರಣ, ಸಂಸ್ಕೃತವೇ ವಿದ್ವತ್ತಿನ ಹಾಗೂ ಕಾವ್ಯದ ಭಾಷೆ ಎಂಬ ಬಲವಾದ ಒಂದು ನಂಬಿಕೆಯೆ ಎಂದರೆ ತಪ್ಪಾಗಲಾರದು. ಸಂಸ್ಕೃತಕ್ಕೆ ಹಿಂದೆ ಇದ್ದ ರಾಷ್ಟ್ರೀಯ ಮಹತ್ವ ಹಾಗೂ ಪೂಜ್ಯತೆಗಳು ಈ ನಂಬಿಕೆಯನ್ನು ಪುಷ್ಟಿಗೊಳಿಸಿದ್ದುವು. ಕನ್ನಡದಲ್ಲಿ ಕಾವ್ಯರಚನೆ ಮಾಡತಕ್ಕವರಿಗೆ, ಹಿನ್ನೆಲೆಯಾಗಿ ಇದ್ದ ಮಾದರಿಗಳೆಲ್ಲಾ ಸಂಸ್ಕೃತ ಕಾವ್ಯಗಳೆ. ವ್ಯಾಸ-ವಾಲ್ಮೀಕಿ-ಕಾಳಿದಾಸ-ಭಾಸ-ಬಾಣ-ಹರ್ಷಾದಿ ಕವಿಗಳ ರಚನೆಗಳು, ಭರತ-ದಂಡಿ-ಭಾಮಹಾದಿ ಆಲಂಕಾರಿಕರ ನಿರ್ದೇಶನಗಳು ಕಣ್ಣೆದುರಿಗೆ ಇದ್ದು ಕನ್ನಡ ಆಲಂಕಾರಿಕರಿಗೂ, ಕವಿಗಳಿಗೂ ದಾರಿದೀಪದಂತಾದವು. ಇದಲ್ಲದೆ ಸಂಸ್ಕೃತ ಗೀರ್ವಾಣಭಾಷೆ; ಭರತಖಂಡದ ಪವಿತ್ರ-ಪೂಜ್ಯ ಗ್ರಂಥಗಳೆಲ್ಲಾ ಸಂಸ್ಕೃತದಲ್ಲಿವೆ. ಅದಕ್ಕೆ ರಾಜಾಸ್ಥಾನಗಳ ಗೌರವ ಬೇರೆ. ಬಹುಶ್ರುತರೂ, ಪಂಡಿತರೂ ಆದ ಕನ್ನಡ ಕವಿಗಳಿಗೆ, ತಾವು ಕನ್ನಡದಲ್ಲಿ ಮಾತ್ರವಲ್ಲ ಸಂಸ್ಕೃತದಲ್ಲೂ ಕಾವ್ಯ ಬರೆದು 'ಉಭಯ ಕವಿ'ಗಳಾಗುವುದರಲ್ಲಿ ಆಸಕ್ತಿ ಹೆಚ್ಚು. ತಮ್ಮ ಶ್ರೇಷ್ಠತೆ ತಾವು ಕೇವಲ ಕನ್ನಡದಲ್ಲಿ ಕಾವ್ಯರಚನೆ ಮಾಡಿದ್ದರಿಂದ ಮಾತ್ರ ಬರಲಾರದೆಂಬ ಶಂಕೆ ಅನೇಕರಿಗೆ. ಹೀಗಾಗಿ ಕನ್ನಡದಲ್ಲಿ ಬರೆದರೇನು, ಸಂಸ್ಕೃತದಲ್ಲಿ ಬರೆದರೇನು— ಎಂದುಕೊಂಡು, ಕಾವ್ಯ ಭಾಷೆಯ ಬಗ್ಗೆ ನಿರ್ದಿಷ್ಟವಾದ ಯಾವ ವಿಚಾರವನ್ನೂ ಅಷ್ಟಾಗಿ ಮಾಡದೆ, ಬಹುಮಟ್ಟಿಗೆ ಸಂಸ್ಕೃತದಲ್ಲೇ ಬರೆದು, ವೃತ್ತದ ತುದಿಗೆ ಒಂದು ಕನ್ನಡ ಪ್ರತ್ಯಯವನ್ನೂ ಹಾಕಿ ತೃಪ್ತರಾದ ಪಂಡಿತ ಕವಿಗಳ ಧೋರಣೆ ಆಶ್ಚರ್ಯಕರವಾಗಿದೆ. ಈ ಬಗೆಯ ರಚನೆಗೆ ಪಂಪ-ರನ್ನರೂ ಹೊರತಾಗಿಲ್ಲ; ರುದ್ರಭಟ್ಟ-ದುರ್ಗಸಿಂಹ-ಷಡಕ್ಷರಿ ಮುಂತಾದ ಅನೇಕ ಚಂಪೂ ಕವಿಗಳು, ಈ ಧೋರಣೆಯ ಮಾದರಿಗಳು. ಇಂಥ ಭಾಷೆಯನ್ನೆ ಕುರಿತು ಮುದ್ದಣನ ಮನೋರಮೆ 'ನೀರಿಳಿಯದ ಗಂಟಲೊಳ್ ಕಡುಬಂ ತುರುಕಿದಂತಾಯ್ತು' ಎಂದದ್ದು.

ಕಾವ್ಯಭಾಷೆಯನ್ನು ಕುರಿತು, ಕನ್ನಡ ಪರಂಪರೆಯಲ್ಲಿ ನಾವು ಗುರುತಿಸಬಹುದಾದ ಇನ್ನೊಂದು ಧೋರಣೆ ಸಂಸ್ಕೃತ-ಕನ್ನಡ ಭಾಷೆಗಳ ಸಮನ್ವಯವನ್ನು

ಕುರಿತದ್ದು. ನಮಗೆ ತೋರುವ ಮಟ್ಟಿಗೆ ಕವಿರಾಜಮಾರ್ಗಕಾರನ ಮಾತೇ ಮೊದಲನೆಯದು, ಮುದ್ದಣನ ಮಾತು ಕಡೆಯದು.[8]

ಕವಿರಾಜಮಾರ್ಗಕಾರ ಕನ್ನಡನಾಡು-ನುಡಿ-ಜನಗಳನ್ನು ಬಾಯ್ತುಂಬ ಹೊಗಳಿರುವ ಕನ್ನಡಿಗ. ಅವನು ಕವಿರಾಜಮಾರ್ಗದ ಮೂಲಕ ಕನ್ನಡ ಕಾವ್ಯದ ದೃಷ್ಟಿ-ಧ್ಯೇಯ-ಧೋರಣೆಗಳನ್ನು ನಿರೂಪಿಸುವ ಹೊಣೆಯನ್ನು ಹೊತ್ತವನು. ಕವಿಗಳಿಗೆ ಕೈಪಿಡಿಯಾಗುವ ಕೃತಿಯನ್ನು ಬರೆಯುವಾಗ ಅವನ ಪ್ರೇರಣೆ ಸಂಸ್ಕೃತದಿಂದಲೆ. ಸಂಸ್ಕೃತದ ಬಗ್ಗೆ ಆತನಿಗೆ ಗೌರವ-ಅಭಿಮಾನ. ಕನ್ನಡದ ಬಗ್ಗೆ ಆತ್ಮೀಯತೆ-ಪ್ರೀತಿ. ಸಂಸ್ಕೃತವನ್ನು ಧಿಕ್ಕರಿಸಿ ಕನ್ನಡ ಬೆಳೆಯಲಾರದು; ಅದರ ತುಷ್ಟಿಪುಷ್ಟಿಗಳನ್ನು ಕನ್ನಡಕ್ಕೆ ತುಂಬಬೇಕು ಎನ್ನುವುದು ಆತನ ಉದ್ದೇಶ. ಆದರೆ ಯಾವ ಕಾರಣಕ್ಕೂ ಸಂಸ್ಕೃತ ಕನ್ನಡದ ಜಾಯಮಾನವನ್ನು ಕಬಳಿಸಿ, ಕಾವ್ಯಭಾಷೆ ಸಂಸ್ಕೃತಮಯವಾಗಬಾರದು ಎಂಬ ಎಚ್ಚರ ಆತನದು. ಆದ್ದರಿಂದ ಸಂಸ್ಕೃತವನ್ನೂ, ಕನ್ನಡವನ್ನೂ ಸಮತೂಕದಲ್ಲಿ ಹೊಂದಿಸಿ ಒಂದು ಕಾವ್ಯಭಾಷೆಯನ್ನು ರೂಪಿಸಬೇಕು ಎನ್ನುವುದು ಈ ಕಾಲದ ಧೋರಣೆ. ಈ ಧೋರಣೆ ಕವಿರಾಜಮಾರ್ಗಕಾರನಿಂದ, ಪಂಪನನ್ನೂ ಒಳಗೊಂಡು ನಯಸೇನನವರೆಗೂ ಚಾಚಿಕೊಂಡಿದೆ. ಈ ಧೋರಣೆಯ ಮುಖ್ಯವಾದ ಪ್ರತಿನಿಧಿಗಳು ಕವಿರಾಜಮಾರ್ಗಕಾರ ಮತ್ತು ಪಂಪ.

ಕವಿರಾಜಮಾರ್ಗದ ಕಾಲಕ್ಕೆ ಕನ್ನಡದಮೇಲೆ ಸಂಸ್ಕೃತದ ಪ್ರಭಾವ ದಟ್ಟವಾಗಿತ್ತು ಎಂಬ ಅಂಶವನ್ನು ಆಗಲೇ ಸೂಚಿಸಿದ್ದೇವೆ. ಸಂಸ್ಕೃತದ ಮಿತಿಮೀರಿದ ಬಳಕೆಗೆ ಕವಿರಾಜಮಾರ್ಗಕಾರ ವಿರೋಧಿಯೆ ಹೊರತು, ಕನ್ನಡದೊಂದಿಗೆ ಸಂಸ್ಕೃತದ ಹದವಾದ ಮಿಶ್ರಣವನ್ನು ಆತ ಬೇಡವೆನ್ನುವುದಿಲ್ಲ. 'ಸಮಸಂಸ್ಕೃತ'ದ ಜತೆಗೆ ಕನ್ನಡವನ್ನು ಬೆರೆಸಿ ಸಮಾಸ ಮಾಡುವುದು 'ಆಗಮಕೋವಿದ ನಿಗದಿತಮಾರ್ಗ' ಎನ್ನುತ್ತಾನೆ (1-51). ಅವುಗಳ ಬಳಕೆ ಮೃದಂಗ ಸಂಗೀತಕಾದಿ ಮಧುರ ರವದಂತೆ ಸಂತೋಷವನ್ನು ಕೊಡುತ್ತದೆ. ಆದರೆ ಸಂಸ್ಕೃತ ಪದಗಳನ್ನೂ ಕನ್ನಡ ಪದಗಳನ್ನೂ ಸಮಾಸೋಕ್ತಿಗಳಲ್ಲಿ ಬೆರೆಸಬಾರದು ಎನ್ನುತ್ತಾನೆ. ಈ ಹಿನ್ನೆಲೆಯಿಂದ ಕಾವ್ಯದ ಭಾಷೆ ಹೇಗಿರಬೇಕು ಎನ್ನುವುದನ್ನು ಕುರಿತು ಕವಿರಾಜಮಾರ್ಗಕಾರನ ಈ ಒಂದು ಪದ್ಯವನ್ನು ನೋಡಬೇಕಾಗಿದೆ.

---

8 "ಸಕ್ಕದ ಮೊಂದೆ ರನ್ನವಣೆಯಂ ಪೊನ್ನಿಂ ಬಿಗಿದಂತೆಸೆಗುಂ; ಅವಱಿಂ ಕರ್ಮಣಿಸರದೊಳ್ ಚಂಬವಳಮಂ ಕೋದಂತಿರೆ, ರಸಮೊಸರೆ, ಲಕ್ಕಣಂ ಮಿಕ್ಕಿರೆ, ಎಡೆಯೆಡೆಯೊಳ್ ಸಕ್ಕದದ ನಲ್ನುಡಿ ಮೆಱೆಯೆ, ತಿರುಳ್ಗನ್ನಡದೊಳೆ ಕತೆಯನುಸಿರ್ವೆಂ" :

ರಾಮಾಶ್ವಮೇಧ: ಪಂಕ್ತಿ 14–17; ಪುಟ 6.

ನುಡಿಗಳೊಡಂಬಡಲ್ ಬಗೆದವ್ಪೋಲ್ ಬಗೆಯುಂ ಮಿಗಲೀಯುದೊಂದೆನಾ
ಟ್ನುಡಿಯ ಬೆಡಂಗೆ ಕನ್ನಡದ ಮಾತಿನೊಳಾ ವಿಕಟಾಕ್ಷರಂಗಳೊಳ್
ತೊಡರದೆ ಸಕ್ಕದಂಗಳ್ ಪದಂ ಪವಣಾಗಿರೆ ಮೆಲ್ಪುವೆತ್ತು ದಾಂ
ಗುಡಿವಿಡುವಂತೆ ನೀಳ್ದು ನಿಲೆ ಪೇಳ್ವುದು ನೀತಿ ನಿರಂತರ ಕ್ರಮಂ' (1-149)

ಕವಿ ಕಾವ್ಯದಲ್ಲಿ ಬಳಸುವ ಪದಗಳು ಒಂದಕ್ಕೊಂದು ಹೊಂದಿಕೊಂಡು, ಕವಿಯು ಭಾವವನ್ನು ಉಚಿತವಾದ ರೀತಿಯಲ್ಲಿ ವ್ಯಕ್ತಗೊಳಿಸುವಂತಿರಬೇಕು ; ಆ ಕನ್ನಡದ ಮಾತುಗಳಲ್ಲಿ ನಾಟ್ನುಡಿಯ ಬೆಡಗು—ಆಡುಮಾತಿನ ಸೊಗಸು—ಇರಬೇಕು ; ಈ ಕನ್ನಡ ಮಾತುಗಳೊಂದಿಗೆ ಬಳಸುವ ಸಂಸ್ಕೃತ ಪದಗಳು ಕರ್ಕಶವಾದ ಪರುಷಾಕ್ಷರಗಳಿಂದ ಕೂಡಿರಬಾರದು, ಮತ್ತು ಒಟ್ಟಿನಲ್ಲಿ ರಚನೆ 'ಮೆಲ್ಪು' ವೆತ್ತು,—ಮೃದುಪದಬಂಧದಿಂದ, ಇರಬೇಕು. ಹೀಗೆ ಪದ್ಯದ ರಚನೆ ಬಳ್ಳಿಯ ಕುಡಿಚಾಚಿಕೊಂಡು ಹಾಸಿದಂತೆ ಇರಬೇಕು. ಇದು ಭಾಷೆಯನ್ನು ಕಾವ್ಯರಚನೆಯಲ್ಲಿ ಬಳಸುವ ಬಗ್ಗೆ ಮಾರ್ಗಕಾರನು ಸೂಚಿಸುವ 'ನೀತಿನಿರಂತರ ಕ್ರಮ'.

ಕವಿರಾಜಮಾರ್ಗಕಾರನ ಈ ಹೇಳಿಕೆ ಸ್ಪಷ್ಟವಾಗಿ ಕಾವ್ಯ ಭಾಷೆಯನ್ನು ಕುರಿತ ಸಮತೂಕದ ಧೋರಣೆಯೊಂದನ್ನು ಮೊಟ್ಟ ಮೊದಲಿಗೆ ಪ್ರತಿಪಾದಿಸುತ್ತದೆ. ಕಾವ್ಯದಲ್ಲಿ ಕನ್ನಡ-ಸಂಸ್ಕೃತ ಪದಗಳ ಹದವಾದ ಪವಣಿಕೆ ಇರಬೇಕೆಂಬುದರ ಜತೆಗೆ, ಕನ್ನಡದ ನಾಡುನುಡಿಯ ಬೆಡಂಗು ಕಾವ್ಯದಲ್ಲಿರಬೇಕು ಎಂಬುದು ಹೊಚ್ಚ ಹೊಸಮಾತಾಗಿದೆ. ಕಾವ್ಯದಲ್ಲಿ ಸಂಸ್ಕೃತದ ಪ್ರಭಾವವಿದ್ದರೂ ಅದು 'ನಾಟ್ನುಡಿಯ ಬೆಡಂಗ'ನ್ನು ಕಬಳಿಸುವಂತಿರಬಾರದು ಎಂಬ ನಿರ್ದೇಶನ ಗಮನಿಸತಕ್ಕದ್ದಾಗಿದೆ.

ಹತ್ತನೆಯ ಶತಮಾನದ ಕವಿ ಪಂಪನೂ ಕಾವ್ಯ ಭಾಷೆಯನ್ನು ಕುರಿತು ಕವಿರಾಜಮಾರ್ಗಕಾರರನನ್ನು ಅನುಮೋದಿಸುತ್ತಾನೆ. ಪಂಪ ಸಂಸ್ಕೃತದಲ್ಲಿ ನುರಿತವನು; ವ್ಯಾಸ-ಕಾಳಿದಾಸ-ಬಾಣಾದಿಗಳ ಕಾವ್ಯದ ಸತ್ವದಿಂದ ಬೆಳೆದವನು. ಆದರೂ ಅವನು ಕಾವ್ಯವನ್ನು ಬರೆದದ್ದು-ವಿಕ್ರಮಾರ್ಜುನ ವಿಜಯದ ಮಟ್ಟಿಗೆ, 'ಸಾಜದ ಪುಲಿಗೆರೆಯ ತಿರುಳ್ಗನ್ನಡ'ದಲ್ಲಿ. ಪಂಪನಿಗೆ ಕನ್ನಡದ ಮೇಲೆ ಪ್ರೀತಿ ; ಸಂಸ್ಕೃತದ ಮೇಲೆ ಅಭಿಮಾನ. ಆದ್ದರಿಂದ ಅವೆರಡರ ಒಡಂಬಡಿಕೆಯನ್ನು ಕಾವ್ಯಭಾಷೆಯಲ್ಲಿ ಸಾಧಿಸಿದ. ದೇಸಿಯುಲ್ಲಿ ಪೊಕ್ಕು ಮಾರ್ಗದಲ್ಲಿ ತಳ್ವುದು* ಆತನಿಗೆ ಪ್ರಿಯವಾದದ್ದು. ಕವಿರಾಜಮಾರ್ಗಕಾರನ ಸಂಸ್ಕೃತ ಮತ್ತು ನಾಟ್ನುಡಿಯ ಬೆಡಂಗು' ಎಂಬ ಮೂಲ ಭಾವಕ್ಕೆ ಸಂವಾದಿಯಾಗಿ ಪಂಪ 'ಮಾರ್ಗ ಮತ್ತು ದೇಸಿ'

---

* ಬಗೆ ಪೊಸತಪ್ಪುದಾಗಿ ಮೃದುಬಂಧದೊಳೊಂದುವುದೊಂದಿ ದೇಸಿಯೊಳ್
ಪುಗುವುದು ಪೊಕ್ಕ ಮಾರ್ಗದೊಳೆ ತಳ್ವುದು ತಳ್ತೊಡೆ ಕಾವ್ಯ ಬಂದಮೊ-
ಪ್ಪುಗುಮೆಳಮಾವು ಕೆಂದಳಿರ ಪೂವಿನ ಬಿಣ್ಪೊರೆಯಿಂ ಬಳಲ್ದು ತುಂ-
ಬಿಗಳಿನೆ ತುಂಬಿ ಕೋಗಿಲೆಯೆ ಬಗ್ಗಿಸೆ ಸುಗ್ಗಿಯೊಳೊಪ್ಪುವಂತೆವೋಲ್
(ಪಂಪಭಾರತ : ೧-೮)

ಗಳನ್ನು ಹೇಳುತ್ತಾನೆಂದು ಕಾಣುತ್ತದೆ. ಮಾರ್ಗ ಎಂದರೆ ಸಂಸ್ಕೃತದ ಪ್ರಾಬಲ್ಯವಿರುವ ಪ್ರೌಢ ಭಾಷಾರಚನೆ, ದೇಸಿ ಎಂದರೆ ಆಡುಮಾತಿನ ಸೊಗಸನ್ನು ಮೂಲವಾಗಿ ಉಳ್ಳ ಬರವಣಿಗೆ. ಕವಿರಾಜ ಮಾರ್ಗಕಾರ ಹೇಳಿದ 'ನಾಟ್ನುಡಿಯ ಬೆಡಂಗು' ಪಂಪನಲ್ಲಿ 'ದೇಸಿ'ಯಾಗಿದೆ. ಇಡೀ ಕನ್ನಡ ಸಾಹಿತ್ಯದಲ್ಲಿ ಕಾವ್ಯದ ಭಾಷೆ ಅಲ್ಲಲ್ಲಿ 'ಮಾರ್ಗ' 'ದೇಸಿ' ಎಂಬ ಎರಡು ಅಭಿವ್ಯಕ್ತಿ ವಿಧಾನಗಳಲ್ಲಿ ಕಾಣಿಸಿಕೊಂಡಿದೆ. ಪಂಪನಿಗೆ ತನ್ನ ಕಾಲದ ತಿರುಳ ಕನ್ನಡದ ದೇಸಿಯೊಂದಿಗೆ ಮಾರ್ಗದ ಸತ್ವವನ್ನು ಹೊಂದಿಸುವ ಅಪೇಕ್ಷೆ. ಅವನಿದ್ದುದು ರಾಜನ ಆಸ್ಥಾನದಲ್ಲಿ; ಮೇಲಾಗಿ ವಿದ್ವಾಂಸ. ಹೇಳುವುದಾದರೆ ಪಂಪನೇ ಹೇಳಬೇಕು ಎಂದು ಪಂಡಿತರು ಒಂದೇ ಸಮನೆ ಅಭಿಪ್ರಾಯ ಪಟ್ಟಿದ್ದರಿಂದ, ಆತ ಮಹಾಪ್ರಬಂಧವನ್ನು ಬರೆಯಬೇಕಾಯಿತೆಂದು ಹೇಳಿಕೊಂಡಿದ್ದಾನೆ. ಹೀಗಾಗಿ ಮಾರ್ಗಪ್ರಿಯರಾದ ಪಂಡಿತರಿಗೂ, ದೇಸಿಪ್ರಿಯವಾದ ತನ್ನ ಕಾಲದ ಜನಕ್ಕೂ ಏಕಕಾಲದಲ್ಲಿ ರುಚಿಸುವಂತೆ ರಚಿಸಬೇಕಾದರೆ, ದೇಸಿ ಮಾರ್ಗಗಳ ಒಡಂಬಡಿಕೆಯನ್ನು ಸಾಧಿಸುವುದೊಂದೇ ದಾರಿ. ಪಂಪ ತನ್ನ ಕಾವ್ಯದಲ್ಲಿ ಬಳಸಿದ ದೇಸಿ, ಅಥವಾ ವಿಶಿಷ್ಟವಾದ ಪ್ರಾದೇಶಿಕ ವೈಲಕ್ಷಣ್ಯಗಳಿಂದ ಕೂಡಿದ ಆಡುಮಾತು, ಮುಂದಿನ ಕವಿಗಳಿಂದ ಪ್ರಶಂಸಿತವಾಗಿದೆ. ಪಂಪನ ವಿಕ್ರಮಾರ್ಜುನ ವಿಜಯ ಅಂದಿನ ಆಡುಮಾತಿನ ಬಗ್ಗೆ ಪಂಪನಿಗೆ ಇದ್ದ ಪ್ರಜ್ಞೆ ಎಂಥದೆಂಬುದನ್ನು ಸೂಚಿಸುತ್ತದೆ. ಅವನ ಕಾವ್ಯ ಮಾತನಾಡಿದ ಹಾಗೆ ಇದೆ; ಕವಿರಾಜ ಮಾರ್ಗಕಾರನು ಹೇಳಿದ 'ನಾಟ್ನುಡಿಯ ಬೆಡಂಗು' ಪಂಪನಲ್ಲಿ ಸಮೃದ್ಧವಾಗಿದೆ.

ಆದರೂ ಪಂಪನ ಕಾವ್ಯ ದೇಸಿ ಕಾವ್ಯ ಅಲ್ಲ; ಅದು ಮಾರ್ಗ ಕಾವ್ಯವೇ. ಪಂಪಭಾರತಕ್ಕೆ ಹೋಲಿಸಿದರೆ, ಆದಿಪುರಾಣವಂತೂ ಇನ್ನೂ ಪ್ರೌಢವಾದ ರಚನೆಯಾಗಿದೆ, ಭಾಷೆಯ ದೃಷ್ಟಿಯಿಂದ. ಕವಿರಾಜಮಾರ್ಗಕಾರನಂತೆ ಪಂಪನೂ ಸಂಸ್ಕೃತದ ಬಗ್ಗೆ ವಿಶೇಷ ಗೌರವ ಅಭಿಮಾನಗಳುಳ್ಳವನು; ಆದರೆ ಸಂಸ್ಕೃತವನ್ನು ಕನ್ನಡದ ದೇಸಿಯೊಂದಿಗೆ ಹೊಂದಿಸಿ, ಅವೆರಡರ ಹದವಾದ ಪಾಕದಿಂದ ಕಾವ್ಯಭಾಷೆಯನ್ನು ಸಿದ್ಧಗೊಳಿಸಬೇಕೆಂಬ ಉದ್ದೇಶ ಉಳ್ಳವನು.

ಸಂಸ್ಕೃತ ಕನ್ನಡಗಳನ್ನು ಹದವಾಗಿ ಬೆರಸಿ ಕಾವ್ಯಭಾಷೆಯನ್ನು ರೂಪಿಸಿಕೊಳ್ಳಬೇಕೆಂಬ ಧೋರಣೆ ಮೇಲೆ ನೋಡಲು ಸಾಧುವಾಗಿ ಕಂಡರೂ, ಕನ್ನಡ ಕಾವ್ಯ ರಚನೆಯಲ್ಲಿ ತೊಡಗುವ ಕವಿಗಳಿಗೆ ಸಂಸ್ಕೃತದ ಮೋಹವೇ ಮಿಗಿಲಾಗುವ ಅಪಾಯವನ್ನು ಗುರುತಿಸಿದ ನಯಸೇನನು, ತನ್ನ ಧರ್ಮಾಮೃತದಲ್ಲಿ-

ಪೊಸಗನ್ನಡದಿಂ ವ್ಯಾವ
ರ್ಣಿಸುವೆಂ ಸತ್ಕೃತಿಯನೆಂದು ಕನ್ನಡಮಂ ಚಿಂ
ತಿಸಿ ಕೂಡಲಾರದಕ್ಕಟ
ಮಿಸುಕದ ಸಕ್ಕದಮನಿಕ್ಕುವಂ ಕವಿಯೇ (1–41)

ಎಂದು ಮೂದಲಿಸಿದನು, ಅಷ್ಟೇ ಅಲ್ಲ—

ಸಕ್ಕದಮಂ ಪೇೞ್ವೊಡೆನೆಱ
ಸಕ್ಕದಮಂ ಪೇೞ್ಗೆ ಸುದ್ದಗನ್ನಡದೊಳ್ತಂ
ದಿಕ್ಕುವುದೇ ಸಕ್ಕದಮಂ
ತಕ್ಕುದೆ ಬೆರಸಲ್ಕೆ ಘೃತಮುಮಂ ತೈಲಮುಮಂ

(1–48)

ಎನ್ನುತ್ತಾನೆ. ಕವಿಗಳು ಕನ್ನಡದಲ್ಲಿ ಕಾವ್ಯ ಬರೆಯುತ್ತೇವೆ ಎನ್ನುತ್ತಾರೆ; ಆದರೆ ಅದರೊಳಕ್ಕೆ 'ಮಿಸುಕದ ಸಕ್ಕದ'ವನ್ನು ತಂದು ಇಕ್ಕುತ್ತಾರೆ. ಹೀಗೆ ಮಾಡುವುದು ಸರಿಯಲ್ಲ. ಕವಿಗಳು ಬೇಕಾದರೆ ಸಂಸ್ಕೃತದಲ್ಲಿಯೇ ಕಾವ್ಯ ರಚನೆ ಮಾಡಲಿ, ಆದರೆ 'ಸುದ್ದಗನ್ನಡ'ದಲ್ಲಿ ಸಂಸ್ಕೃತವನ್ನು ಬೆರಸಬಾರದು. ಕಾವ್ಯದ ಭಾಷೆ ಶುದ್ಧ ಸಂಸ್ಕೃತ ದಲ್ಲಿರಲಿ ಅಥವಾ ಶುದ್ಧ ಕನ್ನಡದಲ್ಲಿರಲಿ. ಒಂದರಲ್ಲಿ ಒಂದನ್ನು ಬೆರಸುವುದು ಕೂಡದು ಎನ್ನುವುದು ಆತನ ಸ್ಪಷ್ಟವಾದ ನಿಲುವಾಗಿದೆ. ಕನ್ನಡದೊಂದಿಗೆ ಸಂಸ್ಕೃತದ ಮಿಶ್ರಣ ವನ್ನು ವಿರೋಧಿಸಿದ್ದು ಕನ್ನಡ ಪರಂಪರೆಯಲ್ಲಿ ಇದೇ ಮೊದಲು. ಕನ್ನಡ ಸಂಸ್ಕೃತ ಗಳ ಬೆರಕೆಯನ್ನು ಕುರಿತು 'ತಕ್ಕುದೆ ಬೆರಸಲ್ಕೆ ಘೃತಮುಮಂ ತೈಲಮುಮಂ' ಎಂಬ ನಯಸೇನನ ಟೀಕೆ, ಕನ್ನಡ ತುಪ್ಪದಂತೆ ಶ್ರೇಷ್ಠವೆಂಬ ಪ್ರಶಂಸೆಯನ್ನೂ, ಸಂಸ್ಕೃತ ಎಣ್ಣೆಯಂತೆ ಎಂಬ ಮೂದಲಿಕೆಯನ್ನೂ ಒಟ್ಟಿಗೆ ಪ್ರಕಟಿಸುತ್ತದೆ. ಕನ್ನಡ ಕವಿಗಳ ಭಾಷಾ ಪ್ರಜ್ಞೆಯನ್ನು ಗಮನಿಸುವಾಗ, ಸಂಸ್ಕೃತದ ಮಹತ್ವವನ್ನು ಕೀಳ್ಗಳೆದು ನೋಡಿದ್ದು ಇಲ್ಲಿಯೇ. ಕನ್ನಡ ಭಾಷೆಗೆ ಸಾಕಷ್ಟು ಸತ್ವ ಇರುವಾಗ, ಅದನ್ನೇ ಕಾವ್ಯ ಭಾಷೆಯನ್ನಾಗಿ ದುಡಿಸಿಕೊಳ್ಳಲು ಕನ್ನಡ ಕವಿಗಳು ಪ್ರಯತ್ನ ಪಡಬೇಕೇ ಹೊರತು, ಸಂಸ್ಕೃತವನ್ನು ಅವಲಂಬಿಸಬಾರದು ಎನ್ನುವ ದಿಟ್ಟತನದ ಧೋರಣೆ ಯೊಂದು ಈ ಕಾಲದಲ್ಲಿ ಘೋಷಿತವಾಗಿ, 'ಲಲಿತವಹ ಕನ್ನಡದ ನುಡಿಯಲಿ ತನ್ನ ಮೋಕ್ಷವಗಳಿಸಿಕೊಂಡರೆ ಸಾಲದೇ, ಸಂಸ್ಕೃತದೊಳಿನ್ನೇನು' ಎಂದು ಸಂಸ್ಕೃತದ ಹಂಗನ್ನು ಹರಿದು ನಿಂತ ಹದಿನೇಳನೆಯ ಶತಮಾನದ ಮಹಲಿಂಗರಂಗನವರೆಗೂ ಅನುರಣಿತವಾಗಿದೆ. ಈ ನಡುವೆ ವಚನಕಾರರು, ಹರಿಹರ ರಾಘವಾಂಕರು, ಆಂಡಯ್ಯ, ಕುಮಾರವ್ಯಾಸ, ಹರಿದಾಸರು, ರತ್ನಾಕರ, ನಂಜುಂಡ, ಸರ್ವಜ್ಞ- ಇಂಥವರಿಂದ ಇದು ಸಾರ್ಥಕವಾಗಿದೆ.

ಈ ಧೋರಣೆಯ ಮೊದಲಿಗನಾದ ನಯಸೇನ ಬರೆದದ್ದು ಚಂಪೂರೂಪದಲ್ಲಿ. ಆದರೂ ತನ್ನ 'ಸುದ್ದಗನ್ನಡ'ದ ಪ್ರಯೋಗದಲ್ಲಿ ತುಂಬ ಯಶಸ್ವಿಯಾಗಿದ್ದಾನೆ. ಆತನ ಕಾವ್ಯದ ಗದ್ಯ ಭಾಷೆಯಂತೂ, ಅಂದಿನ ಆಡುಮಾತಿನ ನಾಣ್ಣುಡಿ, ಜಾಣ್ಣುಡಿ ಗಳಿಂದ, ಅಂದಿನ ಆಡುಮಾತಿನ ಸ್ವಭಾವ ವೈಚಿತ್ರ್ಯಗಳಿಂದ ಇಡಿಕಿರಿದಿದೆ. ಮುಂದಿನ ವಚನಕಾರರಿಗೆ ಹಿನ್ನೆಲೆಯಾಗುವಂತೆ ಗದ್ಯದ ಭಾಷೆಯನ್ನು ಹದ ಗೊಳಿಸಿದ್ದಾನೆ.

ಹನ್ನೆರಡನೆಯ ಶತಮಾನದ ವಚನ ವಾಙ್ಮಯ ಕನ್ನಡದ ಆಡುನುಡಿಯನ್ನು ಸಾಹಿತ್ಯದ ಭಾಷೆಯನ್ನಾಗಿ ರೂಢಿಸುವಲ್ಲಿ ಅಪೂರ್ವವಾಗಿದೆ. ಭಾಷೆಯನ್ನು ಕುರಿತು ಯಾವ ಧೋರಣೆಯನ್ನೂ ವಾಚ್ಯವಾಗಿ ಘೋಷಿಸದೆ ನಿರ್ಮಿತವಾದ ವಚನಗಳ ಭಾಷೆ, 'ವಚನಕಾರರು ಅಚ್ಚಗನ್ನಡದ ಬೇಸಾಯಕಾರರು' ಎಂಬ ಪ್ರಶಸ್ತಿಗೆ ಪಾತ್ರವಾಗಿದೆ. ರೀತಿಯಲ್ಲಿ, ದೃಷ್ಟಿಯಲ್ಲಿ ತಮಗೆ ಹಿಂದಿನ ಸಾಹಿತ್ಯ ಪರಂಪರೆಗೆ ಹೊರತಾದ, ಬೇರೆಯ ಒಂದು ಅಭಿವ್ಯಕ್ತಿ ಕ್ರಮವನ್ನು ರೂಪಿಸಿಕೊಳ್ಳುವಲ್ಲಿ ಆಡುಮಾತಿನ ಗದ್ಯಕ್ಕೆ ಪದ್ಯದ ಸತ್ವವನ್ನು ತುಂಬಿದರು. ಬಹುಶಃ ಇದೊಂದೇ ಕಾಲದಲ್ಲಿ ಕಾವ್ಯಭಾಷೆ, ತನ್ನ ಪರಂಪರಾಗತವಾದ ಛಂದೋರೂಪಗಳನ್ನು ವರ್ಜಿಸಿ, ಆಡುಮಾತಿಗೆ ಅತ್ಯಂತ ಸಮೀಪವಾಗಿ, ಅತ್ಯಂತ ಗಹನವಾದ ವಿಚಾರಗಳ, ಅತ್ಯಂತ ಸೂಕ್ಷ್ಮವಾದ ಸಂವೇದನೆಗಳ ಅಭಿವ್ಯಕ್ತಿಗೆ ಸಮರ್ಥವಾದ ಮಾಧ್ಯಮವಾಯಿತು.

ಹರಿಹರನ ರಗಳೆಗಳ ಭಾಷೆ, ರಾಘವಾಂಕ ಕುಮಾರವ್ಯಾಸರ ಷಟ್ಪದಿಗಳ ಭಾಷೆ, ಹರಿದಾಸರ ಕೀರ್ತನೆಗಳ ಭಾಷೆ, ರತ್ನಾಕರ-ನಂಜುಂಡರ ಸಾಂಗತ್ಯದ ಭಾಷೆ, ಮತ್ತು ಸರ್ವಜ್ಞನ ತ್ರಿಪದಿಗಳ ಭಾಷೆ, ಆಡುನುಡಿಯನ್ನು ಅತ್ಯಂತ ಶಕ್ತವಾಗಿ ಕಾವ್ಯಕ್ಕೆ ಅಳವಡಿಸಿದ ಪ್ರಯೋಗಗಳಾಗಿವೆ. ಇವರು ಯಾರೂ ಕಾವ್ಯಭಾಷೆಯಲ್ಲಿ ತಾವು ಮಾಡುತ್ತಿರುವ ಪ್ರಯೋಗಗಳ ಬಗೆಗಾಗಲಿ, ಕಾವ್ಯದ ಭಾಷೆ ಹೇಗಿರಬೇಕು ಎಂಬುದನ್ನಾಗಲಿ ಘೋಷಿಸಿಕೊಂಡವರಲ್ಲ. ಸಂಸ್ಕೃತದ ಬಗ್ಗೆ ಪರವಾದ ಅಥವಾ ವಿರೋಧವಾದ ಮಾತನ್ನು ಹೇಳಲಿಲ್ಲ. ನಯಸೇನನ ತರುವಾಯ, ಮಹಲಿಂಗ ರಂಗನಿಗಿಂತ ಈಚೆಗೆ ಹದಿಮೂರನೆಯ ಶತಮಾನದಂದು ಆಂಡಯ್ಯ ತನ್ನ ಅಚ್ಚಗನ್ನಡದ ಧೋರಣೆಯಿಂದ ಗಮನವನ್ನು ಸೆಳೆಯುತ್ತಾನೆ.

ತನಗಿಂತ ಹಿಂದಿನ ಕಾವ್ಯ ಪರಂಪರೆಯನ್ನು ಅವಲೋಕಿಸಿ, ಹಿಂದಿನ ಘನತೆವೆತ್ತ ಕವಿಗಳೆಲ್ಲ ಸೊಗಸಾದ ಸಂಸ್ಕೃತವನ್ನು ಬೆರಸಿದಲ್ಲದೆ ಕನ್ನಡವಲ್ಲಿ ಕಾವ್ಯವನ್ನು ಮನಮುಟ್ಟುವಂತೆ ಹೇಳಲಾರದೆ ಹೋದರು-ಎಂದು ಆಕ್ಷೇಪಣೆಯನ್ನು ಎತ್ತಿ, ಕಾವ್ಯ ಮಾತನಾಡಿದ ಹಾಗೆ ಅಂದವನ್ನು ಹೊಂದಿದ್ದರೆ, ಅದಕ್ಕೆ ನೇರವಾಗಿ ಶಕ್ತಿ ಲಭಿಸುತ್ತದೆ; ಅಂತಹ ಕನ್ನಡದ ಶಕ್ತಿ ತನ್ನ ಕಾವ್ಯದಲ್ಲಿ ಅಲ್ಲದೆ ಬೇರೆ ಯಾರಲ್ಲಿಯೂ ಕಾಣಸದು ಎಂದು ತನ್ನ ಅಗ್ಗಳಿಕೆಯನ್ನು ಹೇಳಿಕೊಂಡಿದ್ದಾನೆ.* ಆದರೆ ಒಂದು ಸ್ವಾರಸ್ಯವೆಂದರೆ

---

* ಸೊಗಯಿಪ ಸಕ್ಕದಂ ಬೆರಸಿದಲ್ಲದೆ ಕನ್ನಡದಲ್ಲಿ ಕಬ್ಬಮಂ
ಬಗೆಗೊಳೆ ಪೇಲಲಾಜಿರಿನಿತುಂ ಸಲೆ ಮುನ್ನಿನ ಪೆಂಪನಾಳ್ದ ಕ-
ಬ್ಬಿಗರದು ಮಾತನಾಡಿದ ವೊಲಂದವನಾಂತಿರ್ದಿರೆ ಬಲ್ಪು ನೆ-
ಟ್ಟಗೆ ದೊರೆಕೊಂಡುದಿಂತಿವನೊಳಲ್ಲದೆ ಕೇಳ್ ದೊರೆಕೊಳ್ಳದಾರೊಳಂ

ಕಬ್ಬಿಗರ ಕಾವ : ೧-೧೫ (ಸಂ: ದೇ. ಜವರೇಗೌಡ)

ಅವನಿಗಿಂತ ಹಿಂದೆ ನಯಸೇನ, ವಚನಕಾರರು, ಮತ್ತು ಹರಿಹರ ರಾಘವಾಂಕರು ಸಂಸ್ಕೃತವನ್ನು ಅವರಿಗೆ ಹಿಂದಿನವರಷ್ಟು ಬೆರಸದೆ ಕನ್ನಡದಲ್ಲಿ ಮನಮುಟ್ಟು ವಂತೆ ರಚನೆ ಮಾಡಿದ್ದರೆಂಬ ಸಂಗತಿಯನ್ನು ಆಂಡಯ್ಯ ಏಕೆ ಗಮನಕ್ಕೆ ತೆಗೆದು ಕೊಂಡಿಲ್ಲವೋ ತಿಳಿಯದು. ಅದು ಏನೇ ಇರಲಿ, ಆಂಡಯ್ಯ ತನ್ನ ಅಚ್ಚಗನ್ನಡದ ನಿಷ್ಠೆಯಿಂದ, ಹಠ ತೊಟ್ಟು ಬರೆದಿರುವ ಕಬ್ಬಿಗರ ಕಾವ, ಅವನ ಕನ್ನಡ ಪ್ರೇಮದ ದೃಷ್ಟಿಯಿಂದ ಕನ್ನಡಿಗರ ನೆನಪಿನಲ್ಲಿ ನಿಲ್ಲುವ ಕೃತಿಯಾಗಿದೆ. ಸಂಸ್ಕೃತವನ್ನು ಬೆರಸದೆ, ಕನ್ನಡದಲ್ಲಿ ಇಡೀ ಕಾವ್ಯವನ್ನು ಬರೆಯಲು ಸಾಧ್ಯ ಎಂಬ ಹಠಕ್ಕೆ ಸಾಕ್ಷಿಯಾಗಿದೆ. ಆದರೆ ಅವನ ಅಚ್ಚಗನ್ನಡ, ತದ್ಭವಗಳ ಉದ್ಭವ ಮೂರ್ತಿಯಾಗಿ ವಿಲಕ್ಷಣವಾಗಿದೆ.

ಆಂಡಯ್ಯನ ಅಗ್ಗಳಿಕೆಯ ಪದ್ಯದಲ್ಲಿ ಕಾವ್ಯದ ಭಾಷೆಯನ್ನು ಕುರಿತ ಒಂದು ಅತ್ಯಾಧುನಿಕ ಸೂತ್ರ ಅಭಿವ್ಯಕ್ತವಾಗಿರುವುದನ್ನು ಗಮನಿಸ ಬೇಕಾಗಿದೆ. 'ಅದು – (ಎಂದರೆ ಕಾವ್ಯ) – ಮಾತನಾಡಿದವೊಲ್ ಅಂದವನ್ ಆಬ್ದಿರೆ ಬಲ್ಪು ನೆಟ್ಟಗೆ ದೊರೆ ಕೊಂಡುದು'– ಎನ್ನುವುದು ಆ ಮಾತು. ಎಂದರೆ ಕಾವ್ಯ ಮಾತನಾಡಿದ ಹಾಗೆ (ಮಾತನಾಡಿದ ವೊಲ್) ಇರಬೇಕು. ಆದರೆ ಜನ ಸಾಮಾನ್ಯರು ಮಾತನಾಡಿದ ಹಾಗೆ ಇರಬೇಕು ಕಾವ್ಯದ ಭಾಷೆ ಎಂದರೆ, ಕಾವ್ಯದ ಭಾಷೆಗೂ ಆಡುಮಾತಿಗೂ ವ್ಯತ್ಯಾಸವೇನು – ಎನ್ನಬಹುದು. ಆದರೆ ಆಂಡಯ್ಯ ಹೇಳುತ್ತಾನೆ, ಅದು ಮಾತನಾಡಿದ ಹಾಗಿರಬೇಕು, ಆದರೆ ಅದು 'ಅಂದ' ವನ್ನು ಒಳಕೊಂಡಿರಬೇಕು. ಈ 'ಅಂದ' ಕವಿಯ ಅನುಭವದಿಂದ ಭಾಷೆಗೆ ಪ್ರಾಪ್ತ ವಾಗುತ್ತದೆ. ದೈನಂದಿನ ಪ್ರಾಯೋಜನಿಕ ನೆಲೆಯ ವ್ಯವಹಾರದ ಭಾಷೆಗೆ ಇಲ್ಲದ ಒಂದು 'ಅಂದ', ಕಾವ್ಯಭಾಷೆಗೆ ಇರುತ್ತದೆ. ಎಂದರೆ ಕಾವ್ಯದ ಭಾಷೆ ಮಾತನಾಡಿದ ಹಾಗೆ ಇರಬೇಕು ಮತ್ತು ಅಂದವನ್ನು ಒಳಕೊಳ್ಳಬೇಕು ; ಹಾಗಾದಾಗ ಅದಕ್ಕೆ 'ಬಲ್ಪು' ಎಂದರೆ ಒಂದು ಶಕ್ತಿ ವಿಶೇಷ, ಪ್ರಾಪ್ತವಾಗುತ್ತದೆ – ಎನ್ನುತ್ತಾನೆ ಆಂಡಯ್ಯ. ಇದರೊಂದಿಗೆ ಗಮನಿಸಬೇಕಾದ ಇನ್ನು ಒಂದು ಹೇಳಿಕೆ ಇದೆ, ಕವಿ ಕಾಮನ ಶೃಂಗಾರ ರತ್ನಾಕರದಲ್ಲಿ.* 'ಜಗದೊಳ್ ಸನ್ನಿದವಾದ ನಾಬ್ನುಡಿಗಳಂ ಛಂದಕ್ಕೆ ಬರ್ಪಂತೆ ನೆಟ್ಟಗೆ ಮಾತನಾಡುವ ಬಲ್ಮೆ' (೧–೯)–ಎಂಬುದು ಆ ಮಾತು. ದೈನಂದಿನ ವ್ಯಾವಹಾರಿಕ ಜಗತ್ತಿನಲ್ಲಿ, ಜನ ಆಡುವ ಮಾತುಗಳನ್ನೆ, ಛಂದಸ್ಸಿಗೆ ಬರುವ ಹಾಗೆ ನೇರವಾಗಿ ಮಾತನಾಡುವ ಸಾಮರ್ಥ್ಯ' (ಕಾವ್ಯಭಾಷೆಯದು) ಎನ್ನುತ್ತಾನೆ ಕವಿ ಕಾಮ. ಇದೂ ಕೂಡ ಅಪೂರ್ವವಾದ ಹೇಳಿಕೆಯೆ. ಇವನ ಪ್ರಕಾರ ಕಾವ್ಯಭಾಷೆಯ ಮೂಲಸಾಮಗ್ರಿ ಲೋಕದಲ್ಲಿ ಪ್ರಚುರವಾಗಿರುವ ನಾಬ್ನುಡಿ ಅಥವಾ ಆಡು ಮಾತುಗಳೇ. ಕವಿಯಾದವನ ಸಾಮರ್ಥ್ಯ ಎಂದರೆ,

* ಆಂಡಯ್ಯ ಮತ್ತು ಕವಿಕಾಮ – ಇವರಿಬ್ಬರೂ ಅಭಿನ್ನ ವ್ಯಕ್ತಿಗಳಿರಬಹುದೆಂಬ ಊಹೆ ಇದೆ. ಈ ಬಗ್ಗೆ ಇನ್ನು ನಿಶ್ಚಿತವಿಲ್ಲ.

ಆ ನಾಡು ನುಡಿಗಳನ್ನೆ ಛಂದೋಬದ್ಧವಾಗಿ ಮಾತನಾಡುವುದು. ಇವೆರಡು ಹೇಳಿಕೆಗಳ ಅರ್ಥ ಇದು : ಕಾವ್ಯ ಮಾತನಾಡಿದ ಹಾಗಿರಬೇಕು. ಮಾತನಾಡಿದ ಹಾಗಿರಬೇಕಾದರೆ, ವ್ಯವಹಾರದ ಆಡು ಮಾತನ್ನೆ ಕಾವ್ಯಕ್ಕೆ ಅಳವಡಿಸಿಕೊಳ್ಳಬೇಕು. ಹಾಗೆ ಅಳವಡಿಸಿಕೊಳ್ಳುವಲ್ಲಿ ಲೋಕದ ಆಡುಮಾತಿಗೆ ಒಂದು 'ಅಂದ' ವೂ, ಛಂದೋಬದ್ಧತೆಯೂ ಪ್ರಾಪ್ತವಾಗಬೇಕು. ಆಗ ಆ ಕಾವ್ಯ ಭಾಷೆ, ಕವಿ ಛಂದೋಬದ್ಧತೆಯಲ್ಲಿ ಮಾತನಾಡಿದ ಭಾಷೆಯಾಗುತ್ತದೆ. ಇಂದು ನವ್ಯ ಕಾವ್ಯದ ಟಿ. ಎಸ್. ಇಲಿಯಟ್ ಹೇಳುವ ಮಾತನ್ನು ಗಮನಿಸಿ : "No poetry, of course, is ever exactly the same speech that the poet talks and hears : but it has to be in such a relation to the speech of his time that the listener or reader can say 'that is how I should talk if I could talk poetry."[9] ಆಂಡಯ್ಯ, ಮತ್ತು ಕವಿ ಕಾಮ ಇವರು ಕಾವ್ಯ ಭಾಷೆಯನ್ನು ಕುರಿತು ಹದಿಮೂರನೆಯ ಶತಮಾನದಂದು ಹೇಳಿದ ಮಾತು ಇಪ್ಪತ್ತನೆಯ ಶತಮಾನದ ಇಂಗ್ಲಿಷ್ ಕವಿ ಕಾವ್ಯ ಭಾಷೆಯ ಸ್ವರೂಪವನ್ನು ಕುರಿತು ಹೇಳುವ ಮಾತಿಗೆ ಸಂವಾದಿಯಾಗಿರುವುದು ಸ್ವಾರಸ್ಯದ ಸಂಗತಿಯಾಗಿದೆ.

ಕನ್ನಡ ಕಾವ್ಯ ಪರಂಪರೆಯಲ್ಲಿ ಕಾವ್ಯ ಭಾಷೆಯನ್ನು ಕುರಿತು ಮೂಲಭೂತವಾಗಿ ಹೊರಡುವ ಮಾತೆಂದರೆ, 'ಕಾವ್ಯ ಆಡುಮಾತಿಗೆ ಸಮೀಪವಾಗಿರಬೇಕು; ಆಡುಮಾತಿನ ಸೊಗಸನ್ನು ಸತ್ವವನ್ನು ಒಳಗೊಂಡಿರಬೇಕು' ಎನ್ನುವುದು. ಕನ್ನಡ ಕಾವ್ಯದ ಆರಂಭ ಕಾಲದಿಂದಲೂ, ಕನ್ನಡದ ಮೇಲೆ ಕವಿದುಕೊಂಡಿದ್ದ ಸಂಸ್ಕೃತದ ಪ್ರಭಾವವನ್ನು ಕುರಿತು ನಮ್ಮ ಕವಿಗಳು ಕಾಲದಿಂದ ಕಾಲಕ್ಕೆ ತೋರಿದ ಪ್ರತಿಕ್ರಿಯೆ, ಪ್ರತಿಭಟನೆಗಳೆ ಇದಕ್ಕೆ ಸಾಕ್ಷಿಯಾಗಿದೆ.

4

ಕಾವ್ಯ ಆಡುಮಾತಿಗೆ ಸಮೀಪವಾಗಿರಬೇಕು ಎಂಬ ನಿಲುವು ಶತಮಾನಗಳ ಉದ್ದಕ್ಕೂ ಇದ್ದರೂ, ಇಂದು ನವ್ಯ ಕಾವ್ಯದ ಸಂದರ್ಭದಲ್ಲಿ ಅದಕ್ಕೆ ಒಂದು ವಿಶೇಷ ಮಹತ್ವ ಪ್ರಾಪ್ತವಾಗಿದೆ. ನವ್ಯ ಕವಿಗಳ ಮುಖ್ಯ ಧೋರಣೆಯೂ ಕಾವ್ಯ ಆಡುಮಾತಿಗೆ ಸಮೀಪವಾಗಿರಬೇಕು ಎನ್ನುವುದೇ ಆಗಿದ್ದರೂ, ಇವರು ಈ ಮಾತಿಗೆ ಕೊಡುವ ಅರ್ಥ ಪಾರಂಪರಿಕ ಧೋರಣೆಯಷ್ಟು ಸರಳವಾಗಿಲ್ಲ. ಹಿಂದಿನವರಿಗೆ ಕಾವ್ಯ ಆಡುಮಾತಿಗೆ ಸಮೀಪವಾಗಿರುವುದು ಎಂದರೆ, ಸಂಸ್ಕೃತದ ಹಿಡಿತದಿಂದ ಪಾರಾಗಿ ಆಡುಮಾತಿನ ಸೊಗಸನ್ನು ಅಳವಡಿಸಿಕೊಳ್ಳುವುದು ಎಂದು ಮಾತ್ರ

---

[9] T. S. Eliot : Selected prose, p. 58

ತಿಳಿದಿತ್ತು. ಆದರೆ ಇಂದಿನವರು ಕಾವ್ಯ ಮಾತನಾಡಿದ ಹಾಗೆ ಇರಬೇಕಾದರೆ, ಕಾವ್ಯ ಭಾಷೆಗೆ ಕೆಲವು ಅಗತ್ಯವಾದ ಚಿಕಿತ್ಸೆಗಳನ್ನು ಸೂಚಿಸುತ್ತಾರೆ. ಅವು ಹೀಗಿವೆ: ಕಾವ್ಯದ ಭಾಷೆಯನ್ನು ಸಂಗೀತದ ಪಾರವಶ್ಯದಿಂದ ಪಾರು ಮಾಡಬೇಕು. ಹೀಗೆ ಪಾರು ಮಾಡಬೇಕಾದರೆ, ಹಾಡುವುದಕ್ಕೆ ಅನುಕೂಲವಾಗುವಂತೆ ಇದುವರೆಗು ಇದ್ದ ಬಂಧಗಳನ್ನು ಮುರಿದು ಮುಕ್ತ ಛಂದಸ್ಸಿನಲ್ಲಿ, ಅಥವಾ ಆಡುಮಾತಿನ ಲಯ (Speech rhythm) ದಲ್ಲಿ ಕಾವ್ಯವನ್ನು ರಚಿಸಬೇಕು. ಜತೆಗೆ ಗದ್ಯದ ಸತ್ವವನ್ನು ತುಂಬಬೇಕು. ಮತ್ತು ನಾಟ್ಯಗುಣವನ್ನು ಅಳವಡಿಸಬೇಕು. ಹೀಗಾದಾಗ ಮಾತ್ರ ಕಾವ್ಯ ಆಡುನುಡಿಗೆ ಸಮೀಪವಾದ ಭಾಷಾರೂಪವನ್ನು ತಾಳಲು ಸಾಧ್ಯ. ಇವರಿಗೆ ಹಿಂದಿನ ನವೋದಯ ಕಾವ್ಯ, ಚಿಕಿತ್ಸೆಗಾಗಿ ಇವರು ಸೂಚಿಸುವ ಎಲ್ಲಾ ದೌರ್ಬಲ್ಯ ಗಳನ್ನು ಹೊಂದಿದ್ದರಿಂದ, ಅದು, ಆಡುಮಾತಿಗೆ ಸಮೀಪವಾಗಿರಬೇಕೆಂಬ ಧೋರಣೆ ಯನ್ನೆ ಪ್ರತಿಪಾದಿಸಿದರೂ, ವಿಫಲವಾಯಿತು ಎನ್ನುತ್ತಾರೆ ನವ್ಯರು.

ಇವರು ಚಿಕಿತ್ಸೆಗೆಂದು ಸೂಚಿಸುವ ಒಂದೊಂದು ಅಭಿಪ್ರಾಯವನ್ನು ಪರಿಶೀಲಿಸ ಬಹುದು. ಕಾವ್ಯ ಆಡುಮಾತಿಗೆ ಸಮೀಪವಾಗಬೇಕಾದರೆ ಅದನ್ನು ಸಂಗೀತದ ಪಾರವಶ್ಯದಿಂದ ಪಾರುಮಾಡಬೇಕು ಎನ್ನುವ ಚಿಕಿತ್ಸೆಯನ್ನು ಮೊದಲು ಪರಿಶೀಲಿಸೋಣ.

ಕಾವ್ಯ ಹುಟ್ಟಿದ್ದೇ ಮೂಲತಹ ಹಾಡಾಗಿ ಎನ್ನುತ್ತಾರೆ. ಹಿಂದಿನ ಕಾವ್ಯಗಳನ್ನು ಹಾಡುತ್ತಿದ್ದರು. ಮತ್ತು ಗಮಕ ರೀತಿಯಲ್ಲಿ ವಾಚಿಸುತ್ತಿದ್ದರು. ಚಂಪೂ ಕಾವ್ಯ ಗಳನ್ನೂ ಕೂಡ, ನಾವು ಈ ದಿನ ಮಾತನಾಡಿದ ಹಾಗೆ ಓದುವಂತೆ, ಹಿಂದೆ ಓದುತ್ತಿರ ಲಾರರು. ಬಹುಶಃ ರಾಗವಾಗಿ ವಾಚಿಸುತ್ತಿದ್ದರು. ಚಂಪೂ ಪರಂಪರೆಯಿಂದ ಭಿನ್ನ ವಾಗಿ ಗದ್ಯದಂತೆ ತೋರುವ ವಚನಗಳನ್ನು ಹಿಂದೆ ಹಾಡುತ್ತಿದ್ದರು. ವಚನಗಳಿಗೆ ಗೀತಗಳೆಂದು ಕರೆದದ್ದೂ ಉಂಟು. ವಚನಗಳನ್ನು ಹಾಡುತ್ತಿದ್ದರೆಂಬುದಕ್ಕೆ ಸಾಕಷ್ಟು ಉಲ್ಲೇಖಗಳಿವೆ. ಹರಿದಾಸರ ಕೀರ್ತನೆಗಳು ನಿಜವಾದ ಅರ್ಥದಲ್ಲಿ ಸಂಗೀತದಿಂದ ದೀಪ್ತವಾಗತಕ್ಕವು. ಷಟ್ಪದಿಗಳನ್ನು ಗಮಕ ರೀತಿಯಲ್ಲಿ ವಾಚಿಸುತ್ತಿದ್ದರು. ಸಾಂಗತ್ಯ ಗಳಂತೂ ಹಾಡುವುದಕ್ಕೆ ಹೇಳಿ ಮಾಡಿಸಿದವುಗಳಾಗಿವೆ. ಹೀಗೆ ಕನ್ನಡ ಕಾವ್ಯಕ್ಕೆ ಸಂಗೀತದ ಸಾಹಚರ್ಯ ಉದ್ದಕ್ಕೂ ಇದೆ; ಆದರೆ ಅದು ಅಂಥ ಅನಿವಾರ್ಯವಾದ ದ್ದೇನಲ್ಲ. ಒಂದು ಬಗೆಯಿಂದ ರಾಗವಾಗಿ ಓದುವುದರ ಜತೆಗೆ, ಭಾವಪೂರ್ಣವಾಗಿ ಓದುವುದೂ ಸಾಧ್ಯ ಅವುಗಳನ್ನು. ನವೋದಯ ಕಾಲದ ಭಾವಗೀತೆಗಳಂತೂ ಸಂಗೀತ ಗಾರರಿಗೆ ಒಂದು ಆಕರ್ಷಣೆ. ಎಂಥ ಕೆಟ್ಟ ಕವಿತೆಯನ್ನಾದರೂ ಅದ್ಭುತ ಎನಿಸಿಬಿಡು ತ್ತಾರೆ ಸಂಗೀತಗಾರರು ಅದನ್ನು ಹಾಡುವುದರ ಮೂಲಕ. ಆದರೆ ಯಾವ ಕವಿತೆ ಕೇವಲ ಸಂಗೀತದಿಂದ ಮಾತ್ರ ಸೊಗಸೆನ್ನಿಸಿ, ಸುಮ್ಮನೆ ಓದಿದಾಗ ಹುರುಳಿಲ್ಲದ್ದೆಂಬಂತೆ ತೋರುತ್ತದೆಯೋ ಅದು ಒಳ್ಳೆಯ ಕವಿತೆಯಲ್ಲ.

ನವ್ಯ ಕವಿಗಳು ಕಾವ್ಯವನ್ನು ಸಂಗೀತದ ಹಿಡಿತದಿಂದ ಪಾರು ಮಾಡಬೇಕು ಎಂದೇನೋ ಹೇಳಿದರು. ಆದರೆ ವಾಸ್ತವವಾಗಿ ಸಂಗೀತ ಎಂದರೆ ಯಾವುದು ? ಅದು ಕಾವ್ಯದ ಒಳಗಿದೆಯೋ, ಅಥವಾ ಹೊರಗಿನಿಂದ ತೋಡಿಸುವಂಥದ್ದೋ ಎಂಬುದನ್ನು ಯೋಚಿಸಿದಂತೆ ತೋರುವುದಿಲ್ಲ. ಏನೇನು ಮಾಡಿದರೂ ಹಾಡಲು ಬಾರದಂಥ ಗದ್ಯದ ನೆಲೆಗೆ ಕಾವ್ಯವನ್ನು ತರುವುದರಿಂದ ಕಾವ್ಯವನ್ನು ಸಂಗೀತದ ಪಾರವಶ್ಯದಿಂದ ಪಾರುಮಾಡಬಹುದು ಎಂದು ಅವರು ಭಾವಿಸಿದಂತಿದೆ. ಒಂದು ನಿಶ್ಚಿತ ಬಂಧದಲ್ಲಿದ್ದರೆ ಹಾಡಲು ಬರುತ್ತದೆ ಎಂಬ ಕಾರಣದಿಂದ, ಆ ಬಂಧವನ್ನೆ ಮುರಿದು ಕಾವ್ಯಭಾಷೆಯನ್ನು ಮುಕ್ತ ಛಂದಕ್ಕೆ ತರುವುದು, ಕಾವ್ಯವನ್ನು ಸಂಗೀತದಿಂದ ಪಾರುಮಾಡುವ ಉಪಾಯವಾದೀತೆ? ವಾಸ್ತವವಾಗಿ ಸಂಗೀತ ಎಂಬುದು ಒಂದು ಗುಣ ವಿಶೇಷ; ಅದು ಕಾವ್ಯದ ಭಾಷೆಯಲ್ಲಿ ಅಂತರ್ಗತವಾಗಿರುವುದರಿಂದಲೆ ಕಾವ್ಯ ನಿಜವಾದ ಕಾವ್ಯವಾಗುವುದು. ಆಡುನುಡಿಯಲ್ಲಿ ಕೂಡಾ ಅಂತರ್ಗತವಾದ ಸಂಗೀತ ಇದೆ ; ಕಾವ್ಯಭಾಷೆಯನ್ನಾಗಿ ಆಡುನುಡಿಯನ್ನು ತಂದಾಗ ಕೂಡಾ, ಆ ಭಾಷೆಯ ವಿಶಿಷ್ಟ ನಾದ-ಲಯದ ಪ್ರಜ್ಞೆ ಕವಿಗಿರುತ್ತದೆ. ಈ ದೃಷ್ಟಿಯಿಂದ ಸಂಗೀತ ಕಾವ್ಯಕ್ಕೆ ಹೊರಗಿನದಲ್ಲ, ಒಳಗಿನದು. ಸಂಗೀತ ಎಂದರೆ ರಾಗ-ತಾಳಗಳಲ್ಲಿ ಹಾಡುವುದು ಎಂದು ಮಾತ್ರ ಅರ್ಥವಲ್ಲ; ಸುಮ್ಮನೆ ವಾಚಿಸಿದಾಗ ಕೂಡ ಒಳಗಿವಿಯಲ್ಲಿ ಅನುರಣಿಸುವ ನಾದ ಮಾಧುರ್ಯ. ಈ ದೃಷ್ಟಿಯಿಂದ ನೋಡಿದರೆ ಕಾವ್ಯದ ಭಾಷೆಯನ್ನು ಸಂಗೀತದ ಹಿಡಿತದಿಂದ ಪಾರುಮಾಡುವುದು ಎಂದರೆ ಏನು ಎನ್ನುವುದು ಸ್ಪಷ್ಟವಾಗುವುದಿಲ್ಲ.

ಎರಡನೆಯ ಚಿಕಿತ್ಸೆ ಕಾವ್ಯ ಭಾಷೆಗೆ ಗದ್ಯದ ಸತ್ವವನ್ನು ತುಂಬುವುದು. ಸಂಗೀತದ ಪಾರವಶ್ಯದಿಂದ ಕಾವ್ಯ ಭಾಷೆಯನ್ನು ಪಾರುಮಾಡಿದ ನಂತರ, ಆ ಕೊರತೆಯನ್ನು ನೀಗಿಸಲು ಗದ್ಯದ ಸತ್ವವನ್ನು ತುಂಬಬೇಕು ಎನ್ನುತ್ತಾರೆ. ಆದರೆ ಗದ್ಯದ ಸತ್ವ ಎಂದರೆ ಯಾವುದು? ಇದು ಯಾವ ಗದ್ಯದಲ್ಲಿದೆ – ಎಂಬುದಕ್ಕೆ ಸರಿಯಾದ ಉತ್ತರವಿಲ್ಲ.

ಕನ್ನಡ ಕಾವ್ಯ ಪರಂಪರೆಯನ್ನು ನೋಡಿದರೆ, ಗದ್ಯ ಪದ್ಯದಷ್ಟೆ ಸಮರ್ಥವಾದ ಕಾವ್ಯಮಾಧ್ಯಮವಾಗಿ ಬಳಕೆಯಾಗಿದೆ ಎನ್ನುವುದು ತಿಳಿಯುತ್ತದೆ. ಆದರೂ ನಮ್ಮ ಕವಿಗಳ ಒಲವು ಪದ್ಯದ ಕಡೆಗೆ. ಕಾವ್ಯ ಎಂದರೆ 'ಗದ್ಯಂ ಪದ್ಯಂಚ.' ಗದ್ಯ ಹೇಗೋ ಪದ್ಯವೂ ಅಭಿವ್ಯಕ್ತಿಯ ಒಂದು ರೂಪ. ಅವುಗಳನ್ನು ಕಾವ್ಯವನ್ನಾಗಿಸುವುದು ಕವಿ ಪ್ರತಿಭೆ.

ಚಂಪೂ ಪರಂಪರೆಯಲ್ಲಿ ಗದ್ಯ-ಪದ್ಯಗಳೆರಡೂ ಕಾವ್ಯೋದ್ದೇಶದಲ್ಲಿ ಸಮನಾಗಿ ದುಡಿದವುಗಳು. ಆದರೆ ಈ ಗದ್ಯ ಪದ್ಯಗಳ ಸಮ್ಮಿಶ್ರಣದ ಬಗ್ಗೆ ನಮ್ಮ ಕವಿಗಳು ಖಚಿತವಾದ ಯಾವ ನಿಯಮಗಳನ್ನೂ ಇರಿಸಿಕೊಂಡಂತೆ ತೋರುವುದಿಲ್ಲ. ಅವರಿಗೆ

ಗದ್ಯ ಪದ್ಯಗಳ ಮಿಶ್ರಣ ಕೇವಲ ಒಂದು ತಾಂತ್ರಿಕ ಆವಶ್ಯಕತೆಯಾಗಿತ್ತೆಂದು ತೋರುತ್ತದೆ. ಹಾಗೆಯೆ ಗದ್ಯ ಯಾವುದಕ್ಕೆ, ಪದ್ಯ ಯಾವುದಕ್ಕೆ ಸೂಕ್ತ ಮಾಧ್ಯಮ ಎಂಬ ವಿಚಾರ ಅವರ ಕಾವ್ಯ ನಿರ್ಮಾಣಪೂರ್ವದ ಬೌದ್ಧಿಕ ನೆಲೆಯಲ್ಲಿದ್ದಂತೆ ತೋರುವುದಿಲ್ಲ. ಒಟ್ಟಿನಲ್ಲಿ ನೋಡಿದರೆ ವಿವರಣೆಗೆ ಗದ್ಯ, ಅಡಕವಾಗಿ ಹೇಳುವಲ್ಲಿ ಪದ್ಯ ಎಂದು ಸ್ಥೂಲವಾಗಿ ನಾವು ಭಾವಿಸುವುದಾದರೂ, ಈ ಭಾವನೆಗೆ ಕೂಡ ಅವಕಾಶವಿರುವಂತೆ ತೋರದು. ಕವಿಗಳಿಗೆ ಹೇಳುವುದು ಮುಖ್ಯ, ಅದಕ್ಕೆ ಸಂದರ್ಭೋಚಿತವಾಗಿ ಗದ್ಯಪದ್ಯಗಳು ಒಟ್ಟಾಗಿ ಒದಗಿಬಂದಿವೆ.

ಪದ್ಯದಷ್ಟೆ ಗದ್ಯ ಸಮರ್ಥವಾದ ಮಾಧ್ಯಮವಾಗಬಹುದು ಎಂಬುದನ್ನು ಕಂಡುಕೊಂಡವರು ವಚನಕಾರರು. ಇವರಿಗಿಂತ ಮುನ್ನ ವಡ್ಡಾರಾಧನೆಯು ಗದ್ಯ ಕಾವ್ಯವಾಗುವುದರಲ್ಲಿ ತೋರಿದ ಸತ್ವ, ಚಂಪೂ ಕಾವ್ಯಗಳ ನಡುವಣ ಗದ್ಯದ ಪ್ರೌಢತ್ವ, ನಯಸೇನನು ದೇಸಿಯತೆಯನ್ನು ಬಿತ್ತಿ ಬೆಳೆದ ಮಾಲೋಪಮೆಗಳ ಗದ್ಯ, ಗಮನಿಸಬೇಕಾದದ್ದು. ಹರಿಹರನಂತೂ ತನ್ನ ಕೆಲವು ರಗಳೆಗಳಲ್ಲಿ, ಒಂದು ಸ್ಥಲಗದ್ಯ, ಒಂದು ಸ್ಥಲಪದ್ಯ ಹೀಗೆ ವಿಭಾಗಿಸಿಕೊಂಡು ಗದ್ಯ ಭಾಷೆಯನ್ನು ಕಥನಕ್ಕೆ ಅಳವಡಿಸಿಕೊಂಡದ್ದು ಒಳ್ಳೆಯ ಪ್ರಯೋಗವಾಗಿದೆ. ಇದನ್ನೆಲ್ಲ ಗಮನಿಸಿದರೆ, ಗದ್ಯವೇ ತನ್ನ ಪ್ರಾಬಲ್ಯವನ್ನು ಸ್ಥಾಪಿಸಿಕೊಂಡ ಆಧುನಿಕ ಕಾಲದ ತನಕ, ನಮ್ಮ ಕನ್ನಡ ಕವಿಗಳು ಶತಮಾನಗಳ ಉದ್ದಕ್ಕೂ ಗದ್ಯವನ್ನೂ ಪದ್ಯವನ್ನೂ ಬೆಸೆಯುವ ಪ್ರಯತ್ನ ಮಾಡಿರುವುದನ್ನು ಗುರುತಿಸಬಹುದಲ್ಲದೆ, ಪದ್ಯದಷ್ಟೇ ಗದ್ಯವೂ ಸಮರ್ಥವಾದ ಕಾವ್ಯಮಾಧ್ಯಮವಾಗಬಲ್ಲುದೆಂಬುದನ್ನು ತೋರಿಸಿಕೊಟ್ಟಿದ್ದಾರೆ.

ಆದರೆ, ಗದ್ಯವೂ ಪದ್ಯದಷ್ಟೇ ಸಮರ್ಥವಾದ ಕಾವ್ಯ ಮಾಧ್ಯಮವಾಗಬಲ್ಲದು ಎಂಬುದು, ಇಂಗ್ಲಿಷ್ ಕಾವ್ಯ ಪರಂಪರೆಗೆ ತಿಳಿಯದ ಮಾತು. ಯಾಕೆಂದರೆ ಅಲ್ಲಿ ಗದ್ಯವೇ ಬೇರೆಯಾಗಿ, ಪದ್ಯವೇ ಬೇರೆಯಾಗಿ ಬೆಳೆದು ಬಂದಿವೆ. ರೊಮ್ಯಾಂಟಿಕ್ ಕಾಲದ ಕವಿಯಾದ ವರ್ಡ್ಸ್‌ವರ್ತ್, ಕಾವ್ಯ ದೈನಂದಿನ ಆಡುಮಾತನ್ನೆ ಬಳಸಬೇಕು ಎಂಬ ಧೋರಣೆಯನ್ನು ಪ್ರತಿಪಾದಿಸಿದ ಕಾಲಕ್ಕೆ, ಬಹುಶಃ ಪದ್ಯದಷ್ಟೆ ಗದ್ಯ ಕೂಡ ಕಾವ್ಯಕ್ಕೆ ತಕ್ಕ ಮಾಧ್ಯಮ ಎಂದು ಅವನಿಗೆ ಅನ್ನಿಸಿರಬಹುದು ; ಹೀಗೆ ಅನ್ನಿಸಿದ್ದು ಗದ್ಯ ಹಾಗೂ ಪದ್ಯವನ್ನು ನಮ್ಮವರಂತೆ ಮಿಶ್ರಮಾಡಿ ಕಾವ್ಯಭಾಷೆಯೊಂದನ್ನು ರೂಪಿಸಬಹುದು ಎಂಬ ಸಾಧ್ಯತೆಯನ್ನು ಕಂಡುಕೊಂಡದ್ದರಿಂದ ಅಲ್ಲ ; ಒಳ್ಳೆಯ ಗದ್ಯವೂ ಪದ್ಯದಷ್ಟೇ ಸಮರ್ಥವಾಗಿ ಭಾವಾಭಿವ್ಯಕ್ತಿಯನ್ನು ಸಾಧಿಸಬಲ್ಲದು ಎಂಬುದನ್ನು ಗುರುತಿಸಿದ್ದರಿಂದ. ವರ್ಡ್ಸ್‌ವರ್ತನ ಕಾವ್ಯೋದ್ದೇಶ, ಕಾವ್ಯಕ್ಕೆ ಜನ ಆಡುವ ಯಥಾವತ್ತಾದ ಭಾಷೆಯನ್ನೆ ಬಳಸುವುದು, ತನ್ಮೂಲಕ ಕಾವ್ಯದ ಭಾಷೆ ಜನ ಮಾತಾಡಿದ ಹಾಗೆ ಇರುವಂತೆ ನೋಡಿಕೊಳ್ಳುವುದು ಆಗಿತ್ತು. ಕಾವ್ಯದ ಭಾಷೆ ಜನ ಮಾತಾಡಿದರೆ ಹೇಗೋ ಹಾಗಿರಬೇಕು ಎಂಬ ರಭಸದಲ್ಲಿ ವರ್ಡ್ಸ್‌ವರ್ತ್, "ವಾಸ್ತವ

ವಾಗಿ ಗದ್ಯದ ಭಾಷೆಗೂ, ಛಂದೋಬದ್ಧವಾದ ಪದ್ಯದ ಭಾಷೆಗೂ ಮೂಲತಃ ವ್ಯತ್ಯಾಸವೇನೂ ಇಲ್ಲ, ಮತ್ತು ಇರಬಾರದು..."[10] ಎಂದು ಹೇಳಿದ್ದು ವಿಲಕ್ಷಣವಾಗಿದೆ. ಈ ಮಾತನ್ನು ಅವನ ಸಮಕಾಲೀನರಾದ ಕೋಲ್‌ರಿಜ್, ಲೀಹಂಟ್, ಷೆಲ್ಲಿ ಮೊದಲಾದವರು ಒಪ್ಪಲಿಲ್ಲ. "ಗದ್ಯದ ಭಾಷೆಗೂ, ಕಾವ್ಯದ ಛಂದೋಬದ್ಧವಾದ ಭಾಷೆಗೂ ವ್ಯತ್ಯಾಸ ಇದೆ ಮತ್ತು ಇರಲೇಬೇಕು"[11] – ಎಂದು ಕೋಲ್‌ರಿಜ್ ಪ್ರತಿಪಾದಿಸಿದ್ದಲ್ಲದೆ, ವರ್ಡ್ಸ್‌ವರ್ತ್‌ನ ಕಾವ್ಯದ ಭಾಷೆಯೇ, ಕಾವ್ಯ ಭಾಷೆಯ ಬಗ್ಗೆ ಆತ ಘೋಷಿಸಿದ ಸಿದ್ಧಾಂತಕ್ಕೆ ಹೇಗೆ ವಿರೋಧಿಯಾಗಿದೆ ಎಂಬುದನ್ನು ತೋರಿಸಿ ಕೊಟ್ಟಿದ್ದಾನೆ. ಷೆಲ್ಲಿ ಕವಿ ಮಾತ್ರ, "ಗದ್ಯ ಲೇಖಕರಿಗೂ ಪದ್ಯ ಲೇಖಕರಿಗೂ ವ್ಯತ್ಯಾಸ ಮಾಡುವುದು ಅಸಹ್ಯವಾದ ಒಂದು ಪ್ರಮಾದ"[12] ಎಂದು ಹೇಳಿದ. ಇದು ಒಳ್ಳೆಯ ಮಾತು. ಪದ್ಯ ಬರೆಯುವ ಕವಿಯನ್ನು, ಗದ್ಯ ಲೇಖಕರಿಗಿಂತ ಯಾಕೋ ಏನೋ ಶ್ರೇಷ್ಠರೆಂದು ಪರಿಗಣಿಸುವ ಹವ್ಯಾಸವನ್ನು ಖಂಡಿಸುವ ಮಾತು ಇದು. ಆದರೆ ಷೆಲ್ಲಿಯ ಮಾತಿನ ಅರ್ಥ, ಗದ್ಯ ಪದ್ಯಗಳೆರಡಕ್ಕೂ ವ್ಯತ್ಯಾಸವೇನೂ ಇಲ್ಲ ಎಂದೇನೂ ಅಲ್ಲ. ಕಾವ್ಯದ ಭಾಷೆ ಯಾವ ಕಾಲಕ್ಕೂ ಗದ್ಯದ ಭಾಷೆಗಿಂತ ಮತ್ತು ಆಡುಭಾಷೆಗಿಂತ ಭಿನ್ನವಾದದ್ದು. ಯಾಕೆಂದರೆ ಗದ್ಯಕ್ಕೆ ಇಲ್ಲದ ಪ್ರಾಸ-ಛಂದಸ್ಸಿನ ಒಂದು ಶಿಸ್ತು ಪದ್ಯಕ್ಕೆ ಇರುವುದರಿಂದಲೇ ಅದು 'ಪದ್ಯ' ಅನ್ನಿಸಿಕೊಳ್ಳುತ್ತದೆ. ಅಲ್ಲದೆ ಕಾವ್ಯದ ಭಾಷೆ ಗದ್ಯದ ಭಾಷೆಯಿಂದ ಬೇರೆಯಾದ ಛಂದೋಬದ್ಧತೆಯನ್ನು ಯಾಕೆ ತಾಳುತ್ತದೆ ಅನ್ನುವುದಕ್ಕೆ ಕಾರಣ, ಕಾವ್ಯಕ್ಕೆ ಅಗತ್ಯವಾದ ಭಾವ ತೀವ್ರತೆ 'ಪದ್ಯ' ದಂಥ ರೂಪವನ್ನೇ ಬಯಸುತ್ತದೆ ಎನ್ನುವುದೇ ಆಗಿದೆ.

ಗದ್ಯ ಮತ್ತು ಪದ್ಯಗಳೆರಡೂ ಬೇರೆ ಬೇರೆಯ ರೂಪಗಳೆ ಎಂಬುದು ಇಂಗ್ಲಿಷ್ ಕಾವ್ಯ ಪರಂಪರೆಯ ಧೋರಣೆಯಾಗಿದೆ. ಆದರೆ ಗದ್ಯದಲ್ಲಿಯೂ ಪದ್ಯದ ಕಾವು ಒಮ್ಮೊಮ್ಮೆ ಇರುತ್ತದೆ, ಮತ್ತು ಸತ್ವಯುತವಾದ ಗದ್ಯ ಉತ್ತಮ ಕಾವ್ಯದಷ್ಟೇ ಪರಿಣಾಮ ಮಾಡಬಲ್ಲದು ಎಂಬುದಕ್ಕೆ ಇಂಗ್ಲಿಷ್‌ನ ಅನೇಕ ಗದ್ಯ ಲೇಖಕರು ದಾಖಲೆಗಳನ್ನು ಒದಗಿಸುತ್ತಾರೆ. ಇದನ್ನು ಗುರುತಿಸಿದ ಇಂಗ್ಲೆಂಡಿನ ಆಧುನಿಕ ಪಂಥದವರು 'ನವ್ಯ ಕಾವ್ಯ'ದ ಧೋರಣೆಗಳನ್ನು ಘೋಷಿಸುವಲ್ಲಿ, ಕಾವ್ಯ ಜನರ ಆಡುಮಾತಿನ ಕಸುವನ್ನು ಒಳಗೊಳ್ಳಬೇಕೆಂದೂ, ಕಾವ್ಯದ ಭಾಷೆಗೆ ಇನ್ನು ಮುಂದೆ ಗದ್ಯದ

---

[10] English Critical Essays (Ninteenth Century) Ed. Edmund D. James. 'Poetry and Poetic diction' : Wordsworth. p. 9.

[11] ಅಲ್ಲೆ. Wordsworth's theory of diction: Samuel Tayler Coleredge. p. 60.

[12] ಅಲ್ಲೇ: A. Defence of Poetry. Shelley. p. 108.

ಸತ್ವವನ್ನು ತುಂಬಬೇಕೆಂದೂ ಹೇಳಿದರು. ಆದರೆ ಅಲ್ಲಿನ ಈ ಮಾತನ್ನೆ ಯಥಾವತ್ತಾಗಿ ಪ್ರತಿಧ್ವನಿಸಿದ ಕನ್ನಡದ ನವ್ಯ ಕಾವ್ಯ ಪಂಥದವರೂ, ನಮ್ಮ ಪರಂಪರೆಯಲ್ಲಿ ಗದ್ಯ ಹಾಗೂ ಪದ್ಯ ರೂಪಗಳು ಆಗಲೇ ಶತಮಾನಗಳ ಕಾಲ ಹೇಗೆ ಬೆಸೆದುಕೊಂಡು ಬಂದು ಕಾವ್ಯ ಭಾಷೆಯನ್ನು ರೂಪಿಸುವುದರಲ್ಲಿ ಶ್ರಮಿಸಿವೆ ಎಂಬುದರ ಅರಿವಿಲ್ಲದ್ದ ರಿಂದ, ಇಂದಿನ ಕಾವ್ಯದ ಭಾಷೆಗೆ ಗದ್ಯದ ಸತ್ವವನ್ನು ತುಂಬಬೇಕು ಎಂದು ಹೇಳ ತೊಡಗಿದರು. ಆದರೆ ಕಾವ್ಯದ ಭಾಷೆಗೆ, ಗದ್ಯದ ಸತ್ವವನ್ನು ತುಂಬುವುದು ಎಂದರೆ ಏನರ್ಥ ? ಯಾವ ಗದ್ಯದ ಸತ್ವವನ್ನು ತುಂಬಬೇಕಾಗಿದೆ ? – ಎನ್ನುವುದು, ಕನ್ನಡ ಕಾವ್ಯ ಪರಂಪರೆಯಲ್ಲಿ ಗದ್ಯ-ಪದ್ಯಗಳು ಕಾವ್ಯ ಮಾಧ್ಯಮವಾದದ್ದನ್ನು ಬಲ್ಲವರಿಗೆ ಅರ್ಥವಾಗುವುದಿಲ್ಲ.

ಕಾವ್ಯ ಭಾಷೆಯನ್ನು ಕುರಿತು ಇಂದಿನವರ ಮತ್ತೊಂದು ಧೋರಣೆ, ಕಾವ್ಯ ಆಡುಮಾತಿಗೆ ಸಮೀಪವಾಗಬೇಕಾದರೆ ಅದರಲ್ಲಿ ನಾಟ್ಯಮಯತೆ ಇರಬೇಕು ಎನ್ನುವುದು. ನಾಟ್ಯಮಯತೆಯ ಜೀವಾಳವೇ ಸಂವಾದ. ಆಡುಮಾತಿನಲ್ಲಿರುವ ಸಂವಾದಗುಣ ಕಾವ್ಯ ಭಾಷೆಗೂ ಬರಬೇಕು ಎನ್ನುವುದು ಈ ಮಾತಿನ ಅರ್ಥ.

ಕಾವ್ಯ ಭಾಷೆಗೆ ಈ ನಾಟ್ಯಮಯತೆ ಒಂದು ಲಕ್ಷಣವೆಂದು ನಮ್ಮ ಹಿಂದಿನ ಕವಿಗಳು ವಿಚಾರ ಮಾಡಿದಂತೆ ತೋರದಿದ್ದರೂ ಕನ್ನಡ ಕಾವ್ಯದ ಭಾಷೆಯಲ್ಲಿ ಈ ಒಂದು ಅಂಶ ತಕ್ಕಮಟ್ಟಿಗೆ ಅಲ್ಲಲ್ಲಿ ಕಾಣಿಸಿಕೊಂಡಿದೆ. ಪಂಪನ ಕಾವ್ಯದ ಗದ್ಯ ಭಾಗ ಗಳಲ್ಲಿ ಮತ್ತು ಕಾವ್ಯದ ಉದ್ದಕ್ಕೂ ನಾಟ್ಯಾಂಶ ಎದ್ದು ಕಾಣುತ್ತದೆ. ರನ್ನನಂತೂ ನಾಟ್ಯ ಪ್ರತಿಭೆಗೆ ಹೆಸರಾದವನು. ರನ್ನನ ಕಾವ್ಯದಲ್ಲಿ ಹುದುಗಿದ್ದ ನಾಟಕವನ್ನು ಆಚಾರ್ಯ ಶ್ರೀಯವರು ಹೊರತೆಗೆದಿದ್ದಾರೆ. ರನ್ನನಂತೆ ನಾಟ್ಯ ಪ್ರತಿಭೆಗೆ ಹೆಸರಾದ ಇನ್ನೊಬ್ಬ ಕವಿ ರಾಘವಾಂಕ. ರನ್ನನ ನಾಟ್ಯಮಯತೆ 'ಮಾರ್ಗ' ಕಾವ್ಯದ್ದಾದರೆ, ರಾಘವಾಂಕನದು 'ದೇಸಿ' ಕಾವ್ಯದ್ದು. ರನ್ನನದು ವರ್ಣನಾಮೂಲ ನಾಟ್ಯಮಯತೆ ಯಾದರೆ, ರಾಘವಾಂಕನದು ಸಂವಾದ ಮೂಲ ನಾಟ್ಯಮಯತೆ. ರನ್ನನಲ್ಲಿ ಒಂದು ಪಾತ್ರ ಆಡುವ ಮಾತು ಒಂದು ವೃತ್ತ ಅಥವಾ ಕಂದದಲ್ಲಿ ಮುಕ್ತಾಯವಾದನಂತರ, ಇನ್ನೊಂದು ಪಾತ್ರ ಮತ್ತೊಂದು ವೃತ್ತ ಅಥವಾ ಕಂದದಲ್ಲಿ ಉತ್ತರ ಕೊಡುತ್ತದೆ. ರಾಘವಾಂಕನಲ್ಲಿಯಾದರೋ ಒಂದೇ ಷಟ್ಪದಿಯ ಚೌಕಟ್ಟಿನಲ್ಲಿ ಎರಡು ಪಾತ್ರಗಳು ನಡೆಯಿಸುವ ಉತ್ತರ-ಪ್ರತ್ಯುತ್ತರಗಳ ಚಕಮುಕಿ ಅತ್ಯಪೂರ್ವವಾಗಿದೆ. ಈ ಅರ್ಥ ದಲ್ಲಿ ರನ್ನನಿಗಿಂತ, ರಾಘವಾಂಕ ಉತ್ತಮವಾದ ಸಂವಾದ ಚಾತುರ್ಯವನ್ನು ತಂದು ನಾಟ್ಯಮಯತೆಯಲ್ಲಿ ಮೇಲುಗೈಯಾದವನು. ಪಂಪ-ರನ್ನ-ರಾಘವಾಂಕರನ್ನು ಬಿಟ್ಟರೆ ಉಳಿದವರಲ್ಲಿ ಈ ನಾಟ್ಯಮಯತೆ ಉದ್ದಕ್ಕೂ ಇಷ್ಟರಮಟ್ಟಿಗೆ ಕಾಣಿಸಿಕೊ ಳ್ಳುವುದಿಲ್ಲ. ನಮ್ಮ ಕವಿಗಳು ನಾಟ್ಯಮಯ (Dramatic) ಸಂದರ್ಭಗಳನ್ನು ತರ ಬಲ್ಲವರಾಗಿದ್ದರೆ ಹೊರತು, ಅದು ಅವರ ಕಾವ್ಯ ಶೈಲಿಯಲ್ಲಿ ಉದ್ದಕ್ಕೂ ಅಳವಟ್ಟು

ಬಂದದ್ದು ವಿರಳ. ಯಾಕೆಂದರೆ ಹಿಂದಿನ ಕಾವ್ಯಗಳೆಲ್ಲ ಮೂಲತಹ ಕಥನ ಕಾವ್ಯ ಗಳು ; ಅಲ್ಲಿ ಅವರಿಗೆ ಒದಗಿಬಂದದ್ದು ವರ್ಣನಾ ಮಾರ್ಗ. ಹೀಗಿರುವಾಗ ಇಂದಿನವರು, ತಮ್ಮ ಸ್ವಗತ ಲಹರಿಯಲ್ಲಿ ತರುವಂಥ ನಾಟ್ಯಮಯತೆಯನ್ನು, ಹಿಂದಿನವರಲ್ಲಿ ಹುಡುಕುವುದು ಸಾಧುವಲ್ಲ.

ಈ ಹಿನ್ನೆಲೆಯಿಂದ ನೋಡಿದಾಗ ನಾಟ್ಯಮಯತೆ ಕನ್ನಡ ಕಾವ್ಯದಲ್ಲಿ ಅಲ್ಲಲ್ಲಿ ಅಭಿವ್ಯಕ್ತವಾಗಿದೆ. ಆದರೆ ಇಂದಿನವರ ನಾಟ್ಯಮಯತೆ ಕವಿ ತನ್ನ ಅಂತರಂಗದ ಅನಿಸಿಕೆಗಳನ್ನು, ತೊಳಲಾಟಗಳ ಸಂಕೀರ್ಣತೆಯನ್ನು, ಭಾಷೆಯಲ್ಲಿ ಅಭಿನಯಿಸಿ ತೋರುವ ಸ್ವಗತ ವಿಧಾನದ್ದಾಗಿದೆ.

ಕಾವ್ಯ ಭಾಷೆ ಆಡುನುಡಿಗೆ ಸಮೀಪವಾಗಬೇಕಾದರೆ, ಹಿಂದಿನ ಛಂದೋಬಂಧಗಳನ್ನು ವರ್ಜಿಸಿ 'ಆಡು ಮಾತಿನ ಛಂದಸ್ಸನ್ನೇ' (Speech rhythm) ಅಳವಡಿಸಿಕೊಳ್ಳುವುದು ಅಗತ್ಯ ಎಂಬುದು ಇಂದಿನವರ ಧೋರಣೆ. ಇದು ಎಷ್ಟರ ಮಟ್ಟಿಗೆ ಸಫಲವಾಗಿದೆ ಎಂಬುದನ್ನು ಈಗ ಹತ್ತು ಹದಿನೈದು ವರ್ಷಗಳಿಂದ ಬರುತ್ತಿರುವ ಬರವಣಿಗೆಯನ್ನು ನೋಡಿದರೆ ತಿಳಿಯುತ್ತದೆ. ಹಿಂದಿನ ಕವಿಗಳು ಒಂದು ಛಂದೋವಿಧಾನವನ್ನು ಒಪ್ಪಿಕೊಂಡರೆ ಅದನ್ನು ಮುರಿಯಲು ನೂರಾರು ವರ್ಷ ತೆಗೆದುಕೊಳ್ಳುತ್ತಿದ್ದರು. ಚಂಪೂ ಕಾವ್ಯದ ಶೈಲಿಯಂತೂ, ಸಂಸ್ಕೃತದ ಪ್ರಾಬಲ್ಯಕ್ಕೆ ಹೆಚ್ಚು ಅನುಕೂಲವಾಗಿದ್ದ ಶೈಲಿ; ಆದರೂ ಅದರಲ್ಲೇ ಆಡು ನುಡಿಯ ಬೆಡಗನ್ನು, ಆಡು ಮಾತಿಗೆ ಸಮೀಪವಾಗುವ ಮಾತಿನ ಛಾಯೆಯನ್ನು ನಮ್ಮ ಕವಿಗಳು ತಂದರು. ಅನಂತರ ಬಂದ ದೇಶೀಯ ಛಂದಸ್ಸುಗಳು, ಒಂದು ಬಗೆಯ ಪ್ರಾಸದ ನಿರ್ಬಂಧವನ್ನಿರಿಸಿಕೊಂಡರೂ, ಚಂಪೂ ಕವಿಗಳಿಗಿಂತ ವಿಶೇಷವಾದ ರೀತಿಯಲ್ಲಿ ಆಡು ನುಡಿಯ ಸಮೀಪಕ್ಕೆ ಬಂದವು. ನವೋದಯ ಕವಿಗಳು ಹಿಂದಿನ ಆ ಛಂದೋ ರೂಪಗಳನ್ನು ವರ್ಜಿಸಿ, ಛಂದಸ್ಸಿನಲ್ಲಿ ಹೊಸ ಆವಿಷ್ಕಾರಗಳನ್ನು ಮಾಡಿಕೊಂಡು, ಬಹುಮಟ್ಟಿಗೆ ಶಿಷ್ಟ ಭಾಷೆಯನ್ನು ಬಳಸಿದರು. ಈ ಶಿಷ್ಟ ಭಾಷೆ ಒಂದು ವರ್ಗದ ಜನ ಆಡುವ ಭಾಷೆಗೆ ಹತ್ತಿರವಾದದ್ದು. ನವೋದಯ ಕಾಲದಲ್ಲಿ ಬೇಂದ್ರೆಯವರೊಬ್ಬರ ಕಾವ್ಯ ಭಾಷೆಯೆ ನಿಜವಾದ ಅರ್ಥದಲ್ಲಿ ಉತ್ತರ ಕರ್ನಾಟಕದ ಆಡುಮಾತಿಗೆ ಸಮೀಪವಾದದ್ದು. ಮುಂದೆ ಬಂದ ನವ್ಯ ಕಾವ್ಯ, ನವೋದಯ ಕಾಲದ ಛಂದೋ ರೂಪಗಳು ಕೂಡ ಆಡುಮಾತನ್ನು ಯಥಾರ್ಥವಾಗಿ ಬಳಸಲು ಅನುಕೂಲವಾದವುಗಳಲ್ಲ ಎಂದು, ಅವುಗಳನ್ನು ವರ್ಜಿಸಿ ನೇರವಾಗಿ ಮಾತಾಡಿದ ಹಾಗೆ ತೋರುವ ಮುಕ್ತ ಛಂದೋ ವಿಧಾನವನ್ನು ತಂದಿತು. "ಗ್ರಾಮೀಣವೂ ಅರ್ಧ ನಾಗರಕವೂ ಆದ ಒಂದು ಭಾಷೆಯನ್ನು ಸಮಕಾಲೀನ ಸಂವೇದನೆಯ ಅಭಿವ್ಯಕ್ತಿಗಾಗಿ ದುಡಿಸಿಕೊಳ್ಳಬೇಕಾದ ಸಮಸ್ಯೆಯೇ ತುಂಬಾ ಮುಖ್ಯವಾದುದು"[13] ಇಂದಿನವರಿಗೆ.

---

[13] ಯು.ಆರ್. ಅನಂತಮೂರ್ತಿ, ಪ್ರಜ್ಞೆ ಮತ್ತು ಪರಿಸರ : ಪು. 101.

ಇಂದಿನ ಕಾವ್ಯವೇನೋ ಪಾರಂಪರಿಕವಾದ ಎಲ್ಲ ತೊಡುಗೆಗಳನ್ನೂ ವರ್ಜಿಸಿ ಆಡುಮಾತಿನ ಸೀರಿಗಿಳಿದಿದೆ. ಈಗಾಗಲೇ ಏಕತಾನತೆಗೆ ಬಂದಿರುವ ಈ ಭಾಷಾ ಪ್ರಯೋಗದ ಭವಿಷ್ಯವೇನು? ಕಾವ್ಯದ ಭಾಷೆ ಹೀಗಾದದ್ದರಿಂದ ಅದು ಗಳಿಸಿ ಕೊಟ್ಟದ್ದಕ್ಕಿಂತ, ಕಳೆದುಕೊಂಡದ್ದು ಎಷ್ಟು? ಆಡುವ ಮಾತಿನ ಭಾಷೆಯಲ್ಲಿ ಯಾಕೆ ಇನ್ನೂ ಒಂದು ಮಹತ್ ಕೃತಿಯನ್ನು ರಚಿಸಲು ಸಾಧ್ಯವಾಗಿಲ್ಲ? ಸಮಸ್ತಾನುಭವಗಳ ಅಭಿವ್ಯಕ್ತಿಗೆ ಆಡುಮಾತಿನ ಭಾಷಾಸಾಮಗ್ರಿಯಷ್ಟೆ ಸಾಕಾಗುತ್ತದೆಯೆ? ಆಡುಮಾತಿನಲ್ಲಿ ಬರೆಯುತ್ತಿರುವ ಇಂದಿನವರಿಗೆ ಕನ್ನಡ ಸಾಹಿತ್ಯ ಪರಂಪರೆಯ ಪ್ರಜ್ಞೆ ಇದೆಯೆ? ಸಾವಿರ ವರ್ಷಗಳ ಕಾಲ ಕನ್ನಡ ಭಾಷೆ ಯನ್ನು ಕಾವ್ಯಕ್ಕೆ ಒಗ್ಗಿಸಲು ನಮ್ಮ ಕವಿಗಳು ನಡೆಯಿಸಿದ ಹೋರಾಟದ ಅರಿವಿದೆಯೆ? ತಾವು ಬರೆಯುತ್ತಿರುವುದು ಯಾವ ಭಾಷೆಯ ಪರಂಪರೆಯಲ್ಲಿ ಎನ್ನುವುದು ಮುಖ್ಯವಲ್ಲವೆ? ಇತ್ಯಾದಿ ಪ್ರಶ್ನೆಗಳನ್ನು ಕೇಳಬೇಕೆನ್ನಿಸುತ್ತದೆ.

ಇಷ್ಟನ್ನು ಹೇಳಿಯೂ ಒಂದು ಮಾತನ್ನು ಮರೆಯಬಾರದು: ಕಾವ್ಯ ಆಡು ಮಾತಿಗೆ ಸಮೀಪವಾಗಿರುವುದು; ಆಡುಮಾತಿನ ಸತ್ವವನ್ನು ತುಂಬಿಕೊಳ್ಳುವುದು; ಆಡುಮಾತನ್ನೇ ಬಳಸುವುದು–ಎಂಬ ಈ ಮಾತುಗಳು ಕಾವ್ಯಭಾಷೆಯನ್ನು ಕುರಿತ ಧೋರಣೆಗಳಾಗಿವೆಯೆ ಹೊರತು, ಅತ್ಯುತ್ತಮ ಕಾವ್ಯದ ಲಕ್ಷಣವನ್ನು ಹೇಳುತ್ತವೆಂದು ಭಾವಿಸಬಾರದು. ಕಾವ್ಯ ಆಡುಮಾತಿಗೆ ಹತ್ತಿರವಾಗುವುದು ಬೇರೆ, ಅದು ಉತ್ತಮ ಕಾವ್ಯವಾಗುವುದು ಬೇರೆ. ಒಬ್ಬ ಕವಿಯ ಭಾಷೆ ತನ್ನ ಕಾಲದ ಆಡು ನುಡಿಗೆ ಹೆಚ್ಚು ಸಮೀಪವಾಗಿದೆ ಎಂದರೆ, ಆ ಕವಿ ಉಳಿದವರಿಗಿಂತ ಬದುಕಿಗೆ ಹತ್ತಿರ ವಾಗಿದ್ದಾನೆ, ಸಮಕಾಲೀನತೆಯ ಬಗೆಗೆ ಎಚ್ಚರವಾಗಿದ್ದಾನೆ ಎಂದು ಅರ್ಥ. ಕವಿ ಬಳಸುವ ಭಾಷೆ ಪ್ರೌಢವಾದದ್ದೇ ಇರಲಿ, ಆಡುಮಾತಿಗೆ ಸಮೀಪವಾದದ್ದೇ ಇರಲಿ, ಅವನ ಭಾಷೆ ಅವನ ಉದ್ದೇಶಕ್ಕೆ ಅನುಗುಣವಾಗಿದೆಯೆ, ತನ್ನ ಕಾಲದ ಸಮಗ್ರಾನುಭವಗಳನ್ನು ಓದುಗನಿಗೆ ಮುಟ್ಟಿಸುವುದರಲ್ಲಿ ಯಶಸ್ವಿಯಾಗಿದೆಯೆ ಎನ್ನು ವುದು ಮುಖ್ಯ. ಕಾವ್ಯಭಾಷೆಯನ್ನು ಕುರಿತು ಕವಿಗಳು ವಿಮರ್ಶಕನ ಸ್ತರದಲ್ಲಿ ಯಾವ ಸಿದ್ಧಾಂತಗಳನ್ನು ಬೇಕಾದರೂ ರೂಪಿಸಲಿ; ಇಷ್ಟು ಮಾತ್ರ ನಿಜ: ಕಾವ್ಯದ ಭಾಷೆ ಜನ ಭಾಷೆಯಾದರೂ, ಅದು ಕವಿ ಭಾಷೆಯೆ.*

---

* ಮಿಥಿಕ್ ಸೊಸೈಟಿಯ ವಜ್ರ ಮಹೋತ್ಸವದ ಸಂದರ್ಭದಲ್ಲಿ 'ಕರ್ನಾಟಕ ಜೀವನ ಪರಂಪರೆ ಮತ್ತು ಸಾಹಿತ್ಯ' ಎಂಬ ವಿಚಾರ ಸಂಕಿರಣದಲ್ಲಿ ೧೯-೬-೭೭ರಂದು ಓದಿದ ಉಪನ್ಯಾಸ.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಉಪಾಂಗಗಳು: ಸಾಧನೆ–ಸಿದ್ಧಿ

ಎನ್. ಪ್ರಭುಸ್ವಾಮಿ

ಇಂಡಿಯಾದ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ವಾಣಿಜ್ಯ ಬ್ಯಾಂಕುಗಳು ಮಹತ್ವದ ಪಾತ್ರ ವಹಿಸುತ್ತಿವೆ. ವಾಣಿಜ್ಯ ಬ್ಯಾಂಕುಗಳ ಪೈಕಿ ಇಂಡಿಯಾದ ಸ್ಟೇಟ್ ಬ್ಯಾಂಕು ಮತ್ತು ಅದರ ಉಪಾಂಗಗಳು ಬಹು ದೊಡ್ಡ ಬ್ಯಾಂಕುಗಳು. 1972 ರಲ್ಲಿ ಪ್ರಕಟವಾದ ಬ್ಯಾಂಕಿಂಗ್ ಕಮಿಷನ್ನಿನ ವರದಿಯಲ್ಲಿ ಇಂಡಿಯಾದ ಸ್ಟೇಟ್ ಬ್ಯಾಂಕು ಮತ್ತು ಅದರ ಉಪಾಂಗಗಳನ್ನು ಕುರಿತು ನಿರ್ದಿಷ್ಟವಾದ ಶಿಫಾರಸ್ಸುಗಳಿಲ್ಲ. ಆದರೆ ವಾಣಿಜ್ಯ ಬ್ಯಾಂಕುಗಳನ್ನು ಪುನರ್ರಚಿಸಬೇಕೆಂದು ಶಿಫಾರಸು ಮಾಡುವಾಗ ಸ್ಟೇಟ್ ಬ್ಯಾಂಕು, ಅದರ ಏಳು ಉಪಾಂಗಗಳು ಮತ್ತು 14 ರಾಷ್ಟ್ರೀಕೃತ ಬ್ಯಾಂಕುಗಳನ್ನು ಒಟ್ಟಾಗಿ ಗಣನೆಗೆ ತೆಗೆದುಕೊಂಡು ಅವುಗಳನ್ನು ಎರಡು ಅಥವ ಮೂರು ರಾಷ್ಟ್ರ ಮಟ್ಟದ ಬ್ಯಾಂಕುಗಳನ್ನಾಗಿಯೂ, ಐದು ಅಥವ ಆರು ಪ್ರಾದೇಶಿಕ ಬ್ಯಾಂಕುಗಳನ್ನಾಗಿಯೂ ರಚಿಸಬೇಕೆಂದು ಶಿಫಾರಸು ಮಾಡಿದೆ.

ಮೇಲ್ಕಂಡ ಶಿಫಾರಸಿನ ಹಿನ್ನೆಲೆಯಲ್ಲಿ ಸ್ಟೇಟ್ ಬ್ಯಾಂಕು ಮತ್ತು ಅದರ ಉಪಾಂಗಗಳ ಪ್ರಾಮುಖ್ಯತೆಯನ್ನು ಈ ಲೇಖನದಲ್ಲಿ ಕುರಿತು ಚರ್ಚಿಸಲಾಗಿದೆ. ಬ್ಯಾಂಕಿಂಗ್ ಕಮಿಷನ್ ಶಿಫಾರಸು ಮಾಡಿರುವಂತೆ ಸ್ಟೇಟ್ ಬ್ಯಾಂಕು ಮತ್ತು ಅದರ ಉಪಾಂಗಗಳು ಈಗಿರುವ ತಮ್ಮ ಸ್ವತಂತ್ರ ಅಸ್ತಿತ್ವವನ್ನು ಕಳೆದುಕೊಳ್ಳುವುದು ದೇಶದ ಬ್ಯಾಂಕಿಂಗ್ ವ್ಯವಸ್ಥೆಯ ದೃಷ್ಟಿಯಿಂದ ಸಾಧುವೆ, ಎಂಬುದನ್ನು ಪರಿಶೀಲಿಸಲಾಗುತ್ತದೆ. ಇದನ್ನು ಚರ್ಚಿಸುವುದಕ್ಕೆ ಮುನ್ನ ಸ್ಟೇಟ್ ಬ್ಯಾಂಕಿನ ಉಪಾಂಗಗಳು ಬೆಳೆದು ಬಂದ ರೀತಿಯನ್ನು ಪರಿಶೀಲಿಸುವುದು ಸೂಕ್ತ.

ಪಂಚವಾರ್ಷಿಕ ಯೋಜನೆಗಳು ಆರಂಭವಾದ ಮೇಲೆ ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಗೆ ಆದ್ಯ ಗಮನ ಕೊಡಲಾಯಿತು. ಗ್ರಾಮಾಂತರ ಪ್ರದೇಶಗಳಲ್ಲಿ ರೈತರು ಏಷ್ಟರಮಟ್ಟಿಗೆ ಸಾಲದ ಹೊರೆಯಿಂದ ನರಳುತ್ತಿದ್ದಾರೆ ಮತ್ತು ಅವರಿಗೆ ಯಾವ ರೀತಿ ಹಣ ಕಾಸಿನ ಸೌಲಭ್ಯ ಒದಗಿಸಬಹುದು ಎಂಬ ವಿಷಯವನ್ನು ಕುರಿತು ಅಧ್ಯಯನ ಮಾಡಲು ಇಂಡಿಯಾದ ರಿಸರ್ವ್ ಬ್ಯಾಂಕ್ ದೇಶಾದ್ಯಂತ ಒಂದು

ಸಮೀಕ್ಷೆ ನಡೆಸಿತು. ಆ ಸಮೀಕ್ಷೆಯ ವರದಿ 1954 ರಲ್ಲಿ ಪ್ರಕಟಿಸಲ್ಪಟ್ಟಿತು. ಆ ವರದಿಯಲ್ಲಿ ಗ್ರಾಮಾಂತರ ಪ್ರದೇಶಗಳಿಗೆ ಹಣಕಾಸಿನ ಸೌಲಭ್ಯ ಒದಗಿಸಲು ಒಂದು ಪ್ರತ್ಯೇಕ ಬ್ಯಾಂಕಿಂಗ್ ವ್ಯವಸ್ಥೆಯನ್ನು ಏರ್ಪಾಟು ಮಾಡಬೇಕೆಂದು ರಿಸರ್ವ್ ಬ್ಯಾಂಕಿಗೆ ಶಿಫಾರಸು ಮಾಡಲಾಯಿತು. ಇದನ್ನು ಅನುಷ್ಠಾನಕ್ಕೆ ತರಲು ಇಂಡಿಯಾದಲ್ಲಿದ್ದ ವಾಣಿಜ್ಯ ಬ್ಯಾಂಕುಗಳ ಪೈಕಿ ಅತಿ ದೊಡ್ಡದಾದ ಇಂಡಿಯಾದ ಇಂಪೀರಿಯಲ್ ಬ್ಯಾಂಕನ್ನು ರಾಷ್ಟ್ರೀಕರಣಗೊಳಿಸಿ, ಇಂಡಿಯಾದ ಸ್ಟೇಟ್ ಬ್ಯಾಂಕ್ ಎಂಬ ಹೊಸ ಹೆಸರಿನಿಂದ ನೂತನ ಬ್ಯಾಂಕಿಂಗ್ ವ್ಯವಸ್ಥೆಯನ್ನು ರಚಿಸಬೇಕೆಂದು ಶಿಫಾರಸು ಮಾಡಲಾಯಿತು.

ಕೇಂದ್ರ ಸರ್ಕಾರ ರಿಸರ್ವ್ ಬ್ಯಾಂಕಿನ ಸಲಹೆ ಪ್ರಕಾರ ಮೇಲ್ಕಂಡ ಶಿಫಾರಸ್ಸನ್ನು ಒಪ್ಪಿಕೊಂಡು 1955 ರಲ್ಲಿ ಇಂಪೀರಿಯಲ್ ಬ್ಯಾಂಕನ್ನು ರಾಷ್ಟ್ರೀಕರಣ ಗೊಳಿಸಿ ಇಂಡಿಯಾದ ಸ್ಟೇಟ್ ಬ್ಯಾಂಕನ್ನು ಸ್ಥಾಪಿಸಿತು. ಸ್ಟೇಟ್ ಬ್ಯಾಂಕು ಸ್ಥಾಪಿತವಾದಮೇಲೆ ಗ್ರಾಮಾಂತರ ಪ್ರದೇಶಗಳಲ್ಲಿ ಬ್ಯಾಂಕುಗಳನ್ನು ಸ್ಥಾಪಿಸುವ ಕಾರ್ಯಕ್ಕೆ ಆದ್ಯ ಗಮನ ಕೊಟ್ಟಿತು. ಈ ಕಾರ್ಯ ನಿರ್ವಹಿಸುವಾಗ, ಕೆಲವು ಸಂಸ್ಥಾನಗಳಲ್ಲಿದ್ದ ಪ್ರಮುಖ ವಾಣಿಜ್ಯ ಬ್ಯಾಂಕುಗಳ ಚಟುವಟಿಕೆಗಳು ಅದರ ಗಮನಕ್ಕೆ ಬಂದಿತು. 20 ನೆಯ ಶತಮಾನದ ಆದಿ ಭಾಗದಲ್ಲಿ ಕೆಲವು ಪ್ರಮುಖ ದೇಶೀಯ ಸಂಸ್ಥಾನಗಳು ತಮ್ಮ ರಾಜ್ಯದೊಳಗೆ ಬ್ಯಾಂಕುಗಳನ್ನು ಸ್ಥಾಪಿಸಿ ಚೆನ್ನಾಗಿ ಅಭಿವೃದ್ಧಿ ಪಡಿಸಿದ್ದವು. ಇವುಗಳು ತಮ್ಮ ರಾಜ್ಯದ ಎಲ್ಲೆಯೊಳಗೆ ಗ್ರಾಮಾಂತರ ಪ್ರದೇಶಗಳಲ್ಲಿ ಬ್ಯಾಂಕುಗಳನ್ನು ಸ್ಥಾಪಿಸಿ ನಡೆಸಿಕೊಂಡು ಬರುವುದರಲ್ಲಿ ಯಶಸ್ವಿಯಾಗಿದ್ದವು. ಇದನ್ನು ಗಮನಿಸಿದ ಇಂಡಿಯಾದ ಸ್ಟೇಟ್ ಬ್ಯಾಂಕು, ದೇಶೀಯ ಸಂಸ್ಥಾನಗಳಲ್ಲಿರುವ ಬ್ಯಾಂಕುಗಳನ್ನು ತನ್ನ ಆಡಳಿತಕ್ಕೆ ತೆಗೆದುಕೊಂಡರೆ ಗ್ರಾಮಾಂತರ ಪ್ರದೇಶಗಳಲ್ಲಿ ಬ್ಯಾಂಕುಗಳ ಸ್ಥಾಪನೆಯನ್ನು ಸುಲಭವಾಗಿ ಕಾರ್ಯಗತ ಮಾಡಬಹುದೆಂಬ ನಿರ್ಧಾರಕ್ಕೆ ಬಂದಿತು. ತನ್ನ ಉದ್ದೇಶವನ್ನು ಸಾಧಿಸಲು ಸ್ಟೇಟ್ ಬ್ಯಾಂಕು ದೇಶೀಯ ಸಂಸ್ಥಾನಗಳಲ್ಲಿದ್ದ ಪ್ರಮುಖ ಬ್ಯಾಂಕುಗಳನ್ನು ರಾಷ್ಟ್ರೀಕರಣಗೊಳಿಸುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿತು. ಕೇಂದ್ರ ಸರ್ಕಾರ ಮೇಲ್ಕಂಡ ಶಿಫಾರಸನ್ನು ಒಪ್ಪಿಕೊಂಡು, 1959 ರಲ್ಲಿ ಒಂದು ಕಾನೂನನ್ನು ಜಾರಿಗೆ ತಂದು ಈ ಕೆಳಗೆ ಕಂಡ ಬ್ಯಾಂಕುಗಳನ್ನು ರಾಷ್ಟ್ರೀಕರಣಗೊಳಿಸಿತು. ರಾಷ್ಟ್ರೀಕರಣವಾದ ಮೇಲೆ ಬ್ಯಾಂಕುಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡರೂ, ಅವು ಇಂಡಿಯಾದ ಸ್ಟೇಟ್ ಬ್ಯಾಂಕಿನ ಅಧೀನ ಬ್ಯಾಂಕುಗಳಾದುವು. ಅಂದಿನಿಂದ ಅವುಗಳನ್ನು ಸ್ಟೇಟ್ ಬ್ಯಾಂಕಿನ ಉಪಾಂಗಗಳು (Subsidiary Banks of State Bank of India) ಎಂದು ಕರೆಯಲಾಗಿದೆ.

ಜನವರಿ, 1963ರಲ್ಲಿ ಜೈಪುರ ಸ್ಟೇಟ್ ಬ್ಯಾಂಕಿನ ಆಡಳಿತವನ್ನು ಬಿಕನೀರ್ ಸ್ಟೇಟ್ ಬ್ಯಾಂಕು ವಹಿಸಿಕೊಂಡಿತು. ಅಂದಿನಿಂದ ಹೊಸ ಬ್ಯಾಂಕಿಗೆ ಸ್ಟೇಟ್ ಬ್ಯಾಂಕ್ ಆಫ್

ರಾಷ್ಟ್ರೀಕರಣವಾಗುವುದಕ್ಕೆ ಮುನ್ನ ಬ್ಯಾಂಕಿಗೆ ಇದ್ದ ಹೆಸರು	ಬ್ಯಾಂಕು ಸ್ಥಾಪಿಸಲ್ಪಟ್ಟ ವರ್ಷ	ಸ್ಟೇಟ್ ಬ್ಯಾಂಕಿನ ಉಪಾಂಗವಾಗಿ ಪರಿವರ್ತನೆಗೊಂಡ ತಾರೀಖು	ಹೊಸದಾಗಿ ಕೊಡಲ್ಪಟ್ಟ ಹೆಸರು
1 ಹೈದರಾಬಾದ್ ಸ್ಟೇಟ್ ಬ್ಯಾಂಕು	1942	1-10-1959	ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್
2 ಬ್ಯಾಂಕ್ ಆಫ್ ಜೈಪುರ, ಲಿಮಿಟೆಡ್	1943	1-1-1960	ಸ್ಟೇಟ್ ಬ್ಯಾಂಕ್ ಆಫ್ ಜೈಪುರ
3 ಬ್ಯಾಂಕ್ ಆಫ್ ಬಿಕನೀರ್ ಲಿಮಿಟೆಡ್	1944	1-1-1960	ಸ್ಟೇಟ್ ಬ್ಯಾಂಕ್ ಆಫ್ ಬಿಕನೀರ್
4 ಬ್ಯಾಂಕ್ ಆಫ್ ಇಂದೋರ್ ಲಿಮಿಟೆಡ್	1920	1-1-1960	ಸ್ಟೇಟ್ ಬ್ಯಾಂಕ್ ಆಫ್ ಇಂದೋರ್
5 ಟ್ರಾವಂಕೂರ್ ಬ್ಯಾಂಕ್ ಲಿಮಿಟೆಡ್	1946	1-1-1960	ಸ್ಟೇಟ್ ಬ್ಯಾಂಕ್ ಆಫ್ ಟ್ರಾವಂಕೂರ್
6 ಬ್ಯಾಂಕ್ ಆಫ್ ಮೈಸೂರು ಲಿಮಿಟೆಡ್	1913	1-3-1960	ಸ್ಟೇಟ್ ಬ್ಯಾಂಕ್ ಆಫ್ ಮೈಸೂರು
7 ಬ್ಯಾಂಕ್ ಆಫ್ ಪಾಟಿಯಾಲ	1917	1-4-1960	ಸ್ಟೇಟ್ ಬ್ಯಾಂಕ್ ಆಫ್ ಪಾಟಿಯಾಲ
8 ಭವನಗರ್ ದರ್ಬಾರ್ ಬ್ಯಾಂಕ್	1902	1-5-1960	ಸ್ಟೇಟ್ ಬ್ಯಾಂಕ್ ಆಫ್ ಸೌರಾಷ್ಟ್ರ

ಬಿಕನೀರ್ ಮತ್ತು ಜೈಪುರ ಎಂಬ ಹೆಸರಿಡಲಾಯಿತು. ಅದರ ಪರಿಣಾಮವಾಗಿ ಇಂದು ಇಂಡಿಯಾದ ಸ್ಟೇಟ್ ಬ್ಯಾಂಕಿನ ಆಡಳಿತದಲ್ಲಿ ಏಳು ಉಪಾಂಗ ಬ್ಯಾಂಕುಗಳಿವೆ. ಹೈದರಾಬಾದು, ಪಾಟಿಯಾಲ ಮತ್ತು ಸೌರಾಷ್ಟ್ರ ಸ್ಟೇಟ್ ಬ್ಯಾಂಕುಗಳ ಆಡಳಿತವನ್ನು ವಹಿಸಿಕೊಂಡಾದ ಮೇಲೆ ಇಂಡಿಯಾದ ಸ್ಟೇಟ್ ಬ್ಯಾಂಕು ಅವುಗಳ ಷೇರುಗಳೆಲ್ಲವನ್ನೂ ಸಂಪೂರ್ಣವಾಗಿ ಕೊಂಡುಕೊಂಡಿತು. ಉಳಿದ ಬ್ಯಾಂಕುಗಳ ಆಡಳಿತವನ್ನು ವಹಿಸಿಕೊಂಡಾಗ ಅವುಗಳ ಷೇರುಗಳ ಪೈಕಿ ಬಹು ಪಾಲನ್ನು ಶೇಕಡಾ 58ರಿಂದ 93ರ ವರೆಗೆ ಕೊಂಡುಕೊಂಡಿತು. ಉಳಿದ ಷೇರುಗಳ ಪೈಕಿ ಸ್ವಲ್ಪ ಭಾಗವನ್ನು ಆಯಾ ಸಂಸ್ಥಾನಗಳ ಸರ್ಕಾರಗಳಿಗೂ ಮತ್ತು ಮೊದಲಿದ್ದ ಬ್ಯಾಂಕಿನ ಖಾಸಗೀ ಷೇರುದಾರರುಗಳಿಗೂ ಹಂಚಲಾಯಿತು. ಈಗ ಖಾಸಗೀ ಷೇರುದಾರರು ಅಲ್ಪ ಪ್ರಮಾಣದಲ್ಲಿ ಇದ್ದರೂ ಬ್ಯಾಂಕಿನ ಆಡಳಿತ ಜವಾಬ್ದಾರಿ ಸಂಪೂರ್ಣವಾಗಿ ಇಂಡಿಯಾದ ಸ್ಟೇಟ್ ಬ್ಯಾಂಕಿನ ಕೈಯಲ್ಲಿದೆ.

ಪ್ರತಿ ಉಪಾಂಗ ಬ್ಯಾಂಕಿನ ಆಡಳಿತವನ್ನು ನೋಡಿಕೊಳ್ಳಲು ಒಂದು ಆಡಳಿತ ಮಂಡಳಿ ರಚಿಸಲಾಗಿದೆ. ಆಡಳಿತ ಮಂಡಳಿಯಲ್ಲಿ ಈ ಕೆಳಗೆ ಕಂಡಂತೆ ಪ್ರತಿನಿಧಿಗಳಿದ್ದಾರೆ. 1. ಇಂಡಿಯಾದ ಸ್ಟೇಟ್ ಬ್ಯಾಂಕಿನ ಅಧ್ಯಕ್ಷರು ಎಲ್ಲಾ ಉಪಾಂಗ ಬ್ಯಾಂಕುಗಳ ಆಡಳಿತ ಮಂಡಳಿಯ ಅಧ್ಯಕ್ಷರಾಗಿರುತ್ತಾರೆ. 2. ರಿಸರ್ವ್ ಬ್ಯಾಂಕಿನಿಂದ ನೇಮಿಸಲ್ಪಟ್ಟ ಒಬ್ಬ ಪ್ರತಿನಿಧಿ. 3. ಇಂಡಿಯಾದ ಸ್ಟೇಟ್ ಬ್ಯಾಂಕಿನಿಂದ ನಾಮಕರಣ ಮಾಡಲ್ಪಟ್ಟ ಐವರು ಪ್ರತಿನಿಧಿಗಳು. ಇವರ ಪೈಕಿ ಮೂರು ಜನರು ಸ್ಟೇಟ್ ಬ್ಯಾಂಕಿನ ಅಧಿಕಾರ ವರ್ಗಕ್ಕೆ ಸೇರಿದವರಾಗಿರುತ್ತಾರೆ. 4. ಖಾಸಗೀ ಷೇರುದಾರರುಗಳಿಂದ ಚುನಾಯಿಸಲ್ಪಟ್ಟ ಇಬ್ಬರು ಪ್ರತಿನಿಧಿಗಳು. 5. ಕೇಂದ್ರ ಸರ್ಕಾರದಿಂದ ನಾಮಕರಣ ಮಾಡಲ್ಪಡುವ ಒಬ್ಬ ಪ್ರತಿನಿಧಿ. 6. ಕೈಗಾರಿಕೆ, ವಾಣಿಜ್ಯ, ಇತ್ಯಾದಿ ಕ್ಷೇತ್ರಗಳನ್ನು ಪ್ರತಿನಿಧಿಸುವ ಒಬ್ಬಿಬ್ಬರು ಪ್ರತಿನಿಧಿಗಳನ್ನು ಇಂಡಿಯಾದ ಸ್ಟೇಟ್ ಬ್ಯಾಂಕ್ ಆಡಳಿತ ಮಂಡಳಿಯು, ತನ್ನ ಉಪಾಂಗ ಬ್ಯಾಂಕುಗಳ ಆಡಳಿತ ಮಂಡಳಿಗೆ ನೇಮಿಸುತ್ತದೆ.

ಉಪಾಂಗ ಬ್ಯಾಂಕುಗಳ ಆಡಳಿತ ಮಂಡಳಿಯು ಕಡೆಯ ಪಕ್ಷ ವರ್ಷಕ್ಕೆ ಆರು ಸಲ ಸಭೆ ಸೇರಿ ಆಡಳಿತಕ್ಕೆ ಸಂಬಂಧಪಟ್ಟ ನಿಯಮಗಳನ್ನು ರೂಪಿಸುತ್ತದೆ. ಇದಲ್ಲದೆ ಪ್ರತಿ ಬ್ಯಾಂಕಿಗೂ ಸೇರಿದಂತೆ ಒಂದು ಕಾರ್ಯ ನಿರ್ವಾಹಕ ಸಮಿತಿ ರಚಿಸಲ್ಪಟ್ಟಿದೆ. ಇದರಲ್ಲಿ 4 ಜನ ಆಡಳಿತ ಮಂಡಳಿಯ ಸದಸ್ಯರುಗಳಿರುತ್ತಾರೆ. ತಿಂಗಳಿಗೊಂದು ಬಾರಿ ಈ ಸಮಿತಿ ಸಭೆ ಸೇರಿ ಬ್ಯಾಂಕಿನ ಕಾರ್ಯಕಲಾಪಗಳನ್ನು ಪರಿಶೀಲಿಸುತ್ತದೆ. ಪ್ರತಿನಿತ್ಯದ ವ್ಯವಹಾರಗಳನ್ನು ನೋಡಿಕೊಳ್ಳಲು ಪ್ರತಿ ಬ್ಯಾಂಕಿಗೂ ಒಬ್ಬ ಜನರಲ್ ಮ್ಯಾನೇಜರ್ ಇರುತ್ತಾರೆ. ಇಂಡಿಯಾದ ಸ್ಟೇಟ್ ಬ್ಯಾಂಕು ಈ ಅಧಿಕಾರಿಯನ್ನು ಪ್ರತಿ ಬ್ಯಾಂಕಿಗೂ ನೇಮಕ ಮಾಡುವ ಜವಾಬ್ದಾರಿ ಹೊಂದಿದೆ.

ಪ್ರತಿ ವರ್ಷ ಈ ಬ್ಯಾಂಕುಗಳ ವ್ಯವಹಾರಗಳನ್ನು ತನಿಖೆ ಮಾಡಲು ಲೆಖ್ಖ ಸಂಶೋಧನಾ ಅಧಿಕಾರಿಗಳನ್ನು ನೇಮಿಸುತ್ತದೆ. ಹೀಗೆ ಇಂಡಿಯಾದ ಸ್ಟೇಟ್ ಬ್ಯಾಂಕು ತನ್ನ ಉಪಾಂಗ ಬ್ಯಾಂಕುಗಳ ಮೇಲೆ ಅಧಿಕಾರ ಹೊಂದಿದ್ದರೂ, ಪ್ರತಿಯೊಂದು ಬ್ಯಾಂಕನ್ನು ಸ್ವಯಂ ಆಡಳಿತ ಸಂಸ್ಥೆಯಾಗಿ ಪರಿಗಣಿಸುತ್ತದೆ. ಆದುದರಿಂದ ಉಪಾಂಗ ಬ್ಯಾಂಕುಗಳು ತಮ್ಮ ವ್ಯವಹಾರವನ್ನು ಸ್ವಲ್ಪ ಮಟ್ಟಿಗೆ ಸ್ವತಂತ್ರವಾಗಿ ನಡೆಸುತ್ತವೆ. ಆದರೆ ನೀತಿ ನಿಯಮಗಳ ವಿಷಯದಲ್ಲಿ ಇಂಡಿಯಾದ ಸ್ಟೇಟ್ ಬ್ಯಾಂಕು ಮತ್ತು ರಿಸರ್ವ್ ಬ್ಯಾಂಕು ಹಾಕಿಕೊಟ್ಟ ಮಾರ್ಗದರ್ಶನದಂತೆ ಉಪಾಂಗ ಬ್ಯಾಂಕುಗಳು ನಡೆಯಬೇಕು.

ಇಂಡಿಯಾದ ಸ್ಟೇಟ್ ಬ್ಯಾಂಕಿನ ಆಡಳಿತಕ್ಕೆ ಒಳಪಟ್ಟ ಮೇಲೆ ಉಪಾಂಗ ಬ್ಯಾಂಕುಗಳು ಈ ಕೆಳಗೆ ಕಂಡಂತೆ ಕಳೆದ ಒಂದು ದಶಕದಲ್ಲಿ (1961–1971) ಪ್ರಗತಿ ಸಾಧಿಸಿವೆ.

ಪಟ್ಟಿ 1. ಬಿಕಾನೀರ್ ಮತ್ತು ಜೈಪುರ ಸ್ಟೇಟ್ ಬ್ಯಾಂಕಿನ ಬೆಳವಣಿಗೆ

		1960ರ ಕೊನೆ ವೇಳೆಗೆ	1971ರ ಕೊನೆ ವೇಳೆಗೆ (ಅಂಕೆಗಳು ಲಕ್ಷ ರೂ.ಗಳಲ್ಲಿವೆ)
1	ಷೇರುದಾರರಿಂದ ಸಂದಾಯ ಮಾಡಲ್ಪಟ್ಟ ಬಂಡವಾಳ ಮತ್ತು ಕಾಯ್ದಿಟ್ಟ ನಿಧಿ	92	120
2	ಠೇವಣಿಗಳು	2297	8416
3	ಬಿಲ್ಲುಗಳ ಆಧಾರದ ಮೇಲೆ ಕೊಡಲ್ಪಟ್ಟ ಸಾಲ	1330	6028
4	ಸಣ್ಣ ಕೈಗಾರಿಕೆಗಳಿಗೆ ಕೊಟ್ಟ ಹಣ	19	918
5	ವ್ಯವಸಾಯಕ್ಕೆ ಒದಗಿಸಿದ ಹಣ	—	381
6	ಸಹಕಾರ ಸಂಘಗಳಿಗೆ ಒದಗಿಸಿದ ಹಣ	1	77
7	ರಫ್ತು ವ್ಯಾಪಾರಕ್ಕೆ ಒದಗಿಸಿದ ಹಣ	393	332
8	ಬಂಡವಾಳ ಹೂಡುವಿಕೆ	1074	2277
9	ನಿವ್ವಳ ಲಾಭ	3	7
	ಬ್ಯಾಂಕಿನ ಶಾಖೆಗಳು	106	293
	ಬ್ಯಾಂಕಿನಲ್ಲಿದ್ದ ಉದ್ಯೋಗಿಗಳ ಸಂಖ್ಯೆ	2246	5516

ಪಟ್ಟಿ 2. ಹೈದರಾಬಾದ್ ಸ್ಟೇಟ್ ಬ್ಯಾಂಕಿನ ಬೆಳವಣಿಗೆ

		1960ರ ಕೊನೆ ವೇಳೆಗೆ	1971ರ ಕೊನೆ ವೇಳೆಗೆ (ಲಕ್ಷ ರೂಪಾಯಿಗಳಲ್ಲಿ)
1	ಷೇರುದಾರರಿಂದ ಸಂದಾಯ ಮಾಡಲ್ಪಟ್ಟ ಬಂಡವಾಳ ಮತ್ತು ಕಾಯ್ದಿಟ್ಟ ನಿಧಿ	78.85	114.43
2	ಠೇವಣಿಗಳು	1939.73	8013.72
3	ಬಿಲ್ಲುಗಳ ಆಧಾರದ ಮೇಲೆ ಕೊಡಲ್ಪಟ್ಟ ಸಾಲ	1071.22	5800.03
4	ಸಣ್ಣ ಕೈಗಾರಿಕೆಗಳಿಗೆ ಕೊಟ್ಟ ಹಣ	10.54	1107.01
5	ವ್ಯವಸಾಯಕ್ಕೆ ಒದಗಿಸಿದ ಹಣ	—	587.85
6	ಸಹಕಾರ ಸಂಘಗಳಿಗೆ ಒದಗಿಸಿದ ಹಣ	0.35	189.97
7	ರಫ್ತು ವ್ಯಾಪಾರಕ್ಕೆ ಒದಗಿಸಿದ ಹಣ	—	353.36
8	ಬಂಡವಾಳ ಹೂಡುವಿಕೆ	976.97	2293.93
9	ನಿವ್ವಳ ಲಾಭ	9.15	6.22
	ಬ್ಯಾಂಕಿನ ಶಾಖೆಗಳು	65	253
	ಬ್ಯಾಂಕಿನಲ್ಲಿದ್ದ ಉದ್ಯೋಗಿಗಳು	1585	4982

ಪಟ್ಟಿ 3. ಇಂದೂರು ಸ್ಟೇಟ್ ಬ್ಯಾಂಕಿನ ಬೆಳವಣಿಗೆ

		1960ರ ಕೊನೆ ವೇಳೆಗೆ	1971ರ ಕೊನೆ ವೇಳೆಗೆ
		(ಲಕ್ಷ ರೂಪಾಯಿಗಳಲ್ಲಿ)	
1	ಷೇರುದಾರರಿಂದ ಸಂದಾಯ ಮಾಡಲ್ಪಟ್ಟ ಬಂಡವಾಳ ಮತ್ತು ಕಾಯ್ದಿಟ್ಟ ನಿಧಿ	43	59
2	ಠೇವಣಿಗಳು	884	4167
3	ಬಿಲ್ಲುಗಳ ಆಧಾರದ ಮೇಲೆ ಕೊಡಲ್ಪಟ್ಟ ಸಾಲ	684	2741
4	ಸಣ್ಣ ಕೈಗಾರಿಕೆಗಳಿಗೆ ಕೊಟ್ಟ ಹಣ	—	457
5	ವ್ಯವಸಾಯಕ್ಕೆ ಒದಗಿಸಿದ ಹಣ	—	204
6	ಸಹಕಾರ ಸಂಘಗಳಿಗೆ ಒದಗಿಸಿದ ಹಣ	—	50
7	ರಫ್ತು ವ್ಯಾಪಾರಕ್ಕೆ ಒದಗಿಸಿದ ಹಣ	—	31
8	ಬಂಡವಾಳ ಹೂಡುವಿಕೆ	306	1176
9	ನಿವ್ವಳ ಲಾಭ	7	4
	ಬ್ಯಾಂಕಿನ ಶಾಖೆಗಳು	22	109
	ಬ್ಯಾಂಕಿನಲ್ಲಿದ್ದ ಉದ್ಯೋಗಿಗಳು	582	1952

ಪಟ್ಟಿ 4. ಮೈಸೂರು ಸ್ಟೇಟ್ ಬ್ಯಾಂಕಿನ ಬೆಳವಣಿಗೆ

		1960ರ ಕೊನೆ ವೇಳೆಗೆ	1971ರ ಕೊನೆ ವೇಳೆಗೆ
		(ಲಕ್ಷ ರೂಪಾಯಿಗಳಲ್ಲಿ)	
1	ಷೇರುದಾರರಿಂದ ಸಂದಾಯ ಮಾಡಲ್ಪಟ್ಟ ಬಂಡವಾಳ ಮತ್ತು ಕಾಯ್ದಿಟ್ಟ ನಿಧಿ	153.40	201.96
2	ಠೇವಣಿಗಳು	1994.31	6311.83
3	ಬಿಲ್ಲುಗಳ ಆಧಾರದ ಮೇಲೆ ಕೊಡಲ್ಪಟ್ಟ ಸಾಲ	1243.54	4713.75
4	ಸಣ್ಣ ಕೈಗಾರಿಕೆಗಳಿಗೆ ಕೊಟ್ಟ ಹಣ	82.38	705.18
5	ವ್ಯವಸಾಯಕ್ಕೆ ಒದಗಿಸಿದ ಹಣ	—	757.80
6	ಸಹಕಾರ ಸಂಘಗಳಿಗೆ ಒದಗಿಸಿದ ಹಣ	17.93	83.86
7	ರಫ್ತು ವ್ಯಾಪಾರಕ್ಕೆ ಒದಗಿಸಿದ ಹಣ	—	133.30
8	ಬಂಡವಾಳ ಹೂಡುವಿಕೆ	862.83	1850.28
9	ನಿವ್ವಳ ಲಾಭ	28.05	13.29
	ಬ್ಯಾಂಕಿನ ಶಾಖೆಗಳು	52	166
	ಬ್ಯಾಂಕಿನಲ್ಲಿದ್ದ ಉದ್ಯೋಗಿಗಳು	1201	3378

ಪಟ್ಟಿ 5

ಪಾಟಿಯಾಲ ಸ್ಟೇಟ್ ಬ್ಯಾಂಕಿನ ಬೆಳವಣಿಗೆ

		1960ರ ಕೊನೆ ವೇಳೆಗೆ	1971ರ ಕೊನೆ ವೇಳೆಗೆ
			(ಲಕ್ಷ ರೂಪಾಯಿಗಳಲ್ಲಿ)
1	ಷೇರುದಾರರಿಂದ ಸಂದಾಯ ಮಾಡಲ್ಪಟ್ಟ ಬಂಡವಾಳ ಮತ್ತು ಕಾಯ್ದಿಟ್ಟ ನಿಧಿ	57.60	71.83
2	ಠೇವಣಿಗಳು	1070.27	7045.72
3	ಬಿಲ್ಲುಗಳ ಆಧಾರದ ಮೇಲೆ ಕೊಡಲ್ಪಟ್ಟ ಸಾಲ	355.21	4207.26
4	ಸಣ್ಣ ಕೈಗಾರಿಕೆಗಳಿಗೆ ಕೊಟ್ಟ ಹಣ	—	336.78
5	ವ್ಯವಸಾಯಕ್ಕೆ ಒದಗಿಸಿದ ಹಣ	—	198.81
6	ಸಹಕಾರ ಸಂಘಗಳಿಗೆ ಒದಗಿಸಿದ ಹಣ	25.07	926.51
7	ರಫ್ತು ವ್ಯಾಪಾರಕ್ಕೆ ಒದಗಿಸಿದ ಹಣ	—	80.03
8	ಬಂಡವಾಳ ಹೂಡುವಿಕೆ	670.10	2201.94
9	ನಿವ್ವಳ ಲಾಭ	2.91	3.45
	ಬ್ಯಾಂಕಿನ ಶಾಖೆಗಳು	48	138
	ಬ್ಯಾಂಕಿನಲ್ಲಿದ್ದ ಉದ್ಯೋಗಿಗಳು	847	2340

ಪಟ್ಟಿ 6

ಸೌರಾಷ್ಟ್ರ ಸ್ಟೇಟ್ ಬ್ಯಾಂಕಿನ ಬೆಳವಣಿಗೆ

		1960 ರ ಕೊನೆ ವೇಳೆಗೆ	1971 ರ ಕೊನೆ ವೇಳೆಗೆ
			(ಲಕ್ಷ ರೂಪಾಯಿಗಳಲ್ಲಿ)
1	ಷೇರುದಾರರಿಂದ ಸಂದಾಯ ಮಾಡಲ್ಪಟ್ಟ ಬಂಡವಾಳ ಮತ್ತು ಕಾಯ್ದಿಟ್ಟ ನಿಧಿ	151.50	178.57
2	ಠೇವಣಿಗಳು	1338.94	6084.80
3	ಬಿಲ್ಲುಗಳ ಆಧಾರದ ಮೇಲೆ ಕೊಡಲ್ಪಟ್ಟ ಸಾಲ	793.16	4262.60
4	ಸಣ್ಣ ಕೈಗಾರಿಕೆಗಳಿಗೆ ಕೊಟ್ಟ ಹಣ	6.68	777.46
5	ವ್ಯವಸಾಯಕ್ಕೆ ಒದಗಿಸಿದ ಹಣ	—	217.52
6	ಸಹಕಾರ ಸಂಘಗಳಿಗೆ ಒದಗಿಸಿದ ಹಣ	—	107.20
7	ರಫ್ತು ವ್ಯಾಪಾರಕ್ಕೆ ಒದಗಿಸಿದ ಹಣ	—	330.04
8	ಬಂಡವಾಳ ಹೂಡುವಿಕೆ	803.72	1811.43
9	ನಿವ್ವಳ ಲಾಭ	9.76	9.70
	ಬ್ಯಾಂಕಿನ ಶಾಖೆಗಳು	62	126
	ಬ್ಯಾಂಕಿನಲ್ಲಿದ್ದ ಉದ್ಯೋಗಿಗಳು	866	2940

ಪಟ್ಟಿ 7

ಟ್ರಾವಂಕೂರ್ ಸ್ಟೇಟ್ ಬ್ಯಾಂಕಿನ ಬೆಳವಣಿಗೆ

		1960 ರ ಕೊನೆ ವೇಳೆಗೆ	1971 ರ ಕೊನೆ ವೇಳೆಗೆ
			(ಲಕ್ಷ ರೂಪಾಯಿಗಳಲ್ಲಿ)
1	ಷೇರುದಾರರಿಂದ ಸಂದಾಯ ಮಾಡಲ್ಪಟ್ಟ ಬಂಡವಾಳ ಮತ್ತು ಕಾಯ್ದಿಟ್ಟ ನಿಧಿ	131	156
2	ಠೇವಣಿಗಳು	827	6449
3	ಬಿಲ್ಲುಗಳ ಆಧಾರದ ಮೇಲೆ ಕೊಡಲ್ಪಟ್ಟ ಸಾಲ	410	4142
4	ಸಣ್ಣ ಕೈಗಾರಿಕೆಗಳಿಗೆ ಕೊಟ್ಟ ಹಣ	1	620
5	ವ್ಯವಸಾಯಕ್ಕೆ ಒದಗಿಸಿದ ಹಣ	—	373
6	ಸಹಕಾರ ಸಂಘಗಳಿಗೆ ಒದಗಿಸಿದ ಹಣ	—	209
7	ರಫ್ತು ವ್ಯಾಪಾರಕ್ಕೆ ಒದಗಿಸಿದ ಹಣ	—	124
8	ಬಂಡವಾಳ ಹೂಡುವಿಕೆ	345	1729
9	ನಿವ್ವಳದ ಲಾಭ	13	8
	ಬ್ಯಾಂಕಿನ ಶಾಖೆಗಳು	28	218
	ಬ್ಯಾಂಕಿನಲ್ಲಿದ್ದ ಉದ್ಯೋಗಿಗಳು	431	3275

ಸೂಚನೆ : ಮೇಲ್ಕಂಡ ಎಲ್ಲಾ ಪಟ್ಟಿಗಳಿಗೆ ಆಧಾರವಾಗಿ ಆಗಿಂದಾಗ್ಗೆ ಹೊರಡಿಸಿದ ಇಂಡಿಯಾದ ಸ್ಟೇಟ್ ಬ್ಯಾಂಕಿನ ಪ್ರಕಟಣೆಗಳನ್ನು ಮತ್ತು ಕೆಲವು ಸಂದರ್ಭಗಳಲ್ಲಿ ಸ್ಟೇಟ್ ಬ್ಯಾಂಕಿನ ಉಪಾಂಗ ಬ್ಯಾಂಕುಗಳ ಪ್ರಕಟಣೆಗಳನ್ನು ಉಪಯೋಗಿಸಿಕೊಳ್ಳಲಾಗಿದೆ.

ಸ್ಟೇಟ್ ಬ್ಯಾಂಕಿನ ಉಪಾಂಗಗಳಿಗೆ ಹಲವು ರೀತಿಯಲ್ಲಿ ಇಂಡಿಯಾದ ಸ್ಟೇಟ್ ಬ್ಯಾಂಕ್ ನೆರವು ನೀಡುತ್ತದೆ. ಇಂಡಿಯಾದ ಸ್ಟೇಟ್ ಬ್ಯಾಂಕು ತನ್ನ ಕಾರ್ಯ ನಿರ್ವಹಿಸಲು ಕೆಲವು ವಿಶೇಷ ಇಲಾಖೆಗಳನ್ನು ಸ್ಥಾಪಿಸಿದೆ. ಅವು ಯಾವುವೆಂದರೆ: 1. ಆರ್ಥಿಕ ಸಂಶೋಧನಾ ಇಲಾಖೆ 2. ಅಂಕಿ ಅಂಶಗಳ ಸಂಗ್ರಹಣಾ ಇಲಾಖೆ 3. ಸಣ್ಣ ಕೈಗಾರಿಕಾ ಮತ್ತು ವಾಣಿಜ್ಯ ಸಂಸ್ಥೆಗಳ ಸಮಸ್ಯೆಗಳನ್ನು ಅಧ್ಯಯನ ಮಾಡುವ ಇಲಾಖೆ 4. ವ್ಯವಸಾಯ ಇಲಾಖೆ 5. ಕೆಲವು ವಿಶಿಷ್ಟ ಅಧ್ಯಯನ ಗಳನ್ನು ಕೈಗೊಳ್ಳುವ ಇಲಾಖೆ ಮತ್ತು 6. ಆಡಿಟ್ ಇಲಾಖೆ. ಈ ಇಲಾಖೆ ಗಳಲ್ಲಿ ತಜ್ಞರು ಕೆಲಸ ಮಾಡುತ್ತಾರೆ. ಅವರು ಬ್ಯಾಂಕುಗಳಿಗೆ ಅಗತ್ಯವಾದ ಮಾಹಿತಿಯನ್ನು ಸಂಗ್ರಹಿಸಿ ಒದಗಿಸುತ್ತಾರೆ. ಈ ಮಾಹಿತಿಯನ್ನು ಸ್ಟೇಟ್ ಬ್ಯಾಂಕಿನ ಎಲ್ಲಾ ಉಪಾಂಗಗಳು ಉಪಯೋಗಿಸಿಕೊಂಡು ತಮ್ಮ ಕಾರ್ಯದಲ್ಲಿ ಪ್ರಗತಿಯನ್ನು ಸಾಧಿಸಬಹುದು.

ದೇಶದ ವಿವಿಧ ಕಡೆ ಬ್ಯಾಂಕುಗಳನ್ನು ಸ್ಥಾಪಿಸುವುದರಲ್ಲಿ ಒಳ್ಳೆ ಹೊಂದಾಣಿಕೆ ಇದೆ. ಯಾವ ಪ್ರದೇಶದಲ್ಲಿ ಯಾವ ಬ್ಯಾಂಕಿನ ಶಾಖೆ ಸ್ಥಾಪಿಸಬೇಕೆಂದು ಆರ್ಥಿಕ ದೃಷ್ಟಿಯಿಂದ ತೀರ್ಮಾನಿಸಲ್ಪಡುತ್ತದೆ. ಇದರಿಂದ ಯಾವ ಬ್ಯಾಂಕೂ ಪೈಪೋಟಿ ಪರಿಣಾಮವಾಗಿ ನಷ್ಟ ಅನುಭವಿಸುವ ಸಂಭವವಿಲ್ಲ.

ವಿದೇಶಿ ವಿನಿಮಯ ವ್ಯವಹಾರದಲ್ಲಿ ಮೊದಲಿಂದಲೂ ಇಂಡಿಯಾದ ಸ್ಟೇಟ್ ಬ್ಯಾಂಕು ತೊಡಗಿತ್ತು. ಆದರೆ ಉಪಾಂಗ ಬ್ಯಾಂಕುಗಳಿಗೆ ಇಂತಹ ವ್ಯವಹಾರದಲ್ಲಿ ತೊಡಗಲು ಅವಕಾಶ ದೊರಕಲಿಲ್ಲ. ಈಗ ಎಲ್ಲಾ ಉಪಾಂಗ ಬ್ಯಾಂಕುಗಳಿಗೂ ಈ ವ್ಯವಹಾರದಲ್ಲಿ ಪಾಲ್ಗೊಳ್ಳಲು ಇಂಡಿಯಾದ ಸ್ಟೇಟ್ ಬ್ಯಾಂಕ್ ಅವಕಾಶ ಮಾಡಿ ಕೊಟ್ಟಿದೆ. ಉಪಾಂಗ ಬ್ಯಾಂಕುಗಳು ಸ್ಟೇಟ್ ಬ್ಯಾಂಕಿನ ಆಡಳಿತಕ್ಕೆ ಒಳಪಟ್ಟಿದ್ದರೂ, ತಮ್ಮ ಬಂಡವಾಳ ಹೂಡುವಿಕೆಯಲ್ಲಿ ಮತ್ತು ಗಿರಾಕಿಗಳಿಗೆ ಸಾಲದ ಸೌಲಭ್ಯ ಒದಗಿಸುವಲ್ಲಿ ಬಹುಮಟ್ಟಿನ ಸ್ವಾತಂತ್ರ್ಯವನ್ನು ಉಳಿಸಿಕೊಂಡಿವೆ. ಸ್ಟೇಟ್ ಬ್ಯಾಂಕಿನ ಆಡಳಿತಕ್ಕೆ ಒಳಪಡುವುದಕ್ಕೆ ಮುನ್ನ ಉಪಾಂಗ ಬ್ಯಾಂಕುಗಳು ಸಣ್ಣ ಪ್ರಮಾಣದ ಬ್ಯಾಂಕುಗಳಾಗಿದ್ದವು. ಅವು ಒಂದು ನಿರ್ದಿಷ್ಟ ರಾಜ್ಯದೊಳಗೆ ಮಾತ್ರ ತಮ್ಮ ವ್ಯವಹಾರಗಳನ್ನು ನಡೆಸುತ್ತಿದ್ದವು. ಈಗ ಇವು ದೊಡ್ಡ ಬ್ಯಾಂಕುಗಳಾಗಿ ಬೆಳೆದಿವೆ. ಇಂಡಿಯಾದ ಎಲ್ಲಾ ಕಡೆಯೂ ತಮ್ಮ ವ್ಯವಹಾರ ನಡೆಸಲು ಅನುಕೂಲ ಪಡೆದಿವೆ.

ಮೇಲ್ಕಂಡ ಪಟ್ಟಿಗಳಲ್ಲಿ ಕಂಡುಬರುವಂತೆ ಹತ್ತು ವರ್ಷಗಳ ಅವಧಿಯಲ್ಲಿ ಈ ಬ್ಯಾಂಕುಗಳ ವ್ಯವಹಾರ ಬಹಳವಾಗಿ ಬೆಳೆದಿದೆ. ಈ ಬ್ಯಾಂಕುಗಳು ಪಡೆದಿರುವ ಠೇವಣಿ ಹಣ 42 ಕೋಟಿ ರೂಪಾಯಿಗಳಿಂದ 84 ಕೋಟಿ ರೂಪಾಯಿಗಳವರೆಗೆ ಇದೆ. 1969ರಲ್ಲಿ ರಾಷ್ಟ್ರೀಕರಿಸಲ್ಪಟ್ಟ ಹದಿನಾಲ್ಕು ಬ್ಯಾಂಕುಗಳಿಗಿಂತ ಈ ಬ್ಯಾಂಕುಗಳು ಯಾವ ರೀತಿಯಲ್ಲೂ ದಕ್ಷತೆಯಲ್ಲಿ ಕಡಿಮೆ ಇಲ್ಲ. ರಾಷ್ಟ್ರೀಕರಿಸಲ್ಪಟ್ಟ ಹದಿನಾಲ್ಕು ಬ್ಯಾಂಕುಗಳಿಗೆ ಸ್ವತಂತ್ರ ಆಡಳಿತ ವ್ಯವಸ್ಥೆಯನ್ನು ಕೊಟ್ಟಿರುವಾಗ ಸ್ಟೇಟ್ ಬ್ಯಾಂಕಿನ ಉಪಾಂಗಗಳಿಗೂ ಆಡಳಿತ ಸ್ವಾತಂತ್ರ್ಯ ಕೊಡುವುದರಲ್ಲಿ ಯಾವ ತೊಂದರೆಯೂ ಇಲ್ಲ. ಬ್ಯಾಂಕಿಂಗ್ ಕಮಿಷನ್ ಸಲಹೆ ಪ್ರಕಾರ ಈ ಬ್ಯಾಂಕುಗಳನ್ನು ಒಟ್ಟುಗೂಡಿಸಿ ಎರಡು ಅಥವ ಮೂರು ಬ್ಯಾಂಕುಗಳನ್ನಾಗಿ ಮಾರ್ಪಡಿಸಿದರೆ, ಅಧಿಕಾರ ಕೇಂದ್ರೀಕೃತವಾಗಿ ಗಿರಾಕಿಗಳಿಗೆ ತೊಂದರೆ ಉದ್ಭವಿಸುತ್ತದೆ. ಬಹಳ ವರ್ಷಗಳಿಂದ ಈ ಬ್ಯಾಂಕುಗಳು ತಮ್ಮ ಸೇವೆ ಮೂಲಕ ತಮ್ಮ ಪ್ರದೇಶಗಳಲ್ಲಿ ಜನಪ್ರಿಯತೆಯನ್ನು ಗಳಿಸಿವೆ. ಈ ಬ್ಯಾಂಕುಗಳ ಅಧಿಕಾರ ವರ್ಗದವರು ಸ್ಥಳೀಯ ಸಮಸ್ಯೆಗಳನ್ನು ಅರಿತುಕೊಂಡು ಕೂಡಲೇ ನಿರ್ಧಾರ ಕೈಗೊಳ್ಳುವ ಸಾಮರ್ಥ್ಯವನ್ನು ಇದುವರೆಗೆ ತೋರಿಸಿರುವುದರಿಂದ ಇವು ಗಿರಾಕಿಗಳ ಪ್ರೋತ್ಸಾಹವನ್ನು ಗಳಿಸಿವೆ. ಈಗಿರುವ ಅಧಿಕಾರವನ್ನು ಬ್ಯಾಂಕುಗಳು ಕಳೆದುಕೊಂಡು ಪ್ರತಿಯೊಂದಕ್ಕೂ ಕೇಂದ್ರ ಕಚೇರಿಯ ಆಜ್ಞೆಗೆ ಕಾಯುವಂತಾದರೆ ಬ್ಯಾಂಕುಗಳು ಜನಪ್ರಿಯತೆಯನ್ನು ಕಳೆದು

ಕೊಳ್ಳುತ್ತವೆ. ಈ ಬ್ಯಾಂಕುಗಳು ವಿಲೀನಗೊಂಡು ಒಂದು ದೊಡ್ಡ ಸಂಸ್ಥೆಯ ಅಧೀನಕ್ಕೆ ಒಳಪಟ್ಟರೆ ಬ್ಯಾಂಕುಗಳ ಕರ್ತವ್ಯ ನಿರ್ವಹಣೆಯಲ್ಲಿ ಅನೇಕ ಅಡಚಣೆಗಳುಂಟಾಗಿ, ಗಿರಾಕಿಗಳಿಗೆ ತೊಂದರೆಯುಂಟಾಗುತ್ತದೆ. ಆದುದರಿಂದ ಈ ಬ್ಯಾಂಕುಗಳನ್ನು ವಿಲೀನಗೊಳಿಸುವುದರ ಬದಲು, ಇವನ್ನು ಸ್ವತಂತ್ರ ಬ್ಯಾಂಕಿಂಗ್ ಸಂಸ್ಥೆಗಳಾಗಿ ಪರಿವರ್ತಿಸಿದರೆ ಇಂಡಿಯಾದ ವಿವಿಧ ಭಾಗಗಳಲ್ಲಿ ತಮ್ಮ ಪಾತ್ರ ನಿರ್ವಹಿಸಿ ದೇಶದ ಆರ್ಥಿಕಾಭಿವೃದ್ಧಿಗೆ ಮತ್ತಷ್ಟು ನೆರವನ್ನು ಕೊಡುತ್ತವೆ ಎನ್ನಬಹುದು.

ಕರ್ನಾಟಕ ಇತಿಹಾಸ ಮತ್ತು ಕನ್ನಡ ಸಾಹಿತ್ಯ*

ಎಂ. ಚಿದಾನಂದಮೂರ್ತಿ

ನಮ್ಮಲ್ಲಿ ಎರಡು ವರ್ಗದ ಜನರಿದ್ದಾರೆ: ಒಂದು ವರ್ಗದವರು – ಅವರನ್ನು ಸಾಹಿತ್ಯದ ವಿದ್ಯಾರ್ಥಿಗಳೆಂದು, ಸಾಹಿತ್ಯಜ್ಞರೆಂದು ಕರೆಯೋಣ. ಇವರಿಗೆ ಯಾವುದೇ ಕೃತಿಯಲ್ಲಿ ಸಾಹಿತ್ಯಾಂಶ ಇದೆಯೋ ಇಲ್ಲವೋ ಎನ್ನುವುದು ಮಾತ್ರ ಮುಖ್ಯ. ಒಂದು ಕೃತಿಯಲ್ಲಿ ಇತಿಹಾಸವಾಗಲಿ, ಮತವಾಗಲಿ 'ಕಾವ್ಯ'ವಾಗಿ ಬಂದಿದೆಯೋ ಇಲ್ಲವೋ ಎಂಬುದರ ಮೇಲೆ ಆ ಕೃತಿಯ ಬೆಲೆಯನ್ನು ನಿರ್ಣಯಿಸುತ್ತಾರೆ. ಇನ್ನೊಂದು ವರ್ಗ – ಅವರನ್ನು ಇತಿಹಾಸದ ವಿದ್ಯಾರ್ಥಿಗಳೆಂದು ಇತಿಹಾಸಜ್ಞರೆಂದು ಕರೆಯೋಣ. ಇವರದು ಸಾಹಿತ್ಯಜ್ಞರಿಗಿಂತ ಬಹು ಭಿನ್ನವಾದ ದೃಷ್ಟಿ. ಇವರಿಗೆ ಪ್ರಾಚೀನ ಗ್ರಂಥರಾಶಿಯಲ್ಲಿ ಒಂದು ಕೃತಿಯ ಕಾವ್ಯಾಂಶಕ್ಕಿಂತ ಇತಿಹಾಸಾಂಶ ಮುಖ್ಯ. ಇತಿಹಾಸವನ್ನು ನಿಖರವಾಗಿ, ಯಾವುದೇ ಕಲ್ಪನೆಯನ್ನು ಬೆರಸದೆ ನಿರೂಪಿಸಿದಷ್ಟು ಇವರ ದೃಷ್ಟಿಯಲ್ಲಿ ಆ ಕೃತಿಯ ಬೆಲೆ ಹೆಚ್ಚು. ಇವರ ದೃಷ್ಟಿಯಲ್ಲಿ ಇತಿಹಾಸವೆಂದರೆ ಬಹುಮಟ್ಟಿಗೆ ರಾಜರ ಚರಿತ್ರೆ. ಇವರಿಗೆ ಕಂಠೀರವ ನರಸರಾಜವಿಜಯ, ಕೆಳದಿ ನೃಪವಿಜಯಗಳಂತಹ ಕೃತಿಗಳ ಪರಿಚಯ ಉಂಟು. ಅವುಗಳ ಹೆಸರನ್ನು ಹೇಳುತ್ತಾರೆ: ಅವುಗಳಲ್ಲಿ ನಿಜವಾದ ಆಸಕ್ತಿಯನ್ನು ತಾಳಿ ಕೆಲವರು ಕೃತಿಗಳನ್ನೇ ಓದಿರುವುದೂ ಉಂಟು. ಆದರೆ ಪಂಪಭಾರತ, ಶಿವಶರಣರ ವಚನಗಳು ಮುಂತಾದುವನ್ನು ಪ್ರಾಯಶಃ ಓದುವುದಿಲ್ಲ. ಸಾಹಿತ್ಯಜ್ಞರು ಮೇಲೆ ಹೇಳಿದ ವಿಜಯಗಳನ್ನು ಅಲಕ್ಷಿಸುತ್ತಾರೆ: ಏಕೆಂದರೆ ಅವುಗಳಲ್ಲಿ 'ಇತಿಹಾಸ' ಇರಬಹುದು ; ಅವರಿಗೆ ಬೇಕಾದ 'ಕಾವ್ಯ'ದ ರಸ ಇರುವುದಿಲ್ಲ (ಈ ಸಾಹಿತ್ಯಜ್ಞರಲ್ಲೂ ಕೆಲವರು ಗಟ್ಟಿ ಮನಸ್ಸು ಮಾಡಿ ಪಂಪನನ್ನೋ ವಚನಗಳನ್ನೋ ಪೂರ್ತಿಯಾಗಿ ಓದಿರುವವರೂ ಇಲ್ಲದಿಲ್ಲ).

ಹೀಗೆ ಎರಡು ವರ್ಗದ ಜನರನ್ನು ಕಟ್ಟುನಿಟ್ಟಾಗಿ ಬೇರ್ಪಡಿಸಿ ಪ್ರಸ್ತಾಪಿಸುವುದು ಸ್ವಲ್ಪ ಕೃತಕವೆಂದು ಒಪ್ಪಿಕೊಳ್ಳಲೇಬೇಕು. ಏಕೆಂದರೆ ಆ ಎರಡು ವರ್ಗದ ಜನರ ಮಧ್ಯೆ ಸಮಾನಶೀಲೆಯ ಜನರೂ ಇದ್ದಾರೆ. ಆದ್ದರಿಂದ ಮೇಲಿನ ಎರಡು

* 15-9-1973ರಂದು ಬೆಂಗಳೂರು ಮಿಥಿಕ್ ಸೊಸೈಟಿಯ ವಜ್ರಮಹೋತ್ಸವ ಸಂದರ್ಭದಲ್ಲಿ ನಡೆದ "ಕರ್ನಾಟಕ ಜೀವನ ಪರಂಪರೆ ಮತ್ತು ಸಾಹಿತ್ಯ" ವಿಚಾರಗೋಷ್ಠಿಯ ಮುಂದೆ ಸಾದರಪಡಿಸಿದ ಪ್ರಬಂಧ.

ವರ್ಗಗಳು ಎರಡು ಪ್ರಧಾನ ಪ್ರವೃತ್ತಿಗಳನ್ನು ಸೂಚಿಸುತ್ತವೆಯೆಂದು ಭಾವಿಸುವುದರಲ್ಲಿ ಯಾವ ತಪ್ಪೂ ಕಾಣಿಸುವುದಿಲ್ಲ.

ಈ ಎರಡೂ ದೃಷ್ಟಿಗಳನ್ನು ಟೀಕಿಸುವುದರಲ್ಲಿ ಯಾವ ಅರ್ಥವೂ ಇಲ್ಲ. ಈ ಎರಡು ದೃಷ್ಟಿಗಳೂ ಆಯಾ ಕ್ಷೇತ್ರದಲ್ಲಿ ಸರಿಯಾಗಿಯೇ ಇವೆ. ಅವರವರು ತಮಗೆ ಬೇಕಾದ್ದನ್ನು ಆಯ್ದುಕೊಳ್ಳುತ್ತಾರೆ. ತಮಗೆ ಬೇಕಾದ್ದು ದೊರಕಿದಾಗ ಸಂತೋಷಿಸುತ್ತಾರೆ, ಮೆಚ್ಚುತ್ತಾರೆ. ತಾವು ನಿರೀಕ್ಷಿಸಿದ್ದು ಇಲ್ಲದೆ ಹೋದಾಗ ತೆಗಳುತ್ತಾರೆ ಅಥವಾ ಅಲಕ್ಷಿಸುತ್ತಾರೆ. ಯಾವ ದೃಷ್ಟಿಯೂ ಕೊನೆಯ ಮಾತಲ್ಲ ಎಂಬುದು ಇದರಿಂದಲೇ ಸ್ಪಷ್ಟವಾಗುತ್ತದೆ.

ಆದರೆ, ಇವೆರಡು ಭಿನ್ನದೃಷ್ಟಿಗಳನ್ನು ಬೇರೆ ಬೇರೆಯಾಗಿಯೇ ಉಳಿಸುವುದು ಮತ್ತು ಬೇರೆ ಎಂದೇ ಭಾವಿಸುವುದು ಅನಿವಾರ್ಯವೇ ಎಂಬ ಪ್ರಶ್ನೆ ಏಳುತ್ತದೆ. ಒಂದು ದೃಷ್ಟಿಯ ಜನ ಇನ್ನೊಂದು ದೃಷ್ಟಿಯನ್ನು ಅಲಕ್ಷಿಸುವುದರಿಂದ ಏನಾದರೂ ಸಾಧಿತವಾದಂತಾಗುತ್ತದೆಯೇ ಅಥವಾ ಲಾಭವಿದೆಯೇ ಎಂಬುದೂ ಪರಿಶೀಲನಾರ್ಹವಾದುದು.

ಮೊದಲು ನಾನು ಇತಿಹಾಸದಿಂದ ಆರಂಭಿಸುತ್ತೇನೆ. 'ಇತಿಹಾಸ'ವೆಂದರೆ–ಬಹಳ ಜನ ತಪ್ಪು ತಿಳಿದಿರುವಂತೆ–ಒಂದು ದೇಶವನ್ನು ಕಾಲದಿಂದ ಕಾಲಕ್ಕೆ ಆಳಿದ ರಾಜರ ಪಟ್ಟಿಯಲ್ಲ. ನಿಜವಾದ ಇತಿಹಾಸ ಒಂದು ಸಮಗ್ರ ಜನತೆಯ, ಜೀವನದ ಸಂಸ್ಕೃತಿಯ ಚರಿತ್ರೆ ಆಗಿರುತ್ತದೆ. ಇಂದು ರಾಜರು ಹೋಗಿದ್ದಾರೆ–ಉಳಿದ ಜನಸಮೂಹದಲ್ಲಿ ಮನಸ್ಸಿಲ್ಲದ ಮನಸ್ಸಿನಿಂದ ಅನಿವಾರ್ಯವಾಗಿ ಬೆರೆತುಹೋಗುತ್ತಿದ್ದಾರೆ. ಆದರೆ ಹಿಂದಿನ ಕಾಲದಲ್ಲಿ ಆಯಾ ದೇಶವನ್ನು ರಾಜರು ಪ್ರತಿನಿಧಿಸುತ್ತಿದ್ದರು. ಅವರು ದೇಶವನ್ನು ಆಳುತ್ತಿದ್ದರು, ನಿಯಂತ್ರಿಸುತ್ತಿದ್ದರು. ಅವರ ವಿವೇಕ–ಅವಿವೇಕದ ಮೇಲೆ ರಾಜ್ಯದ ಜನತೆಯ ಹಿತಾಹಿತಗಳು ನಿಂತಿದ್ದುವು. ಆದ್ದರಿಂದ ನಮ್ಮ ಸಾಂಸ್ಕೃತಿಕ ಪರಂಪರೆಯ ಯಾವುದೇ ಅಂಶವನ್ನು ಹಿಡಿದು ಪರಿಶೀಲಿಸಿದರೂ ಅಲ್ಲಿ ರಾಜರ ಹೆಸರುಗಳು ಇಣುಕಿಹಾಕುತ್ತವೆ. ಮತ, ಸಾಹಿತ್ಯ, ಕಲೆಗಳು, ಅರ್ಥವ್ಯವಸ್ಥೆ, ವಿದ್ಯಾಭ್ಯಾಸ, ತಾಂತ್ರಿಕ ಪರಿಣತಿ ಇಲ್ಲೆಲ್ಲ ರಾಜರ ಹೆಸರು ಮಾತ್ರ ಒಂದಲ್ಲ ಒಂದು ರೀತಿಯಲ್ಲಿ ಮುಖ್ಯವೇ ಆಗಿದೆ. ಹೀಗಿರುವಾಗ ನಮ್ಮ ದೇಶದ ಇತಿಹಾಸದಲ್ಲಿ ರಾಜರ ಹೆಸರುಗಳನ್ನು ಕೈಬಿಡುವುದು ಅಸಾಧ್ಯದ ಮಾತು. ಆದರೆ, ರಾಜರು ಒಂದು ಜೀವನ ಪ್ರವಾಹದ ದೊಡ್ಡ ಭಾಗ, ಗಮನಾರ್ಹ ಭಾಗ ಎಂದು ಭಾವಿಸಿ ಒಂದು ದೇಶದ ಇತಿಹಾಸವನ್ನು ಬರೆಯಬೇಕಾಗುತ್ತದೆ. ರಾಜರೇ ದೇಶವೆಂದು ಹೇಳುವುದು ಅಥವಾ ನಂಬುವುದು ದಡ್ಡತನ. ಆಗಲೇ ಹೇಳಿದಂತೆ, ದೇಶದ ಇತಿಹಾಸ ಅಲ್ಲಿಯ ಜನತೆಯ ಇತಿಹಾಸವೇ ಆಗಿದೆ.

ನಮ್ಮ ಇತಿಹಾಸದ ಗ್ರಂಥಗಳನ್ನು ನೋಡಿದರೆ ಅಲ್ಲಿ ಮುಖ್ಯವಾಗಿ ರಾಜರ ವಿಷಯವೇ ಪ್ರಧಾನವಾಗಿರುತ್ತದೆ. ಎಲ್ಲೋ ಕೊನೆಯಲ್ಲಿ, ಆಯಾ ರಾಜವಂಶದ ಕಾಲದ ಧಾರ್ಮಿಕ, ಆರ್ಥಿಕ, ಆಡಳಿತ ಪರಿಸ್ಥಿತಿಯ ಬಗ್ಗೆ ಹರುಕು ಮುರುಕು ಚರ್ಚೆಯಿರುತ್ತದೆ. ಇದಕ್ಕೆ ಕಾರಣವೇನೆಂದು ಕೇಳಿದರೆ–ಶಾಸನಗಳಲ್ಲಿ ನಮಗೆ ಸಾಕಷ್ಟು ಸಾಮಗ್ರಿ ದೊರಕುವುದಿಲ್ಲ ಎಂದು ಅವರು ಉತ್ತರ ಹೇಳಿ ತಪ್ಪಿಸಿಕೊಳ್ಳಬಹುದು. ಶಾಸನಗಳಲ್ಲಿ ರಾಜಕೀಯೇತರ ಸಾಮಗ್ರಿ ದೊರಕುವುದಿಲ್ಲ ಎಂಬುದು ಮೊದಲನೆಯ ತಪ್ಪು. ನಮ್ಮಲ್ಲಿ ಅನೇಕರು ಶಾಸನಗಳ ಇಂಗ್ಲೀಷ್ ಅನುವಾದಗಳನ್ನು ಅಥವಾ ಸಾರಾಂಶಗಳನ್ನು ನೋಡಿಕೊಂಡು ಸಂಶೋಧನ ಮಾಡುವ ಕೆಟ್ಟ ಚಾಳಿಯನ್ನು ಅಭ್ಯಾಸ ಮಾಡಿಕೊಂಡಿದ್ದಾರೆ. ಶಾಸನಗಳು ಸಾಮಾಜಿಕ ಅಧ್ಯಯನಕ್ಕೆ ಎಂತಹ ಅಮೂಲ್ಯ ಗಣಿ, ಅಕ್ಷಯ ಪಾತ್ರೆ ಎಂಬುದನ್ನು ಅವುಗಳನ್ನು ಮೂಲದಲ್ಲೇ ಎಚ್ಚರಿಕೆಯಿಂದ ಅಭ್ಯಾಸ ಮಾಡುವವರಿಗೆ ಚನ್ನಾಗಿ ಗೊತ್ತಿದೆ. ಜೊತೆಗೆ, ಇತಿಹಾಸಜ್ಞರು ಸಾಹಿತ್ಯಿಕ ಆಕರಗಳನ್ನು ಸಾಮಾನ್ಯವಾಗಿ ಅಲಕ್ಷಿಸುತ್ತಾರೆ–ಅಲ್ಲಿ ಕೇವಲ ಪೌರಾಣಿಕ, ಕಲ್ಪಿತ, ಉತ್ಪ್ರೇಕ್ಷಿತ ಸಂಗತಿಗಳಿರುತ್ತವೆಯೆಂದು. ಇದರಿಂದ ಇತಿಹಾಸಜ್ಞರು ಏನು ನಷ್ಟವನ್ನು ಅನುಭವಿಸಿದ್ದಾರೆಂಬುದನ್ನು ಮುಂದೆ ಎರಡು ಉದಾಹರಣೆಗಳಿಂದ ಸ್ಪಷ್ಟಪಡಿಸುತ್ತೇನೆ. ಇತಿಹಾಸಜ್ಞರು ರಾಜರ ಚರಿತ್ರೆ ಬರೆಯುವಲ್ಲಿ ತೋರುವ ಶ್ರದ್ಧೆಯ ಹತ್ತರಲ್ಲೊಂದು ಭಾಗವನ್ನೂ ಆ ಕಾಲದ ಸಾಮಾಜಿಕ ಸ್ಥಿತಿಗತಿಗಳ ಬಗ್ಗೆ ತೋರದೆ ಇರುವುದು ಅತ್ಯಂತ ದುರದೃಷ್ಟ ಸಂಗತಿ.

ಇನ್ನು ಸಾಹಿತ್ಯದ ಕಡೆ ತಿರುಗೋಣ. ಸಾಹಿತ್ಯ ಒಂದು ಸಮಾಜದ ಯಾವುದೋ ಆವಶ್ಯಕತೆಯ ಪೂರೈಕೆಯಾಗಿ ಬರುತ್ತದೆ. ಜನಕ್ಕೆ ಅದು ಸಂತೋಷವನ್ನು ಕೊಡುವುದರ ಮೂಲಕ ಅವರಲ್ಲಿ ಒಳಿತು–ಕೆಡುಕುಗಳ, ನೀತಿ-ಅನೀತಿಗಳ ಪ್ರಜ್ಞೆಯನ್ನು ಮೂಡಿಸುತ್ತದೆ. ಹೀಗೆ ಅದರ ಮುಖ್ಯ ಕ್ರಿಯೆ ಮನಸ್ಸಿಗೆ ಆಹಾರವನ್ನು ಒದಗಿಸುವುದು. ಸಾಹಿತ್ಯವನ್ನು ಸೃಷ್ಟಿಸುವ ವ್ಯಕ್ತಿ ಆ ಕಾಲದ ಸಮಾಜದ ಅಂಗವೇ ತಾನೆ ? ಅವನು ಸೃಷ್ಟಿಸುವ ಸಾಹಿತ್ಯ ಅವನ ಕಾಲದ, ವರ್ಗದ ಮುದ್ರೆಯನ್ನು ಹೊತ್ತು ನಿಂತಿರುತ್ತದೆ. ಅದು ಒಂದು ದೇಶದ ಅಂತರಂಗದ ಚರಿತ್ರೆಯೇ ಆಗಿರುತ್ತದೆ ಎಂಬ ಮಾತೂ ಉಂಟು. ಆದ್ದರಿಂದ ಸಾಹಿತ್ಯವನ್ನು ಅಭ್ಯಾಸಿಸುವವರು, ಅದರ ಬಗ್ಗೆ ವಿಚಾರ ಮಾಡುವವರು ಆ ಕಾಲದ ಸಾಮಾಜಿಕ ಚೌಕಟ್ಟನ್ನು ಅಲಕ್ಷಿಸುವಂತಿಲ್ಲ. ಆದರೆ ನಮ್ಮಲ್ಲಿ ಬರುವ ಕೆಲವು ವಿಮರ್ಶೆ ಒಂದು ಕೃತಿಯನ್ನು ಮಾತ್ರ ಲಕ್ಷ್ಯದಲ್ಲಿಟ್ಟುಕೊಂಡಿರುತ್ತದೆ; ಇತಿಹಾಸದ ಹಿನ್ನೆಲೆಯನ್ನು ಬಹುತೇಕ ಅಲಕ್ಷಿಸಿರುತ್ತದೆ.

ಇತಿಹಾಸಜ್ಞರಿಗೆ ಸಾಹಿತ್ಯದ ದೃಷ್ಟಿ, ಸಾಹಿತ್ಯಜ್ಞರಿಗೆ ಇತಿಹಾಸ ಪ್ರಜ್ಞೆ ಇರುವುದು ಅಗತ್ಯವೆನ್ನುವ ವಾದಕ್ಕೆ ವೇದಿಕೆಯನ್ನು ಸಿದ್ಧಪಡಿಸುತ್ತಿದ್ದೇನೆ ಎಂಬುದು ಈಗಾಗಲೇ ಮನವರಿಕೆಯಾಗಿರಬೇಕು.

ಇತಿಹಾಸವೆಂದರೆ ಮನುಷ್ಯನ ಸಾಧನೆಗಳ ಒಂದು ದಾಖಲೆ ತಾನೇ ? ಇತಿಹಾಸದಲ್ಲಿ ಸಂಗತಿಗಳಿರುತ್ತವೆ–ಅವುಗಳನ್ನು ಕಾಲಾನುಕ್ರಮದಲ್ಲಿ ನಿರೂಪಿಸಿರುವುದು ಮಾತ್ರವಲ್ಲದೆ ಅವುಗಳನ್ನು ವ್ಯಾಖ್ಯಾನಿಸಿರುತ್ತದೆ. "ಸಾಧನೆ"ಗಳನ್ನು ಕುರಿತು ಮಾತನಾಡುವಾಗ ರಾಜರ ಯುದ್ಧಗಳನ್ನು ಅಥವಾ ಆರ್ಥಿಕ ವ್ಯವಸ್ಥೆ ಮುಂತಾದ ಕೆಲವು ಅಂಶಗಳನ್ನು ಮಾತ್ರ ಲೆಕ್ಕಕ್ಕೆ ತೆಗೆದುಕೊಂಡರೆ ಆಗ ಆ ಕಾಲವನ್ನು, ಅಲ್ಲಿ ಬದುಕಿದ ಜನತೆಯನ್ನು ಸಮಗ್ರವಾಗಿ ನೋಡಿದಂತಾಗುವುದಿಲ್ಲ. ಪ್ರಾಚೀನ ಕಾಲದಲ್ಲಿ "ಶುದ್ಧ ಸಾಹಿತ್ಯ" ಎಂಬುದು ಪ್ರಾಯಶಃ ಇರಲಿಲ್ಲ. ಜನತೆಯ ಮತೀಯ ಶ್ರದ್ಧೆ ವ್ಯಕ್ತವಾಗುತ್ತಿದ್ದುದು ಅದರ ಸಾಹಿತ್ಯದಲ್ಲಿ. ಯಾವ ಮತದ ಕವಿಯೇ ಆಗಲಿ, ಅವನು ಎಷ್ಟೇ ಸುಂದರ ಕಾವ್ಯವನ್ನು ರಚಿಸಿದರೂ ಅದರಲ್ಲಿ ಅವನ ಮತೀಯ ಶ್ರದ್ಧೆ ಬಹು ಸ್ಪಷ್ಟವಾಗಿ ವ್ಯಕ್ತವಾಗಿರುತ್ತದೆ. ತನ್ನ ಮತದ ಆವರಣದಿಂದ ಒಬ್ಬ ಕವಿ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ ಎನ್ನುವಷ್ಟರಮಟ್ಟಿಗೆ ಮತ ಜೀವನದಲ್ಲಿ ಹಾಸು ಹೊಕ್ಕಾಗಿದ್ದಿತು. ಪ್ರಾಚೀನರಿಗೆ ಮತ ಮನುಷ್ಯನ ಅತ್ಯಂತಶ್ರೇಷ್ಠ ಆದರ್ಶಗಳ ಗಣಿ. ಮತ ತೋರುವ ಮಾರ್ಗದಲ್ಲಿ ನಡೆದರೆ ಮಾತ್ರ ವ್ಯಕ್ತಿಗೆ ಮುಕ್ತಿ ಎಂಬ ನಂಬಿಕೆಯಿದ್ದಿತು. ಆ ಕಾಲದ ಜನ ಪರಮವೆಂದು ನಂಬಿದ್ದ ಮೌಲ್ಯಗಳು ಕಾವ್ಯಗಳಲ್ಲಿ ಬರುವ ಮತೀಯ ಕತೆ ಅಥವಾ ಕತೆಗಳ ಮೂಲಕ ವ್ಯಕ್ತವಾಗುತ್ತಿದ್ದುವು. ಇತಿಹಾಸವೆಂದರೆ ಜನ ನಂಬಿದ್ದು, ಆಚರಿಸಿದ್ದು, ಸಾಧಿಸಿದ್ದು ಎಂದು ನಾವು ಭಾವಿಸುವುದಾದರೆ, ಅವರ ಅತ್ಯಂತ ಗಹನ ಆದರ್ಶಗಳ ಗಣಿಯಾದ ಮತವನ್ನು ನಾವು ತಿಳಿಯಬೇಕಲ್ಲವೇ ? ಮತವನ್ನು ಅರ್ಥಮಾಡಿಕೊಳ್ಳಬೇಕಾದರೆ ಸಾಹಿತ್ಯದ ಅಧ್ಯಯನ ಅಗತ್ಯವಲ್ಲವೇ ?

ಇದಕ್ಕೆ ಒಂದು ಚಿಕ್ಕ ಉದಾಹರಣೆಯನ್ನು ಆರಿಸಿಕೊಳ್ಳುತ್ತೇನೆ. ಜೈನಮತ ಒಂದು ಕಾಲಕ್ಕೆ ಕರ್ನಾಟಕದಲ್ಲಿ ಪ್ರಬಲವಾಗಿದ್ದಿತು. ಕರ್ನಾಟಕದ ಇತಿಹಾಸವನ್ನು ಬರೆಯುವವರು ಆ ಮತ ಕರ್ನಾಟಕದ ಸಾಂಸ್ಕೃತಿಕ ಶ್ರೀಮಂತಿಕೆಗೆ ನೀಡಿದ ಅಪೂರ್ವ ಕಾಣಿಕೆಗಳನ್ನು ಮರೆಯಲು ಸಾಧ್ಯವಿಲ್ಲ. ಜೈನಮತವನ್ನು ತಿಳಿಯಲು ಕನ್ನಡದಲ್ಲಿ ಮುಖ್ಯವಾಗಿ ಎರಡು ಬಗೆಯ ಸಾಮಗ್ರಿಗಳು ದೊರಕುತ್ತವೆ : ಶಾಸನಗಳು ಮತ್ತು ಸಾಹಿತ್ಯ. ಶಾಸನಗಳಲ್ಲಿ ಕಾವ್ಯಗಳಿಗಿಂತ ಹೆಚ್ಚು ನಿರ್ದಿಷ್ಟ ಸಂಗತಿಗಳಿರುತ್ತವೆ (Facts). ಉದಾಹರಣೆಗೆ, ಬಸದಿಗಳು, ಯಾರು ಯಾವಾಗ ಕಟ್ಟಿಸಿದರು, ಜೈನ ಮುನಿಗಳು, ಅವರ ಗುರುಪರಂಪರೆ, ವಿದ್ವತ್ತು, ಬಸದಿಗಳಿಗೆ ದತ್ತಿಗಳು ಇತ್ಯಾದಿ. ಕಾವ್ಯಗಳಲ್ಲಿ ಇಂಥವು ದೊರಕುವುದು ಕಡಮೆ. ಆದ್ದರಿಂದ ಇತಿಹಾಸಜ್ಞರಿಗೆ

ಶಾಸನಗಳು ಮುಖ್ಯವಾಗಿರುತ್ತವೆ. ಆದರೆ, 'ಕಾವ್ಯಗಳಲ್ಲಿ ಮತಕ್ಕೆ ಸಂಬಂಧಿಸಿದ ಐತಿಹಾಸಿಕ ಗಟ್ಟಿ ಸಂಗತಿಗಳು ಹೆಚ್ಚು ಇಲ್ಲದಿರಬಹುದು, ಆದರೆ ಜೀವಂತ ಅನುಭವವಿರುತ್ತದೆ. ಪಂಪ, ರನ್ನರಂತಹ ಕವಿಗಳು ಜೈನಮತೀಯರಾಗಿ ಎಂತಹ ತೀವ್ರ ಅನುಭವಗಳನ್ನು ಪಡೆದರೆಂಬುದಾಗಲಿ, ಅವರ ಅತ್ಯುಚ್ಚ ಆದರ್ಶ ಎಂತಹುದಿತ್ತು ಎಂಬುದಾಗಲಿ ತಿಳಿಯುವುದು ಕಾವ್ಯಗಳನ್ನು ಓದಿದಾಗ. (ಶಾಸನಗಳಲ್ಲಿಯೂ ಸಂಗತಿಗಳನ್ನು ನಿರೂಪಿಸುವ ಸಮಯದಲ್ಲಿ, ಶಾಸನಕರ್ತೃ ಕವಿಯಾಗಿದ್ದರೆ ವಿರಳವಾಗಿ ಅಂತಹ ತೀವ್ರಾನುಭವ 'ಕಾವ್ಯ'ವಾಗಿಯೇ ಬಂದಿರುತ್ತವೆ). ಕಾವ್ಯ ಮತವನ್ನು ಶಾಸ್ತ್ರ ಗ್ರಂಥಗಳಂತೆ ನಮ್ಮ ಮುಂದೆ ಇಡುವುದಿಲ್ಲ. ಮತವನ್ನು ಅನುಭವ ಸಮೇತ ಜೀವಂತವಾಗಿ ಕೊಡುತ್ತದೆ. ಮತ ಎನ್ನುವುದು ಬರಿಯ ಸಂಗತಿಯಲ್ಲ, ಅದೊಂದು ಮೌಲ್ಯ ಮತ್ತು ಅನುಭವ ಎಂಬುದನ್ನು ನೆನಪಿಸಿಕೊಂಡರೆ, ಮತವನ್ನು ತಿಳಿಯಲು ಕಾವ್ಯಗಳು ಶಾಸನಗಳಷ್ಟೇ ಮುಖ್ಯ ಆಕರಗಳಾಗುತ್ತವೆಯೆಂಬುದು ಸ್ಪಷ್ಟವಾಗುತ್ತದೆ.

ಸಾಮಾಜಿಕ ಇತಿಹಾಸದ ದೃಷ್ಟಿಯಿಂದಲೂ, ಸಾಹಿತ್ಯವು ಅನೇಕ ಅಮೂಲ್ಯ ಸಂಗತಿಗಳನ್ನೊದಗಿಸುತ್ತದೆ. ಶಾಸನಗಳು ರಾಜರ, ಮಂತ್ರಿಗಳ, ಬೇರೆ ಬೇರೆ ಜಾತಿ ವರ್ಗಗಳ ಹೆಸರುಗಳನ್ನು ಕೊಡುತ್ತವೆ. ಆದರೆ ರಾಜಾಸ್ಥಾನದಲ್ಲಿ ವಾಸ್ತವವಾಗಿ ಎಂತಹ ಚಟುವಟಿಕೆಗಳು ನಡೆಯುತ್ತಿದ್ದುವು ಎಂಬುದರ ಚಿತ್ರವಾಗಲಿ, ಬೇರೆ ಬೇರೆ ಜಾತಿಗಳವರ ಜೀವಂತ ಚಿತ್ರಣವಾಗಲಿ ದೊರಕುವುದು ಕಾವ್ಯಗಳಲ್ಲಿ. ಈ ದೃಷ್ಟಿಯಿಂದ ಕಾವ್ಯಗಳ ಅಧ್ಯಯನ ಇನ್ನೂ ನಡೆಯಬೇಕಾಗಿದೆ. ಅಂತಹ ಅಧ್ಯಯನದ ಪ್ರಾಮುಖ್ಯವನ್ನು ಸ್ಪಷ್ಟಪಡಿಸಲು ಇನ್ನೊಂದು ನಿದರ್ಶನವನ್ನು ತೆಗೆದುಕೊಳ್ಳುತ್ತೇನೆ. ಜಾತಿ (Caste) ಮತ್ತು ವರ್ಗ (Class) ವಿಭೇದಗಳು ಭಾರತದಲ್ಲಿ ಬಹುಕಾಲದಿಂದ ಇವೆ. ಕರ್ನಾಟಕದ ಇತಿಹಾಸದಲ್ಲಿ ಇವುಗಳ ವಿರುದ್ಧ ಯಾರೂ ಸಿಡಿದೇಳಲಿಲ್ಲವೇ? ಇವುಗಳು ಸಮಾಜಕ್ಕೆ ಮಾಡಿರುವ ಘಾತವನ್ನು ಯಾರೂ ಗುರುತಿಸಲಿಲ್ಲವೇ? 'ಇಲ್ಲ' ಎಂದು ಹೇಳಿದರೆ ಕನ್ನಡಿಗರ ವಿಚಾರಶಕ್ತಿಯನ್ನು ನಾವು ಅಲ್ಲಗಳೆದಂತಾಗುತ್ತದೆ. ಪಂಪ ತನ್ನ ಪಾತ್ರ ಕರ್ಣನ ಮೂಲಕ 'ಕುಲ'ದ ಬಗ್ಗೆ ಪ್ರತಿಭಟನೆ ವ್ಯಕ್ತಮಾಡಿದ್ದಾನೆ. ಜಾತಿಯನ್ನು ಒಪ್ಪಿಕೊಂಡ ಪಂಪ ವರ್ಗದ ಬಗ್ಗೆ ಸ್ಪಷ್ಟವಾಗಿ ಸಿಡಿದೆದ್ದಿದ್ದಾನೆ. ಕನಕದಾಸರು ತಮ್ಮ ರಾಮಧಾನ್ಯ ಚರಿತದಲ್ಲಿ ತಮ್ಮ ಪ್ರತಿಭಟನೆಯನ್ನು ಸೂಚ್ಯವಾಗಿ ಕತೆಯೊಂದರ ಮೂಲಕ ವ್ಯಕ್ತಪಡಿಸಬೇಕಾಯಿತು. ವಚನ ಸಾಹಿತ್ಯವಂತೂ ಜಾತಿ, ವರ್ಗಗಳ ವಿರುದ್ಧ ಎದ್ದ ಸ್ಪಷ್ಟ ಬಂಡಾಯ. ಜಾತಿಯ ವಿರುದ್ಧವಾಗಿ ರಾಘವಾಂಕ ಬಂಡೆದ್ದಿರುವುದು ಸುಪ್ರಸಿದ್ಧ ಸಂಗತಿ. ಇವರೆಲ್ಲರೂ ಒಳ್ಳೆಯ ಚಿಂತಕರು (thinkers): ತಮ್ಮ ತಮ್ಮ ಮಿತಿಯಲ್ಲಿ, ಚೌಕಟ್ಟಿನಲ್ಲಿ ಆಲೋಚಿಸಿದವರು, ತಮ್ಮದೇ ಪ್ರಮಾಣದಲ್ಲಿ ಪ್ರತಿಭಟನೆ ಸೂಚಿಸಿದವರು. ಇವುಗಳನ್ನು ಇತಿಹಾಸ ಗುರುತಿಸಬೇಕಾಗುತ್ತದೆ. ಜೊತೆಗೆ, ಬೇರೆ ಬೇರೆ ಕಾವ್ಯಗಳಲ್ಲಿ ಕವಿಗಳು, ಕಲಾವಿದರು, ಬೇಟೆಗಾರರು, ಕುಡುಕರು,

ವೇಶ್ಯೆಯರು, ಸಾಧುಸಂತರು, ಬೇರೆ ಬೇರೆ ವರ್ಗದ ಜನ, ಅವರ ವೃತ್ತಿಗಳು ಇವುಗಳಿಗೆ ಸಂಬಂಧಿಸಿದಂತೆ ದೊರಕುವ ಸಾಮಗ್ರಿ ಅಪಾರ. ಈ ಕಡೆ ಇತಿಹಾಸಜ್ಞರ ಗಮನ ಇನ್ನೂ ಹೊರಳಬೇಕಾಗಿದೆ,

ಅನೇಕ ಇತಿಹಾಸಜ್ಞರಿಗೆ ಪಂಪ, ರನ್ನರ ಲೌಕಿಕ ಕೃತಿಗಳು ರಾಷ್ಟ್ರಕೂಟ, ವೇಮುಲವಾಡದ ಚಾಳುಕ್ಯ, ಕಲ್ಯಾಣಿ ಚಾಳುಕ್ಯ ವಂಶಗಳ ಕೆಲವು ರಾಜರ ಹೆಸರುಗಳನ್ನು ಅವರ ಯುದ್ಧಗಳನ್ನು ತಿಳಿಸುವಷ್ಟರ ಮಟ್ಟಿಗೆ ಮಾತ್ರ ಪ್ರಾಮುಖ್ಯತೆಯನ್ನು ಸಂಪಾದಿಸಿವೆ. ಪಂಪ ತನ್ನ ಕಾಲದ ಒಟ್ಟು ಅನುಭವವನ್ನು **ಪಂಪಭಾರತ**ದಲ್ಲಿ ಹಿಡಿದಿಟ್ಟಿದ್ದಾನೆ. ಅವನ ಕಾಲ ಅದಕ್ಕಿಂತ ಬಹಳ ಹಿಂದಿನ ಮಹಾಭಾರತದ ಕತೆಯ ಮೂಲಕ ಪ್ರಕಟವಾಗಿದೆ. ರಾಷ್ಟ್ರಕೂಟರ ಕಾಲದ ಬಗ್ಗೆ ಕೆಲಸ ಮಾಡುವವರು ಆ ಕೃತಿಯನ್ನು ಎಚ್ಚರಿಕೆಯಿಂದ ಅಧ್ಯಯನ ಮಾಡಿ ಆ ಯುಗದ ವೀರಜೀವನವನ್ನು ಅನುಭವಿಸಬೇಕು. ಆ ಯುಗವನ್ನು ಅನುಭವಿಸಿ ಬರೆದ ಇತಿಹಾಸ ಬರಿಯ ಹೆಸರುಗಳ, ತೇದಿಗಳ ನೀರಸ ಪಟ್ಟಿಯಾಗಿ ಉಳಿಯುವುದಿಲ್ಲ. ವಚನ ಸಾಹಿತ್ಯದಲ್ಲಿ ಬಿಜ್ಜಳನ ಹೆಸರು ನಾಲ್ಕಾರು ಕಡೆ ಬಂದರೆ ಇತಿಹಾಸಜ್ಞರಿಗೆ ಅಷ್ಟು ಮಾತ್ರ ಮುಖ್ಯವಾಗಬೇಕಾಗಿಲ್ಲ. ಇಡೀ ವಚನ ಸಾಹಿತ್ಯ ಆ ಕಾಲದ ಸಾಮಾಜಿಕ ಬಂಡಾಯದ ಚಿತ್ರವನ್ನು ಕೊಡುವುದನ್ನು ಗುರುತಿಸಬೇಕಾಗುತ್ತದೆ. ಜೊತೆಗೆ ಕಾಲದಿಂದ ಕಾಲಕ್ಕೆ ಸಾಹಿತ್ಯಿಕ ಅಭಿರುಚಿ ಬದಲಾಗುತ್ತದೆ. ಉತ್ತಮ ಸಾಹಿತ್ಯ ಸೃಷ್ಟಿ ಮತ್ತು ಅದನ್ನು ಗುರುತಿಸುವ ಸಹೃದಯತೆ ಎರಡೂ ಸಂಸ್ಕೃತಿಯ ಮಾಪನಗಳು. ಇತಿಹಾಸಜ್ಞ ಈ ಮಾಪನಗಳನ್ನು ಉಪಯೋಗಿಸಿಕೊಳ್ಳಬೇಕು.

ಇತಿಹಾಸಜ್ಞನು, ಸಾಹಿತ್ಯ ವಿದ್ಯಾರ್ಥಿಯಂತೆ ಕಾವ್ಯವನ್ನು ಅಧ್ಯಯನ ಮಾಡಬೇಕೆಂದು ನಾನು ಸೂಚಿಸುತ್ತಿಲ್ಲ. ಹಾಗೆ ಅಧ್ಯಯನ ಮಾಡಿದರೆ ತಪ್ಪೇನೂ ಇಲ್ಲ; ಮತ್ತು, ಬಹುಶಃ ಒಂದು ಉತ್ತಮಕೃತಿಯನ್ನು ಓದುತ್ತಿದ್ದರೆ ಅದರ ಕಾವ್ಯಾಂಶದ ಕಡೆ ಕಣ್ಣು ಹಾಯಿಸದೆ ಇರುವುದು ಸಾಧ್ಯವೂ ಇಲ್ಲ. ಆದರೆ, ಇತಿಹಾಸಜ್ಞ ಇಡೀ ಕನ್ನಡ ಸಾಹಿತ್ಯವನ್ನು ನಿಜವಾದ ಇತಿಹಾಸದ ವಿದ್ಯಾರ್ಥಿಯಾಗಿ ಅಭ್ಯಾಸ ಮಾಡುವ ಅಗತ್ಯವಿದೆ ಎಂಬುದಷ್ಟೇ ನನ್ನ ಪ್ರಬಲ ವಾದವಾಗಿದೆ. ಅಂತಹ ಅಭ್ಯಾಸ ಅವನ ರಾಜಕೀಯ ಇತಿಹಾಸದ ಜ್ಞಾನಕ್ಕೆ ಜೀವಂತಿಕೆಯನ್ನೂ ಆಳ ಅಗಲಗಳನ್ನೂ ತಂದು ಕೊಡುತ್ತದೆ. (ಇದರ ಜೊತೆಗೆ ಕಲೆಗಳು, ಶಾಸ್ತ್ರ, ವಿಜ್ಞಾನ ಇವೂ ಮಿಳಿತವಾದಾಗ ಇತಿಹಾಸದ ಒಂದು ಸಮಗ್ರ ದೃಶ್ಯ ಲಭ್ಯವಾಗುತ್ತದೆ ಎಂಬುದನ್ನು ಒತ್ತಿ ಹೇಳಬೇಕಾಗಿಲ್ಲ).


ಸಾಹಿತ್ಯಜ್ಞರು ಐತಿಹಾಸಿಕ ದೃಷ್ಟಿಯನ್ನು ಬೆಳಸಿಕೊಳ್ಳುವುದು ಅವರ ಸಾಹಿತ್ಯಿಕ ಪ್ರತಿಕ್ರಿಯೆಯನ್ನು ಹರಿತಗೊಳಿಸುತ್ತದೆ. ಯಾವುದೇ ಒಂದು ಉತ್ತಮ

ಕೃತಿ ಯಾವುದೇ ಕಾಲದಲ್ಲಿ ಹುಟ್ಟಿದಂತಹುದಲ್ಲ. ಅದು ಆ ಕಾಲದ ರಾಜಕೀಯ ಸಾಮಾಜಿಕ ಪರಿಸರದಿಂದ ಮೂಡಿಬರುತ್ತದೆ, ಮತ್ತು ಕಾಲದ ಜನಜೀವನದ ಸ್ಪಂದನಗಳನ್ನು ಸೂಕ್ಷ್ಮರೀತಿಯಲ್ಲಿ ಹಿಡಿಯುತ್ತದೆ. ಒಂದು ಕೃತಿಯನ್ನು ಸುಮ್ಮನೆ ಓದುವುದು ಒಂದು; ಅದನ್ನು ಅದರ ಸಾಮಾಜಿಕ ಚೌಕಟ್ಟಿನಲ್ಲಿಟ್ಟು ಓದುವುದು ಇನ್ನೊಂದು. ಎರಡನೆಯದು ಬಹುಶಃ ಹೆಚ್ಚು ಅರ್ಥಪೂರ್ಣವಾಗಿರುತ್ತದೆ. ವಚನಗಳ ಬಗ್ಗೆ ವಿಮರ್ಶೆ ಬರೆಯುವವರಿಗೆ ಆ ಕಾಲದ ಸಾಮಾಜಿಕ ಆಂದೋಲನದ ಪರಿಚಯವಿಲ್ಲದೇ ಹೋದರೆ ಅವರ ವಿಮರ್ಶೆ ತೇಲುನೋಟದ್ದಾಗಿ ಪರಿಣಮಿಸುವ ಅಪಾಯವಿರುತ್ತದೆ. ಒಂದು ವಚನದಲ್ಲಿ ಬರುವ ಭಾಷೆ, ಶಬ್ದಚಿತ್ರಗಳ ಸಾರ್ಥಕ್ಯ, ಆ ವಚನ ಅಭಿವ್ಯಂಜಿಸುವ ಭಾವ, ಇಡೀ ವಚನದ ಮೂರ್ತಿಶಿಲ್ಪ, ಅದರ ಅರ್ಥದ ಪದರುಗಳು—ಇಷ್ಟನ್ನು ಎತ್ತಿತೋರಿ ವಚನದ ಸೊಗಸನ್ನು ವಿವರಿಸಬಹುದು. ಆದರೆ, ಆ ಕಾಲದ ಪರಿಸರದಲ್ಲಿ ಆ ವಚನವನ್ನು ವಿವರಿಸಿದಾಗ ಮೇಲಿನ ವಿವರಣೆಯೇ ಇನ್ನು ಹೆಚ್ಚು ಸಾರ್ಥಕವಾಗುತ್ತದೆ. ಸಾಹಿತ್ಯವನ್ನು ಓದುವುದು ಅದು ಹುಟ್ಟಿದಾಗ ಆ ಕಾಲದ ಓದುಗರಿಗೆ ಅದು ಏನಾಗಿದ್ದಿತು ಎಂಬುದನ್ನು ತಿಳಿಯುವುದಕ್ಕಲ್ಲ; ಅದು ಇಂದಿಗೂ ನಮಗೆ ಏನಾಗಬಲ್ಲುದು ಎಂಬುದೇ ಮುಖ್ಯ. ಆದರೆ ಇಂದಿನ ನಮಗೂ ಕೂಡ ಅದು ಹೆಚ್ಚಿನ ಅರ್ಥವಂತಿಕೆ ಪಡೆಯುವಂತಾಗಬೇಕಾದರೆ ಅದರ ಸಾಂಸ್ಕೃತಿಕ ಹಿನ್ನೆಲೆ ಅತ್ಯಂತ ಅಗತ್ಯವಾಗುತ್ತದೆ. ವಚನಕಾರರನ್ನು ಕೇವಲ ಸಾಹಿತಿಗಳೆಂದು, ಶಬ್ದಶಿಲ್ಪಿಗಳೆಂದು ನೋಡುವುದು ತಪ್ಪೇನೂ ಅಲ್ಲ. ಆದರೆ ಅವರು ಸಮಾಜದ ಬಗ್ಗೆ ತೀವ್ರವಾದ ತುಡಿತ ಉಳ್ಳ ಸಂವೇದನಶೀಲರಾಗಿದ್ದರೆಂಬ ಸಂಗತಿ ನಮ್ಮ ದೃಷ್ಟಿಯನ್ನು ವಿಶಾಲಗೊಳಿಸುತ್ತದೆ. ವಚನ ಚಳುವಳಿಯನ್ನು ತಿಳಿಯಲು ಬಸವಣ್ಣನವರನ್ನು ತಿಳಿಯಬೇಕು; ಬಸವಣ್ಣನವರನ್ನು ತಿಳಿಯಬೇಕಾದರೆ ಅವನ ದೊರೆ ಬಿಜ್ಜಳನನ್ನು ತಿಳಿಯಬೇಕು; ಬಿಜ್ಜಳನನ್ನು ತಿಳಿಯಬೇಕಾದರೆ ಅವನ ಇತಿಹಾಸ, ಅವನ ವಂಶಕ್ಕೂ ಚಾಲುಕ್ಯ ವಂಶಕ್ಕೂ ಇದ್ದ ರಕ್ತಸಂಬಂಧ, ರಾಜಕೀಯ ಸಂಬಂಧ, ಅವನು ಪಟ್ಟಕ್ಕೆ ಬಂದ ರೀತಿ ಇವುಗಳನ್ನೆಲ್ಲ ತಿಳಿಯಬೇಕು. ಆ ಕಾಲದ ರಾಜಕೀಯ ಪರಿಸ್ಥಿತಿ, ಬಸವಣ್ಣನವರ ಮನೆತನ, ಅವರ ವೃತ್ತಿ, ಸಾಮಾಜಿಕ ಆಂದೋಲನ, ವಚನ ಸಾಹಿತ್ಯ, ಮತ ಪ್ರಸಾರ ಇವೆಲ್ಲ ಪರಸ್ಪರ ನಿಕಟ ಸಂಬಂಧವನ್ನು ಪಡೆದಿವೆ. ರಾಜಕೀಯ ಇಂದಿನ ಸಮಾಜದಲ್ಲಿ ಮಾತ್ರವಲ್ಲ, ಎಲ್ಲ ಕಾಲದಲ್ಲೂ ಸಾಮಾಜಿಕವಾಗಿ ಬಹು ಪ್ರಧಾನವಾದ ಪಾತ್ರವನ್ನು ವಹಿಸಿದೆ. ರಾಜಕೀಯವಾದ ಘಟನೆಗಳು ದೇಶದ ಸಾಮಾಜಿಕ ರಚನೆ ಆರ್ಥಿಕ ವ್ಯವಸ್ಥೆಗಳ ಮೇಲೆ ಮಾತ್ರವಲ್ಲದೆ ಕಲೆ, ಸಾಹಿತ್ಯ ಸೃಷ್ಟಿಯ ಮೇಲೂ ನೇರ ಪರಿಣಾಮವನ್ನು ಬೀರುತ್ತದೆ. ಇಂಗ್ಲಿಷರ ಆಗಮನ, ಅವರ ಆಧಿಪತ್ಯ, ಇಂಗ್ಲಿಷ್ ಭಾಷೆಯ ಪರಿಚಯ, ವಿಜ್ಞಾನ, ಸ್ವಾತಂತ್ರ್ಯ ಚಳವಳಿ, ಸ್ವಾತಂತ್ರ್ಯಾನಂತರದ ಘಟನೆಗಳು ಇವು ನಮ್ಮ ಸಾಮಾಜಿಕ-ಆರ್ಥಿಕ ರಚನೆಯ ಮೇಲ್ಮೈಯನ್ನೇ ಬದಲಿಸಿವೆ; ಸಾಹಿತ್ಯ ಕ್ಷೇತ್ರದಲ್ಲೂ ತೀವ್ರ ಬದಲಾವಣೆ

ಗಳಿಗೆ ಎಡೆಗೊಟ್ಟಿವೆ. ರಾಜಕೀಯ ಘಟನೆಗಳು ಹೇಗೆ ಪ್ರಭಾವ ಬೀರುತ್ತವೆ ಎಂಬುದಕ್ಕೆ ಪ್ರಾಚೀನ ಕಾಲದಿಂದ ಒಂದು ನಿದರ್ಶನವನ್ನು ಕೊಡುತ್ತೇನೆ. ಹದಿಮೂರನೆಯ ಶತಮಾನದ ಉತ್ತರಾರ್ಧದಲ್ಲಿ ಉತ್ತರದಿಂದ ಮುಸ್ಲಿಂ ಧಾಳಿಗಳು ಆರಂಭವಾದುವು. ಕರ್ನಾಟಕದ ಉತ್ತರದಲ್ಲಿ ಮತ್ತು ದಕ್ಷಿಣದಲ್ಲಿ ಆಳುತ್ತಿದ್ದ ಯಾದವರು ಮತ್ತು ಹೊಯ್ಸಳರು ನಾಶವಾದರು. ಇದರ ಜೊತೆ ಜೊತೆಗೇ ಹಿಂದೂ ಸಂಸ್ಕೃತಿಯ ಅಸ್ತಿತ್ವಕ್ಕೇ ಘೋರ ಧಕ್ಕೆ ಒದಗಿತು. ಸು. 1335-6 ರಲ್ಲಿ ವಿಜಯನಗರ ಸಾಮ್ರಾಜ್ಯ ಆರಂಭವಾಗಿ ಹಿಂದೂ ಸಂಸ್ಕೃತಿಯನ್ನು ಉಳಿಸಿತು. ಇವೆಲ್ಲ ಸುಪ್ರಸಿದ್ಧ ಸಂಗತಿಗಳು. ಸಾಹಿತ್ಯದ ಮೇಲೆ ಈ ಘಟನೆಗಳ ಪರಿಣಾಮ ವೇನಾಯಿತು ಎಂಬುದು ಸ್ವಾರಸ್ಯದ ಸಂಗತಿ. ಹದಿಮೂರನೇ ಶತಮಾನದ ಉತ್ತರಾರ್ಧದ ಕೊನೆಯ ದಶಕಗಳಿಂದ ಸು. 1335-40 ರವರೆಗೆ ಕರ್ನಾಟಕ ಬಹು ನೋವನ್ನು ಅನುಭವಿಸಿರಬೇಕು. ನಾವು ಗಮನಿಸಬೇಕು–ಆ ಐವತ್ತು ಅರವತ್ತು ವರ್ಷಗಳ ಅವಧಿಯಲ್ಲಿ ಯಾವುದೇ ಗಮನಾರ್ಹ ಕೃತಿಯೂ ಕನ್ನಡದಲ್ಲಿ ರಚಿತವಾಗ ದಿರುವುದು ಆಕಸ್ಮಿಕವೇನೂ ಅಲ್ಲ. ವಿಜಯನಗರ ಸಾಮ್ರಾಜ್ಯ ಸನಾತನ ಹಿಂದೂ ಧರ್ಮದ ಸಂರಕ್ಷಕನಾಗಿ ನಿಂತಮೇಲೆ, ಪ್ರಾಚೀನ ಗ್ರಂಥಗಳ ಸಂರಕ್ಷಣೆ, ಸಂಪಾದನೆ, ವ್ಯಾಖ್ಯಾನ ಕಾರ್ಯಗಳು ತ್ವರಿತಗತಿಯಲ್ಲಿ ನಡೆದವು. ಇಂದು ನಮಗೆ ವಚನಗಳು ಲಭ್ಯವಾಗಿದ್ದರೆ, ಅದು ಈ ಕಾಲದಲ್ಲಿ ನಡೆದ ಸಂಕಲನದ ಚಟುವಟಿಕೆಯ ಫಲ. ಮುಸ್ಲಿಂ ಧಾಳಿಯ ಬಿರುಗಾಳಿ ಬೀಸಿ ಅನಾಹುತಗಳನ್ನೆಬ್ಬಿಸಿ ಹೋದಮೇಲೆ ಜನತೆ ಯಲ್ಲಿ ಉಂಟಾಗಿದ್ದ ಭಯ, ನಿರಾಸೆ, ಹತಾಶೆ, ಕಾತುರಗಳು ಭಕ್ತಿಯಲ್ಲಿ, ನಿಷ್ಕ್ರಿಯ ಸಮರ್ಪಣೆಯಲ್ಲಿ ಪರ್ಯವಸಾನವಾದುವು. ಹನ್ನೆರಡನೆಯ ಶತಮಾನದ ವಚನಕಾರರಲ್ಲಿ ಕಂಡುಬರುವ ಕಾವು, ಆವೇಶ, ಉತ್ಸಾಹ, ಪ್ರತಿಭಟನೆ, ಮಾತುಗಾರಿಕೆ, ಜಂಬ, ಸ್ವಾಭಿಮಾನ, ಆತ್ಮವಿಶ್ವಾಸ, ಲೋಕಾನುರಕ್ತಿ ಇವುಗಳ ಜಾಗದಲ್ಲಿ ಇವುಗಳಿಗೆ ವಿರುದ್ಧ ವಾದ ವಿರಕ್ತಿ, ಲೋಕ ವಿಮುಖತೆ, ತಣ್ಣನೆಯ ಭಕ್ತಿಗಳು ಕಾಣಿಸಿಕೊಂಡವು. ಈ ಹಿನ್ನೆಲೆಯಲ್ಲಿ ಹರಿದಾಸ ಪಂಥವನ್ನು, ವೀರಶೈವ ವಿರಕ್ತ ಸಂಪ್ರದಾಯವನ್ನು ಗಮನಿಸ ಬೇಕು. ಕುಮಾರವ್ಯಾಸನೂ ಈ ಕಾಲಕ್ಕೆ ಸೇರಿದವನು (ಸು. 1335–1400). ಇವನಲ್ಲಿ ಆವೇಶ ಇದೆ, ಕಾವು ಇದೆ: ಆದರೆ ಕೆಚ್ಚು, ಸ್ವಾಭಿಮಾನ ಕಾಣವು. ವೀರಶೈವರಲ್ಲೂ ಗಟ್ಟಿ ಇತಿಹಾಸವನ್ನು ಎದುರಿಸುವ ಧೈರ್ಯ ಸಾಲದೆ, ಅದನ್ನು ಮೆದುಗೊಳಿಸುವ ಪ್ರವೃತ್ತಿ ಕಂಡುಬರುತ್ತದೆ. ಉದಾಹರಣೆಗೆ, ತನ್ನ ಚೆಲುವಿನಿಂದ ಅಲ್ಲಮನ ಮನಸ್ಸನ್ನು ಗೆದ್ದು ಅವನ ಪ್ರೇಯಸಿಯಾದ ಕಾಮಲತೆ ಈ ಕಾಲಕ್ಕೆ ಅಲ್ಲಮನನ್ನು ಸಂಸಾರದ ಕಡೆಗೆ ಸೆಳೆಯುವ ಮಾಯಾದೇವಿಯಾಗಿ ಪರಿವರ್ತಿತ ಳಾಗುತ್ತಾಳೆ. ಅಲ್ಲಮ ಅವಳನ್ನು ನಿರಾಕರಿಸುತ್ತಾನೆ, ಗೆಲ್ಲುತ್ತಾನೆ. ಆ ಕಾಲದ ಜನ, ಇಸ್ಲಾಮಿನಿಂದ ತಮ್ಮ ನಂಬಿಕೆಗಳಿಗೆ ಮತಕ್ಕೆ ಆಘಾತ ಒದಗಿದ್ದರಿಂದಲೋ ಏನೋ–ತಮ್ಮ ಪರಂಪರೆಯನ್ನು ಇನ್ನೂ ಬಲವಾಗಿ ತಬ್ಬಿಕೊಂಡರು. ಜನ

ಭೂತಕಾಲದ ಕಡೆಗೆ ತಿರುಗಿ, ಅದನ್ನು ವೈಭವಗೊಳಿಸಿ ಅಲ್ಲಿ ಆಶ್ರಯ ಪಡೆದರು. ಒಂದಿನ ಕಾಲ ಅವರಿಗೆ ತಾವು ಕಳೆದುಕೊಂಡು ಸ್ಮರಿಸುತ್ತಿರುವ ಸುವರ್ಣ ಯುಗವಾಗಿ ಪರಿಣಮಿಸಿತು. ರಾಜಕೀಯ–ಸಾಮಾಜಿಕ ಇತಿಹಾಸಕ್ಕೂ ಸಾಹಿತ್ಯ ಸೃಷ್ಟಿಗೂ ಹೀಗೆ ಕಾರ್ಯಕಾರಣ ಸಂಬಂಧವನ್ನು ಗುರ್ತಿಸಲು ಸಾಧ್ಯವಾಗುತ್ತದೆ. ಈ ರೀತಿಯ ಕಾರ್ಯಕಾರಣ ಸಂಬಂಧವನ್ನು ತಿಳಿಯುವುದೊಂದೇ ಸಾಹಿತ್ಯದ ಅಧ್ಯಯನದ ಫಲ ಎಂದಾಗಲಿ, ಆ ಸಂಬಂಧವನ್ನು ತಿಳಿದಾಗಲೇ ಸಾಹಿತ್ಯದ ಆಸ್ವಾದ ಸಾಧ್ಯ ಎಂದಾಗಲಿ ನಾನು ಸೂಚಿಸುತ್ತಿಲ್ಲ. ಸಾಹಿತ್ಯದ ಬಗ್ಗೆ ವಿಚಾರ ಮಾಡುವವರು ಅಥವಾ ಸಾಹಿತ್ಯ ಚರಿತ್ರೆ ಬರೆಯುವವರು ಹೇಗೆ ರಾಜಕೀಯ-ಸಾಮಾಜಿಕ ಸಂಗತಿಗಳನ್ನು ಬಳಸಿಕೊಂಡು ಸಾಹಿತ್ಯದ ಬೆಳವಣಿಗೆಯನ್ನು ತಾರ್ಕಿಕವಾಗಿ ವಿವರಿಸಲು ಸಾಧ್ಯವಾಗುತ್ತದೆ ಎಂಬುದನ್ನು ಮಾತ್ರ ಇಲ್ಲಿ ಸೂಚಿಸುತ್ತಿದ್ದೇನೆ.

ಇತಿಹಾಸಜ್ಞರು ಮತ್ತು ಸಾಹಿತ್ಯಜ್ಞರು ಬೇರೆ ಬೇರೆ ದೃಷ್ಟಿ, ಉದ್ದೇಶ, ಅಭಿರುಚಿಗಳನ್ನುಳ್ಳವರಾದರೂ, ಅವರು ಸಾಹಿತ್ಯವನ್ನು ನೋಡುವವರಾಗಿ ಯಾವುದೋ ಘಟ್ಟದಲ್ಲಿ ಹತ್ತಿರ ಹತ್ತಿರಕ್ಕೆ ಬಂದು, ಎಲ್ಲೋ ಒಂದು ಕಡೆ ಒಂದಾಗಿ, ಆಮೇಲೆ ದೂರ ಹೋಗಿ ನಿಲ್ಲುತ್ತಾರೆ. ಅದನ್ನು ಹೀಗೆ ತೋರಿಸಬಹುದು.



ಸಾಹಿತ್ಯಾಭ್ಯಾಸಿಗಳಾಗಿ ಅವರಿಬ್ಬರೂ ಸೇರುವಂತಹ ಬಿಂದು ಇದೆಯೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಸಾಹಿತ್ಯ ಮನುಷ್ಯನ ಅನೇಕ ಚಟುವಟಿಕೆಗಳಲ್ಲಿ ಒಂದು. ಅದೊಂದನ್ನೇ ಪ್ರತ್ಯೇಕಿಸಿ ನೋಡುವುದು ಸರಿಯಲ್ಲ. ಏಕೆಂದರೆ ಅದು ಇತರ ಚಟುವಟಿಕೆಗಳೊಡನೆ ಸದಾ ಸಂಬಂಧವನ್ನು ಹೊಂದೇ ನಡೆದಿರುತ್ತದೆ. ಕರ್ನಾಟಕದ ಇತಿಹಾಸದ ಪುಸ್ತಕಗಳಲ್ಲಿ ಎಲ್ಲೋ ಒಂದು ಕಡೆ ಮೂಲೆಯಲ್ಲಿ ಸಾಹಿತ್ಯಿಕ ಚಟುವಟಿಕೆಯನ್ನು ಸ್ವಲ್ಪ ವಿವರಿಸಿರುತ್ತಾರೆ. ಸಾಹಿತ್ಯ ಚರಿತ್ರೆಯ ಪುಸ್ತಕಗಳಲ್ಲಿ ಇತಿಹಾಸದ ವಿಷಯ ಅಲ್ಲಲ್ಲಿ ತೇಪೆ ತೇಪೆಯಾಗಿ ಬಂದಿರುವುದುಂಟು. ಆದರೆ ಹೀಗೆ ಇತಿಹಾಸ (ರಾಜಕೀಯ, ಸಾಮಾಜಿಕ, ಮತೀಯ, ಆರ್ಥಿಕ) ಮತ್ತು ಸಾಹಿತ್ಯಗಳನ್ನು ಬೇರೆ ಬೇರೆಯಾಗಿ ನೋಡಿದರೆ ನಮಗೆ ಸರಿಯಾದ ಕಲ್ಪನೆ ಬರುವುದಿಲ್ಲ. ಒಂದನ್ನು ಇನ್ನೊಂದರ ಸಹಾಯದಿಂದ ಸ್ಪಷ್ಟಪಡಿಸುವ, ವಿವರಿಸುವ, ಅರ್ಥಮಾಡಿಕೊಳ್ಳುವ ಪ್ರಯತ್ನ ಇನ್ನೂ ಆಗಬೇಕಾಗಿದೆ. ಇವೆರಡೂ ಹೇಗೆ ಸಂಬಂಧಿಸಿವೆ ಎಂಬುದಕ್ಕೆ ಒಂದು ಮಾದರಿ

ಯನ್ನು ಕೊಡುತ್ತೇನೆ. ಕರ್ನಾಟಕವನ್ನು ಮೊದಲು ಆಳಿದವರು ಮೌರ್ಯರು, ನಂತರ ಶಾತವಾಹನರು ಮತ್ತು ಪಲ್ಲವರು. ಇವರೆಲ್ಲ ಹೊರಗಿನವರು. ಇದರ ಫಲವಾಗಿ ಮೊದ ಮೊದಲು ದೊರಕುವ ಶಾಸನಗಳೆಲ್ಲ ಪ್ರಾಕೃತದಲ್ಲಿವೆ. ಕರ್ನಾಟಕದ ಮೊತ್ತ ಮೊದಲ ಕನ್ನಡ ದೊರೆಗಳಾದ ಕದಂಬರ ಕಾಲದಲ್ಲಿ ಕನ್ನಡ ಶಾಸನಗಳು ಕಾಣಿಸಿಕೊಳ್ಳ ಲಾರಂಭಿಸುತ್ತವೆ. (ಯಾವ ಪ್ರಾಂತಕ್ಕೂ ಆಲಾಯಿದ ಸೇರದ ಸಂಸ್ಕೃತದಲ್ಲಿಯೂ ಕಾಣಿಸಿಕೊಳ್ಳುತ್ತವೆ). ಇದು ರಾಜಕೀಯವಾಗಿ ಕನ್ನಡಕ್ಕೆ ಪ್ರಾಮುಖ್ಯ ದೊರೆತ ಸಂಗತಿಯನ್ನು ಸೂಚಿಸುತ್ತದೆ. ಬಾದಾಮಿ ಚಾಲುಕ್ಯರ ಕಾಲದಲ್ಲಿ ಬಹು ಸುಂದರ ವಾದ ದೇವಾಲಯುಗಳು ನಿರ್ಮಾಣ ವಾದವು : ಕರ್ನಾಟಕ ಅಖಿಲ ಭಾರತೀಯವಾಗಿ ಪ್ರಪ್ರಥಮವಾಗಿ ತನ್ನನ್ನು ತಾನು ಸ್ಥಾಪಿಸಿಕೊಂಡದ್ದು ಇವರ ಕಾಲದಲ್ಲಿ, ಕನ್ನಡ ಸಾಹಿತ್ಯ ನಿಜವಾಗಿ ಆರಂಭವಾದದ್ದು ಇವರ ಕಾಲದಲ್ಲಿ, ಸು. 650–700 ರ ಸರಿಸುಮಾರಿನಲ್ಲಿ ಎಂದು ನಾನು ಬೇರೆಕಡೆ ಪ್ರತಿಪಾದನೆ ಮಾಡಿದ್ದೇನೆ. ರಾಷ್ಟ್ರಕೂಟರ ಹೊತ್ತಿಗೆ ಕನ್ನಡವು ಒಂದು ಸಾಹಿತ್ಯಿಕ ಪರಂಪರೆಯನ್ನು ಬೆಳಸಿಕೊಂಡಿದ್ದಿತು. ಬಾದಾಮಿ ಚಾಲುಕ್ಯರು ಮತ್ತು ರಾಷ್ಟ್ರಕೂಟರು ವಿಸ್ತಾರವಾದ ಸಾಮ್ರಾಜ್ಯಗಳನ್ನು ಕಟ್ಟಿ, ಅಖಿಲ ಭಾರತೀಯ ವ್ಯಾಪ್ತಿಯನ್ನು ಪಡೆದಿದ್ದರು. ಇವರ ಕಾಲದಲ್ಲಿ ಜೀವಂತಿಕೆಯ ಶಿಲ್ಪಿಗಳು, ಭವ್ಯ ದೇವಾಲಯುಗಳು ನಿರ್ಮಾಣವಾದವು. ಕನ್ನಡದ ಅತ್ಯುತ್ತಮ ಸಾಹಿತ್ಯ ಇವರ ಕಾಲದ್ದು. ಹತ್ತನೇ ಶತಮಾನದ ಅಂತ್ಯದಲ್ಲಿ ಜೈನ ಧರ್ಮ ಇಳಿಮುಖವಾಯಿತು : ಮುಂದೆ ಬಂದ ಜೈನ ಕವಿಗಳೆಲ್ಲ ದ್ವಿತೀಯ ವರ್ಗ ದವರು, ಅದರ ಉಚ್ಛ್ರಾಯಕಾಲದ ಕವಿಗಳ ಮಟ್ಟಕ್ಕೆ ಯಾರೂ ಏರಲಿಲ್ಲ. ಕಲ್ಯಾಣ ಚಾಲುಕ್ಯರ ಮತ್ತು ಕಲಚುರಿಗಳ ಕಾಲದಲ್ಲಿ ಸಾಮಾಜಿಕ ಆಂದೋಲನ ನಡೆಯಿತು : ಇದರ ಫಲ ಕನ್ನಡ ತನ್ನದೆಂದು ಹೇಳಿಕೊಳ್ಳಬಹುದಾದ ವಚನ ಸಾಹಿತ್ಯ. ಇದರ ಬಗ್ಗೆ ಆಗಲೇ ನಾನು ಪ್ರಸ್ತಾಪಿಸಿದ್ದೇನೆ. ಹೊಯ್ಸಳರ ಕಾಲದಲ್ಲಿ ಕಲೆಗಳಿಗೆ ಉತ್ತೇಜನ ದೊರೆಯಿತು : ಅವರಲ್ಲಿ ಹಲವರು ಅತ್ಯುತ್ತಮ ಕಲಾಭಿರುಚಿಯನ್ನು ಬೆಳಸಿಕೊಂಡಿದ್ದರು. ಇವರ ರಸಿಕತೆ, ಕಲಾಭಿಜ್ಞತೆ ಕೇವಲ ದೇವಾಲಯ, ಮೂರ್ತಿ ನಿರ್ಮಾಣಗಳಲ್ಲಿ ಮಾತ್ರವಲ್ಲ, ಶಾಸನ ಹಾಕಿಸುವಂತಹ ಸಣ್ಣ ಕೆಲಸಗಳಲ್ಲೂ ಪ್ರಕಟ ವಾಯಿತು. ಜನ್ನನ ಎರಡು ಕಾವ್ಯಗಳಲ್ಲೂ ಪ್ರೇಮ-ಕಾಮಗಳ ಸಮಸ್ಯೆಯೇ ಮುಖ್ಯವಾಗಿರುವುದು ಆಶ್ಚರ್ಯವನ್ನುಂಟುಮಾಡುವುದಿಲ್ಲ. ಇವರ ಕಾಲದ ಹರಿಹರ, ರಾಘವಾಂಕರಿಗೆ ವಚನಸಾಹಿತ್ಯದ ಹಿನ್ನೆಲೆ ಇದ್ದುದರಿಂದ ಅವರು ಹೊಸ ಕಾವ್ಯ ಮಾರ್ಗವನ್ನು ಹಿಡಿದರು. ಹೊಯ್ಸಳರ ಮತ್ತು ವಿಜಯನಗರದ ಕಾಲಗಳ ಮಧ್ಯಕಾಲ ಒಂದು ಕತ್ತಲೆಯ ಯುಗ. ಇದನ್ನಾಗಲೇ ವಿವರಿಸಿದ್ದೇನೆ. ವಿಜಯನಗರದ ಪತನದ ನಂತರ (1565) ಸಾಹಿತ್ಯದ ಬೀಳುಗಾಲವನ್ನು ನೋಡುತ್ತೇವೆ. ಸಾಂಸ್ಕೃತಿಕವಾಗಿ ವಿಜಯನಗರದ ಉತ್ತರಾಧಿಕಾರಿಗಳೆಂಬಂತೆ ಒಂದು ಕಡೆ ಮೈಸೂರು ಅರಸರು, ಇನ್ನೊಂದು ಕಡೆ ಕೆಳದಿ ದೊರೆಗಳು ಕಾಣಿಸಿಕೊಳ್ಳುತ್ತಾರೆ. ಮೈಸೂರರಸರು ಕಲೆಗಳಿಗೆ,

ವಿಶೇಷವಾಗಿ ಸಾಹಿತ್ಯಕ್ಕೆ ಪ್ರೋತ್ಸಾಹ ಕೊಟ್ಟರು. ಕೆಳದಿ ಅರಸರು ಒಳ್ಳೆಯ ಆಡಳಿತಗಾರರು, ವ್ಯವಹಾರಜ್ಞರು. ಇವರ ಆಶ್ರಯದಲ್ಲಿ ಯಾವುದೇ ಗಮನಾರ್ಹ ಸಾಹಿತ್ಯಿಕ ಚಟುವಟಿಕೆಯೂ ಕಂಡುಬರುವುದಿಲ್ಲ. ಇವರ ಶಾಸನಗಳ ಶೈಲಿಯೂ ಅಷ್ಟೇ—ವಿಸ್ತಾರವಾಗಿರುತ್ತವೆ ; ಆಡಳಿತಕ್ಕೆ ಸಂಬಂಧಿಸಿದ ಅನೇಕ ವಿವರಗಳನ್ನು ಕೊಡುತ್ತವೆ. ಆದರೆ ಶೈಲಿ factual, ಅತ್ಯಂತ ನೀರಸ. ಬ್ರಿಟಿಷರ ಆಗಮನ-ಮುಂದೆ ಹೊಸಸಾಹಿತ್ಯ ಹೇಗೆ ಬಂದಿತೆಂಬುದು ಬಹು ಈಚಿನ ಸಂಗತಿ.

ಈ ರೀತಿ, ಘಟನೆಗಳನ್ನು ದೂರದಿಂದ, ಒಟ್ಟಿಗೆ ನೋಡುವವರಿಗೆ ಒಂದು ಸುಸಂಬದ್ಧತೆ, ತರ್ಕ ಕಾಣಿಸುತ್ತವೆ. ಸೂಕ್ಷ್ಮ ವಿವರಗಳಲ್ಲಿ ಕಾಣದ ಚಿತ್ರ ದೂರದಿಂದ ನೋಡಿದಾಗ ಸ್ಫುಟವಾಗುತ್ತದೆ : ಹತ್ತಿರದಲ್ಲಿ ನೋಡಿದಾಗ ಅಸಂಬದ್ಧವಾಗಿರುವುದು ದೂರಕ್ಕೆ ಅರ್ಥವನ್ನು ಪಡೆಯುತ್ತದೆ. ಹಾಗೆಯೇ, ಕರ್ನಾಟಕದ ಪರಂಪರೆಯನ್ನು ಅಖಂಡವಾಗಿ ನೋಡಿದಾಗ ಇತಿಹಾಸ ಮತ್ತು ಕಲಾ ಸೃಷ್ಟಿಗಳು ಒಂದನ್ನೊಂದು ಹೊಂದಿಕೊಂಡಿರುವುದು ಗೋಚರವಾಗುತ್ತದೆ. ಹೀಗೆ ಹೊಂದಿಕೊಂಡಿರುವುದನ್ನು ಗುರುತಿಸುವ ಕೆಲಸ ಇನ್ನೂ ಸಮರ್ಪಕವಾಗಿ ಆಗಬೇಕಾಗಿದೆ: ಆಗ ಇತಿಹಾಸ ಹೆಚ್ಚು ಜೀವಂತವಾಗುತ್ತದೆ, ಕಲೆಗಳ ಚರಿತ್ರೆಯೂ ಹೆಚ್ಚು ಅರ್ಥಪೂರ್ಣವಾಗುತ್ತದೆ.

ಮಕ್ಕಳಿಗೆ ಲೈಂಗಿಕ ಶಿಕ್ಷಣ

ಕೆ. ಎಸ್. ಷಡಕ್ಷರಪ್ಪ

ಶಿಕ್ಷಣಗಳಲ್ಲೆಲ್ಲಾ ಲೈಂಗಿಕ ಶಿಕ್ಷಣ ಹೆಚ್ಚು ಕೌತುಕ ಪೂರ್ಣವೂ, ವಿಚಿತ್ರವೂ, ಆದುದಾಗಿದೆ. ಅದರಲ್ಲಿಯೂ ಮಕ್ಕಳಿಗೆ ಈ ವಿಷಯದ ಬಗ್ಗೆ ಶೈಕ್ಷಣಿಕವಾಗಿ ವಿವರಣೆ ನೀಡುವುದು ಬಹಳ ಶ್ರಮದ ಕೆಲಸವೇ ಸರಿ. ಯಾವುದೇ ಸಸ್ಯದ ಹುಟ್ಟು ಬೆಳವಣಿಗೆಯ ಬಗೆಯನ್ನಾಗಲೀ, ಮೋಟಾರು ಚಲಿಸುವ ರೀತಿಯನ್ನಾಗಲೀ, ಮೋಡ ವಾಗಿ ಮಳೆಯಾಗುವ ಕ್ರಮವನ್ನಾಗಲೀ, ಬಹು ಸುಲಭವಾಗಿ ಮಕ್ಕಳಿಗೆ ವಿವರಿಸ ಬಹುದು. ಆದರೆ ಮಾನವ ದೇಹದ ಅಂಗಾಂಗಗಳ ರೀತಿ, ಅವುಗಳಲ್ಲಿ ಪ್ರತಿಯೊಂದರ ಕ್ರಿಯೆಯನ್ನೂ ಅಷ್ಟೇ ಸರಳವಾಗಿ ಶಿಕ್ಷಣದ ಮೂಲಕ ಹೇಳಿಕೊಡುವುದು ದುಸ್ಸಾಧ್ಯವೇ ಸರಿ. ಮಕ್ಕಳ ಮಾನಸಿಕ ತಂತ್ರಜ್ಞರಿಗೂ ಇದು ಸ್ವಲ್ಪ ಕಷ್ಟಕರ ವಾದುದೇ.

ಸಾಮಾನ್ಯವಾಗಿ ಈ ವಿಷಯವನ್ನು ಬಿಚ್ಚು ಮನದಿಂದ ಮಾತನಾಡಲು ಹಿಂಜರಿಯುವವರೇ ಬಹಳ. ......ಈ ಕಾರ್ಯವನ್ನು ಇತರರು ಯಾರಾದರೂ ಚೆನ್ನಾಗಿ ನಿರ್ವಹಿಸಬಹುದೆಂದು ಕಾಣುತ್ತದೆ, ಎಂದು ಇನ್ನೊಬ್ಬರ ಹೆಗಲ ಮೇಲೆ ವಹಿಸಿ ಜಾರಿಕೊಳ್ಳುವವರೂ ಇರುತ್ತಾರೆ. ಮಕ್ಕಳಿಗೆ ಈ ವಿಷಯ ತಿಳಿಸಿಕೊಡುವುದು ಉಚಿತವೇ...... ಈ ಕಾರ್ಯದಲ್ಲಿ ನನ್ನಿಂದ ಏನಾದರು ತಪ್ಪಾದರೆ......! ಎಂಬ ಹಿಂಜರಿಕೆ ಏಕೆ ? ನಿಮ್ಮ ಮಗುವಿನ ಮನವನ್ನು ಅರಿತು ನೀವು ಈ ಕಾರ್ಯವನ್ನು ಮಾಡಿದರೆ ಫಲಾಫಲದ ಅರಿವು ನಿಮಗೇ ತಿಳಿಯುತ್ತದೆ.

ಸಮಾಜದಲ್ಲಿ ಲೈಂಗಿಕ ಶಿಕ್ಷಣ ತಜ್ಞರು ಹಲವರಿದ್ದಾರೆ. ಒಂದು ದೊಡ್ಡ ಗುಂಪಿನಲ್ಲಿ ಕಡೆಯ ಪಕ್ಷ ಒಬ್ಬರಾದರೂ ಅಂತಹವರು ಇದ್ದೇ ಇರುತ್ತಾರೆ. ಅಂತಹ ವರಿಂದ ಈ ಶಿಕ್ಷಣವನ್ನು ನಿಮ್ಮ ಮಕ್ಕಳಿಗೆ ತಿಳಿಸಿಕೊಡುವ ಮಾರ್ಗವನ್ನು ಅರಿಯ ಬಹುದು.

ಲೈಂಗಿಕತೆಯ ಬಗ್ಗೆ ಚಿಕ್ಕ ವಯಸ್ಸಿನವರಿಗೆ ತಿಳಿಸಿಕೊಡಬೇಕಾದರೆ ಅವರ ವಯಸ್ಸು, ಬುದ್ಧಿಶಕ್ತಿ ಇವುಗಳ ಪ್ರಮಾಣದ ಅರಿವು ನಿಮಗಿರಬೇಕು. ಇದರ ಬಗ್ಗೆ ಸಂಪೂರ್ಣ ತಿಳಿವಳಿಕೆಯ ಅವಶ್ಯಕತೆ ಮಕ್ಕಳಿಗೆ ಇಲ್ಲ. ಮಕ್ಕಳ ಬೆಳವಣಿಗೆಯ ಸಮಯದಲ್ಲಿ ಒಳ್ಳೆಯ ಲೈಂಗಿಕ ದೃಷ್ಟಿಕೋನವನ್ನು ಬೆಳಸಿಕೊಳ್ಳುವ ಅನೇಕ ಅವಕಾಶಗಳು ಒದಗಿ ಬರುತ್ತವೆ. ಅಂಥ ಅವಕಾಶ ಯಾವುದೆಂದು, ಯಾವಾಗ

ಬರುವುದೆಂದು ಹೇಳುವುದು ಅಸಾಧ್ಯ. ಇದನ್ನು ಪೂರ್ಣವಾಗಿ ಗಮನಿಸಬೇಕೇ ಹೊರತು ಒಂದು ನಿರ್ದಿಷ್ಟ ಘಟನೆಯಿಂದ ನಿರ್ಧರಿಸಲಾಗುವುದಿಲ್ಲ.

ಆಜೀವ ಪರ್ಯಂತವೂ ಲೈಂಗಿಕ ಮನೋಭಾವ ಮಾನವನಲ್ಲಿದ್ದೇ ಇರುತ್ತದೆ. ಅದು ಹಠಾತ್ತಾಗಿ ತಾರುಣ್ಯದಲ್ಲಿ ಉದ್ಭವಿಸುವ ಭಾವನೆಯಲ್ಲ. ಅದಕ್ಕೂ ಮೊದಲು-ಹುಟ್ಟಿನಿಂದಲೂ – ಆ ಭಾವನೆ ಮನದ ಯಾವುದೋ ಮೂಲೆಯಲ್ಲಿ ಅಡಗಿರುತ್ತದೆ.

ಮಕ್ಕಳನ್ನು ಪ್ರೀತಿಸದವರಾರು ? ಅದರಲ್ಲೂ ತಮ್ಮದೇ ರಕ್ತದಿಂದ ಹುಟ್ಟಿರುವ ಮಕ್ಕಳನ್ನೂ ಪ್ರೀತಿಸದವರು ಪ್ರಪಂಚದಲ್ಲಿಯೇ ಇಲ್ಲ ಎನ್ನಬಹುದು. ನಿಮ್ಮ ಮಕ್ಕಳನ್ನು ಎತ್ತಿ, ಆಡಿಸಿ, ಮುದ್ದಾಡುತ್ತೀರಿ; ಪ್ರೀತಿಯಿಂದ ರಕ್ಷಿಸುತ್ತೀರಿ; ಹಸಿವನ್ನು ಹಿಂಗಿಸುತ್ತೀರಿ; ಅವರೊಡನೆ ನಕ್ಕು ಅವರ ನಲಿವಿನೊಡನೆ ನೀವೂ ಭಾಗಿಯಾಗಿರುತ್ತೀರಿ. ಇದೇ ಲೈಂಗಿಕ ಶಿಕ್ಷಣದ ಪ್ರಥಮ ಹಂತ. ಪ್ರೀತಿ ಎಂದರೇನೆಂಬುದು ಈಗಿನಿಂದಲೇ ನಿಮ್ಮಿಂದ ಮಕ್ಕಳಿಗೆ ತಿಳಿಯುತ್ತದೆ. ಪ್ರೀತಿಯನ್ನು ತೋರಿಸಿ ಮಾನವ ಪ್ರೇಮದ ಅರಿವನ್ನು ಅವರಲ್ಲಿ ಮೂಡಿಸುತ್ತೀರಿ. ಸಮಾಜದಲ್ಲಿ ಅವರು ಒಬ್ಬ ಸಮರ್ಪಕ ವ್ಯಕ್ತಿಯಾಗಿ ಬಾಳುವಂತೆ ಮಾಡುತ್ತೀರಿ. ಇತರರೊಡನೆ ನಂಬಿಕೆಯಿಂದ ಬೆರೆತು, ಆತ್ಮೀಯವಾಗಿ ನಡೆಯಲು ಸಹಕಾರಿಯಾಗುತ್ತೀರಿ. ಇಲ್ಲಿಗೆ ಅವರ ಸ್ಥಾಯಿ ಪ್ರೇಮಜೀವನದ ಅಡಿಪಾಯವನ್ನು ಹಾಕಿದಂತಾಯಿತು.

ನೀವು ಆಹಾರದ ಬಗ್ಗೆ ಹೆಚ್ಚು ಗಮನ ನೀಡುತ್ತೀರಿ. ಅಂತೆಯೇ ಆರೋಗ್ಯದ ಬಗ್ಗೆಯೂ ಗಮನ ನೀಡುತ್ತೀರಿ. ಆದರೂ ಮಕ್ಕಳು ಯಾವಾಗಲೂ ಕೊಳಕಾಗಿರುತ್ತಾರೆ. ಅದೇನೂ ಕೆಟ್ಟದ್ದಲ್ಲ. ದೈಹಿಕಕ್ರಿಯೆ ಸಾಮಾನ್ಯವಾದುದು. ನಿಮ್ಮ ಮಗುವಿಗೆ ಸ್ವತಂತ್ರವಾಗಿ ಆಲೋಚಿಸುವುದನ್ನು ಕಲಿಸುತ್ತೀರಿ. ಈಗ ಅವನು ತನ್ನ ಕಾರ್ಯಗಳಿಗೆ ಯಾರನ್ನೂ ಅವಲಂಬಿಸಬೇಕಾಗಿಲ್ಲ. ತನ್ನದೇ ಸ್ವಂತ ವಿಚಾರಗಳನ್ನು ಮೂಡಿಸಿಕೊಳ್ಳುವಂತೆ ಮಾಡಿದ್ದೀರಿ. ಉಡುಪು, ಆಟ, ಆಹಾರದ ವಿಷಯದಲ್ಲಿಯೂ ಅವನ ಇಚ್ಛೆಯಂತೆ ನಡೆಯುವ ಅವಕಾಶ ಒದಗಿಸಿದ್ದೀರಿ. ತಾನೊಬ್ಬ ಸಮರ್ಥ ಹಾಗೂ ಜವಾಬ್ದಾರಿಯುತ ವ್ಯಕ್ತಿ ಎಂಬ ಭಾವನೆ ಅವನಲ್ಲಿ ಮೂಡಿಸುತ್ತೀರಿ. ಈಗ ಅವನು ಲೈಂಗಿಕ ವಿಷಯವೇ ಆಗಲಿ, ರಾಜಕೀಯವೇ ಆಗಲೀ, ಜೀವನವೇ ಆಗಲೀ ಯಾವುದರ ಬಗ್ಗೆಯಾದರೂ ಚತುರ ನಿರ್ಧಾರಗಳನ್ನು ಕೈಗೊಳ್ಳಲೂ ಸಮರ್ಥನಾಗುತ್ತಾನೆ. ಇದು ಲೈಂಗಿಕ ಶಿಕ್ಷಣದ ಪ್ರಮುಖ ಹಂತ.

ಮಕ್ಕಳು ತಮ್ಮ ದೇಹದ ಬಗ್ಗೆ ಗಮನ ಹರಿಸುತ್ತಾರೆ. ಆಶ್ಚರ್ಯದಿಂದ ತನ್ನ ಅಂಗಾಂಗಳನ್ನು ನೋಡಿಕೊಳ್ಳುತ್ತಾರೆ. ಕಣ್ಣು, ಕಿವಿ, ಮೂಗು ಇವುಗಳಂತೆಯೇ ಲೈಂಗಿಕ ಅವಯವವನ್ನೂ ನೋಡಿಕೊಳ್ಳುತ್ತಾನೆ – ಮಿಕ್ಕವನ್ನು ಸ್ಪರ್ಶಿಸುವಂತೆ ಅದನ್ನೂ ಸ್ಪರ್ಶಿಸುತ್ತಾನೆ– ಈಗ ಅವನಿಗೆ ಅಂಗಾಂಗಗಳ ಹೆಸರು, ಕ್ರಿಯೆ ಇವುಗಳ

ಬಗ್ಗೆ ತಿಳುವಳಿಕೆ ನೀಡುವುದು ಅವಶ್ಯಕವಾಗುತ್ತದೆ. ಅಂಗಾಂಗಗಳ ಹೆಸರನ್ನು ತಿಳಿದುಕೊಳ್ಳುವುದು ಲೈಂಗಿಕ ಶಿಕ್ಷಣದ ಮತ್ತೊಂದು ಪ್ರಮುಖ ಭಾಗ– ಸಾಮಾನ್ಯವಾಗಿ ಇವುಗಳು ಅವರಿಗೇ ತಿಳಿಯುತ್ತದೆ. ಕಾಲನ್ನು ಕಾಲೆಂದೂ, ಕಿವಿಯನ್ನು ಕಿವಿಯೆಂದೂ, ತಿಳಿಯುವಂತೆ ಲೈಂಗಿಕ ಅವಯವಗಳ ಹೆಸರನ್ನೂ ತಿಳಿಸಬೇಕು. ಇದೇನೂ ಕಷ್ಟವಿಲ್ಲ. ನೀವು ಆ ಪದಗಳನ್ನು ಉಪಯೋಗಿಸಿದರೆ ಅವರೂ ಉಪಯೋಗಿಸುತ್ತಾರೆ. ದಿನನಿತ್ಯದ ಬಳಕೆಯ ಮಾತುಗಳಲ್ಲಿ ಇವನ್ನು ಸೇರಿಸಿ ಆಡಿದರೆ, ಮಕ್ಕಳು ಅವನ್ನು ಸ್ವಾಭಾವಿಕವಾಗಿ ಕಲಿಯುತ್ತಾರೆ. ಇದರಿಂದ ಲೈಂಗಿಕ ಶಿಕ್ಷಣ ಬಹಿರಂಗವಾಗಿ ನಡೆಯಲು ಸಹಕಾರಿಯಾಗುತ್ತದೆ.

ಅವಯವಗಳಿಗೆ ತಮ್ಮದೇ ಆದ ಕೆಲಸಗಳಿರುತ್ತವೆ. ಅವುಗಳಿಗೆ ಹೆಸರುಗಳೂ ಉಂಟು. ಮಕ್ಕಳು ಅವನ್ನು ದಿನನಿತ್ಯದ ಜೀವನದಲ್ಲಿ ಕಲಿಯಬಹುದು. ಮೂಸುವುದು, ನೋಡುವುದು, ಕೇಳುವುದು, ಎತ್ತುವುದು, ಹಿಡಿಯುವುದು, ಇತ್ಯಾದಿ. ಇದೇ ರೀತಿ ನೀವು ಲೈಂಗಿಕ ಶಿಕ್ಷಣವನ್ನು ಪ್ರಾಸಂಗಿಕವಾಗಿ ಸುಲಭವಾಗಿ ನೀಡಬಹುದು. ಮಲಮೂತ್ರವಿಸರ್ಜನೆ, ಮುಟ್ಟಾಗುವಿಕೆ ಇತ್ಯಾದಿ ಕ್ರಿಯೆಗಳು ತಿಳಿಸಬಾರದಂಥವೇನಲ್ಲ. ಈ ಪದಗಳನ್ನು ನಿಮ್ಮ ಮಕ್ಕಳಿಗೆ ತಿಳಿಸಬೇಕಾದುದು ಅತ್ಯಾವಶ್ಯಕ. ನೇರವಾಗಿ ಹೇಳುವುದು ಉತ್ತಮ. ಸರಿಯಾದ ಪದಗಳ ತಿಳುವಳಿಕೆಯಿಂದ ಹಾನಿಯುಂಟಾಗದು. ನೀವು ವೈಜ್ಞಾನಿಕ ಪಾರಿಭಾಷಿಕ ಪದಗಳಿಂದ ತಿಳಿಸುವುದರಲ್ಲಿ ಅರ್ಥವಿಲ್ಲ. ಇಲ್ಲವಾದರೆ ನಿಮ್ಮ ಮಗು ಸಮರ್ಥವಾದ ವ್ಯಕ್ತಿತ್ವವನ್ನು ರೂಪಿತಗೊಳಿಸಿಕೊಳ್ಳುವುದಿಲ್ಲ.

ನೀವು ಅವರಿಂದ ಏನನ್ನೂ ಅಪೇಕ್ಷಿಸದೆ ಅವರ ಹಿರಿಯ ಕಾರ್ಯಗಳನ್ನು ಶ್ಲಾಘಿಸಬೇಕು. ಅದೇ ಅವನಿಗೆ ನಿಜವಾಗಿಯೂ ಬೇಕಾಗಿರುವ ಆಶ್ವಾಸನೆ. ಅವನಿಗೆ ಹೆಚ್ಚು ಸೌಲಭ್ಯಗಳನ್ನು ಕಲ್ಪಿಸಿಕೊಡಿ. ತಾನು ದೊಡ್ಡ ವ್ಯಕ್ತಿಯೆಂದು ನಿರೂಪಿಸಲು ಬೇಕಾದ ಅವಶ್ಯಕತೆಗಳನ್ನು ಕಡಿಮೆಮಾಡದಿರಿ.

ನಿಮ್ಮ ಮಕ್ಕಳನ್ನು ಒಂದು ಪೆರೇಡಿಗೆ ಕರೆದೊಯ್ಯುತ್ತೀರಿ. ನಿಮ್ಮ ಮಗುವಿಗೆ ಅಲ್ಲಿನ ದೃಶ್ಯಗಳು ಕಾಣಿಸದಿದ್ದರೆ ಆತನನ್ನು ಮೇಲಕ್ಕೆ ಎತ್ತಿ ಅಲ್ಲಿನ ದೃಶ್ಯಗಳು ಸ್ಪಷ್ಟವಾಗುವಂತೆ ಮಾಡುತ್ತೀರಿ. ಅದೇ ರೀತಿ ಅವರಿಗೆ ಲೈಂಗಿಕತೆಯ ಅರಿವು ನಿಮ್ಮಿಂದ ಮೂಡಬೇಕಾಗುತ್ತದೆ. ಇದೇ ನಿಜವಾದ ಲೈಂಗಿಕ ಶಿಕ್ಷಣ. ಇದನ್ನೇ ಲೈಂಗಿಕತೆಯ ಇಣುಕು ನೋಟವೆನ್ನುತ್ತಾರೆ.

ಮಕ್ಕಳಿಗೆ ತಮ್ಮ ದೇಹದ ಅಂಗಾಂಗಗಳ ರೀತಿಯ ಅರಿವು ಇರುತ್ತದೆ. ಇತರ ಮಕ್ಕಳೂ ಸಹ ಅದೇ ರೀತಿಯೇ ಇರುತ್ತಾರೆಂದೂ ಸಾಮಾನ್ಯವಾಗಿ ತಿಳಿದಿರುವುದು

ಖಂಡಿತ. ಹುಡುಗರು ಹುಡುಗಿಯರು ಹೇಗೆ ಕಾಣುತ್ತಾರೆಂದೂ, ಹುಡುಗಿಯರು ಹುಡುಗರು ಹೇಗೆ ಕಾಣುತ್ತಾರೆಂದೂ ಕುತೂಹಲದಿಂದ ನೋಡುತ್ತಾರೆ. ಅದೇ ರೀತಿ ಹಿರಿಯರ ಬಗ್ಗೆಯೂ ತಿಳಿಯಲು ತವಕಿಸುತ್ತಾರೆ.

ಕುತೂಹಲ ತುಂಬಾ ಸಹಜವಾದುದು. ಲೈಂಗಿಕ ಅವಯವಗಳ ಹೆಸರುಗಳನ್ನು ಉಚ್ಚರಿಸುವಾಗ ನಿಮಗೆ ಆತಂಕವುಂಟಾಗುತ್ತದೆ. ಇಂಥ ಪದಗಳನ್ನು ನಿಮ್ಮ ಮಗು ಉಚ್ಚರಿಸದಂತೆ ನೀವು ಎಚ್ಚರವಹಿಸುತ್ತೀರಿ. ಆಕಸ್ಮಾತ್ ಹೇಳಿದರೆ ಬಯ್ಯುತ್ತೀರಿ.

ನಿಮ್ಮ ಮಗು ಇಣಿಕಿನೋಡಿದಾಗ ಅವನನ್ನು ಪೋಲಿ ಎಂದು ಭಾವಿಸುವುದು ತಪ್ಪು. ಇಣುಕುವುದು ಅಸ್ವಾಭಾವಿಕವಲ್ಲ. ಮಕ್ಕಳಿಗೆ ಕುತೂಹಲ ಹೆಚ್ಚು. ಅದರಿಂದ ಅವರು ಹಾಗೆ ಮಾಡಬಯಸುತ್ತಾರೆ; ದೊಡ್ಡವರೂ ಅನೇಕರು ಹಾಗೆ ಮಾಡುತ್ತಾರೆ. ನಿಮ್ಮ ಮತ್ತು ಮಕ್ಕಳ ನಡುವೆ ಒಳ್ಳೆಯ ತಿಳುವಳಿಕೆ ಮತ್ತು ಸೌಹಾರ್ದ ಮೂಡಲು ಕ್ಷೇಮಕರವಾದ ಹಾಗೂ ಆರೋಗ್ಯಕರವಾದ ನಡವಳಿಕೆಯನ್ನು ಮಕ್ಕಳು ಪಡೆಯಲು ಲೈಂಗಿಕಶಿಕ್ಷಣ ಅವಶ್ಯಕವೆಂದು ಆಗ ನಿಮಗೆ ತಿಳಿಯುತ್ತದೆ.

ಈ ಶಿಕ್ಷಣದಲ್ಲಿ ಆತುರಪಡಬಾರದು. ಶಿಕ್ಷಣ ನೀಡುವಾಗ ತುಂಬಾ ಎಚ್ಚರಿಕೆ ಬೇಕು. ನಿಮ್ಮ ಮಕ್ಕಳ ಎಲ್ಲಾ ನಡವಳಿಕೆಗಳ ಮೇಲೂ ಗಮನವಿರಬೇಕು. ಅವರಿಗೆ ಕೈತೊಳೆಯುವುದನ್ನೂ, ಕಾಲು ಒರೆಸುವುದನ್ನೂ ಇತ್ಯಾದಿಗಳನ್ನು ಕಲಿಸುವಂತೆಯೇ, ಇದನ್ನೂ ಕಲಿಸಬಹುದು. ಆದರೆ ಸ್ವಲ್ಪ ಶ್ರಮ ಬೇಕು.

ನಿಮ್ಮ ಮಕ್ಕಳು ಕಾರುಮೋಟಾರುಗಳ ಬಗ್ಗೆ, ವಿಮಾನದ ಬಗ್ಗೆ ಕುತೂಹಲಿಗಳಾದಂತೆ ಲೈಂಗಿಕತೆಯ ಬಗ್ಗೆಯೂ ಆಗಿರುತ್ತಾರೆ. ಆದರೆ ಅವರಿಗೆ ಇದನ್ನು ನೀವು ರಂಜನಾತ್ಮಕವಾದ ರೀತಿಯಲ್ಲಿ ಕಲಿಸಬೇಕು. ಹೀಗೆ ವಿವರಿಸುವುದು ಅವರ ಕುತೂಹಲವನ್ನು ಹತ್ತಿಕ್ಕುವುದಕ್ಕಿಂತ ಒಳ್ಳೆಯದು. ಎರಡೂ ಬಗೆಯ ಮಕ್ಕಳಿರುವ ಮನೆಗಳಲ್ಲಿ ಇದನ್ನು ಕಲಿಸುವುದು ಸುಲಭ. ಒಟ್ಟಾಗಿ ಸ್ನಾನಮಾಡಿಸುವುದು, ಉಡುಪನ್ನು ತೊಡಿಸುವುದು ಮಾಡಿದರೆ ಮಕ್ಕಳಿಗೆ ಸ್ವಾಭಾವಿಕ ತಿಳುವಳಿಕೆ ನೀಡಲು ಸಹಕಾರಿಯಾಗುತ್ತದೆ. ಉತ್ತಮ ತಿಳುವಳಿಕೆ ನೀಡಲು ಸುಲಭವಾದ ಉಪಾಯ. ನೀವು ಅವರನ್ನು ಪ್ರತ್ಯೇಕಿಸಿದಲ್ಲಿ ಕುತೂಹಲಭರಿತರಾಗುತ್ತಾರೆ. ಅವರೀರ್ವರನ್ನೂ ಒಟ್ಟಾಗಿ ಬೆಳಿಸಿದರೆ ನಿಮ್ಮ ಕಾರ್ಯ ಸುಗಮ.

ಒಂದೇ ಲಿಂಗದ ಮಕ್ಕಳು ಅಥವಾ ಒಂದೇ ಮಗುವಿರುವ ಮನೆಯಲ್ಲಿ ಈ ರೀತಿ ತಿಳುವಳಿಕೆ ನೀಡಲು ಅವಕಾಶಗಳು ಕಡಿಮೆ. ಇಂಥವರಿಗೊಂದು ಸಲಹೆ. ನಿಮ್ಮ ನೆಂಟರ ಅಥವಾ ಮಿತ್ರರ ಮನೆಯಲ್ಲಿ ಅದೇ ವಯಸ್ಸಿನ ವಿರುದ್ಧಲಿಂಗದ ಮಕ್ಕಳನ್ನು ಕರೆತಂದು ನಿಮ್ಮ ಮಕ್ಕಳ ಜೊತೆಗೆ ಆಡಿಸುವುದರಿಂದಲೂ, ತಿನ್ನಿಸುವುದರಿಂದಲೂ ಅವರ ಜೊತೆ ಸ್ನೇಹದಿಂದಿರಲು ಅವಕಾಶಮಾಡಿಕೊಡುವುದರಿಂದಲೂ ತಿಳಿವಳಿಕೆ

ನೀಡುವುದು ಸುಲಭ. ಈ ಕಾರ್ಯವನ್ನು ಮಕ್ಕಳು ನಾಲ್ಕೈದು ವರುಷದವರಾದಾಗಲೇ ಮಾಡಿದರೆ ಒಳಿತು. ಈ ರೀತಿ ಮಾಡುವುದರಿಂದ ಅವರಿಗೆ ಲೈಂಗಿಕತೆಯೇ ಅಲ್ಲದೆ ಸಾಮಾಜಿಕ ನಡೆವಳಿಕೆಯನ್ನೂ ಕಲಿಸಲು ಸಹಕಾರಿಯಾಗುತ್ತವೆ.

ಮೇಲೆ ಹೇಳಿದಂತೆ ಇತರ ಮಕ್ಕಳನ್ನು ಕರೆತಂದಾಗ ಒಬ್ಬರು ಇನ್ನೊಬ್ಬರ ದೇಹವನ್ನು ನೋಡಿ ಅರ್ಥಮಾಡಿಕೊಳ್ಳಲು ಅನುಕೂಲಗಳನ್ನು ಏರ್ಪಡಿಸಬೇಕು.

ನಿಮ್ಮ ಮಕ್ಕಳು ಹೇಳಿದಹಾಗೆ ನೀವು ನಡೆದುಕೊಳ್ಳಬೇಕು. ಅದು ಸುಲಭವಾದುದು. ಮಗು ಇನ್ನೊಂದು ಮಗುವಿನ ಲಿಂಗವನ್ನು ತೋರಿಸುತ್ತ ಅದನ್ನು ನೋಡು ಎಂದಾಗ ನೋಡಿರಿ. ಹೆಣ್ಣು ಮಗುವಿನ ಲಿಂಗವನ್ನು ತೋರಿಸಿ ಅದು ಯಾಕೆ ಹಾಗೆ? ಎಂದರೆ, ಆಕೆ ಹೆಣ್ಣು ಎಂಬುದನ್ನೂ ನಿಮ್ಮ ಮಗು ಗಂಡು ಎಂಬುದನ್ನೂ ವಿವರಿಸಿರಿ.

ಇನ್ನೊಬ್ಬರ ಲಿಂಗವನ್ನು ನೋಡುವ ಅವಕಾಶ ಹೆಣ್ಣು ಮಕ್ಕಳಿಗೆ ಅವಶ್ಯವಾಗಿ ಬೇಕು. ಏಕೆಂದರೆ ತಮಗೆ ಶಿಶ್ನವೇ ಇಲ್ಲ ಎಂದು ಅಚ್ಚರಿಪಡುತ್ತಾರೆ. ತಾವು ಅದೇನೋ ವಿಶೇಷವೆಂದು ಆತಂಕಪಡುವುದೂ ಉಂಟು. ಅದಕ್ಕಾಗಿಯೇ ನೀವು ಗಂಡು ಮಕ್ಕಳಿಗೆ ಮಾತ್ರ ಈ ಲಿಂಗ ಇರುತ್ತದೆಂದೂ ಹೆಣ್ಣು ಮಕ್ಕಳಿಗೆ ಇರುವುದಿಲ್ಲವೆಂದೂ ತಿಳಿಸಿ, ಅವರಿಗೆ ಯೋನಿ ಇರುತ್ತದೆ ಎಂದು ತಿಳಿಸಿದರೆ ಅವರ ಮನಸ್ಸಿಗೆ ನೆಮ್ಮದಿ.

ಒಳ್ಳೆಯ ಶಾಲೆಗಳು, ವಿಶೇಷವಾಗಿ ಶಿಶುವಿಹಾರಗಳು ಹಾಗೂ ಕಿಂಡರ್ ಗಾರ್ಟನ್ಸ್ ಶಾಲೆಗಳಲ್ಲಿ ಈ ವ್ಯವಸ್ಥೆ ಇರುತ್ತದೆ. ಅಲ್ಲಿ ಗಂಡು ಮಕ್ಕಳಿಗೂ, ಹೆಣ್ಣು ಮಕ್ಕಳಿಗೂ ಒಂದೇ ಟಾಯ್‌ಲೆಟ್ ಇರುತ್ತದೆ. ಇದು ಅವರ ಶಿಕ್ಷಣ ಕ್ರಮದ ಭಾಗವೂ ಹೌದು. ಮಕ್ಕಳಿಗೆ ಕುತೂಹಲವಿರುತ್ತದೆ ಎಂಬುದನ್ನು ಈ ರೀತಿಯ ಶಿಕ್ಷಣ ಸಂಸ್ಥೆಗಳವರು ತಿಳಿದಿರುತ್ತಾರೆ ಮತ್ತು ಈ ವಿಷಯದಲ್ಲಿ ಅವರು ಚತುರರಾಗಿ ವರ್ತಿಸುತ್ತಾರೆ.

ಕೆಲವು ಮನೆಗಳಲ್ಲಿ ಸ್ನಾನ ಮಾಡುವ ವೇಳೆ, ಪ್ರಾತಃಕಾಲದಲ್ಲಿ ಮತ್ತು ರಾತ್ರಿ ಕಾಲದಲ್ಲಿ ಬೆತ್ತಲೆಯಿರುತ್ತಾರೆ. ಆಗ ಮಕ್ಕಳು ಅವರನ್ನು ನೋಡಬಹುದು. ಇದೂ ಸಹ ತಂದೆ ತಾಯಿಯರಿಗೆ ಸಮ್ಮತಿಯಿದ್ದಲ್ಲಿ ಒಳ್ಳೆಯ ಅಭ್ಯಾಸ. ಈ ಮೂಲಕವೂ ಸಹ ಲೈಂಗಿಕ ವಿಷಯಗಳನ್ನು ತಿಳಿಸಬಹುದು.

ಅನೇಕವೇಳೆ ಮಕ್ಕಳ ಕುತೂಹಲವನ್ನು ಕಂಡು ನೀವು ಇರುವುದನ್ನು ಇದ್ದ ಹಾಗೆ ತಿಳಿಸುವುದು ಕಷ್ಟವಾಗುತ್ತದೆ. ಮಕ್ಕಳಿಗೆ ಕುತೂಹಲ ಅಧಿಕ. ಅನೇಕ ವೇಳೆ

ಕೆಲವು ಸ್ನಾನದ ಮನೆಯ ಪ್ರಶ್ನೆಗಳನ್ನು ನಿಮ್ಮ ಮಕ್ಕಳು ಕೇಳಬಹುದು. ಉದಾ : ಕ್ಷೌರವೆಂದರೇನು ? ಕೆಲವು ವೇಳೆ ನೀವು ಬಟ್ಟೆ ಬದಲಾಯಿಸುತ್ತಿರುವಾಗಲೇ, ಶಾಲೆಯ ಬಗ್ಗೆಯೋ ಆಟದ ಬಗ್ಗೆಯೋ ಮಾತನಾಡುತ್ತಿರಬಹುದು. ಅಕಸ್ಮಾತ್ ಅವರ ಗಮನ ನಿಮ್ಮೆಡೆಗೆ ಹರಿದು ನಿಮ್ಮ ಬಗ್ಗೆಯೂ ಪ್ರಶ್ನೆ ಕೇಳಬಹುದು. ಲೈಂಗಿಕ ಶಿಕ್ಷಣ ಮುಖ್ಯ. ಆದರೆ ಇಡೀ ಜೀವನವೇ ಅದಲ್ಲ.

ನಿಮ್ಮ ಮಗುವು ನಿಮ್ಮ ಭುಜಗಳನ್ನು ನೋಡಿ ಅವು ದೊಡ್ಡದು ಎನ್ನುವಂತೆ ನಿಮ್ಮ ಜನನೇಂದ್ರಿಯವನ್ನು ನೋಡಿ ದೊಡ್ಡದು ಎನ್ನಬಹುದು. ನೀವು ಅದನ್ನು ಒಪ್ಪಿ ಅದರ ಬಗ್ಗೆ ತಿಳಿಸಬೇಕು.

ಮಕ್ಕಳು ಬರೀ ಪದಗಳಿಂದ ಕಲಿಯುವುದಿಲ್ಲ. ಅದಕ್ಕೆ ಪ್ರತ್ಯೇಕವಾದ ಕ್ಷೇತ್ರವಿದೆ. ಅದನ್ನೇ ನಾವು ಲೈಂಗಿಕ ಶಿಕ್ಷಣವೆಂದು ಕರೆಯುತ್ತೇವೆ. ಮಕ್ಕಳು ತಮ್ಮ ಜನನೇಂದ್ರಿಯವನ್ನು ಮುಟ್ಟುತ್ತವೆ. ಇದೇನೂ ಕೆಟ್ಟದಲ್ಲ. ಈ ಪ್ರಯೋಗ ಅವರ ಬಾಲ್ಯ ಜೀವನದುದ್ದಕ್ಕೂ ನಡೆಯುತ್ತದೆ. ನಿಮ್ಮ ತಾಳ್ಮೆಯೂ ಸಹ ಇದೇ ರೀತಿ ಮುಂದುವರೆಯಬೇಕು.

ಮಕ್ಕಳಿಗೆ ಲೈಂಗಿಕ ಆಲೋಚನೆಗಳು ಉಂಟಾಗುತ್ತವೆ. ವಿವಿಧ ಬಗೆಯ ಆಟಗಳನ್ನು ಆಡುತ್ತವೆ. ಅದಕ್ಕೆ ಅಡೆ ತರಕೂಡದು. 'ನಾನು ತಾಯಿಯಾಗಬೇಕು', 'ನನ್ನ ಹೊಟ್ಟೆಯಲ್ಲಿ ಒಂದು ಮಗುವಿರಬೇಕು !' ಎನ್ನುತ್ತಾರೆ ಮಕ್ಕಳು. ಈ ಸಮಯದಲ್ಲಿ ನೀವು ವೈದ್ಯರಾಗಿ ಮಗುವನ್ನು ಹೊರಗೆ ತರಿಸುವಂತೆ ನಟಿಸಬೇಕು. ಅವರು ಬೆಳೆದಂತೆ ಅವರ ಆಟಗಳೂ ಬೆಳೆಯುತ್ತವೆ. ಈ ಆಟಗಳಿಗೆ ಕೊನೆಯೇ ಇಲ್ಲ.

ನೀವು ನಿಮ್ಮ ಮಕ್ಕಳ ಕುತೂಹಲವನ್ನು ಗಮನಿಸುತ್ತಿರುವಾಗ ಅವರ ಆಟಗಳಲ್ಲಿಯೂ ಲೈಂಗಿಕ ಜ್ಞಾನದ ಏಳಿಯನ್ನು ಕಾಣಬಹುದು. ಇದಕ್ಕೆ ಸಂಬಂಧಪಟ್ಟ ಪದಗಳನ್ನೂ ಅವರು ಸಾಮಾನ್ಯವಾಗಿ ಬಳಸುತ್ತಾರೆ.

ಮಗು ತನ್ನ ನಾಲ್ಕೈದು ವರ್ಷಗಳ ವಯಸ್ಸಿನಲ್ಲಿ ಮಾಡಿದ ಕೆಲಸಗಳನ್ನು ಹತ್ತು ವರ್ಷಗಳ ಅನಂತರ ಅದೇ ತಪ್ಪೆಂದು ತಿಳಿಯಬಹುದು. ಮಗು ಬೆಳೆದಂತೆ ಅದರ ನಡವಳಿಕೆಯೂ ಬದಲಾಗುತ್ತದೆ. ಈ ಬದಲಾವಣೆಗಳು ಅಪ್ರಯತ್ನವಾಗಿ ನಡೆಯುವಂಥವು. ತೆವಳುವ ಮಗು ನಡೆಯುವುದನ್ನು ಕಲಿಯುವಂತೆ, ಕುಡಿಯುವ ಮಗು ಅಗಿಯುವುದನ್ನು ಕಲಿಯುವಂತೆ, ಈ ಬದಲಾವಣೆಗಳು ಸಹಜವಾಗಿ ಉಂಟಾಗುತ್ತವೆ.

ಈ ಬದಲಾವಣೆಗಳಲ್ಲಿ ಅಚ್ಚರಿಯೇನಿಲ್ಲ. ಕೆಲಮಕ್ಕಳಿಗೆ ಇದು 8ರ ವಯಸ್ಸಿಗೇ ಕಾಣಿಸಿಕೊಳ್ಳುತ್ತದೆ. ಎಂಟು ವರ್ಷದ ಮಗು ತನ್ನ ಕೋಣೆಯ ಬಾಗಿಲನ್ನು

ಮುಚ್ಚಿಕೊಳ್ಳುತ್ತದೆ. ಮಕ್ಕಳು ಏಕಾಕಿಯಾಗಿರಲು ಬಯಸುತ್ತಾರೆ. ನೀವು ಅವರಿಗೆ ಸಭ್ಯತೆಯನ್ನು ಕಲಿಸಬೇಕಾಗಿಲ್ಲ. ಬೆಳವಣಿಗೆಯೇ ಅವರಿಗೆ ಪಾಠ ಕಲಿಸುತ್ತದೆ.

ನಿಮ್ಮ ಅತಿ ಕುತೂಹಲ ಅವರ ಬೆಳವಣಿಗೆಯ ವೇಗವನ್ನು ತಡೆಗಟ್ಟಬಹುದು. ಅವರ ಲೈಂಗಿಕ ಶಿಕ್ಷಣದ ಬಗ್ಗೆ ಪ್ರತ್ಯೇಕ ಗಮನ ನೀಡಬೇಕಾಗಿಲ್ಲ. ಹುಡುಗ ತನ್ನ ಹುಡುಗುತನವನ್ನು ಮತ್ತು ಮನುಷ್ಯತ್ವವನ್ನು ಅರಿಯಬೇಕು. ಹುಡುಗಿಯರೂ ಸಹ ಸಮಾಜದಲ್ಲಿ ತಮ್ಮ ಪಾತ್ರವನ್ನು ತಿಳಿದಿರಬೇಕು. ಎರಡೂ ಲಿಂಗಗಳ ಮಕ್ಕಳು ಪರಸ್ಪರ ಭಾವನೆಗಳ ವಿನಿಮಯ ಮತ್ತು ಸಹಚರ್ಯಕ್ಕೆ ಬಾಲ್ಯ ಜೀವನದಲ್ಲಿ ಬೆಳಸಿ ಕೊಳ್ಳುವ ಪರಿಭಾವನೆಯೇ ಅವರ ಜೀವನಕ್ಕೆ ಅಡಿಪಾಯ. ಪುರುಷರು ಸಂಪಾದನೆ ಮಾಡುತ್ತಾರೆ; ಸ್ತ್ರೀಯರೂ ಮಾಡಬಹುದು. ಸ್ತ್ರೀಯರು ತಮ್ಮ ಸೌಂದರ್ಯದ ಕಡೆ ಹೆಚ್ಚು ಆಸ್ಥೆಯಿಂದಿರುತ್ತಾರೆ. ಕೆಲವೆಡೆ ಪುರುಷರೂ ಸಹ. ಇದರಿಂದಾಗಿ ಸ್ತ್ರೀ-ಪುರುಷರ ಸ್ವಭಾವದ ನಡುವೆ ಪ್ರತ್ಯೇಕತೆಯನ್ನು ಗುರುತಿಸುವುದು ಕಷ್ಟ. ಅದ ಕ್ಕಾಗಿಯೇ ನೀವು ನಿಮ್ಮ ಮಕ್ಕಳನ್ನು 'ಪುರುಷ'ರನ್ನಾಗಿಸಬೇಕು ; 'ಸ್ತ್ರೀ'ಯರನ್ನಾ ಗಿಸಬೇಕು. ಅದಕ್ಕಾಗಿಯೇ ಲೈಂಗಿಕ ಶಿಕ್ಷಣ ನೀಡಿ ಸಂತೋಷದಾಯಕ ತೃಪ್ತಿಕರ ಮತ್ತು ಸಾಫಲ್ಯ ಜೀವನವನ್ನು ನಡೆಸಲು ಲೈಂಗಿಕ ಶಿಕ್ಷಣದ ಅವಶ್ಯಕತೆ ಇದೆ.

ಪ್ರತಿಯೊಬ್ಬ ಹುಡುಗನು ಮನುಷ್ಯತ್ವವನ್ನು ತನ್ನ ದಾರಿಯಲ್ಲಿಯೇ ರೂಪಿಸಿ ಕೊಳ್ಳಬೇಕು. ಪ್ರತಿಯೊಬ್ಬ ಹುಡುಗಿಯೂ ಸಹ ತನ್ನ ಸ್ತ್ರೀತ್ವವನ್ನು ರೂಪಿಸಿ ಕೊಳ್ಳಬೇಕು. ಇದಕ್ಕೋಸ್ಕರವಾಗಿಯೇ ನೀವು ಅವರ ಲೈಂಗಿಕಾಸಕ್ತಿಯನ್ನು ಹತ್ತಿಕ್ಕಬಾರದು. ಕೆಲವು ಯುವಕರು ಹಲವು ಪರಿಸ್ಥಿತಿಗಳಿಂದಾಗಿ ಒಂದೇ ಬಗೆಯವ ರೊಡನೆ ಬೆರೆಯುತ್ತಾರೆ. ಅದಕ್ಕಾಗಿಯೇ ಹುಡುಗ ಮತ್ತು ಹುಡುಗಿಯರಿಗೆ ಲೈಂಗಿಕ ಶಿಕ್ಷಣ ನೀಡಿದರೆ ಅವರು ನಿಸ್ಸಂಕೋಚವಾಗಿ ಸಹಬಾಳ್ವೆ ನಡೆಸಿ ಎಲ್ಲರೊಡನೆ ಬೆರೆತು ಅಪಾರ ಅನುಭವಗಳನ್ನು ಪಡೆಯಲು ಸಾಧ್ಯ. ತಾಯಿತಂದೆಯರು ಪ್ರೀತಿ ಯಿಂದ ತಮ್ಮ ಮಕ್ಕಳ ಗೆಳೆಯ ಗೆಳತಿಯರ ಬಗ್ಗೆ ವಿಚಾರಿಸಬೇಕು. ಅವರು ವಿರುದ್ಧ ಲಿಂಗದವರೊಡನೆ ಸ್ನೇಹ ಬೆಳೆಸಲು ಹಿತವಾದ ವಾತಾವರಣ ಕಲ್ಪಿಸಬೇಕು. ಆಗ ಮಕ್ಕಳು ಸುಲಭವಾಗಿ ಸ್ವಾಭಾವಿಕವಾಗಿ ನಡೆದುಕೊಳ್ಳುತ್ತಾರೆ. ಆಸಕ್ತಿ, ಶಕ್ತಿ, ಸ್ಥಾನ, ಗಾತ್ರ ಇವೆಲ್ಲವೂ ಲೈಂಗಿಕತೆಗಿಂತಲೂ ಮುಖ್ಯ. ಇದಕ್ಕಾಗಿಯೇ ಹಿರಿಯರು ತರುಣರಲ್ಲಿ ಈ ಬಗ್ಗೆ ತಪ್ಪು ಅಭಿಪ್ರಾಯಗಳನ್ನು ಮೂಡಿಸಲು ಆಸ್ಪದ ಕೊಡ ಬಾರದು.

'ಲೈಂಗಿಕ ಶಿಕ್ಷಣ' ಎಂದರೆ ಇಂದು ಬಹಳ ಜನರಲ್ಲಿ ಕೇವಲ 'ಸಂಭೋಗಕ್ರಿಯೆ' **(Reproduction)** ಯನ್ನು ಪಾಠ ಮಾಡುವುದು ಎಂಬ ಅಭಿಪ್ರಾಯವಿದೆ. ಇದು ಸರಿಯಲ್ಲ. ಅವರ ಹಲವಾರು ಸಮಸ್ಯೆಗಳಿಗೆ ಉತ್ತರ ನೀಡುವಾಗ ನಮಗೆ ಆತಂಕ

ಕ್ಲಿಷ್ಟತೆಗಳು ಉಂಟಾಗುತ್ತವೆ. ಉದಾ: ನಿಮ್ಮ ಮಗು 'ಮಕ್ಕಳು ಎಲ್ಲಿಂದ ಬರುತ್ತವೆ?' ಎಂದು ಕೇಳಬಹುದು.

ಕೆಲವು ವೇಳೆ ಹಸಿ ಹಸಿಯಾದ ಪ್ರಶ್ನೆಗಳು ಉದ್ಭವಿಸುತ್ತವೆ. ಮಕ್ಕಳ ಮನಸ್ಸಿನಲ್ಲಿ ಅಪಾರ ಶಕ್ತಿ ಹೊಕ್ಕು ಅನೇಕ ಆಲೋಚನೆಗಳನ್ನು ಹೊರಡಿಸುತ್ತದೆ. ಅವರ ಆಲೋಚನೆಯ ಮೇಲೆ ಅವರು ತೋರಿಸುವ ಕುತೂಹಲ ಅದ್ಭುತವಾದುದು. ಮಕ್ಕಳು ತಮ್ಮ ಸುತ್ತಣ ಪರಿಸರದಲ್ಲಿ ಸಿಗುವ ಕೆಲವು ಚೂರುಗಳನ್ನು ಸೇರಿಸಿ ಒಂದು ಆಕೃತಿಯನ್ನಾಗಿ ಮಾಡುತ್ತಾರೆ. ಅವರ ಕುತೂಹಲಕ್ಕೆ ಇದು ಉದಾಹರಣೆ.

ಮಕ್ಕಳು ತಿಂಡಿ ತಿನ್ನುವಾಗ, ಬಸ್ಸಿನಲ್ಲಿರುವಾಗ, ರಸ್ತೆಯಲ್ಲಿ ನಡೆಯುವಾಗ, ಗುಂಪಿನಲ್ಲಿರುವಾಗ ಎಲ್ಲೆಂದರಲ್ಲಿ ಪ್ರಶ್ನೆಗಳನ್ನು ಕೇಳುತ್ತಾರೆ. ಅವರಿಗೆ ಇಂತಲ್ಲಿಯೇ ಪ್ರಶ್ನೆ ಕೇಳಬೇಕೆಂಬ ನಿಯಮ, ರೀತಿ ನೀತಿಗಳ ಅರಿವು ಇರದು. ಆ ಸಮಯದಲ್ಲಿ ಅವರನ್ನು ಗದರಿಸಿ ಸುಮ್ಮನಿರಿಸಿದರೆ, ಅವರ ಮಾನಸಿಕ ಬೆಳವಣಿಗೆಗೆ ತೊಂದರೆಯಾಗುತ್ತದೆ. ದೊಡ್ಡವರಿಗೆ ಅದು ಕೇಳಬಾರದ ಪ್ರಶ್ನೆಯೆಂಬ ಅರಿವು ಇದ್ದರೆ, ಮಕ್ಕಳಿಗೇಕಿರುತ್ತದೆ? ಆದ್ದರಿಂದ, ಅವರ ಸಮಸ್ಯೆಗೆ ಸೂಕ್ಷ್ಮವಾಗಿಯೋ, ಸೂಚ್ಯವಾಗಿಯೋ ಉತ್ತರ ಹೇಳಿ, ಅವರನ್ನು ಸಮಾಧಾನಗೊಳಿಸುವುದು ಒಳಿತು. ಪ್ರಶ್ನೆಗಳಿಗೆ ಅವರ ಬಳಿ ಕೊರತೆಯೇ ಇಲ್ಲ. ಒಂದರ ಹಿಂದೊಂದು ಸರಪಳಿಯೇ ಸಿದ್ಧವಾಗುತ್ತದೆ. ಅವರಿಗೆ ಯಾವಾಗಲೂ ಈ ಆಲೋಚನೆಗಳೇ ಬರುವುದು ಒಂದು ಅಚ್ಚರಿಯೇ ಸರಿ. ಮಕ್ಕಳು ಎಲ್ಲಿಂದ ಬರುತ್ತಾರೆ? ಎಂದು ಕೇಳುವಾಗ ಡಾಕ್ಟರು ಮಕ್ಕಳನ್ನು ತರುತ್ತಾರೆ; ದೇವರು ಕಳಿಸುತ್ತಾನೆ, ಮರಗಳಿಂದ ಬರುತ್ತಾರೆ, ಎಂದು ಉತ್ತರಿಸಿ ಜಾರಿಕೊಳ್ಳುತ್ತೇವೆ. ಅವರಿಗೆ ಅಂಡಾಶಯದ ಬಗ್ಗೆ ಯಾಗಲೀ ಜನನೇಂದ್ರಿಯದ ಬಗ್ಗೆ ಯಾಗಲೀ ಹೇಳದೇ, ಹೀಗೆ ಹಾರಿಕೆಯ ಉತ್ತರ ಕೊಡುವುದು ತಪ್ಪು. ಮಕ್ಕಳು ಏನನ್ನು ಹೇಳಿದರೂ ನಂಬುತ್ತಾರೆ. ಸುಳ್ಳು ಹೇಳುವುದರಿಂದ ಅಪಾಯವಿದೆ. ಅದಕ್ಕಾಗಿಯೇ ಮತ್ತೆ ಮತ್ತೆ ಪ್ರಶ್ನೆಗಳನ್ನು ಎದುರಿಸಬೇಕಾಗುತ್ತದೆ. ಕೆಲವು ವೇಳೆ ನಿಮ್ಮ ಮಕ್ಕಳು ಇನ್ನೂ ಮುಂದುವರೆದು ಪ್ರಶ್ನಿಸಬಹುದು. 'ಮಕ್ಕಳು ತಮ್ಮ ತಾಯಿಯ ಹೊಟ್ಟೆಯಲ್ಲಿ ಬೆಳೆಯುತ್ತಾರೆ! ಹೌದು ಅದು ನನಗೆ ಗೊತ್ತು; ಆದರೆ ಅದು ಹೇಗೆ ಹೊರಗೆ ಬರುತ್ತದೆ?' ಮಗು ಹೊರಗೆ ಬರಲು ವಿಶೇಷವಾದ ದಾರಿ ಇರುತ್ತದೆ ಎಂದು ತಿಳಿಸಬೇಕು. ತಾಯಿಗೆ ಹೊಸದಾಗಿ ಒಂದು ಮಗುವಾದಾಗ ಮಕ್ಕಳ ಈ ಪ್ರಶ್ನೆಗಳು ಸಹಜ. ತಾನು ಶಿಶುವನ್ನು ಪಡೆಯುವ ಬಗೆ ಹೇಗೆ? ಎಂಬ ಅಂಶ ಎಲ್ಲ ತಾಯಂದಿರಿಗೂ ತಿಳಿದಿರುತ್ತದೆ. ಆದರೆ ಇದು ಮಕ್ಕಳಿಗೆ ತಿಳಿಯದು. ನಿಮ್ಮಲ್ಲಿ ಕ್ರಮೇಣ ಆಗಿರುವ ಬೆಳವಣಿಗೆ ಅವರಿಗೆ ತಿಳಿಯುವುದಿಲ್ಲ; ಅವರು ಗಮನಿಸಿರುವುದೂ ಇಲ್ಲ. ಆದರೆ ಮಗುವು ಆಗುವವರೆಗೆ ನೀವು ಅವರಿಗೆ ತಿಳಿಸಲು ಇಚ್ಛಿಸುವುದಿಲ್ಲ.

'ಅಮ್ಮ ನೀನೇಕೆ ದಪ್ಪ ಆಗಿದ್ದೀಯಾ ?' ಎಂದು ಮಗು ಪ್ರಶ್ನಿಸಿದಾಗ, ಸತ್ಯಸಂಗತಿ ತಿಳಿಸಬೇಕು. 'ನನ್ನ ಹೊಟ್ಟೆಯಲ್ಲಿ ಒಂದು ಮಗು ಬೆಳೆಯುತ್ತಿದೆ. ನಿನಗೆ ತಮ್ಮನೋ ತಂಗಿಯೋ ಬರುತ್ತಾರೆ' ಎಂದು ಹೇಳಬೇಕು. ಈ ವೇಳೆಗೆ ತಾಯಿಯ ಪ್ರತಿಯೊಂದು ಅಂಗವನ್ನೂ ಮಗು ಗುರುತಿಸಬಹುದು. ಈಗ ಮತ್ತೆ ಒಂದು ಹೊಸ ತಿಳುವಳಿಕೆ ನೀಡಲು ಅವಕಾಶ ಲಭ್ಯವಾಗುತ್ತದೆ. 'ಸ್ತನಗಳು ಹಾಲನ್ನು ತಯಾರಿಸಲು ಸಿದ್ಧವಾಗುತ್ತಿವೆ. ಅದಕ್ಕೇ ದಪ್ಪಗಿವೆ. ಅದೇ ಹೊಟ್ಟೆಯಲ್ಲಿರುವ ಮಗುವಿಗೆ ಆಹಾರ. ಮಗುವು ಅದರಿಂದ ಹಾಲನ್ನು ಹೀರುತ್ತದೆ' ಎಂದು ಅವರಿಗೆ ತಿಳಿ ಹೇಳಬೇಕು.

ಮಕ್ಕಳು ಹೇಗೆ ಬೆಳೆಯುತ್ತಾರೆಂಬುದನ್ನು ತಿಳಿಯಲು ಅವರು ತವಕಿಸುತ್ತಾರೆ. ನೀವು ಅದನ್ನು ವಿವರಿಸಿ ನೀನೂ ಸಹ ಹಾಗೆಯೇ ಬೆಳೆದೆ ಎನ್ನಬೇಕು. 'ನೀನು ಹುಟ್ಟುವುದಕ್ಕೆ ಮುಂಚೆ 'ನನ್ನ ಬಸಿರಲ್ಲೇ ಬೆಳೆದೆ. ನೀನು ಚಿಕ್ಕ ಮಗುವಾಗಿದ್ದಾಗ ನಾನು ವಿಶೇಷ ಆಸ್ಥೆ ವಹಿಸಿ ನೋವಾಗದಂತೆ ಸಾಕಿದ್ದೇನೆ' ಎಂದೂ ತಿಳಿಸಬೇಕು.

ಮುಂದೆ ಆಗುವ ಮಗು ಗಂಡೋ ಹೆಣ್ಣೋ ಹೇಳುವುದು ಕಷ್ಟ. ಅದು ಯಾವುದಾದರೂ ಆಗಿರಲಿ ನಾವು ಅದನ್ನು ಪ್ರೀತಿಸುತ್ತೇವೆ. ನಿಮ್ಮ ಮಕ್ಕಳ ಒಳಿತಿಗಾಗಿ ನೀವು ಅವರ ಮನಸ್ಸಿಗೆ ನೋವಾಗದಂತೆ ಅವರಿಗೆ ಅಪ್ರಿಯವಾದುದನ್ನು ಮಾಡದೆ ಆದಷ್ಟೂ ಅವರು ಆಶಾಪೂರಿತರಾಗಿರುವಂತೆ ಯತ್ನಿಸಬೇಕು. ನೀವು ಆಸ್ಪತ್ರೆಗೆ ಹೋಗುತ್ತಿರುವುದನ್ನು ನಿಮ್ಮ ಮಕ್ಕಳಿಗೆ ತಿಳಿಸಿ. ಅದಲ್ಲದೆ ಮಗು ತಮ್ಮ ತಾಯಿಯನ್ನು ಕಾಣದೇ ಅಳುವಂತೆ ಮಾಡುವುದು ತಪ್ಪು. ಮಕ್ಕಳ ಜನನ ಹೇಗೆ ಎಂದು ತಿಳಿಸಿ ನಿನ್ನ ತಾಯಿ ಹಾಗೆಯೇ ಒಂದು ಪಾಪನನ್ನು ಹೆರಲು ಆಸ್ಪತ್ರೆಯಲ್ಲಿದ್ದಾಳೆ ಎಂದು ಸುಲಭವಾಗಿ ಹೇಳಿದರೆ ಮಕ್ಕಳ ಮನಸ್ಸಿಗೆ ನೆಮ್ಮದಿ.

ಕೆಲವು ಮಕ್ಕಳು ಲೈಂಗಿಕತೆಯ ಬಗ್ಗೆ ಪ್ರಶ್ನಿಸುವುದಿಲ್ಲ. ಆಗ ನೀವು ಸುಮ್ಮನಿರುವುದು ಸರಿಯಲ್ಲ. ಮಗು ಸುಮ್ಮನಿದ್ದಾಗ ಆ ವಿಷಯವನ್ನು ಇನ್ನೂ ಕೆಲವು ದಿನಗಳ ನಂತರ ತಿಳಿಸಿದರಾಯಿತು ಎಂದು ಮುಂದೂಡಬೇಡಿ. ಸಣ್ಣ ಮಕ್ಕಳ ಪ್ರಶ್ನೆಗಳು ಸುಲಭವಾಗಿರುತ್ತವೆ. ಅವುಗಳಿಂದಲೇ ನಿಮ್ಮ ಮತ್ತು ನಿಮ್ಮ ಮಕ್ಕಳ ನಡುವಿನ ಆತ್ಮೀಯತೆಗೆ ಅಡಿಪಾಯ. ಅದು ಮುಂದಿನ ಪ್ರಶ್ನೆಗಳನ್ನೂ ಸಹ ಸುಲಭವಾಗಿಸುತ್ತದೆ. ಕೆಲವು ಮಕ್ಕಳ ಮನಸ್ಸಿನಲ್ಲಿ ಸಾಧಾರಣವಾಗಿ ಇಂಥ ಪ್ರಶ್ನೆಗಳು ಏಳದೆಯೇ ಇರಬಹುದು.

ಮನೆಗಳಲ್ಲಿ ತಮಗೆ ಇಷ್ಟವಾದ ಪ್ರಾಣಿಗಳನ್ನು ಸಾಕುವುದೂ ಸಹ ಒಂದು ಕಾರಣವೆನಿಸುತ್ತದೆ. ಮಕ್ಕಳು ಆ ಪ್ರಾಣಿಗಳ ಸಂಭೋಗವನ್ನು, ಮರಿ ಹಾಕುವುದನ್ನು ನೋಡಿ ಆಶ್ಚರ್ಯಪಡಬಹುದು. ಈ ಮೂಲಕವೂ ಲೈಂಗಿಕ ಶಿಕ್ಷಣದ

ಪ್ರಾಪ್ತಿಯಾಗುತ್ತದೆ. ನಿಮ್ಮ ಮನೆಯಲ್ಲಿ ಸಾಕು ಪ್ರಾಣಿ ಇಲ್ಲದಿದ್ದರೆ ಅಥವಾ ಬೇಡದಿದ್ದರೆ ನಿಮ್ಮ ಮಗುವನ್ನು ಒಂದು ಮೃಗಾಲಯಕ್ಕೆ ಕರೆದೊಯ್ಯಿರಿ. ಆ ಮೂಲಕವೂ ಸಹ ಮಕ್ಕಳಿಂದ ಪ್ರಶ್ನೆಯುದ್ಭವಿಸಿ ಉತ್ತರಿಸಬಹುದು.

ನೀವು ನಿಮ್ಮ ಮಕ್ಕಳಿಗೆ ಈ ಪ್ರಾಣಿಗಳ ವಿಷಯವನ್ನು ತಿಳಿಸುತ್ತೀರಿ. ಹಕ್ಕಿ, ಚಿಟ್ಟೆ, ದುಂಬಿ ಇವುಗಳ ಬಗ್ಗೆ ತಿಳಿಸಿ ಮನುಷ್ಯನ ಬಗ್ಗೆ ಅವರಿಂದ ಪ್ರಶ್ನೆ ಹೊರಡಿಸಲು ಪ್ರಯತ್ನಿಸುತ್ತೀರಿ. ಕೆಲವು ವೇಳೆ ಮಕ್ಕಳು ತಮ್ಮ ಸ್ನೇಹಿತರಿಂದಲೂ ತಿಳಿಯುತ್ತಾರೆ.

ಲೈಂಗಿಕ ಪ್ರಶ್ನೆಗಳೂ ಸಹ ಇತರ ಎಲ್ಲ ಕ್ಷೇತ್ರಗಳಂತೆ ಹಂತ ಹಂತವಾಗಿ ಮುಂದುವರಿಯುತ್ತವೆ. ಮಗು ಹೊಟ್ಟೆಯಲ್ಲಿ ಹೇಗೆ ಬಂತು? ಅದರ ಕಾರ್ಯ ಹೇಗೆ ಆರಂಭವಾಯಿತು? ಈ ಪ್ರಶ್ನೆಗಳನ್ನು ಲಘುವಾಗಿ ಭಾವಿಸಬೇಡಿ. ಈ ಮಕ್ಕಳು ಒಂದು ಕಾರಣವನ್ನು ಹುಡುಕುತ್ತಿರುತ್ತಾರೆ. ಮಗುವಿನ ಹುಟ್ಟುವಿಕೆಯಲ್ಲಿ ತಂದೆಯ ಪಾತ್ರದ ಬಗ್ಗೆ ಹೇಳುವುದು ಬಹಳ ಕಷ್ಟ. ಈ ಕ್ರಿಯೆಗೆ ಇಬ್ಬರ ಅವಶ್ಯಕತೆಯಿದೆಯೆಂಬುದನ್ನು ತಿಳಿದಿರಬೇಕಾದುದು ಗಮನಾರ್ಹ ಅಂಶ. ಮಗುವು ಹಂತ ಹಂತವಾಗಿ ವಿಷಯವನ್ನು ತಿಳಿದುಕೊಳ್ಳುತ್ತದೆ.

ಮಕ್ಕಳು ಹೇಗೆ ಆಗುತ್ತಾರೆ? ತಾಯಿ ಮತ್ತು ತಂದೆ ಮಕ್ಕಳನ್ನು ಪಡೆಯಲು ಇಚ್ಛಿಸುತ್ತಾರೆ. ತಂದೆಯ ದೇಹದ ಒಂದು ವೀರ್ಯಾಣು ತಾಯಿಯ ದೇಹದ ಅಂಡಾಶಯದಲ್ಲಿ ಪ್ರವೇಶಿಸುತ್ತದೆ. ತಾಯಿಯ ಉದರದೊಳಗೆ ಪ್ರವೇಶಿಸಿದ ಈ ವೀರ್ಯಾಣುವು ತಾಯಿಯ ಅಂಡಾಣುವಿನೊಂದಿಗೆ ಮಿಲನವಾಗುತ್ತದೆ. ಈ ವೀರ್ಯಾಣುವು ಬಹಳ ಸಣ್ಣದು, ಕಣ್ಣಿನಿಂದ ನೋಡುವುದು ಸಾಧ್ಯವಿಲ್ಲ.

ಪುರುಷನ ವೀರ್ಯಾಣುವು ಸ್ತ್ರೀಯ ಅಂಡಾಣುವಿನೊಂದಿಗೆ ಮಿಲನಗೊಂಡ ನಂತರ ಮಗುವು ಬೆಳೆಯಲು ಶುರುವಾಗುತ್ತದೆ. ಆ ಮಗು ದೊಡ್ಡದಾದ ನಂತರ ಹೊರಗೆ ಬರುತ್ತದೆ. ಈ ವಿಷಯಗಳ ಬಗ್ಗೆ ಮಗು ಮತ್ತೆ ಮತ್ತೆ ಪ್ರಶ್ನಿಸಬಹುದು.

ತಂದೆಯ ಬೀಜಾಣುವು ತಾಯಿಯಲ್ಲಿ ಹೇಗೆ ಪ್ರವೇಶಿಸುತ್ತದೆ ಎಂಬುದೇ ನಿಮ್ಮ ಮಗುವಿನ ಮುಂದಿನ ಪ್ರಶ್ನೆಯಾಗುತ್ತದೆ. ಅದನ್ನು ನೀವು ಆತನಿಗೆ ವಿವರಿಸಬೇಕು. "ನಿನಗೆ ಪುರುಷನ ದೇಹ ರಚನೆ ತಿಳಿದಿದೆ. ಪುರುಷನ ಲಿಂಗವನ್ನು ನೋಡಿದ್ದೀಯಾ. ಅದೇ ರೀತಿ ಸ್ತ್ರೀಯ ದೇಹ ರಚನೆ ಗೊತ್ತಿದೆ. ಅವಳಿಗೆ ಲಿಂಗವಿಲ್ಲದೆ ಒಂದು ರಂಧ್ರವಿರುತ್ತದೆ. ಅವೆರಡೂ ಹೊಂದಿಕೊಳ್ಳುತ್ತವೆ. ಈ ರೀತಿಯಲ್ಲಿಯೇ ಮನುಷ್ಯರು ನಿರ್ಮಿಸಲ್ಪಟ್ಟಿರುತ್ತಾರೆ".

ತಂದೆ ತಾಯಿಯುರ ಸಂಭೋಗ ಕ್ರಿಯೆಯನ್ನು ನೋಡಬಹುದೆ? ಎಂದು ನಿಮ್ಮ ಮಗು ಪ್ರಶ್ನಿಸಬಹುದು. ನೀವು ಅದಕ್ಕೆ ಇಲ್ಲ ಎನ್ನಬೇಕು. ತಂದೆ ಮತ್ತು ತಾಯಿಯುರು ಪ್ರತ್ಯೇಕವಾಗಿರಲು ಬಯಸುವ ಕಾರಣವನ್ನು ಸಹ ವಿವರಿಸಬೇಕು. ತಂದೆ ತಾಯಿಯುರು ಪರಸ್ಪರ ಪ್ರೀತಿಸುವುದರಿಂದ ಮಕ್ಕಳನ್ನು ಪಡೆಯುತ್ತಾರೆ. ಅದಕ್ಕಾಗಿಯೇ ಬೇರೆಯವರು ನೋಡುವುದನ್ನು ಅವರು ಇಚ್ಛಿಸುವುದಿಲ್ಲ.

ಮಕ್ಕಳು ಮಧ್ಯೆ ಮಧ್ಯೆ ಪ್ರವೇಶಿಸಿ ಹಲವಾರು ಹುಚ್ಚು ಪ್ರಶ್ನೆಗಳನ್ನು ಕೇಳಿ ನಿಮ್ಮನ್ನು ಬೇಸರಪಡಿಸಬಹುದು. ಅವರಿಂದ ಕೆಲವು ಪ್ರಯೋಗಗಳು ನಡೆಯ ಬಹುದು. ಇದು ನೀವು ಅವರಿಗೆ ಹೇಳಿರುವ ಸತ್ಯಾಂಶದಿಂದಾಗಿ ಅಲ್ಲ; ಮಕ್ಕಳು ಮಕ್ಕಳಾಗಿರುವುದರಿಂದ, ಎಲ್ಲಾ ವಯಸ್ಸಿನಲ್ಲಿ, ಎಲ್ಲಾ ಕಡೆಯಲ್ಲಿ ಹೀಗೆ ಪ್ರಯತ್ನಿಸು ವುದು ಮಾನವ ಸಹಜ. ಮಕ್ಕಳು ಬೆಳೆದಂತೆಲ್ಲಾ ನಾಲ್ಕೈದು ವರ್ಷ ಅವಧಿಯಲ್ಲಿ ಅವರು ನಂಬಿದಂತೆ ನಂಬುವುದಿಲ್ಲ. ನೀವು ಪ್ರಾಮಾಣಿಕರಾಗಿದ್ದು ನಿಮ್ಮ ಮಕ್ಕ ಳೊಡನೆ ಬಿಚ್ಚು ಮನಸ್ಸಿನಿಂದ ವರ್ತಿಸುತ್ತಿದ್ದರೆ ಅದ್ಭುತವಾದ ಆತ್ಮೀಯತೆ ಬೆಳೆಯು ವುದು ನಿಸ್ಸಂದೇಹ. ಆಗಾಗ ಅವರೊಡನೆ ಸಂಭಾಷಿಸುತ್ತಿರಿ. ನಿಮ್ಮ ಮಗುವಿ ನೊಡನೆ ಒಳ್ಳೆಯ ಸಂಪರ್ಕವನ್ನು ಇರಿಸಿಕೊಂಡಿರಿ. ಅವರಿಗೆ ಈ ಅನುಭವ ಇದ್ದರೆ ಮಾತ್ರ ಪ್ರೀತಿಯ ಕೊಳು-ಕೊಡುಗೆ ಸಾಧ್ಯ.

ಮುಟ್ಟಾಗುವಿಕೆಯ ಬಗ್ಗೆಯೂ ಮಕ್ಕಳು ಪ್ರಶ್ನಿಸಬಹುದು. ಕೆಲವು ವೇಳೆ ತಾಯಿಯು ಆರೋಗ್ಯವಾಗಿರುವುದಿಲ್ಲ. ಮಕ್ಕಳು ಅದನ್ನು ಗಮನಿಸಿ ಕಾರಣ ವನ್ನು ಕೇಳುತ್ತಾರೆ. ಮನೆಯಲ್ಲಿ ಸ್ತ್ರೀಯರು ಬಳಸುವ ಒಳವಸ್ತ್ರವನ್ನು ಕುರಿತು ಅವರು ಪ್ರಶ್ನಿಸಬಹುದು : ಅಥವಾ, ಪೇಟೆಯಲ್ಲಿ ಇವುಗಳನ್ನು ಕಂಡು ಅಚ್ಚರಿಯಿಂದ ಪ್ರಶ್ನೆ ಕೇಳಬಹುದು. ನೀವು ಅವರಿಗೆ ತಿಳುವಳಿಕೆ ನೀಡುವಾಗ ಭಯವಾಗಬಹುದು. ಅವರು ನಿಮ್ಮ ಬಗ್ಗೆ, ನಿಮ್ಮ ದೇಹದ ಬಗ್ಗೆ, ಲೈಂಗಿಕ ಕ್ರಿಯೆಗಳ ಬಗ್ಗೆ ತಾವೇ ಆಲೋಚಿಸುತ್ತಾರೆ. ಆ ಸಮಯದಲ್ಲಿ ಅವರಿಗೆ ನಾಚಿಕೆ, ಅಸಹ್ಯ, ಭಯ ಉಂಟಾಗ ಬಹುದು.

ಈ ವಿಷಯದಲ್ಲಿ ನಿಮ್ಮ ಮಗ ಅಥವಾ ಮಗಳಿಗೆ ನೀವು ಸಹಾಯ ಮಾಡ ಬೇಕಾದ್ದು ಅವಶ್ಯಕ. ಪ್ರಾಮಾಣಿಕವಾಗಿ "ಮುಟ್ಟು" ಎಂಬ ಪದವನ್ನು ಉಪ ಯೋಗಿಸುವುದು ಅಷ್ಟೇನೂ ಕಷ್ಟವಲ್ಲ.

ಮಕ್ಕಳು, ಮುಟ್ಟಾಗುವ ಜೈವಿಕ ಕ್ರಿಯೆಯನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳಲಾರರು. ಒಂದು ಸಾಮಾನ್ಯ ಕತೆಯಿಂದ ಅವರನ್ನು ನೀವು ಸಮಾಧಾನ ಪಡಿಸಬಹುದು. ಮಗು ಹುಟ್ಟುವುದಕ್ಕೆ ಮೊದಲು ತಾಯಿಯಿಂದ ಆಹಾರವನ್ನು ಪಡೆಯುತ್ತದೆ. ಆದರೆ ನಾವು ತಿನ್ನುವಂತೆ, ಅಗಿಯುವಂತೆ, ಕುಡಿಯುವಂತೆ ಅಲ್ಲ;

ತಾಯಿಯ ರಕ್ತ ಮಗುವಿಗೆ ಆಹಾರವನ್ನು ಒದಗಿಸುತ್ತದೆ. ಪ್ರತಿ ತಿಂಗಳೂ ತಾಯಿಯ ಹೊಟ್ಟೆಯಲ್ಲಿ ಒಂದು ವಿಶೇಷವಾದ ಸ್ಥಳಕ್ಕೆ ರಕ್ತ ಬಂದು ಸೇರುತ್ತದೆ. ಮಗು ಬೆಳೆದು ಈಚೆ ಬರುವವರೆಗೂ ಈ ಸ್ಥಳದಲ್ಲಿಯೇ ಇರುತ್ತದೆ. ಮಗು ಬೆಳೆಯಲು ಆರಂಭವಾದರೆ ರಕ್ತವು ಆಹಾರದೊಂದಿಗೆ ಸಿದ್ಧವಾಗಿ ಕಾಯುತ್ತ ಇರುತ್ತದೆ. ಮಗು ಇನ್ನೂ ಬೆಳೆಯುವ ಕಾಲ ಬಂದಿರದಿದ್ದರೆ ತಾಯಿಗೆ ಈ ರಕ್ತದ ಅವಶ್ಯಕತೆ ಇರದು. ಇದರಲ್ಲಿರುವ ಆಹಾರವನ್ನು ಉಪಯೋಗಿಸಲು ಹೊಸ ಮಗು ಇರುವುದಿಲ್ಲ. ಆದ್ದರಿಂದ ಆ ರಕ್ತವು ಹೊರ ಬರುತ್ತದೆ. ಈ ಕ್ರಿಯೆ ನಡೆದಾಗ (ವಯಸ್ಸಿಗೆ ಬಂದಿರುವ ಎಲ್ಲ ಹೆಣ್ಣು ಮಕ್ಕಳಲ್ಲೂ ಈ ಕ್ರಿಯೆ ನಡೆಯುತ್ತದೆ) ಇದನ್ನೇ 'ಮುಟ್ಟಾಗುವಿಕೆ' ಎಂದು ಕರೆಯುವುದು. ಇದು ರಕ್ತಸ್ರಾವದಂತೆಯಾದರೂ ಕತ್ತರಿಸಿದಾಗ ಬರುವ ರಕ್ತದಂತಾಗಲೀ ಅಥವಾ ಗಾಯವಾದಾಗ ಬರುವ ರಕ್ತದಂತಾಗಲೀ ಅಲ್ಲ.

ಮಕ್ಕಳು ನಿಮ್ಮ ಒಳವಸ್ತ್ರವನ್ನು ನೋಡಲು ಬಯಸಬಹುದು. ಇದನ್ನು ತೋರಿಸುವಲ್ಲಿ, ನಿಮಗೆ ಇಷ್ಟವಿದ್ದರೆ, ಅವರಿಗೆ ಬಹಳ ಸಹಾಯವಾಗುತ್ತದೆ. ಮುಟ್ಟಿನ ಸಾಮಾನ್ಯ ಕ್ರಿಯೆಯ ಬಗ್ಗೆ ಮತ್ತಷ್ಟು ಭರವಸೆ ಸಿಕ್ಕಂತಾಗುತ್ತದೆ. ಮಗುವಿನ ತಾಯಿಯಾದ ನೀವು ಅದನ್ನು ಮಾಡಬೇಕು. ನಿಮ್ಮ ವಿಚಾರಲಹರಿ, ದೃಷ್ಟಿಕೋನಗಳು ಹೇಗಿರಬೇಕೆಂದರೆ, ನಿಮ್ಮ ಮಕ್ಕಳು ತಮ್ಮ ಮುಂದಿನ ಬೆಳವಣಿಗೆಯನ್ನು ತಿಳಿದುಕೊಳ್ಳಲು ಸಹಾಯಕವಾಗುವಂತಿರಬೇಕು. ಮುಂದಿನ ಆ ವಿಷಯಗಳು ಭಯ ಹುಟ್ಟಿಸುವಂತಾಗಬಾರದು. ಮಕ್ಕಳು 'ಮುಟ್ಟಾಗುವಾಗ ನೋವಾಗುತ್ತದೆಯೇ' ಎಂದೂ ಕೇಳಬಹುದು. ನಿಮ್ಮ ಉತ್ತರ ಸತ್ಯವಾಗಿರಬೇಕು. ಅನಿರೀಕ್ಷಿತವಾಗಿ ಉಂಟಾಗುವ ನೋವು ಹೆಚ್ಚು ಅಪಾಯಕಾರಿಯಾದುದು. ಆದ್ದರಿಂದ ನಿಮ್ಮ ಉತ್ತರವು ಅವರಿಗೆ ಮುಂದಾಗುವ ಅನುಭವಗಳಿಗೆ ಹೊಂದಿಕೊಳ್ಳಲು ಅನುವು ಮಾಡಿಕೊಡುವಂತಿರಬೇಕು. "ಪ್ರಥಮ ಬಾರಿ ಮುಟ್ಟಾಗುವಾಗಲೂ ನೋವಾಗದು ; ಇದು ಗಾಯವಾದಾಗ ಆಗುವ ನೋವಿನಂತಲ್ಲ ; ಮತ್ತು ಹಲವು ಸ್ತ್ರೀಯರಿಗೆ ಇದು ನೋವೆನಿಸುವುದೇ ಇಲ್ಲ. ಅವರು ರಕ್ಷಣೆಗೋಸ್ಕರ ಒಳವಸ್ತ್ರವನ್ನು ಧರಿಸುತ್ತಾರೆ ಮತ್ತು ನೇರವಾಗಿ ತಮ್ಮ ದೈನಂದಿನ ಕಾರ್ಯಗಳಲ್ಲಿ ತೊಡಗುತ್ತಾರೆ. ಅದು ಅವರಿಗೆ ವಿಶೇಷವೆಂದೆನಿಸದು. ಅವರು ಸಾಮಾನ್ಯವಾಗಿರುವಂತೆಯೇ ಇರುತ್ತಾರೆ. ಸಾಮಾನ್ಯವಾಗಿ ಅವರು ದಣಿದಿರುವಾಗ ನಡೆಯುವಂತೆ, ನೊಂದವರಂತೆ ಕಾಣುತ್ತಾರೆ. ಕೆಲವರಿಗೆ ನೋವು ಆಗುತ್ತದೆ. ಆದರೆ ಅದನ್ನು ಕಡಿಮೆ ಮಾಡಿಕೊಳ್ಳಲು ಹಲವು ಸಾಧನಗಳಿವೆ" ಎಂದು ನಿಮ್ಮ ಉತ್ತರ ಮಕ್ಕಳಿಗೆ ಸಮಾಧಾನ ತರುವಂತಿರಬೇಕು.

ಪ್ರಸವವಾಗುವಾಗ ನೋವಾಗುತ್ತದೆಯೇ ? ಹೌದು, ಆದರೆ ತಡೆಯಲಾರದಷ್ಟೇನಲ್ಲ. ವೈದ್ಯರು ಸಹಾಯಕ್ಕಿರುತ್ತಾರೆ. ಅವರು ಕೆಲವು ವಸ್ತುಗಳನ್ನು ನೀಡಿ

ಮಗು ಹೊರಬರುತ್ತಿದೆಯೆಂದು ಅನ್ನಿಸದಿರುವಂತೆಯೇ ಮಾಡುತ್ತಾರೆ. ಇದು ಒಮ್ಮೆ ಮುಗಿದು, ವಿಶ್ರಾಂತಿ ಪಡೆದರೆ ಮತ್ತೆ ಹಿಂದಿನಂತೆಯೇ ಚೆನ್ನಾಗಿ ಆಗುತ್ತೀರಿ.

ಹುಡುಗರು ಹಾಗೂ ಹುಡುಗಿಯರು ಮುಟ್ಟಾಗುವಿಕೆಯ ಬಗ್ಗೆ ಪ್ರಶ್ನಿಸುತ್ತಾರೆ. ಇಬ್ಬರೂ ತಿಳಿದಿರಬೇಕು. ಗಂಡಸರು ಮುಟ್ಟಾಗುತ್ತಾರೆಯೇ? ಎಂಬ ಪ್ರಶ್ನೆಯೂ ಏಳಬಹುದು. ಮತ್ತೊಮ್ಮೆ ನೀವು ವಿವರಣೆ ನೀಡಬೇಕು. ತಾಯಿ ತನ್ನ ಮಗುವಿಗಾಗಿ ಶೇಖರಿಸಿದ ರಕ್ತ ಹೊರಬರುವಿಕೆಯೇ, 'ಮುಟ್ಟಾಗುವಿಕೆ.' ಗಂಡಸರು ಹೆರಲು ಸಾಧ್ಯವಿಲ್ಲ, ಕೇವಲ ಸ್ತ್ರೀಯರು ಮಾತ್ರ ಎಂದು ತಿಳಿಸಬೇಕು.

ನೀವು ಹೀಗೆಯೇ ಮುಂದುವರಿಸಿಕೊಂಡು ಹುಡುಗರಿಗೆ ದೊಡ್ಡವರಾದ ಮೇಲೆ ಅವರಿಗೂ ಸಹ ಒಂದು ಬಗೆಯ ದ್ರವ ಹೊರಬರುತ್ತದೆ ಎಂದು ವಿವರಿಸಬಹುದು. ಇದು ರಕ್ತವಲ್ಲವಾದ್ದರಿಂದ ಕೆಂಪಗಿರದೆ ಬಿಳಿಯದಾಗಿರುತ್ತದೆ. ಇದು ಪುರುಷಾಣುಗಳನ್ನು ಒಯ್ಯುವ ದ್ರವ, ಇದೇ ವೀರ್ಯಾಣು. ಇದು ಸ್ತ್ರೀಯ ಅಣುಗಳಿದ್ದಂತೆಯೇ ಬಹಳ ಸಣ್ಣದಾಗಿರುತ್ತದೆ. ಆದಕ್ಕಾಗಿಯೇ ಬೇರೆ ಏನಾದರೂ ಕೊಂಡೊಯ್ಯಬೇಕಾಗಿದ್ದರೆ, ಹೇಗೆ ಯಾರ ರಕ್ತದಲ್ಲಿರುವ ಆಹಾರ ಬೇಡವಾದಾಗ ಸ್ರಾವ ಉಂಟಾಗುತ್ತದೆಯೋ ಹಾಗೆಯೇ ಪುರುಷಾಣುಗಳು ದೇಹಕ್ಕೆ ಬೇಡವಾದಾಗ ಅವು ಹೊರ ಬರುತ್ತವೆ. ಸ್ತ್ರೀಯರು ಕ್ರಮಬದ್ಧವಾಗಿ ಮುಟ್ಟಾಗುತ್ತಾರೆ. ಹುಡುಗರಿಗೆ ಆಗಾಗ ಇದು ಹೊರ ಬರುತ್ತದೆ. ಸಾಮಾನ್ಯವಾಗಿ ರಾತ್ರಿ ಅವರು ಮಲಗಿರುವಾಗ.

ಇದ್ದಕ್ಕಿದ್ದಂತೆ ಈ ವಿಷಯ ತಿಳಿಸುವುದಕ್ಕಿಂತ, ಸಾಮಾನ್ಯ ತಿಳುವಳಿಕೆ ಅಥವಾ ಹಿನ್ನೆಲೆ ತಿಳಿದಿದ್ದರೆ ನಿಮ್ಮ ಮಗು ಆ ಸನ್ನಿವೇಶವನ್ನು ಧೈರ್ಯದಿಂದ ಎದುರಿಸುತ್ತದೆ.

ನಮ್ಮಲ್ಲಿ ಮುಚ್ಚಿಡುವ ಮನೋಭಾವ ಬಹಳ......ಅವರು ಪ್ರೌಢಶಾಲೆಗೆ ಹೋದಾಗ ನೀವು ತಿಳಿಸುತ್ತೀರಿ......ಅವರ ಮುಟ್ಟಾಗುವಿಕೆ ಆರಂಭವಾದಾಗ ತಿಳಿಸುತ್ತೀರಿ......ಅವರು ಕಾಲೇಜಿಗೆ ಹೋಗಿ, ಮದುವೆಗೆ ಸಿದ್ಧರಾಗುವ ಮೊದಲೇ ಲೈಂಗಿಕ ಜ್ಞಾನ ಇದ್ದರೆ ಒಳ್ಳೆಯದು.

ನೀವು ಮಗುವಿಗೆ ಆರಂಭದಿಂದಲೂ ಲೈಂಗಿಕತೆಯ ಬಗ್ಗೆ ಶಿಕ್ಷಣ ನೀಡಬೇಕಾದರೆ, ಯಾವುದೇ ಹಂತಗಳನ್ನು ನಿರ್ದಿಷ್ಟಪಡಿಸಿಕೊಳ್ಳಬೇಕಾಗಿಲ್ಲ. ನೀವು ಒಮ್ಮೆ ಪ್ರಯತ್ನಿಸಿದರೆ ಇದು ವಿವರಿಸಲು ಎಷ್ಟು ಸುಲಭ ಎಂದು ಸಂತೋಷ ಪಡುತ್ತೀರಿ. ನಿಮ್ಮ ಮಗುವೂ ಸಹ ಹೆಚ್ಚು ಸಹಜವಾಗಿ ಮತ್ತು ಸ್ವತಂತ್ರವಾಗಿರಲು ಸಾಧ್ಯವಾಗುತ್ತದೆ. ಅಲ್ಲದೆ ತಾಯಿತಂದೆಗಳೊಂದಿಗೆ ಆತ್ಮೀಯತೆಯಿಂದಲೂ, ನೆಮ್ಮದಿಯಿಂದಲೂ (ಇತರರೊಡನೆಯೂ) ಸಹ ಬಾಳ್ವೆ ನಡೆಸಲು ಸಾಧ್ಯವಾಗುತ್ತದೆ.

ಕನ್ನಡಕ್ಕೊಂದು ಕೇಂದ್ರ ಗ್ರಂಥಾಲಯ

ಬಿ. ಎಸ್. ಸಣ್ಣಯ್ಯ

ಮೈಸೂರು ವಿಶ್ವವಿದ್ಯಾನಿಲಯವು ಪ್ರಸಾರಾಂಗದಿಂದ ಪ್ರಕಟಿಸಿರುವ 'ಕನ್ನಡ ಗ್ರಂಥಸೂಚಿ–ಸಂಪುಟ 1'ರ ಬಗ್ಗೆ ವಿಮರ್ಶೆ ಮಾಡುತ್ತಾ (ಸಾಧನೆ–ಸಂ. 2, ಸಂ. 2. ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು) ಡಾ॥ ಎಂ. ಚಿದಾನಂದ ಮೂರ್ತಿಯವರು " 1817ರಿಂದ ಇಲ್ಲಿಯವರೆಗೆ ಸುಮಾರು ನಲವತ್ತು ಸಾವಿರಕ್ಕೆ ಮೇಲ್ಪಟ್ಟು ಪುಸ್ತಕಗಳು ಅಚ್ಚಾಗಿವೆಯೆಂದು ಅಂದಾಜು ಮಾಡಲಾಗಿದೆ. ಇದರಲ್ಲಿ ಕರ್ನಾಟಕದ ಯಾವುದೇ ಪುಸ್ತಕ ಭಂಡಾರದಲ್ಲಿ ಎಳೆಂಟು ಸಾವಿರದಷ್ಟು ಪುಸ್ತಕಗಳು ಸಿಕ್ಕರೆ ಹೆಚ್ಚು. ಅಚ್ಚಾದ ಎಲ್ಲ ಪುಸ್ತಕಗಳನ್ನೂ ಇಡುವುದು ಬಹು ಅಪೇಕ್ಷಣೀಯವಾದ ಕೆಲಸವೇ ಆದರೂ ಅದು ಕೇವಲ ಆದರ್ಶದ ಮಾತೇ ಆಗಿ ಉಳಿಯುತ್ತದೆ. ಅಚ್ಚಾದ ಪುಸ್ತಕಗಳ ಪಟ್ಟಿಯೊಂದಿದ್ದರೆ ಕೊನೆಯ ಪಕ್ಷ ಕನ್ನಡದಲ್ಲಿ ಏನು ಬಂದಿದೆ, ಏನು ಬಂದಿಲ್ಲವೆಂಬುದಾದರೂ ತಿಳಿದೀತು. ಅಂತಹ ವಿವರಣಾತ್ಮಕ ಗ್ರಂಥಸೂಚಿಯಿಂದ ಪಂಡಿತರಿಗೆ, ಸಂಶೋಧಕರಿಗೆ, ವಿದ್ಯಾರ್ಥಿಗಳಿಗೆ, ಬೋಧಕರಿಗೆ–ಎಲ್ಲ ತೆರದ ಜ್ಞಾನೋಪಾಸಕರಿಗೂ ಅನುಕೂಲವಾಗುತ್ತದೆ" ಎಂದು ಹೇಳಿರುವ ಮಾತು ಮನನೀಯವಾದುದು.

ಅದರಲ್ಲಿಯೂ "ಅಚ್ಚಾದ ಎಲ್ಲ ಪುಸ್ತಕಗಳನ್ನೂ ಇಡುವುದು ಬಹು ಅಪೇಕ್ಷಣೀಯವಾದ ಕೆಲಸವೇ ಆದರೂ ಅದು ಕೇವಲ ಆದರ್ಶದ ಮಾತೇ ಆಗಿ ಉಳಿಯುತ್ತದೆ" ಎಂಬುದನ್ನು ಗಮನಿಸಬೇಕು. ಇದುವರೆಗೆ ಅಚ್ಚಾಗಿರುವ ಎಲ್ಲ ಪುಸ್ತಕಗಳೂ ಒಂದೆಡೆ ಇದ್ದರೆ ಅದರಿಂದ ಎಲ್ಲ ವರ್ಗದ ಜನಕ್ಕೆ ತುಂಬ ಅನುಕೂಲ ಒದಗಿಬರುತ್ತದೆ. ಈ ಕೆಲಸ ಅತ್ಯಂತ ಅಗತ್ಯವಾಗಿ ಆಗಬೇಕಾದುದೇ ಆದರೂ ಇದು "ಕೇವಲ ಆದರ್ಶದ ಮಾತಾಗಿ ಉಳಿಯುತ್ತದೆ" ಎಂದೂ, "ಎಲ್ಲ ಗ್ರಂಥಗಳಲ್ಲದಿದ್ದರೂ ಅವುಗಳ ಹೆಸರಾದರೂ ಮುಂದಿನ ಪೀಳಿಗೆಯವರಿಗೆ ಉಳಿಯುವುದು ಅಗತ್ಯ" ಎಂದೂ ಕಳಕಳಿಯಿಂದ ನುಡಿದಿದ್ದಾರೆ. ಇಂತಹ ಆಸೆಯಿಟ್ಟುಕೊಂಡ ಬಹಳ ಜನ ನಮ್ಮಲ್ಲಿದ್ದಾರೆ.

ಈ ಆಸೆ ಆಸೆಯಾಗಿ, ಆದರ್ಶವಾಗಿ ಮಾತ್ರ ಉಳಿಯಬೇಕಾಗಿಲ್ಲ. ಈ ಎಲ್ಲ ಗ್ರಂಥಗಳನ್ನು ಒಂದೆಡೆ ಸೇರಿಸುವ, ಸೂಕ್ತ ರೀತಿಯಲ್ಲಿ ಕಾಪಾಡುವ, ವರ್ಗೀಕರಣ ಮಾಡಿ, ಗ್ರಂಥಸೂಚಿ ಪಟ್ಟಿಕೆಗಳನ್ನು ತಯಾರಿಸಿ ಜನರ ಉಪಯೋಗಕ್ಕೆ ಒದಗಿಸುವ ಕಾರ್ಯ ಹೇಗೆ ಸಾಧ್ಯ ಎಂಬುದನ್ನು ಈ ಮುಂದೆ ಪೂರ್ಣ ವಿವರವಾಗಿಯಲ್ಲವಾ

ವರೂ, ಅದರ ಹೊರ ರೂಪರೇಷೆಗಳೊಡನೆ ವಿವರಿಸಲಿಚ್ಛಿಸುತ್ತೇನೆ. ಡಾ॥ ಚಿದಾನಂದಮೂರ್ತಿಯವರು ಯಾವುದನ್ನು 'ಅಪೇಕ್ಷಣೀಯ, ಆದರ್ಶವಾಗಿಯೇ ಉಳಿಯುತ್ತದೆ' ಎಂದರೊ ಅದನ್ನು ಹೇಗೆ ಕಾರ್ಯರೂಪಕ್ಕೆ ತಂದು ಆದರ್ಶ ಕಾರ್ಯವನ್ನು ಶಾಶ್ವತಗೊಳಿಸಬಹುದು ಎಂಬುದನ್ನು ಸೂಚಿಸುತ್ತೇನೆ.

ವಿಶ್ವದ ನಾನಾ ಮೂಲೆಗಳಲ್ಲಿನ ಸಾವಿರಾರು ವರ್ಷಗಳ ಜೀವನ, ನಾಗರಿಕತೆ, ಗಳಿಸಿದ್ದ ಜ್ಞಾನ, ಕೈಗೊಂಡ ಕಾರ್ಯ ಮತ್ತು ಅದರ ಪರಿಣಾಮಗಳೇ ಮೊದಲಾದುವೆಲ್ಲವೂ ಲಭಿಸಿರುವುದು ಗ್ರಂಥಗಳ ಮೂಲಕವೇ. ಥಾಮಸ್ ಕಾರ್ಲೈಲ್ ಹೇಳುವಂತೆ ಮಾನವನು ಯೋಚಿಸಿದ, ಗಳಿಸಿದ ಎಲ್ಲ ಸಂಪತ್ತೂ ಗ್ರಂಥಗಳ ಪುಟಗಳಲ್ಲಿ ಪುದುವಟ್ಟಾಗಿ ನಿಂತಿದೆ.

ಗ್ರಂಥಗಳು ಮಾನವನ ಯೋಚನೆಗಳನ್ನೂ, ಆದರ್ಶಗಳನ್ನೂ, ಚೈತನ್ಯಾ-ಚೈತನ್ಯಗಳನ್ನೂ ಪ್ರತಿಬಿಂಬಿಸುತ್ತವೆ; ಸಮಸ್ಯೆಗಳ ಜಟಿಲತೆಯನ್ನು ಕೂಲಂಕಷವಾಗಿ ವಿಮರ್ಶಿಸುತ್ತವೆ; ಮಾನವನಿಗೆ ಬರಬಹುದಾದ ಹಲವಾರು ಸಮಸ್ಯೆಗಳನ್ನು ಬಗೆಹರಿಸುತ್ತವೆ. ವೇದೋಪನಿಷತ್ತು, ಪುರಾಣೇತಿಹಾಸಾದಿ ಹಲವಾರು ಬಗೆಯ ಪ್ರಾಚೀನ ಸಾಹಿತ್ಯವು ಪುರಾತನವಾದುದಾದರೂ ಇಂದಿಗೂ ಹೊಚ್ಚ ಹೊಸ ಅನುಭವಗಳನ್ನು ನೀಡುತ್ತದೆ. ಈ ಸಾಹಿತ್ಯದ ವಿವಿಧ ಪ್ರಕಾರಗಳಿಂದ ದೊರೆತ ಜ್ಞಾನದಿಂದ ಹಲವಾರು ಮಹನೀಯರು ತಮ್ಮ ತಮ್ಮ ಸಾಮರ್ಥ್ಯಕ್ಕನುಗುಣವಾಗಿ ಹಲವಾರು ಉದ್ಗ್ರಂಥಗಳನ್ನು ರಚಿಸಿ ಸಾಹಿತ್ಯ ಸಂಪತ್ತನ್ನು ಹೆಚ್ಚಿಸಿದ್ದಾರೆ. ಮಾನವನ ಮನೋವಿಕಾಸವಾಗುತ್ತಾ ಹೋದಂತೆ ವಿನೂತನ ಸೃಷ್ಟಿಯೂ ಆಗುತ್ತಾ ಹೋಗುತ್ತದೆ. ಇದಕ್ಕೆ ಹಿಂದಿನದೂ ಇಂದಿನದೂ ರಕ್ಷಿತವಾಗಿರಬೇಕಾಗುತ್ತದೆ. ಷೇಕ್ಸ್‌ಪಿಯರ್ ಮಹಾಕವಿ ಹೇಳುವಂತೆ "ಭೂತಕಾಲ ಭವಿಷ್ಯತ್ತಿಗೆ ನಾಂದಿ."

ಇಂತಹ ಗ್ರಂಥಗಳಲ್ಲಿ ಕನ್ನಡ ಗ್ರಂಥಗಳು ಕನ್ನಡ ಜನಮನದಲ್ಲಿ ಅತ್ಯಂತ ಪ್ರಭಾವಯುತವಾಗಿ ಕೆಲಸ ಮಾಡುತ್ತವೆ ಎಂದು ಬೇರೆ ಹೇಳಬೇಕಾಗಿಲ್ಲ. ಈ ದಿಸೆಯಲ್ಲಿ ಬಲ್ಲ ಜನರಿಗೆ ಹಾಗೂ ಇತರರಿಗೆ ಅನುಕೂಲವಾಗುವಂಥ ಎಲ್ಲ ಕನ್ನಡ ಗ್ರಂಥಗಳನ್ನೂ ಒಳಗೊಂಡ ಒಂದು ಕನ್ನಡ ಗ್ರಂಥಾಲಯ ಇರುವುದು ಅತ್ಯಂತ ಅವಶ್ಯಕ.

ಈ ಗ್ರಂಥಾಲಯದಲ್ಲಿ ಎಲ್ಲ ಕನ್ನಡ ಪುಸ್ತಕಗಳೂ ದೊರೆಯುವಂತಿರಬೇಕು. ಆ ಪುಸ್ತಕ ಈ ಪುಸ್ತಕ ಎನ್ನದೆ ಕನ್ನಡದಲ್ಲಿ ಪ್ರಕಟವಾದ ಎಲ್ಲ ಗ್ರಂಥಗಳೂ ಎಲ್ಲ ಮಟ್ಟದ ಜನರಿಗೂ ಒದಗಬೇಕು. ಇದರಲ್ಲಿ ದೇಶದ ವಿವಿಧ ಭಾಗಗಳಲ್ಲಿ ದೊರೆಯುವ ಎಲ್ಲ ಅಪೂರ್ವ ಗ್ರಂಥಗಳನ್ನೂ ಮೈಕ್ರೋಫಿಲಂ ಮೂಲಕ ಪ್ರತಿಮಾಡಿ ಇಡುವುದು ಸೂಕ್ತವೆನಿಸುತ್ತದೆ. ಇಂತಹ ಹಲವಾರು ಅಪೂರ್ವ ಗ್ರಂಥಗಳು ನಶಿಸಿ ಹೋಗಿ, ಅವುಗಳನ್ನು ಮತ್ತೆ ನೋಡುವ ಅವಕಾಶವೇ ಇಲ್ಲವಾಗಬಹುದು. ಹಲವು

ಅಪೂರ್ವ ಪುಸ್ತಕಗಳನ್ನು ಯಾರೋ ಪುಣ್ಯಾತ್ಮರು ಎರವಲು ಪಡೆದು ಮತ್ತೆ ಹಿಂದಿರುಗಿಸದಿರಬಹುದು ; ಮತ್ತೆ ಕೆಲವನ್ನು ಅಪಹರಿಸಿರಬಹುದು. ಅಂತೂ ಯಾವುದೋ ಕಾರಣದಿಂದ ಇಂತಹ ಹಲವಾರು ಅಚ್ಚಾದ ಗ್ರಂಥಗಳು ಇಂದು ನಮಗೆ ದೊರೆಯದಾಗಿವೆ.

ಈ ಮಾತು ಅಚ್ಚಾದ ಪುಸ್ತಕಗಳಿಗೆ ಮಾತ್ರವಲ್ಲದೆ ದೇಶದಲ್ಲಿ ದೊರೆಯುವ ಎಲ್ಲ ಹಸ್ತಪ್ರತಿಗಳಿಗೆ (ಓಲೆ, ಕಡತ ಮತ್ತು ಕಾಗದ), ಶಾಸನಗಳಿಗೆ ಅನ್ವಯವಾಗುತ್ತದೆ. ಈ ಎಲ್ಲ ರೀತಿಯ ಗ್ರಂಥಗಳು, ಶಾಸನಗಳು ಮನೆ ಮಠಗಳಲ್ಲಿ, ಬಸದಿಗಳಲ್ಲಿ ವಿವಿಧ ಗ್ರಂಥಾಲಯಗಳಲ್ಲಿ ದೊರೆಯುತ್ತಿವೆ. ಇವುಗಳ ಪೂರ್ಣ ಪ್ರಯೋಜನ ಜನತೆಗೆ ಲಭಿಸಬೇಕಾದರೆ, ಇವುಗಳೆಲ್ಲದರ ಸಂಗ್ರಹ, ಗ್ರಂಥಗಳು ದೊರೆತಲ್ಲಿ ಅವುಗಳನ್ನೇ ಸಂಗ್ರಹಿಸುವ ಮೂಲಕ, ಇಲ್ಲವಾದಲ್ಲಿ ಮೈಕ್ರೋ ಫಿಲಂ ಮೂಲಕ ಸಂಗ್ರಹ ಮಾಡಿ ಶಾಶ್ವತವಾಗಿ ಕಾಪಾಡುವುದು ಕನ್ನಡಿಗರ ಕರ್ತವ್ಯವೆಂದು ಭಾವಿಸಿದ್ದೇನೆ.

ಶ್ರೀವಿಜಯನ 'ರಘುವಂಶಪುರಾಣ', ಗುಣವರ್ಮನ 'ಹರಿವಂಶ', 'ಶೂದ್ರಕ' ಗಳು, ಪೊನ್ನನ 'ಭುವನೈಕ ರಾಮಾಭ್ಯುದಯ', ನಾಗವರ್ಮನ 'ವತ್ಸರಾಜ ಚರಿತೆ', ನಾಗದೇವನ 'ಸುಲೋಚನಾ ಚರಿತೆ' ಮೊದಲಾದ ಹಲವಾರು ಹಸ್ತಪ್ರತಿಗಳಂತೆ ಅಚ್ಚಾದ ಹಳೆಯ ಗ್ರಂಥಗಳೂ ಇಂದು ನಮಗೆ ದೊರೆಯುತ್ತಿಲ್ಲ. ಇವುಗಳಲ್ಲಿ ಕೆಲವು ಮತ್ತೆ ಅಚ್ಚಾಗಬಹುದು, ಮತ್ತೆ ಹಲವು ಅನಾಮಧೇಯವಾಗಿ ಯಾರ ಕಣ್ಣಿಗೂ ಬೀಳದೆ ಅಳಿದುಹೋಗಬಹುದು. ಅವುಗಳು ಮುಂದೆ ಯಾರಿಗೋ ಬೇಕಾದಾಗ ದೊರೆಯುತ್ತಿಲ್ಲವಲ್ಲಾ ಎಂಬ ಪರಿತಾಪಕ್ಕೆ ಕಾರಣವಾಗಬಹುದು. ನಾವು ಇಂದು 'ಹರಿವಂಶ', 'ಶೂದ್ರಕ' ಮೊದಲಾದವುಗಳು ದೊರೆಯದಿದ್ದುದಕ್ಕಾಗಿ ಪಡುತ್ತಿರುವ ವ್ಯಾಕುಲ ಸಂಕಟಗಳೇ ಮುಂದಿನ ಜನತೆಗೆ ಒದಗಿಬರಬಾರದು. ಇಂತಹ ಸದಿಚ್ಛೆಯಿಂದ ಎಲ್ಲ ಅಪೂರ್ವ ಗ್ರಂಥಗಳ ಸಂಗ್ರಹ ಆಗುವುದು ತುಂಬಾ ಉಚಿತವೆನಿಸುತ್ತದೆ.

ಮೇಲೆ ಹಸ್ತಪ್ರತಿಗಳು, ಅಚ್ಚಾದ ಗ್ರಂಥಗಳು, ಶಾಸನಗಳನ್ನು ಮಾತ್ರ ಹೇಳಿದ್ದೇನೆ. ಇವುಗಳ ಜೊತೆಗೆ ಕೆಲವು ಮಹತ್ತ್ವಪೂರಿತವಾದ, ಕನ್ನಡ ಸಾಹಿತ್ಯ ಚರಿತ್ರೆಯ ಮೇಲೆ ಅತ್ಯಂತ ಹೆಚ್ಚು ಪ್ರಭಾವವನ್ನು ಬೀರುವ ಮೂಲ ದಾಖಲೆ ಪತ್ರಗಳನ್ನೂ, ನಿಯತಕಾಲಿಕೆಗಳನ್ನೂ, ವಾರ್ಷಿಕ ವರದಿಗಳನ್ನೂ, ಕೈಪಿಡಿಗಳನ್ನೂ, ಆಯಾಯ ದಿನ ಓದಿ ಬಿಸಾಡುತ್ತಿರುವ ವೃತ್ತಪತ್ರಿಕೆಗಳನ್ನೂ ಮೈಕ್ರೊಫಿಲಂ ಮೂಲಕ ಕಾಪಾಡುವುದು ಅಗತ್ಯವೆಂದೆನಿಸುತ್ತದೆ.

ಹಲವು ಹಸ್ತಪ್ರತಿಗಳು ಹಲವೆಡೆಗಳಲ್ಲಿ ಹುಳುಗಳ ಪಾಲಾಗಿ ಪುಡಿಪುಡಿಯಾಗುತ್ತಿರುವುದೂ, ನೀರಿನಲ್ಲಿ ನೆನೆದು ಕೊಳೆಯುತ್ತಿರುವುದೂ ನಾನು ಕಣ್ಣಾರೆ ಕಂಡ ದೃಶ್ಯಗಳಾಗಿವೆ. ಚಾಮರಾಜನಗರ ತಾಲ್ಲೂಕಿನ ಹಳ್ಳಿಯೊಂದರಲ್ಲಿನ ಪ್ರಸಿದ್ಧ

ವಿದ್ವಾಂಸರ ಮನೆಯಲ್ಲಿದ್ದ ಅಮೂಲ್ಯ ಹಸ್ತಪ್ರತಿಗಳು ಜಾಯಿಕಾಯಿ ಹಲಗೆಯ ಪೆಟ್ಟಿಗೆಯಲ್ಲಿ ಬಸದಿಯ ಮೂಲೆಯೊಂದರಲ್ಲಿ ಮಳೆನೀರನ್ನು ತುಂಬಿಕೊಂಡು ಕೊಳೆತು ನಾರುತ್ತಿದ್ದುದನ್ನು ಮೂಗು ಬಾಯಿಗಳಿಗೆ ಬಟ್ಟೆಕಟ್ಟಿ ನೋಡುವಂತಹ ಸಂದರ್ಭ ನಮಗೆ ಒದಗಿಬಂದುದು ದುರದೃಷ್ಟಕರವಾದುದಾಗಿದೆ. ಮದರಾಸು ಸರ್ಕಾರಿ ಪ್ರಾಚ್ಯ ಕೋಶಾಗಾರದಲ್ಲಿ ದೊರೆಯುವ ಸಹಸ್ರ ಸಹಸ್ರ ಕನ್ನಡ ಶಾಸನಗಳನ್ನು ಇಂದು ಯಾರೂ ನೋಡದೆ ಅನಾಥವಾಗಿ ಬಿದ್ದಿರುವುದು ಇಂತಹದರ ರಕ್ಷಣೆಯಲ್ಲಿ ಆಸಕ್ತಿಯುಳ್ಳವರ ಹೃದಯವನ್ನು ಭೇದಿಸುತ್ತದೆ. ನವದೆಹಲಿಯ ರಾಷ್ಟ್ರೀಯ ಪತ್ರಾಗಾರದಲ್ಲಿ ರಕ್ಷಿತವಾಗಿರುವ ಮೈಸೂರಿಗೆ ಸಂಬಂಧಪಟ್ಟ ರಾಜಕೀಯ ಮತ್ತು ರಹಸ್ಯ ದಾಖಲೆಗಳು ಸಹಸ್ರಾರು ಕಟ್ಟುಗಳಲ್ಲಿ ದೊರೆಯುತ್ತವೆ. ಇವುಗಳನ್ನು ತೆರೆದು ನೋಡಿದಾಗ ಆಗುವ ಅನುಭವವೇ ಬೇರೆಯಾಗುತ್ತದೆ. ಇಂತಹ ಅಮೂಲ್ಯ ಸಂಪತ್ತಿನ ಉಪಯೋಗ ನಮ್ಮ ಕನ್ನಡ ಜನತೆಗೆ ಸರಿಯಾಗಿ ಒದಗುತ್ತಿಲ್ಲವಲ್ಲಾ ಎಂಬ ವ್ಯಥೆ ಉಂಟಾಗುತ್ತದೆ. ಇಂತಹವುಗಳೆಲ್ಲವನ್ನೂ ಮೈಕ್ರೊಫಿಲಂ ಮಾಡಿ ಕನ್ನಡಿಗರಿಗೆ ಒದಗಿಸುವುದು ಸಾಧುವೂ ಸ್ತುತ್ಯವೂ ಆದ ಕಾರ್ಯವಾಗಿದೆ.

ಬಹು ಹಿಂದಿನಿಂದಲೂ ಕನ್ನಡದಲ್ಲಿ ಹಲವು ನಿಯತಕಾಲಿಕೆಗಳು ವೈವಿಧ್ಯಮಯ ವಾಗಿ ಪ್ರಕಟವಾಗಿರುವುದು ಕಂಡುಬರುತ್ತದೆ. ಅವುಗಳ ಎಲ್ಲ ಪ್ರತಿಗಳೂ ಎಲ್ಲೆಡೆಯೂ ದೊರೆಯುವುದಿಲ್ಲ. ಮೇಲಾಗಿ ಪ್ರಕಟವಾಗಿರುವ ಎಲ್ಲ ನಿಯತಕಾಲಿಕೆಗಳೂ ಈಗ ದೊರೆಯುವುದೂ ದುರ್ಲಭವೆಂದೆನಿಸುತ್ತದೆ. ಇಂತಹ ಅನುಭವ ಸಾಹಿತ್ಯ ಸಂಸ್ಕೃತಿಗಳ ಬಗ್ಗೆ ಕೆಲಸಮಾಡಿದ ಎಲ್ಲ ವಿದ್ವಾಂಸರಿಗೆ ಅನುಭವಕ್ಕೆ ಬಂದ ಮಾತಾಗಿದೆ. ಯಾರಾದರೂ ಯಾವುದಾದರೂ ಗ್ರಂಥದಲ್ಲಿ ಕೊಟ್ಟಿರುವ ಸಹಾಯಕ ಗ್ರಂಥಗಳ ಮತ್ತು ಲೇಖನಗಳ ಪಟ್ಟಿಯನ್ನು ನೋಡಿ ಅವುಗಳನ್ನು ಹುಡುಕ ಹೋದಾಗ ಆಗುವ ಅನುಭವದಿಂದ ಪರಿಸ್ಥಿತಿ ಎಂತಹುದು ಎಂಬುದು ಮನದಟ್ಟಾಗುತ್ತದೆ. ಈಗಲಾದರೂ ಈಗ ದೊರೆತಷ್ಟು ನಿಯತಕಾಲಿಕೆಗಳನ್ನಾದರೂ ಮೈಕ್ರೊಫಿಲಂ ಮೂಲಕವಾದರೂ ಒಂದೆಡೆ ಸೇರಿಸಿ, ಶಾಶ್ವತವಾಗಿ ರಕ್ಷಿಸುವುದು ಉಚಿತವಾಗಿದೆ. ಇಂತಹ ಸಂಗ್ರಹ ಕಾರ್ಯದಿಂದ ಯಾವ ವಿದ್ವಾಂಸರೇ ಆಗಲಿ, ತಮಗೆ ಬೇಕಾದ ಎಲ್ಲ ಪುಸ್ತಕ, ನಿಯತಕಾಲಿಕೆಗಳೇ – ಮೊದಲಾದುವೆಲ್ಲವೂ ಒಂದೆಡೆ ದೊರೆಯುವುದೆಂಬ ಭರವಸೆ ಉಂಟಾಗುತ್ತದೆ. ಇದರಿಂದ ವಿದ್ವಾಂಸರೂ ಈಗಿನಂತೆ ಹಲವು ಗ್ರಂಥಾಲಯ ಗಳನ್ನು ಸುತ್ತಿ, ಹಲವು ಊರುಗಳಲ್ಲಿ ಬೀಡು ಬಿಟ್ಟು ಬವಣೆಪಡುವ ಗೋಳು ತಪ್ಪುತ್ತದೆ.

ಈ ಕಾರ್ಯವನ್ನು ಎಷ್ಟು ಜನ ಯಾವ ಯಾವ ರೀತಿಯಲ್ಲಿ ಅರ್ಥೈಸುವರೋ ನನಗೆ ಗೊತ್ತಿಲ್ಲ. ಆದರೆ ಇದರಲ್ಲಿ ನಾನು ಹೇಳಿರುವ ಮಾತುಗಳನ್ನು ಯಥಾರ್ಥವಾಗಿ ಯೋಚಿಸುವ ಯಾವ ವಿದ್ವಾಂಸರೂ ಈ ಕಾರ್ಯವನ್ನು ಮೆಚ್ಚುತ್ತಾರೆ ಎಂಬುದರಲ್ಲಿ

ನನಗೆ ಎಳ್ಳಷ್ಟೂ ಸಂಶಯವಿಲ್ಲ. ಈ ಯೋಜನೆಯನ್ನು ಯಾರಾದರೂ ಎಂದಾದರೂ ಈಡೇರಿಸಿಯೇ ತೀರುತ್ತಾರೆಂಬುದರಲ್ಲಿ ನನಗೆ ನಂಬುಗೆಯಿದೆ.

ಈ ಕೆಲಸದಲ್ಲಿ ಸ್ವಲ್ಪ ಭಾಗವನ್ನು ಎಂದರೆ ದೇಶದ ಮೂಲೆ ಮೂಲೆಗಳಲ್ಲಿ ದೊರೆಯುತ್ತಿರುವ ಹಸ್ತಪ್ರತಿಗಳನ್ನು ಮೈಕ್ರೊಫಿಲಂ ಮಾಡಿ ಕಾಪಾಡುತ್ತಿದೆ, ಈಗಿರುವ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆ. ಅದಕ್ಕೆ ಬೇಕಾದ ಮೈಕ್ರೊಫಿಲಂ ಸಾಧನವೂ ಇಲ್ಲಿದೆ. ಇಡೀ ಕರ್ಣಾಟಕ ದೇಶದಲ್ಲಿ ಈ ಸಾಧನವನ್ನು ಹೊಂದಿರುವ ಏಕೈಕ ವಿಶ್ವವಿದ್ಯಾನಿಲಯವೆಂದರೆ ಮೈಸೂರು ವಿಶ್ವವಿದ್ಯಾನಿಲಯ ಎಂದು ನಾನು ಭಾವಿಸಿದ್ದೇನೆ. ಅಷ್ಟೇಕೆ, ಭಾರತ ದೇಶದಲ್ಲಿಯೇ ಮೈಕ್ರೊಫಿಲಂ ವಿಭಾಗವನ್ನು ಹೊಂದಿ ಇಂತಹ ಅಪೂರ್ವ ಹಸ್ತಪ್ರತಿಗಳನ್ನು ಕಾಪಾಡುವಲ್ಲಿ ಕಾರ್ಯ ಕೈಗೊಂಡಿರುವ ಏಕೈಕ ವಿಶ್ವವಿದ್ಯಾನಿಲಯವೆಂದರೆ ಮೈಸೂರು ವಿಶ್ವವಿದ್ಯಾನಿಲಯ ಎಂದರೆ ಅನೇಕರು ಆಶ್ಚರ್ಯಪಡಬಹುದು. ಆದರೆ ಈಗ ನನಗೆ ತಿಳಿದಮಟ್ಟಿಗೆ ಈ ಮಾತು ನಿಜವೆಂದೆನಿಸುತ್ತದೆ. ಈ ಸಂಸ್ಥೆ ಮೇಲೆ ಹೇಳಿದ ಸಾಹಿತ್ಯ ಸಂಸ್ಕೃತಿಗಳಿಗೆ ಸಂಬಂಧಪಟ್ಟ ಎಲ್ಲ ಬಗೆಯ ವಸ್ತುಗಳನ್ನೂ ಸಂಗ್ರಹಿಸಿ ಕಾಪಾಡುವುದು ಉಚಿತವಾಗಿದೆ. ಈ ಕಾರ್ಯವನ್ನು ಕರ್ಣಾಟಕದ ಮೂರೂ ವಿಶ್ವವಿದ್ಯಾನಿಲಯಗಳು ಸೇರಿ ಕೈಗೊಳ್ಳಬಹುದು. ಇಲ್ಲವೆ ಸರ್ಕಾರ ಈ ಬಗ್ಗೆ ಆಸಕ್ತಿ ವಹಿಸಿ ಯಾವುದಾದರೊಂದು ವಿಶ್ವವಿದ್ಯಾನಿಲಯದ ಮೂಲಕ ಈ ಕಾರ್ಯ ಮಾಡಿಸ ಬಹುದು. ಅಂತೂ ಒಟ್ಟಿನಲ್ಲಿ ಈ ಕೆಲಸ ಕಾರ್ಯರೂಪಕ್ಕೆ ಬಂದು ಜನತೆಗೆ ಸಹಾಯವೊದಗಿದಲ್ಲಿ ಸಾರ್ಥಕ ಕಾರ್ಯವೆಂದೆನಿಸುತ್ತದೆ. ಹೀಗೆ ಕಾಪಾಡಿದ ಪ್ರತಿಗಳ ಮರು ಮೈಕ್ರೊಫಿಲಂ ಪ್ರತಿಗಳನ್ನಾಗಲಿ, ಫೋಟೋ ಪ್ರತಿಗಳನ್ನಾಗಲಿ ಬಯಸಿದ ವಿದ್ವಾಂಸರಿಗೆ ಅವರ ವೆಚ್ಚದಲ್ಲಿ ಒದಗಿಸುವುದು ಉಚಿತವಾಗಿದೆ. ಈ ಮಾತು ಕೃತಿರೂಪಕ್ಕೆ ಬಂದು ವ್ಯವಸ್ಥಿತಗೊಂಡ ಗ್ರಂಥಾಲಯವೇ 'ಕನ್ನಡ ಕೇಂದ್ರ ಗ್ರಂಥಾಲಯ' ಎಂದೆನಿಸಿಕೊಳ್ಳುತ್ತದೆ. ಕನ್ನಡ ಕೇಂದ್ರ ಗ್ರಂಥಾಲಯ ಎಂದ ಮಾತ್ರಕ್ಕೆ ಕನ್ನಡಕ್ಕೇ ಮೀಸಲಾಗಿರಬೇಕೆಂದು ಯಾರೂ ಭಾವಿಸಬಾರದು. ಕನ್ನಡ ಸಾಹಿತ್ಯಕ್ಕೆ ಸಂಸ್ಕೃತಿಗೆ ಸಂಬಂಧಪಟ್ಟ ಇತರ ಗ್ರಂಥಗಳಿಗೂ ಇಲ್ಲಿ ಎಡೆಯಿರಲೇಬೇಕು. ಹಾಗದಾಗಲೇ ಅದರ ಪರಿಪೂರ್ಣತೆ ಸಾಧ್ಯವಾಗುತ್ತದೆ. ಈ ಕಾರ್ಯ ಇಂದಲ್ಲ ನಾಳೆ ನಿಜರೂಪಕ್ಕೆ ಬಂದು ಕನ್ನಡ ಜನತೆಯ ಏಳ್ಗೆಗೆ ಸಹಾಯವಾಗಲಿ ಎಂದು ಹಾರೈಸಿ ಈ ನನ್ನ ಕೆಲವು ಮಾತುಗಳನ್ನು ಮುಗಿಸುತ್ತೇನೆ. ಈ ಬಗ್ಗೆ ಇನ್ನೂ ಹೆಚ್ಚಿನ ಅಂಶಗಳನ್ನು ತಿಳಿಸುವ ವಿದ್ವಾಂಸರು ಮುಂದೆ ಬಂದರೆ ಆದರದಿಂದ ಸ್ವಾಗತಿಸುತ್ತೇನೆ.

ವಿಮಾನ ಅಪಘಾತಗಳು

ಬೆ. ಗೋ. ರಮೇಶ್

1903ರ ಡಿಸೆಂಬರ್ 17. ಗಾಳಿಗಿಂತ ಭಾರವಾದ ಸ್ವಚಲಿತ ಯಂತ್ರದಲ್ಲಿ ಯಶಸ್ವಿಯಾಗಿ ಹಾರಾಡಿದ ಪ್ರಥಮ ಮಾನವರಾದವರು ರೈಟ್ ಸಹೋದರರು. ಈ ಸಹೋದರರು ವಿಲ್ಬರ್ ಮತ್ತು ಆರ್ವಿಲ್ ರೈಟ್ ಹಕ್ಕಿಗಳು ಹಾರಾಟವನ್ನು ಹತೋಟಿಯಲ್ಲಿಟ್ಟುಕೊಳ್ಳಲು ತಮ್ಮ ರೆಕ್ಕೆಗಳ ತುದಿಗಳನ್ನು ನುಲಿಯುತ್ತವೆಂಬುದನ್ನು ಮನಗಂಡಿದ್ದರು. ಜರ್ಮನಿಯ ಆಟ್ಟೊ ಲಿಲಿಯನ್ ಥಾಲ್ ಎಂಬಾತ ಕೈಗೊಂಡ ಫಲಕ ವಿಮಾನ (ಗ್ಲೈಡರ್) ಹಾರಾಟಗಳ ಬಗ್ಗೆ ಬಂದ ವರದಿಗಳನ್ನು ಕೇಳಿ ತಿಳಿದಿದ್ದರು. ತನ್ನ ದೇಹವನ್ನು ಅತ್ತಿತ್ತ ಚಲಿಸುವುದರ ಮೂಲಕ ಲಿಲಿಯನ್ ಥಾಲ್ ತನ್ನ ಗ್ಲೈಡರ್ ಆಯತಪ್ಪದಂತೆ ಮಾಡುತ್ತಿದ್ದ. ಶಕ್ತಿಯಿಂದ ಚಲಿಸುವ ವಿಮಾನಕ್ಕೂ ಸರಿಹೊಂದುವ ಉತ್ತಮ ವಿಧಾನವನ್ನು ಕಂಡುಹಿಡಿಯಲು ರೈಟ್ ಸಹೋದರರು ಪ್ರಯತ್ನಿಸಿದರು. ತಮ್ಮ ಪ್ರಾಯೋಗಿಕ ಗ್ಲೈಡರುಗಳಿಗೆ ಹೇಗೆಂದರೆ ಹಾಗೆ ಹೊಂದಿಕೊಳ್ಳುವಂತಹ ಮೇಲ್ಮೈಯುಳ್ಳ ರೆಕ್ಕೆಗಳನ್ನು ಅಥವಾ ಅಯ್ಲರಾನ್ಸ್‌ಗಳನ್ನು ಜೋಡಿಸಿದರು.

ಗ್ಲೈಡರುಗಳ ಹಾರಾಟದಿಂದ ತೃಪ್ತಿಗೊಂಡ ಇವರು ಪೆಟ್ರೋಲಿನಿಂದ ಚಲಿಸುವ 12 ಅಶ್ವಶಕ್ತಿಯ ಮೋಟಾರೊಂದನ್ನು ಸಿದ್ಧಪಡಿಸಿದರು. ಅದನ್ನು ತುದಿಯಿಂದ ತುದಿಗೆ 43 ಅಡಿಯಿರುವ ಮಸ್ಲಿನ್ ಬಟ್ಟೆಯಿಂದ ಸುತ್ತಿದ, ರೆಕ್ಕೆಗಳಿರುವ ಹಾಗೂ ಮರದ ಚೌಕಟ್ಟುಗಳ ಫಲಕ ವಿಮಾನಕ್ಕೆ ಜೋಡಿಸಿದರು. ಸರಪಳಿಗಳಿಂದ ಜೋಡಿ ಚಾಲಕದಂಡ (Propeller) ಗಳನ್ನು ಮೋಟಾರಿಗೆ ಕೂಡಿಸಿದರು. ಮೊಟ್ಟಮೊದಲಿಗೆ ಈ ಹಾರುಯಂತ್ರವನ್ನು ಮರದ ಹಲಗೆಗಳನ್ನು ಹಾಸಿ ನಿರ್ಮಿಸಿದ ಮಾರ್ಗದಲ್ಲಿ ನಿಲ್ಲಿಸಿ, ವಿಮಾನದ ಮೋಟಾರು ನಡೆಸಿದರು. ಚಾಲಕದಂಡಗಳಿಗೆ ಎದುರಾಗಿ ಅಧೋಮುಖವಾಗಿದ್ದ ಸ್ಥಾನವೇ ಚಾಲಕನ ಸ್ಥಾನ. ಆರ್ವಿಲೆ ಚಾಲಕನಾದ. ವಿಮಾನ ಚಲಿಸಿತು. ನೆಲವನ್ನು ಬಿಟ್ಟು ಮೇಲಕ್ಕೆ ಹಾರಿತು. ವಿಮಾನ 12 ಸೆಕೆಂಡುಗಳಲ್ಲಿ 121 ಅಡಿ ದೂರ ಹೋಯಿತು. ಮುಂದಿನ ಕೆಲವರ್ಷಗಳಲ್ಲಿ ಅಮೆರಿಕೆಯ ಈ ಇಬ್ಬರು ಸಹೋದರರು ವಿಮಾನದ ವೇಗವನ್ನು ಹೆಚ್ಚಿಸಿದರು. ಹೆಚ್ಚು ದೂರ ಹಾರಿದರು. ಅಂದಿನ ಈ ವಿಮಾನ ಪ್ರೇಕ್ಷಣೀಯ ವಸ್ತು. ಆದರೆ ಇಂದು ಜಗತ್ತಿನಲ್ಲಿ ಅತ್ಯಂತ ವೇಗಗಾಮಿಯಾದ

ಸಂಚಾರ ಸಾಧನ ವಿಮಾನ! ಹಲವು ಹತ್ತು ಬಗೆಯ ವಿಮಾನಗಳು! ಜೆಟ್, ಸೂಪರ್ ಸಾನಿಕ್, ಯುದ್ಧ ವಿಮಾನಗಳು, ಪ್ರಯಾಣ ವಿಮಾನಗಳು!! ಜಗತ್ತನ್ನೇ ಮಾರ್ಪಡಿಸಿದ ಹೊಸ ನಿರ್ಮಾಣಗಳು.

ಈ ಶತಮಾನದಲ್ಲಿ ಮಾನವನ ಸಾಧನೆ ಮೆಚ್ಚಬಹುದಾದದ್ದು. ಹಲವಾರು ದಿನಗಳನ್ನು ವ್ಯರ್ಥವಾಗಿ ಕಳೆಯುತ್ತಿದ್ದ ಅವನು ಇಂದು ಕ್ಷಣದಲ್ಲಿ ಮಾಡಿ ಮುಗಿಸಿ ತನ್ನ ಅವಶ್ಯಕತೆಗಳನ್ನು ಪೂರೈಸಿಕೊಳ್ಳಬಲ್ಲ. ಅವನಿಗೆ ಬೇಕಾದ ಎಲ್ಲವೂ ಅವನಿಗಿದ್ದರೂ ಜೀವಭಯ ಮಾತ್ರ ತಪ್ಪಲಿಲ್ಲ. ಎಷ್ಟೇ ಎಚ್ಚರಿಕೆಯಿಂದ ಇದ್ದರೂ ಅವನನ್ನು ಮೀರಿಸಿದ ಶಕ್ತಿ ಅವನನ್ನು ಯೋಚನೆಗೀಡು ಮಾಡಿದೆ ಎಂದರೆ ತಪ್ಪಾಗಲಾರದು. ವಿಧಿ ಅವನ ಜತೆಯಲ್ಲೇ ಇದೆ. ಆದರಿಂದ ಅವನು ತಪ್ಪಿಸಿಕೊಳ್ಳಲಾಗಿಲ್ಲ. ಆದರೂ ಜಾಗರೂಕತೆಯಿಂದಿದ್ದರೆ ವಿಧಿ ತನ್ನ ಕೈವಾಡವನ್ನು ಕೊಂಚ ಕಡಮೆ ಮಾಡೀತೋ ಏನೋ ಎನ್ನುವ ಪ್ರಜ್ಞೆ ಇರಬೇಕೆಂದು ಮಾನವ ತನಗೊದಗಬಹುದಾದ ಅನಾನುಕೂಲತೆಗಳನ್ನು ಎದುರಿಸುತ್ತಾನೆ. ಜೀವಭಯವನ್ನು ಉಂಟುಮಾಡುವ ವಿಷಯಗಳು ಹಲವು. ಅವುಗಳಲ್ಲಿ ವಿಮಾನಗಳಿಂದ ಆಗುವ ಕಷ್ಟ ನಷ್ಟಗಳು ಒಂದು. ಸುಖವನ್ನೀಯುವ ಸಾಧನವೇ ತೀವ್ರ ದುಃಖವನ್ನುಂಟುಮಾಡುವುದು ಎಂಬ ಪಾಠ ಜತೆಗೆ.

ಅಪಘಾತಗಳು ತಿಳಿಯದೇ ಆಗುವುದು ಹೇಗೋ ತಿಳಿದೂ ಆಗುವುದೂ ಉಂಟು. ವಿಮಾನ ಅಪಘಾತಗಳು ಅಂತೆಯೇ ನಮ್ಮ ದೇಶದಲ್ಲೇ ಸುಮಾರು 20 ವರ್ಷಗಳಲ್ಲಿ 42 ಗಮನೀಯ ವಿಮಾನ ಅಪಘಾತಗಳು ಆಗಿದ್ದು 620 ಜನರು ಅಸುನೀಗಿದ್ದಾರೆ. ಅನೇಕ ರೀತಿಯ ನಷ್ಟಗಳಾಗಿವೆ. ಪ್ರತಿ ಅಪಘಾತಕ್ಕೂ ಅಪಘಾತ ನಡೆದ ತರುವಾಯದಲ್ಲಿ ಕಾರಣ ಕಂಡುಹಿಡಿಯುವುದೇ ಆಗಿದೆ. ಕೆಲವೊಮ್ಮೆ ಊಹಿಸುವುದೂ ಉಂಟು. ಇಂದಂತೂ ವಿಮಾನ ಪ್ರಯಾಣ ಮಾಡುವವರಲ್ಲಿ ಪ್ರತಿ 20 ಪ್ರಯಾಣಿಕರಲ್ಲಿ ಒಬ್ಬರಂತೆ ಭಯದಿಂದಲೇ ಪ್ರಯಾಣ ಮಾಡುತ್ತಾರೆ. ಪ್ರಯಾಣ ಮಾಡುವುದಷ್ಟೇ ಗೊತ್ತು. ಸಾಧನದ ಪರಿಚಯದ ಅಗತ್ಯವಿಲ್ಲ. ವಿಮಾನವನ್ನು ಕಂಡವರೂ, ಪ್ರಯಾಣಕ್ಕಾಗಿ ಬಳಸಿದವರಲ್ಲಿ ಎಷ್ಟು ಮಂದಿಗೆ ವಿಮಾನಗಳ ಬಗ್ಗೆ ವೈಜ್ಞಾನಿಕವಾಗಿ ಗೊತ್ತು! ಇಲ್ಲವೆ ಅದನ್ನು ತಿಳಿಯುವ ಹಂಬಲವಾದರೂ ಇದೆಯೇ! ಅಂತೂ ಅಪಘಾತಗಳು ಆಗುತ್ತಿವೆ. ವಿಮಾನ ರಕ್ಷಣೆ ಇಂದಿನ ಏರೊನಾಟಿಕಲ್ ಇಂಜನಿಯರುಗಳಿಗೆ, ವಿನ್ಯಾಸಕಾರರಿಗೆ ಬಹುದೊಡ್ಡ ಸಮಸ್ಯೆ. ಆಬಗ್ಗೆ ಆಸಕ್ತಿ ಅತ್ಯಗತ್ಯ.

ಅಪಘಾತಗಳಿಗೆ ಹಲವು ಕಾರಣಗಳು

ವಿಮಾನ ಅಪಘಾತಗಳಿಗೆ ಕಾರಣಗಳನ್ನು ಹೇಳುವಾಗ ಇತರ ಯಾವುದೇ ಸಂಚಾರ ಸಾಧನ ವಾಹನಗಳನ್ನಷ್ಟೇ ಹೋಲಿಸುವಂತಿಲ್ಲ. ಭೂಮಾರ್ಗದಲ್ಲಿ

ಸಂಚರಿಸುವ ವಾಹನಗಳಿಗೆ ತಮ್ಮದೇ ಆದ ಮಿತಿ ಇದೆ. ಸೌಲಭ್ಯಗಳಿವೆ. ಹಾಗೂ ಅವುಗಳ ಕ್ಷೇತ್ರ ಸಣ್ಣದು. ವಿಮಾನ ಹಾಗಲ್ಲ. ಹೆಚ್ಚು ಹೆಚ್ಚು ಎತ್ತರಕ್ಕೆ ಹೋದಂತೆಲ್ಲ ಹೆಚ್ಚು ಜಾಗರೂಕತೆ ಅವಶ್ಯ. ವಿಮಾನಕ್ಕೆ ಪ್ರತಿ ಹೆಜ್ಜೆಯಲ್ಲೂ ಮೇಲ್ವಿಚಾರಣೆಯುಂಟು, ಇರಬೇಕು. ಮುಖ್ಯವಾಗಿ ವಿಮಾನ ನೆಲಬಿಟ್ಟು ಹಾರುವಾಗ ಹಾಗೂ ಅದು ತನ್ನ ಕಾರ್ಯವನ್ನು ಮುಗಿಸಿ ಸೇರಬೇಕಾದ ಸ್ಥಳವನ್ನು ತಲುಪಿ ನೆಲವನ್ನು ಮುಟ್ಟುವಾಗ ಅದು ಅಪಘಾತಕ್ಕೊಳಗಾಗುವುದು ಸಾಧ್ಯತೆ ಇದೆ. ವಿಮಾನ ಪ್ರಯಾಣ ಕಾಲದಲ್ಲಿ ಅದರ ಹಾದಿಯಲ್ಲಿ ಬಂದೊದಗುವ ಅಡಚಣೆಗಳಿಂದ—ಉದಾ : ಹಕ್ಕಿಯ ಬಡಿತ, ಬೆಟ್ಟ, ಕಟ್ಟಡಗಳು ;—ಅಪಘಾತಗಳಾಗಬಹುದು. ಇಲ್ಲವೇ ಕೆಲವರ ಅಥವಾ ಯಾರೋ ಒಬ್ಬ ಸ್ವಾರ್ಥಿಯ ವಿಧ್ವಂಸಕ ಕೃತ್ಯದಿಂದ ಅಪಘಾತ ಜರುಗಬಹುದು. ದೋಷಪೂರಿತ ಯಂತ್ರ ವ್ಯವಸ್ಥೆ, ವಿಮಾನ ಚಾಲಕನ ತಪ್ಪು ಲೆಕ್ಕಾಚಾರ, ವಿಮಾನ ಹಾರಾಟ ನಿಯಂತ್ರಣ ವ್ಯವಸ್ಥೆಯಲ್ಲಿ ದೋಷಗಳು, ವಿಮಾನ ಭಾರದಲ್ಲಿ ಹೆಚ್ಚಳ, ವ್ಯತಿರಿಕ್ತ ವಾಯುಗುಣ—ಹೀಗೆ ಒಂದು ಅಪಘಾತವಾದಾಗ ಹಲವಾರು ಕಾರಣಗಳನ್ನು ಗುರುತಿಸಬಹುದು. ಈ ಕಾರಣಗಳನ್ನು ಮೊದಲೆ ಪತ್ತೆಹಚ್ಚಿ ವಿಮಾನ ಅಪಘಾತಗಳನ್ನು ತಡೆಗಟ್ಟುವ ಸಾಧ್ಯತೆಯೂ ಇದೆ. ಈ ಎಲ್ಲ ವಿಷಯಗಳಲ್ಲೂ ಚಟುವಟಿಕೆಯಿಂದ, ಜವಾಬ್ದಾರಿಯಿಂದ ಸಂಬಂಧಪಟ್ಟವರು ಕೆಲಸ ಮಾಡುವುದೇ ಮುಖ್ಯ ಎಂಬ ಅಂಶ ಗೋಚರವಾಗುವುದು. ಈ ಕಾರಣಗಳಿಗೆ ವೈಜ್ಞಾನಿಕ ಹಿನ್ನೆಲೆ ಇದೆ.

ಇಳಿದಾಣ ಉಪಕರಣ ವ್ಯವಸ್ಥೆ (Instrument Landing System)


ವಿಮಾನ ತನ್ನ ಕಾರ್ಯ ಮುಗಿಸಿ ವಿಮಾನ ನಿಲ್ದಾಣವನ್ನು ಸೇರುವುದು ಒಂದು ಮುಖ್ಯ ಹಂತ. ವಿಮಾನ ಇಳಿಯುವ ವೇಳೆಯಲ್ಲಿ ವಿಮಾನ ನಿಲ್ದಾಣದ ನಿಯಂತ್ರಣ ಕೊಠಡಿ (Control Room) ಯಲ್ಲಿನ ಉಪಕರಣಗಳು ತೃಪ್ತಿಕರವಾಗಿ ಕೆಲಸಮಾಡಬೇಕಾಗಿರುತ್ತದೆ. ಇಳಿದಾಣ ಉಪಕರಣಗಳು ಕೆಲಸ ಮಾಡಲು ಅಸಮರ್ಥವಾಗಿದ್ದು ಸರಿಯಾಗಿ ಕೆಲಸ ಮಾಡದೆ ಹೋದಾಗ ನಿಲ್ದಾಣಕ್ಕೆ ಹತ್ತಿರದ ಇನ್ನಾವುದೇ ವಿಮಾನ ನಿಲ್ದಾಣ ಅಥವಾ ಕ್ಷೇತ್ರಕ್ಕೆ ಇಳಿಯ ಬಂದಿರುವ ವಿಮಾನಗಳನ್ನು ನಿರ್ದೇಶಿಸುತ್ತಾರೆ. ಇದೊಂದು ರಕ್ಷಣಾ ಉಪಾಯ, ಇಳಿದಾಣ ಉಪಕರಣ ವ್ಯವಸ್ಥೆ ಎರಡು ರೇಡಿಯೋ ತರಂಗಗಳನ್ನು ಹೊಂದಿರುತ್ತದೆ. ವಿಮಾನ ಹಾದಿಯ (runway) ಯ ಭೂಕೇಂದ್ರದ ಉದ್ದಕ್ಕೂ ಈ ತರಂಗಗಳು ಪ್ರೇಷಿಸಲ್ಪಟ್ಟು, ವಿಮಾನ ನಿಲ್ದಾಣಕ್ಕೆ 10 ಅಥವಾ 15 ಮೈಲಿಗಳ ದೂರದಲ್ಲಿ ವಿಮಾನ ಈ ತರಂಗಗಳನ್ನು ಗ್ರಹಿಸಿಕೊಳ್ಳುತ್ತದೆ. ಮೊದಲ ತರಂಗವು ವಿಮಾನವು ವಿಮಾನ ಹಾದಿಯ ಭೂಕೇಂದ್ರಕ್ಕೆ ಅನುಗುಣವಾಗಿ ಇಳಿಯುವ ಅವಕಾಶ ಮಾಡಿಕೊಡುತ್ತದೆ. ವಿಮಾನ ಈ ಕಾಣದ ಇಳಿಜಾರಿನಲ್ಲಿ ಸುಮಾರು 200 ಅಡಿ ಎತ್ತರಕ್ಕೆ ಬರುತ್ತದೆ. ಕೆಲವು ವಿಮಾನ ನಿಲ್ದಾಣಗಳಲ್ಲಿ ಎರಡು

ರೇಡಿಯೊ ಸಂಜ್ಞಾ ಜ್ಯೋತಿ (Beacons) ಗಳಿರುತ್ತವೆ. ಇವುಗಳಲ್ಲಿ ಒಂದು ಒಳ ಗುರುತು ಮತ್ತೊಂದು ಹೊರಗುರುತು. ವಿಮಾನ ಚಾಲಕ ಹೊರ ಗುರುತನ್ನು ದಾಟಿದಾಗ ಚಾಲಕ ಕುಳಿತಿರುವ ಸ್ಥಳದಲ್ಲಿರುವ ಉಪಕರಣ ಫಲಕದಲ್ಲಿ ಒಂದು ಬೆಳಕು ಪ್ರಜ್ವಲಿಸುತ್ತದೆ. ವಿಮಾನಕ್ಷೇತ್ರ (Air Field) ಇನ್ನು ಸುಮಾರು 1400 ಅಡಿ ಕೆಳಗಿದೆ ಎಂದು ಚಾಲಕನಿಗೆ ಆಗ ಅರಿವಾಗುತ್ತದೆ. ಮುಂದೆ ಚಾಲಕ ಇಳಿದಾಣ ಉಪಕರಣ ವ್ಯವಸ್ಥೆಯು ಒಳಗುರುತಿನ ಸಹಾಯದಿಂದ ವಿಮಾನ ಹಾದಿಯಲ್ಲಿ ಸರಳ ರೇಖೆಯ ಪಥದಲ್ಲಿ ವಿಮಾನ ನೆಲವನ್ನು ಮುಟ್ಟುವಂತೆ ಮಾಡುತ್ತಾನೆ. ಇಂತಹ ಇಳಿದಾಣ ಉಪಕರಣವ್ಯವಸ್ಥೆ ಒಮ್ಮೊಮ್ಮೆ ಕಳುಹಿಸುವ ತರಂಗಗಳು ಬಾಗಿದ್ದು ವಿಮಾನ ಚಾಲಕನ ತಪ್ಪು ಲೆಕ್ಕಾಚಾರಗಳಿಗೆ ದಾರಿಯಾಗಿ ವಿಮಾನ ಉದ್ದೇಶವಿಲ್ಲದ ಅಪಘಾತಕ್ಕೀಡಾಗುತ್ತದೆ. ಆಗಸ್ಟ್ 1972ರಲ್ಲಿ IAC ಫಾಕರ್ ವಿಮಾನವೊಂದು ಈ ಕಾರಣದಿಂದ ಅಪಘಾತಕ್ಕೀಡಾಗಿ ಹದಿನೆಂಟು ಮಂದಿ ಅಸುನೀಗಿದರು. ರೇಡಿಯೊ ತರಂಗಗಳು ವಿಮಾನ ನಿಲ್ದಾಣದ ಹತ್ತಿರವಿರುವ ಬೆಟ್ಟ, ಕಟ್ಟಡಗಳಿಂದ ಅಡಚಣೆ ಹೊಂದಿ ವಿಮಾನಗಳನ್ನು ಅಪಘಾತಕ್ಕೀಡು ಮಾಡಬಹುದು. ವಿಮಾನ ಇಳಿಯಲು ತೃಪ್ತಿಕರವಾಗಿ ಕೆಲಸಮಾಡಿ ಸಹಕರಿಸುವ ಸಹಾಯ ಸಲಕರಣೆ ಎಂದರೆ ನಿಷ್ಕೃಷ್ಟ ಮಾರ್ಗದರ್ಶಕ ರಾಡಾರ್ (Precision Approach Radar) ಅಥವಾ PAR ವ್ಯವಸ್ಥೆ. ಇದು ವಿಮಾನ ಯಾವ ಎತ್ತರದಲ್ಲಿ, ದೂರದಲ್ಲಿ, ದಿಕ್ಕಿನಲ್ಲಿದೆ ಎಂಬುದನ್ನು ಚೆನ್ನಾಗಿ ಗುರುತಿಸುವುದಲ್ಲದೆ ವಿಮಾನ ದಿಕ್ಕು ತಪ್ಪಿದಾಗ ಅದನ್ನು ನಿಯಂತ್ರಿಸುವ ಶಕ್ತಿ ಪಡೆದಿರುತ್ತದೆ. ಈ ವ್ಯವಸ್ಥೆ ಬೊಂಬಾಯಿ ಹಾಗೂ ಕಲ್ಕತ್ತೆಯಲ್ಲಿದ್ದು ಸರಿಯಾದ ಶಿಕ್ಷಣ ಹೊಂದಿದ ತಜ್ಞರಿಲ್ಲದೆ ಅದು ಉಪಯೋಗಕ್ಕಿಲ್ಲವಾಗಿದೆ.

ಹಾರುದೂರದರ್ಶಕ

ಪ್ರತಿ ವಿಮಾನದಲ್ಲೂ ಹಾರುದೂರದರ್ಶಕ ಎಂಬ ಒಂದು ಮುಖ್ಯ ಉಪಕರಣದ ಅವಶ್ಯಕತೆ ಇರುತ್ತದೆ. ಇದನ್ನು ಫ್ಲೈಟ್ ರೆಕಾರ್ಡರ್ ಅಥವಾ ಬ್ಲಾಕ್ ಬಾಕ್ಸ್ ಎಂದು ಕರೆಯುತ್ತಾರೆ. ಆದರೆ ಈ ಉಪಕರಣ ಕಪ್ಪಗೂ ಇರುವುದಿಲ್ಲ ಪೆಟ್ಟಿಗೆಯ ಆಕಾರದಲ್ಲಿರುವುದಿಲ್ಲ. ಸಾಮಾನ್ಯವಾಗಿ ಇದು ಕಿತ್ತಳೆ ಹಳದಿ ಬಣ್ಣಕ್ಕಿದ್ದು ಗೋಳಾಕಾರದಲ್ಲಿರುತ್ತದೆ. ಈ ಎಲೆಕ್ಟ್ರಾನಿಕ್ ಸಲಕರಣೆ ವಿಮಾನ ಯಂತ್ರದ ಹಾರುವಿಕೆಯ ಶಾಶ್ವತ ಸಾಕ್ಷಿಯನ್ನು ನಮಗೆ ಕೊಡುತ್ತದೆ. ವಾಯುವೇಗ, ವಿಮಾನ ಹಾರುವ ಎತ್ತರ, ಶೃಂಗವೇಗೋತ್ಕರ್ಷ, ವಿಮಾನ ಯಾನದಲ್ಲಿ ಕಾಲವ್ಯಯ, ಮತ್ತು ವಿಮಾನದ ಬೇರೆ ಬೇರೆ ಭಾಗಗಳಲ್ಲುಂಟಾಗುವ ಒತ್ತಡ ಇವನ್ನೆಲ್ಲಾ ಹಾರುದೂರದರ್ಶಕ ವಿವರಿಸುತ್ತದೆ. ಇಡೀ ವಿಮಾನದ ನಡವಳಿಕೆಯ ದೀರ್ಘ ಕತೆಯನ್ನೇ ತಿಳಿಸುತ್ತದೆ. ಆಕಸ್ಮಿಕವಾಗಿ ಆದ ಅಪಘಾತಗಳಿಗೊಳಗಾದ ವಿಮಾನಗಳಲ್ಲಿ ಇದರ ಪಾತ್ರ ಅತಿ ಹೆಚ್ಚಿನದು. ೨೫೦೦ ಡಿಗ್ರಿ ಫ್ಯಾರನ್ ಹೀಟ್ ಉಷ್ಣತೆಯನ್ನು ಗುರುತ್ವ

ಬಲಕ್ಕಿಂತ ಐನೂರರಷ್ಟು ಹೆಚ್ಚಿನ ಒತ್ತು ಬಲವನ್ನು (Cushing Force) ತಡೆದು ಕೊಳ್ಳುವ ಶಕ್ತಿ ಈ ದರ್ಶಕಕ್ಕಿದೆ. ವಿಮಾನಕ್ಕೆ ಏಟು ಬಿದ್ದಾಗ ಭಗ್ನಾವಶೇಷಗಳ



ಹಾರುದೂರದರ್ಶಕ

ಮೇಲೆ ಉರುಳಿಕೊಂಡು ದರ್ಶಕ ಈಚೆ ಬರುತ್ತದೆ. ದರ್ಶಕದ ಮೇಲಿನ ನಕ್ಷೆಯ ಸಹಾಯದಿಂದ ಅಪಘಾತದ ಕಾರಣ ತಿಳಿಯಬಹುದು. ಈ ವಿವರಗಳು ತೆಳ್ಳಗಿನ ಎರಡು ಅಂಗುಲ ಅಗಲದ ಅಲ್ಯೂಮಿನಿಯಂ ಹಾಳೆಯ ಮೇಲೆ ಗುರುತು ಮಾಡಲ್ಪಡುತ್ತವೆ. ಭಾರತದ ವಿಮಾನ ಶಾಖೆಯು ೧೯೬೦ರಲ್ಲಿ ಈ ಉಪಕರಣವನ್ನು ಬಳಸಲು ಮೊದಲು ಮಾಡಿತು. ಆದರೂ ಇನ್ನೂ ಎಷ್ಟೋ ವಿಮಾನಗಳಲ್ಲಿ ಈ ದರ್ಶಕವನ್ನು ಜೋಡಿಸಲಾಗಿಲ್ಲ.

ವಿಮಾನ ನಿಲ್ದಾಣಗಳಲ್ಲಿ ಸರಿಯಾದ ಬೆಳಕಿನ ವ್ಯವಸ್ಥೆ ಇರಬೇಕಾದದ್ದು ಅತ್ಯಗತ್ಯ. ಇದಕ್ಕೆಂದೆ ಕೆಲ ವಿಶೇಷ ಬೆಳಕಿನ ವ್ಯವಸ್ಥೆಗಳು ಏರ್ಪಾಡಾಗಿವೆ. ಸೆಂಟ್ರಲ್ ಲೈನ್ ಲೈಟಿಂಗ್, ಜೋನ್ ಲೈಟಿಂಗ್ (Zone lighting) ಮುಂತಾದ ಉತ್ತಮ ಬೆಳಕಿನ ವ್ಯವಸ್ಥೆಗಳು ಸಿದ್ಧಗೊಳಿಸುವುದರಿಂದ ಇಳಿದಾಣಗಳಲ್ಲಿ ಅಪಘಾತಗಳನ್ನು ತಪ್ಪಿಸಬಹುದು. ಅಲ್ಲದೆ ವಿಮಾನ ನಿಲ್ದಾಣಗಳಲ್ಲಿ ಉತ್ತಮ ಆಕಾಶಯಾನ ಸಹಾಯಕ ಸಲಕರಣೆಗಳಾದ ಸ್ಕೋಪೋಗ್ರಾಫ್ ಮತ್ತು ಸೀಲೋಗ್ರಾಫ್‌ಗಳನ್ನು ಬಳಸುವುದು ಅಗತ್ಯವಿರುತ್ತದೆ. ಈ ಸಲಕರಣೆಗಳು ವ್ಯತಿರಿಕ್ತ ವಾಯುಗುಣ ಸ್ಥಿತಿಗಳಲ್ಲಿ ವಿಮಾನ ಇಳಿಯಬೇಕೆ ಇಲ್ಲವೆ ಎಂಬುದನ್ನು ಸೂಚಿಸಿ ವಿಮಾನ ಇಳಿಯಲು ಇತರ ಅನುಕೂಲಗಳ ಪರಿಹಾರವನ್ನೊದಗಿಸಬಹುದಾದ ಸಣ್ಣ ಯಂತ್ರಗಳು.

ಸದ್ಯಕ್ಕೆ ನಮ್ಮ ದೇಶದಲ್ಲಿ ಮೂರು ವಿಮಾನ ನಿಲ್ದಾಣಗಳಲ್ಲಿ ಈ ಯಂತ್ರಗಳ ಜೋಡಣೆಯಾಗಿವೆ. ಮೋಡಗಳ ಬಗ್ಗೆ ನಿಖರವಾದ ವಿವರಣೆ ನೀಡುವ ಈ ಯಂತ್ರಗಳ ಉಪಯೋಗ ಮಾಡಿಕೊಳ್ಳುವುದು ಅತ್ಯಗತ್ಯ.

ವಿಮಾನಯಾನಕ್ಕೆ ಮುನ್ನ ಅಥವಾ ಉಡಾವಣೆಯಾಗುವ ಮುನ್ನ ಸರಿಯಾದ ಮೇಲ್ವಿಚಾರಣೆ ಅಗತ್ಯ. ಇದರಿಂದ ಅಪಘಾತಗಳನ್ನು ತಪ್ಪಿಸಬಹುದು. ವಿಮಾನ ಯಾನದ ನಕ್ಷೆ, ಯಾನದ ಕಾಲ, ವಿಮಾನದಲ್ಲಿನ ಸಾಮಾನು ಸರಂಜಾಮುಗಳಲ್ಲಿ ಸಮ ತೋಲನ, ವಿಮಾನ ಯಂತ್ರಗಳು ದೋಷಗಳಿಂದ ಮುಕ್ತವಾಗಿರುವುದರ ಬಗ್ಗೆ ಅರ್ಹತಾ ಪತ್ರ – ಹೀಗೆ ಇಂತಹ ವಿಷಯಗಳ ಕುರಿತ ಮೇಲ್ವಿಚಾರಣೆ ಬಹುಮುಖ್ಯ. ಅಪಘಾತಗಳನ್ನು ತಪ್ಪಿಸುವುದರಲ್ಲಿ ವಿಮಾನ ಚಾಲಕನ ಪಾತ್ರ ಹೆಚ್ಚಿನದು. ಅವನು ಆರೋಗ್ಯವಂತನಾಗಿರಬೇಕು. ಅವನಲ್ಲಿ ಯಾವ ಮಾನಸಿಕ ಜಾಡ್ಯಗಳಿರಬಾರದು. ಒಂದು ಸಣ್ಣ ತಲೆನೋವು ಇರುವ ಪುಟ್ಟ ಕಾಯಿಲೆಯಿಂದಲೂ ಅವನು ಮುಕ್ತನಾಗಿರ ಬೇಕು. ಹೃದಯದಲ್ಲಿ ತೊಂದರೆ, ಸುಸ್ತಾಗುವುದು, ಕಿವುಡು, ವಾಂತಿ ಮಾಡಿ ಕೊಳ್ಳುವುದು – ಇಂತಹ ಯಾವುದೇ ಅನಾರೋಗ್ಯಕರ ಪರಿಸ್ಥಿತಿಯಿಂದ ದೂರವಿರುವ ಚಾಲಕ (Pilot) ಮಾತ್ರ ವಿಮಾನಯಾನಕ್ಕೆ ಯೋಗ್ಯ. ಈ ಚಾಲಕರು ಕೆಲಸಕ್ಕೆ ಬರುವಾಗ ಶಿಸ್ತನ್ನು ಕಾಪಾಡಿಕೊಳ್ಳುವುದು, ವೇಳೆಗೆ ಸರಿಯಾಗಿ ಬರುವುದು, ನಿಗದಿ ಯಾದ ಕಾಲದಲ್ಲಿ ಮಾತ್ರ ವಿಮಾನವನ್ನು ಹಾರಾಟಕ್ಕೆ ಉಪಯೋಗಿಸುವುದು ಮುಖ್ಯ ಅಂಶಗಳು. ಇಂತಹ ಚಾಲಕರು ಅಜಾಗರೂಕರಾಗಿರುವುದಿಲ್ಲ. ತಮ್ಮ ಮೇಲಿನ ಹೊರೆಯನ್ನು ಸದಾ ನೆನಪಿಡುತ್ತಾರೆ. ಹಲ ಕೆಲವು ಅಪಘಾತಗಳನ್ನು ತಪ್ಪಿಸುವುದ ರಲ್ಲಿ ಚಾಲಕರ ಜಾಗರೂಕತೆ, ಸಹಾಯ ಬಹುಮುಖ್ಯ.

ಹಾರುವ ಹಕ್ಕಿಯಿಂದ ಅಪಾಯ

ಗಂಟೆಗೆ ೪೮೦ ಕಿಲೊಮಿಟರ್ ವೇಗದಲ್ಲಿ ಹಾರುತ್ತಿರುವ ವಿಮಾನವೊಂದನ್ನು ಗಂಟೆಗೆ ೨೦ ಕಿಲೊಮೀಟರ್ ವೇಗದಲ್ಲಿ ಹಾರುತ್ತಿರುವ ೧.೮ ಕಿಲೊಗ್ರಾಂ ತೂಕದ ಹಕ್ಕಿಯೊಂದು ಬಡಿದರೆ ಈ ಬಡಿತದ ಒಟ್ಟು ಬಲ ಸುಮಾರು ಹದಿನಾಲ್ಕು ಟನ್ ಗಳಷ್ಟಾಗಿ ಈ ಬಲವೇ ವಿಮಾನದ ರೆಕ್ಕೆಯನ್ನು ತಟಕ್ಕನೆ ಹರಿದು ಹಾಕಿ ಅಥವಾ ಗಾಜಿನ ಗಾಳಿ ತಡೆ (Wind Screen) ಯನ್ನು ಚೂರು ಚೂರು ಮಾಡಿ ಇಲ್ಲವೆ ವಿಮಾನದ ಎಂಜಿನ್ನನ್ನು ಕಾರ್ಯವಿಹೀನ ಗೊಳಿಸುತ್ತದೆಂದರೆ ಯಾರಿಗಾದರೂ ಆಶ್ಚರ್ಯವಾಗುವುದು. ತಮಗೆ ಮಾತ್ರ ಇರುವ ಶಕ್ತಿ ಎಂದರೆ ಹಾರುವುದು ಎಂದು ಹಕ್ಕಿಗಳ ಗರ್ವವೋ ಏನೊ! ಮಾನವ ಹಾರಲುಪಕ್ರಮಿಸಿದ ದಿನದಿಂದ ಈ ಹಕ್ಕಿಯ ಬಡಿತದಿಂದ ಅನೇಕ ಅಪಘಾತಗಳು ಜರುಗಿವೆ. ವಿಮಾನಗಳು ಸಾಧಾರಣ ಹಾರು ಭಾರ (Flight loads) ಗಳನ್ನು ತಡೆಯುವಷ್ಟು ಇರುವಂತೆ ಯಂತ್ರಗಳನ್ನು ರಚಿ

ಸಿರುತ್ತಾರೆ. ಅಂತರ ರಾಷ್ಟ್ರೀಯ ಮಾನಕವಾಗಿ, ವಿಮಾನ ಚಾಲಕರ ಗಾಳಿ ತಡೆಗಳು (Wind Screen) ವಿಮಾನ ತನ್ನ ಅತಿ ಉನ್ನತ ವೇಗದಲ್ಲಿ ೨೪೦೦ ಮೀಟರುಗಳ



ಹಾರುವ ಹಕ್ಕಿಯಿಂದ ಅಪಾಯ

ಎತ್ತರದಲ್ಲಿ ಹಾರುವಾಗ ೧.೮ ಕಿಲೋಗ್ರಾಂ ತೂಕದ ಹಕ್ಕಿಯ ಬಡಿತದ ಬಲವನ್ನು ತಡೆದುಕೊಳ್ಳುವಂತಿರಬೇಕೆಂದು ತೀರ್ಮಾನವಾಗಿದೆ. ಕೆಲವೊಮ್ಮೆ ಹಕ್ಕಿ ನೇರ ಬಂದು ಬಡಿಯುವುದೂ ಉಂಟು. ಕೆಲವು ಸಮಯ ಅಪಾಯ ಕಡಮೆಯೇ. ಮತ್ತೆ ಕೆಲವು ಬಾರಿ ವಿಮಾನಗಳು ಜಜ್ಜಿ ಹೋಗುವಷ್ಟು ತೊಂದರೆಗಳಾಗಿವೆ. ವಿಮಾನ ದಾರಿಗಳನ್ನು, ವಿಮಾನಗಳನ್ನು ರಚಿಸುವ ವಿನ್ಯಾಸಕಾರರಿಗೆ ಇದು ಸಮಸ್ಯೆಯೇ. ಒಂದು ಸಣ್ಣ ಹಕ್ಕಿ ಇಷ್ಟು ಕೆಲಸ ಮಾಡಬಲ್ಲುದೇ ಎಂದೆನಿಸುತ್ತದೆ. ಗಾಳಿ ತಡೆಗಳನ್ನು ಗಟ್ಟಿಯಾದ ಗಾಜು ಮತ್ತು ಪ್ಲಾಸ್ಟಿಕ್‌ನ ಎರಡು ಪದರಗಳಿರುವಂತೆ ಮಾಡಿರುತ್ತಾರೆ. ಆದರೂ ಹಕ್ಕಿಯಿಂದ ಅಪಾಯ ತಪ್ಪಿದ್ದಲ್ಲ. ಹದ್ದುಗಳು ಗಾಳಿಪಟಗಳು ಅಪಾಯ ಉಂಟುಮಾಡುವುವು. ೧೯೬೨ರಲ್ಲಿ ಡಕೋಟ ವಿಮಾನವೊಂದರ ಗಾಳಿತಡೆಗೆ ಹಕ್ಕಿ ನೇರ ಬಂದು ಬಡಿದಾಗ ಅಪಾಯ ಒದಗಿತು. ನಿಸರ್ಗದ ಎದುರು ಮಾನವ ಏನು ತಾನೆ ಮಾಡಲಾದೀತು ?

ವಿಧ್ವಂಸಕ ಕೃತ್ಯಗಳು (Sabotage)

ಒಬ್ಬನ ಸ್ವಾರ್ಥ, ಲೋಭ, ವಿಧ್ವಂಸಕ ಕೃತ್ಯಗಳಿಗೆ ದಾರಿ ಮಾಡಿಕೊಡುತ್ತದೆ. ಹಲವಾರು ಮಹಾತ್ಮರ ಆದರ್ಶ ಜೀವನದ ಬೆಳಕಿನಲ್ಲೂ ಕೆಲ ಮಾನವರು ಆಗಾಗ ವಿಧ್ವಂಸಕ ಕೃತ್ಯಗಳನ್ನು ನಡೆಸುತ್ತಲೇ ಬಂದಿದ್ದಾರೆ. ಇದು ಆಗುವುದು ಹೋಗುವುದು ತಿಳಿಯಲಾರದಷ್ಟು ಸೂಕ್ಷ್ಮ. ಈ ಕೃತ್ಯಗಳು ರೈಲು, ಬಸ್ಸು ಮೊದಲಾದ ವಾಹನಗಳು, ಸರ್ಕಾರದ ವಿರುದ್ಧ ಮಾಡುವುದು ಇಷ್ಟೇ ಅಲ್ಲ, ವಿಮಾನಗಳಲ್ಲೂ,

ಅಷ್ಟು ಎತ್ತರದಲ್ಲೂ ಉಂಟು. ವಿಮಾನ ಪ್ರಯಾಣಿಕರ ಮೇಲ್ವಿಚಾರಣೆ ಅಗತ್ಯ ಮಾಡಬೇಕೇನೋ ! 1955 ಏಪ್ರಿಲ್ ಮಾಹೆ ದಕ್ಷಿಣ ಚೀನಾ ಸಮುದ್ರದ ಮೇಲೆ ಭಾರತದ ವಿಮಾನವೊಂದು ವಿಧ್ವಂಸಕ ಕೃತ್ಯದಿಂದ ಅಪಘಾತಕ್ಕೀಡಾಯಿತು. ವಿಧ್ವಂಸಕ ಕೃತ್ಯಗಳನ್ನು ಜರುಗಿಸುವವರು ಮೊದಲೇ ಪೂರ್ವಸಿದ್ಧತೆಗಳನ್ನು ನಡೆಸಿ ಸಮಯ ಸಾಧಿಸಿ ಕಾರ್ಯದಲ್ಲಿ ಜಯಶೀಲರಾಗುತ್ತಾರೆ. ಕೆಲವೊಮ್ಮೆ ಅವರು ವಿಫಲ ರಾಗಿ ಸಿಕ್ಕಿಬೀಳುವುದೂ ಉಂಟು. ಬಾಂಬ್ ಬಳಸುವುದು ಇಂಥವರ ಸುಲಭೋಪಾಯಗಳಲ್ಲಿ ಒಂದು. ವಿಮಾನವು ಸಮುದ್ರ ತೀರಕ್ಕೆ ಸಮೀಪದಲ್ಲೋ, ದೂರ ದಲ್ಲೋ ಹಾರುತ್ತಿರುವಾಗ ಇದ್ದಕ್ಕಿದ್ದಂತೆ ಬಾಂಬ್ ಸಿಡಿದು ವಿಮಾನ ಛಿನ್ನಾಛಿದ್ರ ವಾಗಿ ಹೋಗುತ್ತದೆ. ಪ್ರಯಾಣಿಕರನ್ನಂತೂ ಗುರುತಿಸುವುದಕ್ಕೇ ಆಗದು. 1950ನೇ ಸೆಪ್ಟೆಂಬರ್‌ನಲ್ಲಿ DC-3 ಎಂಬ ವಿಮಾನ ಕ್ವೆಬೆಕ್‌ನ ವಿಮಾನ ನಿಲ್ದಾಣ ದಿಂದ ಬೆಳಿಗ್ಗೆ 10-30ಕ್ಕೆ ಯಾವುದೇ ತೊಂದರೆಯಿಲ್ಲದೆ ಹೊರಟಿತು. ಅದು ಸೇರ ಬೇಕಾದದ್ದು ಬೈಕೋಮಾ ಎಂಬ ನಗರವನ್ನು. ವಿಮಾನ ಯಾವ ತಾಂತ್ರಿಕ ತೊಂದರೆ ಗಳನ್ನು ಹೊಂದಿರದೆ ಹೊರಟಿತ್ತು. ಸ್ವಲ್ಪ ವೇಳೆಯಲ್ಲೇ ವಿಮಾನ ನುಚ್ಚು ನೂರು !! ಶಬ್ದ ಕೇಳಿದವರು ನದಿ ತೀರದ ಬೆಸ್ತರು. ವಿಷಯ ತಿಳಿದ ವಿಮಾನ ಪರೀಕ್ಷಕರ ತಂಡ ಬಂದು ವಿಚಾರಣೆ ನಡೆಸಿದರು. ಪ್ರಯಾಣಿಕರು ಯಾರೂ ಜೀವ ದೊಂದಿಗಿರಲಿಲ್ಲ. ಚಾಲಕನ ಆರೋಗ್ಯ ಉತ್ತಮವೆಂದು ತೀರ್ಮಾನವಾಗಿತ್ತು. ವಿಧ್ವಂಸಕ ಕೃತ್ಯವೆಂಬ ತೀರ್ಮಾನಕ್ಕೆ ತಜ್ಞರು ಬಂದರು. ವಿಮಾನ ನಾಶಕ್ಕೆ ಬಾಂಬ್ ಸಿಡಿತವೇ ಕಾರಣ, ಆ ಬಾಂಬ್ ಕೈಯಿಂದ ಮಾಡಿದ್ದೆಂದು ವಿಜ್ಞಾನಿಗಳು ತಿಳಿಸಿದರು. ಪೋಲೀಸ್ ಇಲಾಖೆ ಈ ಪೈಶಾಚಿಕ ಕೃತ್ಯ ನಡೆಸಿದವನನ್ನು ಪತ್ತೆ ಹಚ್ಚಲು ಮುಂದಾದರು.

ಕೆಲವು ದಿನಗಳಾದ ಮೇಲೆ ಕ್ವೆಬೆಕ್‌ನಲ್ಲಿ ಮಾರ್ಗರೆಟ್ ಎಂಬ ಹೆಂಗಸೊಬ್ಬಳು ಮಹಡಿಯ ಮೇಲಿಂದ ಬೀಳಲು ಯತ್ನಿಸುತ್ತಿದ್ದಾಗ ಪೋಲೀಸರ ಕೈಗೆ ಸಿಕ್ಕಿಬಿದ್ದಳು. ಅವಳು ಅಲ್ಬರ್ಟ್ ಎಂಬ ಅಕ್ಕಸಾಲಿಗನ ಪ್ರೇಯಸಿಯಾಗಿದ್ದಳು. ಅಲ್ಬರ್ಟ್ ಹಲವು ಬಾರಿ ನಾನಾ ಅಪರಾಧಗಳಿಗಾಗಿ ಸೆರೆಯಾಗಲ್ಪಟ್ಟಿದ್ದವನು. ಇವನ ಮತ್ತು ಇವನ ಹೆಂಡತಿಯ ನಡುವೆ ವಿವಾದ ಉಂಟಾಗಿ ಅವಳನ್ನು ಕೊಂದು ಮಾರ್ಗರೆಟ್ಟಳನ್ನು ಮದುವೆಯಾಗಲು ಅಲ್ಬರ್ಟ್ ಹೊಂಚು ಹಾಕಿದ್ದನು. ಒಂದು ಸಲ ಅಲ್ಬರ್ಟ್ ತನ್ನ ಹೆಂಡತಿ, ತವರು ಮನೆಗೆ ಹೊರಟಿದ್ದ ಟ್ಯಾಕ್ಸಿಯೊಂದರಲ್ಲಿ ಟೈಮ್ ಬಾಂಬನ್ನಿಟ್ಟಿದ್ದನು. ಆದರೆ ಅದು ಸಿಡಿಯಲು ವಿಫಲವಾಗಿ ಅವಳು ಬದುಕಿಕೊಂಡಿದ್ದಳು. ಮತ್ತೊಮ್ಮೆ ಹೆಂಡತಿಗೆ ವಿಷ ಕುಡಿಸಿ ಕೊಲ್ಲಲು ಯತ್ನಿಸಿ ವಿಫಲನಾಗಿದ್ದನು. ಮತ್ತೊಂದು ಸಲ ಅಲ್ಬರ್ಟ್ ತನ್ನ ಹೆಂಡತಿ ವಿಮಾನದಲ್ಲಿ ಬೈಕೋಮಾಗೆ ಹೋಗುವುದನ್ನು ತಿಳಿದು ಕೊಂಡು ತನ್ನ ಸ್ನೇಹಿತನೊಬ್ಬನ ಸಹಾಯದಿಂದ ಒಳ್ಳೆಯ ಬಾಂಬ್ ಒಂದನ್ನು

ಸಂಪಾದಿಸಿ ಜೇನ್ ಎಂಬ ಗೆಳತಿಯ ಸಹಾಯದಿಂದ ತನ್ನ ಹೆಂಡತಿ ಕೊಂಡು ಹೋಗುವ ಪೆಟ್ಟಿಗೆಯಲ್ಲಿ ಇರಿಸಿದನು. ಹೆಂಡತಿ ಬೈಕೋಮಾಗೆ ಹೊರಟಳು. ಬಾಂಬ್ ಸಿಡಿಯಿತು. ವಿಮಾನ ನಾಶವಾಗಿ ಆಲ್ಬರ್ಟ್ ಸಫಲನಾದನು. ಆದರೆ ಅಬಲೆ ಜೇನ್ ಳನ್ನು ಪೋಲೀಸರು ಹಿಡಿದಾಗ ವಿಷಯ ಹೊರಬಿತ್ತು. ಜೇನ್‌ಳನ್ನು ಸೆರೆ ಹಿಡಿಯಲು ಕಾರಣ ಜೇನ್‌ಳ ಮತ್ತು ಆಲ್ಬರ್ಟ್‌ನ ಭಾವ ಚಿತ್ರ, ವಿಳಾಸಗಳು ವಿಮಾನಾಪಘಾತವಾದ ಸ್ಥಳದಲ್ಲಿ ದೊರಕಿದುದೇ. ಮಾರ್ಗರೆಟ್ಟಳ ಸೆರೆಯಾದ ನಂತರ ಆಲ್ಬರ್ಟ್, ಜೇನ್ ಇಬ್ಬರನ್ನು ಸೆರೆ ಹಿಡಿದು ಅವರಿಗೆ ಮರಣ ದಂಡನೆ ವಿಧಿಸಲಾಯಿತು. ಹೀಗೆ ಆಲ್ಬರ್ಟ್ ಹಾಗೂ ಮಾರ್ಗರೆಟ್ಟರ ಸ್ವಾರ್ಥದಿಂದ DC-3 ವಿಮಾನದಲ್ಲಿದ್ದ 25 ಪ್ರಯಾಣಿಕರೂ ಸಾವನ್ನಪ್ಪಿದರು. ಒಬ್ಬನ ದುಷ್ಟವರ್ತನೆ 25 ಜನ ನಿರಪರಾಧಿಗಳ, ಅದರಲ್ಲೂ ಉನ್ನತ ಅಧಿಕಾರದಲ್ಲಿದ್ದವರ ಸಾವು!

ವಿಮಾನ ಅಪಘಾತಗಳಿಗೆ ಹೀಗೆ ಹಲವಾರು ಕಾರಣಗಳು. ಕೆಲವು ಅಪಘಾತಗಳಾದ ನಂತರ ಊಹಿಸಲ್ಪಡತಕ್ಕವು. ಮತ್ತೆ ಕೆಲವು ವೈಜ್ಞಾನಿಕವಾಗಿ ನಿರ್ಣಯಿಸಲ್ಪಡತಕ್ಕವು. ಒಂದು ವಿಮಾನ ನಿರ್ಮಾಣವಾಗಬೇಕಾದರೆ ಹಲವಾರು ಕಾರ್ಮಿಕರು, ಎಂಜಿನಿಯರುಗಳು ಕಷ್ಟಪಡುವರು. ಅದೇ ವಿಮಾನ ನಾಶವಾಗಲು ಎಷ್ಟು ಹೊತ್ತು! ಕೇವಲ ಸೆಕೆಂಡುಗಳು!! ವಿಮಾನ ಮಾನವನಿಗೆ ಹೆಮ್ಮೆಯ ವಿಷಯ. ಅದು ದೊಡ್ಡ ಸಾಧನೆಯೇ. ಆದರೆ ಅದರ ರಕ್ಷಣೆ ಸಮಸ್ಯೆಯ ವಿಷಯ. ಈ ದಿಶೆಯಲ್ಲಿ ಹಲವಾರು ತಜ್ಞರು ಶ್ರಮವಹಿಸಿ ಕೆಲಸ ಮಾಡುತ್ತಿದ್ದರೂ ವಿಧಿಯ ಕೈವಾಡದ ಮುಂದೆ ಯಾರು ಏನು ತಾನೆ ಮಾಡಿಯಾರು?

ವಿಮಾನ ಸಂಚಾರ ಆರಂಭವಾದ ದಿನದಿಂದ ನಮ್ಮ ದೇಶದಲ್ಲಿ ಹಲವಾರು ಅಪಘಾತಗಳಾಗಿವೆ. ಜನವರಿ 24, 1966ರಂದು ಏರ್ ಇಂಡಿಯಾದ ಬೋಯಿಂಗ್ 707 ವಿಮಾನ ಪರ್ವತಕ್ಕೆ ಬಡಿದು 117 ಮಂದಿ ಪ್ರಾಣ ನೀಗಿದರು. ಮಾರ್ಚ್ 26, 1971 ರಂದು ಡಕೋಟ ವಿಮಾನವೊಂದು ಪರ್ವತಕ್ಕೆ ತಗುಲಿ (ಗೌಹಾಟಿ) ಹದಿನೈದು ಜನ ಸತ್ತರು. ಇತ್ತೀಚೆಗೆ 1973ನೇ ಇಸವಿ ಮೇ 31 ರಂದು ದೆಹಲಿಯಲ್ಲಿ ವಿಮಾನ (ಬೋಯಿಂಗ್ 737) ಇಳಿಯುವಾಗ ಅಪಘಾತ ನಡೆದು ಸುಮಾರು 49 ಮಂದಿ ಅಸುನೀಗಿದರು. ಕೇಂದ್ರ ಸಚಿವ ಮೋಹನಕುಮಾರ ಮಂಗಳಂ ಇವರಲ್ಲಿ ಒಬ್ಬರು. ಇಂತಹ ಅಪಘಾತಗಳಿಂದ ನಾವು ಹಲವಾರು ಪ್ರಮುಖರನ್ನು ವಿಜ್ಞಾನಿಗಳನ್ನು ಕಳೆದುಕೊಂಡಿದ್ದೇವೆ. ಖ್ಯಾತ ವಿಜ್ಞಾನಿ ಭಾಭಾ, ಭೂಗರ್ಭ ಶಾಸ್ತ್ರಜ್ಞ ಡಾ॥ ಪಿ. ಕೆ. ಘೋಷ್, ಗುಜರಾತ್ ಮುಖ್ಯಮಂತ್ರಿಯಾಗಿದ್ದ ಬಲವಂತರಾಯ್ ಮೆಹತಾ, ಮೈಸೂರಿನ ಸಿವಿಲ್ ಎಂಜನಿಯರ್ ಡಿ. ಬಿ. ನರಸಿಂಹಯ್ಯ ಮುಂತಾದ ವಿವಿಧ ಕ್ಷೇತ್ರಗಳ ಪರಿಣತರನ್ನು ಕಳೆದುಕೊಂಡು ಬಹು ದುಃಖ ಅನುಭವಿಸಿದ್ದೇವೆ.

ವಿಮಾನ ಅಪಘಾತಗಳು ಅತ್ಯಂತ ಅಪಾಯಕಾರಿ ಅಪಘಾತಗಳು. ಜೀವವನ್ನೇ ಸುಟ್ಟು ಹಾಕುವುವು. ವೈಜ್ಞಾನಿಕ ಕಾರಣಗಳಿಂದಾಗುವ ಅಪಘಾತಗಳನ್ನು ತಡೆಗಟ್ಟಿ ವಿಮಾನಗಳನ್ನು ರಕ್ಷಿಸಿ ಪ್ರಯಾಣಿಕರನ್ನು ಸೌಖ್ಯವಾಗಿ ಅವರ ಜಾಗಗಳಿಗೆ ಸೇರಿಸಬೇಕಾಗಿದೆ. ಉತ್ತಮ ಕಾರ್ಯ ನಿರ್ವಹಣೆಗಾಗಿ ಒಳ್ಳೆಯ ಯಂತ್ರಗಳನ್ನು ಸಂಪಾದಿಸಿ ಅವುಗಳ ದಕ್ಷತೆಯನ್ನು ಉತ್ತಮಪಡಿಸಬೇಕು. ಸದಾ ಜಾಗರೂಕರಾಗಿದ್ದು ಚಟುವಟಿಕೆಯಿಂದಿದ್ದರೆ ಇಂತಹ ಅಪಘಾತಗಳನ್ನು ತಪ್ಪಿಸಲು ಸಾಧ್ಯವಾದೀತು.*

[ವಿವಿಧ ಮೂಲಗಳಿಂದ]

* ಈ ಲೇಖನವನ್ನು ಸಿದ್ಧಪಡಿಸುವಲ್ಲಿ ನೆರವಾದ ಎಂಜನಿಯರ್ ಶ್ರೀ ಬಿ.ಜಿ.ಕೇಶವಮೂರ್ತಿ ಎಂ.ಇ. ಅವರನ್ನು ಇಲ್ಲಿ ಸ್ಮರಿಸುತ್ತೇನೆ.

ವಾಲ್ಮೀಕಿಯ ಕರುಣಾಯನ

ಗೌರೀಶ ಕಾಯ್ಕಿಣಿ

ಮಹಾಕಾವ್ಯವು ರಸಪ್ರಧಾನವೇ ? ನವರಸಭರಿತವಾದ ಸುದೀರ್ಘ ಕಾವ್ಯವು ಅನೇಕ ಕಥೋಪಕಥನಗಳಿಂದ ಕೂಡಿ ಅಷ್ಟಾದಶ ವರ್ಣನೆಗಳಿಂದ ಯುಕ್ತವಾಗಿ ವಿವಿಧ ಛಂದೋವೃತ್ತಗಳಲ್ಲಿ ಎರಕಹೊಯ್ದು ವಿಸ್ತೀರ್ಣವಾಗಿ ಸಂಕೀರ್ಣವಾಗಿ ಹರಿಯುವ ಮಹಾಕಾವ್ಯದ ಒಟ್ಟಿಕ್ಕೆ ಅದರ ಓಜೆಯೂ ಯಾವದೊಂದು ಪ್ರಧಾನ ರಸಕ್ಕೆ ವಾಹಕ ವಾಗುವುದುಂಟೇ ?– ಎಂಬ ಪ್ರಶ್ನೆ ಕೆಲವುಸಲ ನಮ್ಮನ್ನು ಕಾಡುತ್ತದೆ.

ಸಮುದ್ರ ವರ್ಣನೆಯಿಂದಲೇ ಆರಂಭವಾಗಬೇಕು (ಇದು ಸಂಸ್ಕೃತ ಮಹಾ ಕಾವ್ಯದ ವೈಶಿಷ್ಟ್ಯವಲ್ಲ.) ಪ್ರತಿ ಸರ್ಗದ ಕೊನೆಗೆ ವೃತ್ತದ ಬದಲಾವಣೆ ಆಗಬೇಕು. (ಇದು ಕನ್ನಡ ಮಹಾಕಾವ್ಯದಲ್ಲಿ ವಿಶಿಷ್ಟವಲ್ಲ.) ನಾಯಕನು ವಿಭೂತಿ ಪುರುಷನಿರ ಬೇಕು. ಲೋಕೋತ್ತರ ವ್ಯಕ್ತಿಯಾಗಿರಬೇಕು, ಎಂದು ಮುಂತಾಗಿ ಮಹಾಕಾವ್ಯದ ಲಕ್ಷಣಗಳು ಗುಣಾಕಾರ ಭಾಗಾಕಾರಗಳನ್ನು ಹೊಂದಿ ಈ ಕಾವ್ಯ ಪ್ರಕಾರ ಆಕಾರ ಗೊಂಡಿತು. ಅದಾಗ್ಯೂ ಇಂಥ ಕಾವ್ಯಕ್ಕೆ ಅನುಸ್ಯೂತವಾಗಿ ಒಂದು ವಿಶಿಷ್ಟ ರಸವೊ ಅದರ ಹಿಂದಿನ ಸ್ಥಾಯೀ ಭಾವವೋ ಸ್ಫುಟವಾಗಿ ಒಡಮೂಡಿರಬೇಕೇ? ನವರಸಗಳಲ್ಲಿ ನಿರ್ದಿಷ್ಟವಾಗಿ ಒಂದು ರಸ ಪ್ರಧಾನವಾಗಿ ವಿಜೃಂಭಿಸಬೇಕೇ ? ವಿಜೃಂಭಿಸಬಲ್ಲದೇ ?

ಬೇಕೋ ಬೇಡವೋ ಅದು ಹಾಗೆ ಬಲ್ಲದು ಎಂದು ನನ್ನ ಅಂಬೋಣ. ಒಬ್ಬ ಚಿತ್ರಕಾರನ ಅನೇಕ ಕೃತಿಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಅವನಲ್ಲಿ ಯಾವ ದೊಂದು ವಿಶಿಷ್ಟ ಬಣ್ಣದ ಬಗೆಗೆ ಅದರ ವಿವಿಧ ಛಾಯೆ-ಛವಿಗಳ ಬಗೆಗೆ ಹೆಚ್ಚಿನ ಒಲವು ಮೂಡಿದ್ದು ಕಂಡುಬರುತ್ತದೆ. ಹಾಗೆಯೇ ಒಬ್ಬ ಸಂಗೀತ ಕೃತಿಕಾರನಲ್ಲಿ ಯಾವದೊಂದು ರಾಗದ ಬಗೆಗೆ, ಅಥವಾ ಕೋಮಲ ಗಾಂಧಾರವೋ ನಿಷಾದವೋ-ವಿಶಿಷ್ಟ ಸ್ವರದ ಬಗೆಗೆ ವ್ಯಾಮೋಹ ಕಂಡುಬರುವದುಂಟು. ಅದೇರೀತಿ ಒಬ್ಬ ಕವಿಯು ಅನೇಕ ಕೃತಿಗಳಲ್ಲಿ ಒಂದು ಪ್ರತಿಮೆ, ಒಂದು ವಸ್ತು, ಒಂದು ರೂಹುಗಾರಿಕೆ ಆಗಾಗೆ ಒಡಮೂಡುವದುಂಟು.

ಅದೇ ಮೇರೆಗೆ ಒಬ್ಬ ಮಹಾಕವಿಯು ಒಂದು ಬೃಹತ್ಕೃತಿಯಲ್ಲಿ ಹಾಸಾಗಿಯೋ ಹೊಕ್ಕಾಗಿಯೋ ಕೆಲವು ಗೆರೆಬಣ್ಣಗಳು ಎಳೆಯಾಗಿ ಅಥವಾ ರೂಹುಗಳಾಗಿ ರೂಪ ಗೊಳ್ಳುವುದು ಕಾಣುತ್ತೇವೆ. ಏಕೆಂದರೆ ಒಂದು ಮಹಾಕಾವ್ಯ ವಸ್ತುತಃ ಹಾಗೆ

ತೋರಿದರೂ ತತ್ವತಃ ಒಂದೇ ಕಾವ್ಯವಾಗಿರುವದಿಲ್ಲ. ಒಂದನೆಯದಾಗಿ, ಮಹಾಕಾವ್ಯವು ಅನೇಕ ಕಥಾನಕಗಳ ಆಖ್ಯಾಯಿಕೆಗಳ ವಿಭಿನ್ನ ಕರ್ತೃತ್ವದ ಜಾನಪದವೋ ನಾಗರವೋ ಆದ ಕವನಕೃತಿಗಳ ಒಂದು ಸಮಸ್ತ ಕೃತಿ ಎಂದು ಭಾವಿಸುವದುಂಟು. ಎರಡನೆಯದಾಗಿ ಅದು ಏಕ ಕರ್ತೃಕವಾಗಿದ್ದಾಗಲೂ ಒಬ್ಬ ಕವಿ ತನ್ನ ಪ್ರತಿಭೆಯ ತತ್ತ್ರಿಗೆ ಕಾವು ಕೊಡುತ್ತ ಬಹುದೀರ್ಘಕಾಲ ಕೂತಿರಲಾರ. ಸ್ಫೂರ್ತಿಯೆಂಬುದು ಸರ್ಗಾನುಸರ್ಗವಾಗಿ ಹರಿಯಲಾರದು. ಪ್ರತಿಭೆಯ ನವನವೋನ್ಮೇಷ ಒಂದು ಪರ್ವಣಿ. ಅದು ಪರ್ವದಿಂದ ಪರ್ವಕ್ಕೆ ಸಾಗುವ ಪರ್ವತ ಪ್ರಸವವಲ್ಲ. ಆದ್ದರಿಂದ ಅದೇ ಕವಿ ಅದೇ ವಸ್ತುವನ್ನು ಸುದೀರ್ಘ ಕಾವ್ಯವಾಗಿ ಅರಳಿಸಿ ಬೆಳಸಿದರೂ ಅದರ ಉದ್ದಕ್ಕೂ ಒಂದೇ ಭಾವ ಒಂದೇ ಸಾಂದ್ರತೆಯಲ್ಲಿ ಸಾಕಾರವಾಗಿ ನಿಲ್ಲುವದು ಸಾಧ್ಯವಿಲ್ಲ ಎಂದು ಭಾವಿಸುವವರೂ ಇದ್ದಾರೆ. ಇಂಥವರು ಮಹಾಕಾವ್ಯವೆಂಬುದೇ ಒಂದು "ವದತೋ ವ್ಯಾಘಾತ" (a Contradiction in terms) ಎನ್ನುವದು ಉಂಟು. ಏಕೆಂದರೆ ಕವಿಯ ಸ್ಫೂರ್ತಿ ಅಥವಾ ಕ್ರಾಂತ ದರ್ಶನ ಲಕ್ಷಾಂತರ ಸಾಲುಗಳಲ್ಲಿ ಸಾರವತ್ತಾಗಿ ಸಾದ್ಯೋದ್ಭಾರವಾಗಿ ಹರಿಯುವದು ಅಶಕ್ಯ. ಆದ್ದರಿಂದ ಒಬ್ಬನೇ ಕವಿಯು ರಚಿಸಿದರೂ ಮಹಾಕಾವ್ಯವು ಅವನ ಅನೇಕ ವೃತ್ತಿಗಳ ಕೃತಿಗಳ ಒಂದು ಸಂಕೀರ್ಣ ರಚನೆ.

ಮಹಾಕಾವ್ಯಕ್ಕೆ ಒಬ್ಬನೇ ನಾಯಕ. ಅವನ ಒಂದೇ ಕಥಾವಸ್ತು ವಿಷಯವಾಗಿರುವದೆಂದು ಹೇಳುವಂತಿಲ್ಲ. ಸಾಮಾನ್ಯವಾಗಿ ಸಂಸ್ಕೃತ ಸಂಪ್ರದಾಯದಲ್ಲಿ ಮಹಾಕಾವ್ಯಗಳು ಐದು : ರಘುವಂಶ, ಕುಮಾರಸಂಭವ, ಕಿರಾತಾರ್ಜುನೀಯ, ಶಿಶುಪಾಲ ವಧ, ಮತ್ತು ನೈಷಧ ಚರಿತ. ಇವುಗಳೊಂದಿಗೆ ಮೇಘದೂತವನ್ನು ಕೆಲವರು ಸೇರಿಸುವರು. ಆದರೆ ಮೇಘದೂತ ಖಂಡಕಾವ್ಯ. ಅದನ್ನು ಬರೆದವನು ಮಹಾಕವಿಯಾಗಿರಬಹುದು. ಆದರೆ ಅದಕ್ಕೆ "ಮಹಾ" ಎನ್ನತಕ್ಕ ವಿಶೇಷಣ ಒಪ್ಪದು. ಆದರೆ ಸಂಸ್ಕೃತದಲ್ಲಿ ಇನ್ನೂ ಕೆಲವು ಕಾವ್ಯಗಳಿವೆ. ಭಟ್ಟಿಕಾವ್ಯ, ವಿಕ್ರಮಾಂಕದೇವ ಚರಿತೆ, ಹರವಿಜಯ ಇತ್ಯಾದಿ; ಇವುಗಳಿಗೂ ಮಹಾಕಾವ್ಯವೆಂದು ಕರೆಯಿಸಿಕೊಳ್ಳುವ ಹಕ್ಕು ಇದೆಯೆಂದು ಕೆಲವರ ಮತ.

ಆದರೆ ಇವೆಲ್ಲವುಗಳಲ್ಲಿ ರಘುವಂಶ ಒಂದು ಬಿಟ್ಟರೆ ಉಳಿದವುಗಳಲ್ಲಿ ಹೆಚ್ಚುಕಡಿಮೆ ಒಂದೇ ಕಥೆ ಪ್ರಧಾನವಾಗಿರುತ್ತದೆ. ರಘುವಂಶದಲ್ಲಿ ಮಾತ್ರ ಒಂದು ವಂಶದ ರಾಜರುಗಳ ಕಥೆ ಅನುಕ್ರಮವಾಗಿ ವರ್ಣಿಸಿದ್ದು, ಅದಕ್ಕೆ ಏಕಕೇಂದ್ರಿತ್ವವಿಲ್ಲ.

ಇಂಥ ಮಹಾಕಾವ್ಯಗಳಲ್ಲಿ ರಸೋದರ್ಕವಾದ ಭಾವೋತ್ಕರ್ಷ ಹೇಗೆ ಸಾಧ್ಯ ? ಒಂದೊಂದು ಕಥಾನಕದ ಘಟನಾವಲಿಗಳು ವಿಶಿಷ್ಟ ಘಟ್ಟಕ್ಕೆ ಬರುವಂತೆ ರಸಪರಿಪೋಷ ಸಾಧಿಸಿದಾಗೆಲ್ಲ ಒಂದಲ್ಲ ಒಂದು ರಸದ ಆವಿಷ್ಕಾರ ಸಾಧ್ಯವಾಗುವದು. ಆದರೆ ಈ ರಸಸಿದ್ಧಿ ಸಮಗ್ರ ಕಾವ್ಯಕ್ಕೆ ಉದಗ್ರವಾಗಿ ನಿಷ್ಪನ್ನವಾಗುವದೇ ?

ಮೇಲೆ ಹೇಳಿದ ಮಹಾ ಕಾವ್ಯಗಳಿಗೂ ಮೂಲ ಮಾತೃಕೆಗಳಾದ ರಾಮಾಯಣ ಮಹಾಭಾರತಗಳ ವಿಚಾರವೇನು ? ಇಲ್ಲಿಯೂ ಮಹಾಭಾರತಕ್ಕಿಂತ ರಾಮಾಯಣವೇ ಹೆಚ್ಚು ಕಾವ್ಯಮಯ. ಭಾರತವು ಇತಿಹಾಸ. ರಾಮಾಯಣವೇ ಕಾವ್ಯ- ಆದಿಕಾವ್ಯ. ಕಾಲಕ್ರಮದಲ್ಲಿ ನೋಡಿದರೆ ಮಹಾಭಾರತವೇ ಆದಿಕೃತಿ. ರಾಮಾಯಣದ ರಚನೆ ಅನಂತರದ್ದು *. ಆದಾಗ್ಯೂ ರಾಮಾಯಣ ಆದಿಕಾವ್ಯ. ವಾಲ್ಮೀಕಿ ಆದಿಕವಿ ಎಂದು ಜಗದ್ವಿಖ್ಯಾತವಾದದ್ದು ಏಕೆ ? ಅದುವೇ ಲೋಕಕ್ಕೆ ಆದಿ ಮಹಾಕಾವ್ಯ.

ಒಂದು ಕಾವ್ಯವನ್ನು ಬರೆಯಬೇಕೆಂದು ಸತತವಾಗಿ ಉದ್ಯುಕ್ತನಾದ ಕವಿ ವಾಲ್ಮೀಕಿ. ಆದ್ದರಿಂದ ಅದು ಆದಿಕಾವ್ಯ; ಒಂದು ಮಹಾಕಾವ್ಯವೆಂದು ಜಾಗೃತ ಪ್ರಜ್ಞೆಯಿಂದ ರಚಿತವಾದದ್ದು ಅದೇ ಮೊದಲ ಕಾವ್ಯ. ಮಹಾಭಾರತದಲ್ಲಿ ಕಲೆಯು ತುಂಬ ಜಾಗೃತ; ಆದರೆ ಕವಿಯು ಅಜಾಗೃತ. ರಾಮಾಯಣದಲ್ಲಿ ಕಲಾವಿದನು ತುಂಬ ಜಾಗೃತ. ಆ ಮಟ್ಟಿಗೆ ಕಲಾಕೃತಿ ಕಾವ್ಯ ಅಜಾಗೃತ. ಮಹಾಭಾರತದಲ್ಲಿಯ ರಸೋತ್ಕಟ ಪ್ರಸಂಗಗಳಲ್ಲಿ ನಾವು ವ್ಯಾಸನನ್ನು ನೆನಪಿಸುವದಿಲ್ಲ. ಆದರೆ ರಾಮಾಯಣದ ರಸೋತ್ಕಟ ಪ್ರಸಂಗಗಳಲ್ಲಿ ನಾವು ವಾಲ್ಮೀಕಿಯನ್ನು ಮರೆಯುವದಿಲ್ಲ. ರಾಮಾಯಣದ ಪಾತ್ರ, ಪ್ರಸಂಗಗಳ ಸೊಗಸಿನೊಂದಿಗೆ ಸಮರಸ ವಾದಾಗಲೂ ನಾವು ಆ ಕಾವ್ಯದ ಕಲಾ ಪರಿಸ್ಥಿತಿಯನ್ನು ರಚನಾ ಕೌಶಲ್ಯವನ್ನು ವರ್ಣನಾ ವೈಖರಿಯನ್ನು ವಾಲ್ಮೀಕಿಯ ಪ್ರತಿಭಾ ವಿಲಾಸವನ್ನು ಮತ್ತೆ ಮತ್ತೆ ಮೆಚ್ಚುತ್ತೇವೆ.

ಈ ಜೀವಂತ ಕಲಾ ಪ್ರಜ್ಞೆಯ ಮೂಲಕವೆ ರಾಮಾಯಣವು ಆದಿಕಾವ್ಯವೆನಿಸಿ ಕೊಂಡಿತು ಮತ್ತು ಈ ಜಾಗೃತ ಕಲಾ ಪ್ರಜ್ಞೆಯಿಂದಾಗಿಯೇ ಆದಿಕವಿಯು ಆ ವೇದ ಕವಿ (ವ್ಯಾಸ) ಗಿಂತ ಹೆಚ್ಚಾಗಿ ತನ್ನ ಕಾವ್ಯಮುದ್ದಕ್ಕೂ ಒಂದು ರಸಘಟ್ಟಿಯನ್ನು ಮಿಕ್ಕುದಕ್ಕಿಂತ ಮಿಗಿಲಾಗಿ ಘಟ್ಟಿ ಇಳಿಸಲು ಸಮರ್ಥನಾದನು. ಜೀವಂತಿಕೆಯಲ್ಲಿ ಮಹಾಭಾರತವೇ ಹೆಚ್ಚು ಆಧುನಿಕವೆನಿಸಿದರೂ, ರಾಮಾಯಣವು ಮಾರ್ಗೀಯ ಪ್ರೌಢಿಮೆಯ ಕಲಾವಂತಿಕೆಯಲ್ಲಿ ಸಂಪ್ರದಾಯದ ಮಾನದಂಡವಾಗಿದೆ.

ಮಹಾಭಾರತ ಮತ್ತು ರಾಮಾಯಣಗಳೆರಡೂ ಪರಿಣಾಮದಲ್ಲಿ ದುರಂತ ಕಾವ್ಯಗಳೇ. ಕೊನೆಗೂ ಪಾಂಡವರಾಗಲಿ ರಾಘವರಾಗಲಿ ಅಷ್ಟೈಶ್ವರ್ಯದಲ್ಲಿ ವಿಜೃಂಭಿಸುವದಿಲ್ಲ. ಅವರು ಸ್ವರ್ಗಾರೋಹಣದ ಹಾದಿಯಲ್ಲಿ ಒಬ್ಬೊಬ್ಬರ ಹೆಣ ಒಬ್ಬರು ಹೊತ್ತು ಸಾಗಿ ಹತರಾದರೆ ಇವರು ಶರಯೂ ನದಿಯಲ್ಲಿ ಒಬ್ಬೊಬ್ಬರಾಗಿ ಮುಳುಗಿ ಸಾಯುತ್ತಾರೆ. ಯಾರಿಗಾಗಿ ಲಂಕೆಯೇ ಸುಟ್ಟು ಸೂರೆಯಾಯಿತೋ

* ಮಹಾಭಾರತದಲ್ಲಿ ಜನ್ಮಮಿತಿಗೆ ಬರೆ ನಕ್ಷತ್ರಗಳ ಉಲ್ಲೇಖವಿದ್ದರೆ ರಾಮಾಯಣದಲ್ಲಿ ರಾಶಿಗಣನೆಯೇ ಮುಖ್ಯ. ರಾಶಿಗಣನೆ ನಂತರದ ಕಾಲದ್ದು.

ಆ ಸೀತೆಯೇ ಭೂಗರ್ಭದಲ್ಲಿ ವಿಲೀನಳಾಗುತ್ತಾಳೆ. ಅಂದಾಗ ಶ್ರೀರಾಮ ಮುಂದೆ ಯಾರಿಗಾಗಿ ಬದುಕಬೇಕು ? ಸುಖ ದುಃಖಗಳು ಅನಿತ್ಯ. ಧರ್ಮವೇ ನಿತ್ಯ ಎಂಬ ಮಹಾ ಸತ್ಯವನ್ನು ನಿದರ್ಶಿಸಲು ಹೋಗಿ ವಾಲ್ಮೀಕಿಯೂ ವ್ಯಾಸರೂ ಸಾಧಿಸಿದ್ದೇನು? ಸತ್ಯ-ಧರ್ಮಗಳಂತಹ ಶಾಶ್ವತ ಮೌಲ್ಯಗಳ ತೂಕದಲ್ಲಿ ಮಾನವನ ಬಾಳು ಹುರುಳಿಲ್ಲದ್ದು. ಸ್ವತಃ ವ್ಯರ್ಥವಾದದ್ದು. ಆ ತತ್ವಗಳ ವಿಜಯಕ್ಕಾಗಿ ಈ ಜೀವನ ಸತ್ವಗಳು ಸವೆದು ಸಾಯಲೇಬೇಕು. ಅಂದರೇನು ? ಅತ್ಯಾಧುನಿಕ ಅಸ್ತಿತ್ವವಾದ ಸಾರುವಂತೆ ಬಾಳು ಮೂಲತಃ ನಿರರ್ಥಕ. ನಾವು ಅದರಿಂದ ಏನಾದರೊಂದು ಮೌಲ್ಯಕ್ಕೆ ಹೊಂದಿಸಿ ಅರ್ಥವಂತಿಕೆಯನ್ನು ಉಂಟುಪಡಿಸಬೇಕು.

ಈ ಮಾನವನ ಅನಿವಾರ್ಯ ದುರಂತದ್ದು. ಬಾಳಿನ ಮೂಲಭೂತ, ಅಂತೆಯೇ ಅಂತಿಮ ವೈಫಲ್ಯವು. ಅಂದಾಗ ಇವೆರಡೂ ಮಹಾಕಾವ್ಯಗಳು ತಮ್ಮ ತಮ್ಮ ರೀತಿಯಲ್ಲಿ ಶೋಕಾಂತವಾಗಿ ಮುಗಿದದ್ದು ಯೋಗ್ಯವೇ ಆಯಿತು.

ಆದರೆ ಮಹಾಕಾವ್ಯದೆಂಬ ದೃಷ್ಟಿಯಲ್ಲಿ ಮಹಾಭಾರತಕ್ಕಿಂತ ರಾಮಾಯಣವೇ ಈ ದುರಂತ ಭಾವವನ್ನು ಆದಿಯಿಂದ ಅಂತ್ಯದವರೆಗೂ ಹೆಚ್ಚು ಕಡಿಮೆ ಕಾಪಾಡಿಕೊಂಡು ಸಾಗಿದೆ. ರಾಮಾಯಣವು ನಿಜವಾಗಿಯೂ ಕರುಣಾಮಯವು. ಒಂದೊಂದು ಪಾತ್ರವೂ ಕರುಣೆಯ ಒಂದೊಂದು ಮುಖ. Profiles in Pathos ಎನ್ನಬಹುದು ಈ 'ಪ್ರತಿಮಾ' ಶಾಲೆಗೆ. ಮಹಾಕಾವ್ಯದೆಂಬ ಬೃಹತ್ ಕೃತಿಗೆ ಸಾಂಪ್ರದಾಯಿಕವಾಗಿ ಲಕ್ಷಣ ಶಾಸ್ತ್ರೀಯವಾಗಿ ಒಂದೇ ಒಂದು ರಸವು ಪ್ರಧಾನವಾಗಿ ಇರಬಹುದೋ, ಇಲ್ಲವೋ, ರಾಮಾಯಣದ ಮಟ್ಟಿಗೆ "ಏಕೋ ರಸಃ ಕರುಣ ಏವ" ನಿಮಿತ್ತ ಭೇದದಿಂದ ಈ ಕಾವ್ಯದ ಕಡಲಿನ ತೆರೆಯಾಗಿ ನೊರೆಯಾಗಿ ಬುರುಗಾಗಿ ತುಂತುರಾಗಿ ಸಾದ್ಯಂತ ಸಾಕ್ಷಾತ್ಕರಿಸಿದೆ.

ಅದ್ದರಿಂದಲೇ ಭವಭೂತಿ ಹೇಳಿದ್ದು "ಜನಸ್ಥಾನೇ ಶೂನ್ಯೇ ಕರುಣಕರುಣೈಃ ಆರ್ಯ ಚರಿತ್ರೈಃ। ಅಪಿ ಗ್ರಾವಾ ರೋದಿತಿ ಅಪಿ ದಲತಿ ವಜ್ರಸ್ಯ ಹೃದಯಂ॥" ಭವಭೂತಿಯ ಈ ಮಾತಿಗೆ ನನ್ನದೊಂದು ತಿದ್ದುಪಡಿ—ಜನಸ್ಥಾನದಲ್ಲಿ ಮಾತ್ರವಲ್ಲ, ಅಯೋಧ್ಯೆಯಲ್ಲಿ, ಕಿಷ್ಕಿಂಧೆಯಲ್ಲಿ, ಲಂಕೆಯಲ್ಲಿ, ರಾಮಾಯಣದ ಮಹಾವೀರ ಚರಿತದ ಎಲ್ಲ ಕೇಂದ್ರಗಳಲ್ಲಿಯೂ ಅದೇ ಕರುಣ–ಕರುಣವಾದ, ಕಲ್ಲನ್ನೂ ಕರಗಿಸಬಲ್ಲ ಚರಿತ-ಆರ್ಯ ಮಾತ್ರವಲ್ಲ, ಅನಾರ್ಯವೂ ಅಹುದು.

ರಾಮಾಯಣದ ಆರಂಭವೇ ಕರುಣೆಯಿಂದ. ವಾಲ್ಮೀಕಿಯ ಹೃದಯ ವ್ಯಥೆಯೇ ರಾಮಾಯಣದ ಕರುಣ ಕಥೆಯಾಗಿ ಹರಿದಿದೆ. "ಶ್ಲೋಕತ್ವಮಾಪದ್ಯತ ಯಸ್ಯ ಶೋಕಃ" ಅಂದಿದ್ದಾನೆ ಕಾಳಿದಾಸ. ಈ ಕುರಿತು ರಘುವಂಶದಲ್ಲಿ, ನೋವು

ಕಂಡು ನೋದವರೊಂದಿಗೆ ತಾನೂ ಬೆಂದು ಒಂದಾಗುವವ ಕವಿ. ಕ್ರೌಂಚ ಮಿಥುನದ ವಿಯೋಗ ದುರಂತಕ್ಕೆ ಕಳವಳಗೊಂಡು ವಾಲ್ಮೀಕಿಯ ಶಾಪವಾಣಿ ಹೊರಟಿತು. –"Spontaneous overflow of powerful feeling." ಅದು ನೂತನ ಛಂದಸ್ಸಿನ ಅವತಾರ. ಅದರ ಅವತಾರ ಕಾರ್ಯವೇ ರಾಮಾಯಣ. ಆಶ್ರಮಕ್ಕೆ ಬಂದು ಆತ ಕಾವ್ಯರಚನೆಗೆ ಆರಂಭಿಸಿದನು. ಅದು "Recapituation in tranquility." ಕವಿಗೆ tranquility ಸಿಕ್ಕಿರಬಹುದು. ಆದರೆ ಕಾವ್ಯಕ್ಕೆ ಅಲ್ಲ.

ಈ ಕ್ರೌಂಚ ಮಿಥುನದ ಪ್ರಸಂಗ ರಾಮಾಯಣದ ಕಾವ್ಯಕ್ಕೆ ಒಂದು ಕೇಂದ್ರ ಪ್ರತೀಕ. ಅಲ್ಲಿಯ ವಿರಹ–ವಿಯೋಗ–ವ್ಯಾಕುಲ–ವಿಹ್ವಲತೆ ನೂರು ಮುಖವಾಗಿ ವಿವಿಧ ಪಾತ್ರಗಳಲ್ಲಿ ಮಿಡಿದಿದೆ, ಮೊಳಗಿದೆ. ರಾಮಾಯಣದ ಯಾವ ಪ್ರಮುಖ ಪಾತ್ರವನ್ನೇ ತೆಗೆದುಕೊಳ್ಳಿ, ಆದರ ಹಿಂದೆ ಒಂದು ದುಃಖವಿದೆ–ಮುಂದೆ ಒಂದು ದುರಂತವಿದೆ. ಒಟ್ಟು ಸಾಕೂತವಾಗಿ ರಸೈಕ್ಯದ ಪರಿಪೋಷವನ್ನು ಬೇರೆ ಯಾವ ಮಹಾ ಕವಿಯೂ ಸಾಧಿಸಿದ್ದು ಇಲ್ಲ.

ಮೊದಲಿಗೆ ಬರುವ ಶ್ರವಣ ಕುಮಾರನ ಕಥೆ ಎಂಥ ಹೃದಯದ್ರಾವಕ ಪ್ರಸಂಗ! ಶ್ರವಣ ಕುಮಾರನನ್ನು ಅರಿಯದೇ ಕೊಂದ ದಶರಥ, ಆ ಮೂಲಕ ಪುತ್ರಶೋಕದಿಂದ ಸತ್ತ ಶ್ರವಣನ ತಾಯ್ತಂದೆ. ಅವರ ಶಾಪವಾಣಿ. ಆ ಶಾಪವೇ ಒಂದು ವರವೆಂದು ಶಿರಸಾ ವಹಿಸಿದ ನಿಪುತ್ರಿಕ ದಶರಥ. ನಿಪುತ್ರಿಕನಿಗೆ ಪುತ್ರ ವಿಯೋಗದ ಶಾಪ ಒಂದು ರೀತಿ ವರವೇ! ಶಾಪ ನಿಜವಾಗಲಿಕ್ಕೆ ಆದರೂ ಅವನಿಗೆ ಪುತ್ರಪ್ರಾಪ್ತಿ ಆಗಬೇಕಷ್ಟೇ!

ದಶರಥನ ದುಃಖಕ್ಕೆ ಪ್ರತಿಯಾಗಿ ಅವನ ರಾಣಿಯರ ದುಃಖ. ಮಕ್ಕಳಿಲ್ಲದ ದುಃಖ ಒಂದು ಬಗೆಯಾದರೆ ಮಕ್ಕಳನ್ನು ಪಡೆದ ಮೇಲಿನ ದುಃಖ ಇನ್ನೊಂದು ಬಗೆ. ಕೌಸಲ್ಯೆಗೆ ಕೈಕೇಯಿ ಪರಿಪಂಥಿನಿ. ಅಸಹ್ಯ ಸವತಿ. ಅವಳ ಮಗನಿಗೆ ಪಟ್ಟ ವಾಗುವದೆಂಬ ಅಂಜಿಕೆ. ತನ್ನ ರಾಮನು ರಾಜ್ಯಕ್ಕೆ ಅಧಿಕಾರ ಕಳೆದುಕೊಂಡರೆ? ರಾಮನಿಗೇ ಪಟ್ಟವೆಂಬ ಮಾತು ಅವನ ಬಾಯಿಯಿಂದಲೇ ಕೇಳಿ ಆಕೆ ಹಿರಿ ಹಿರಿ ಹಿಗ್ಗುತ್ತಾಳೆ. "ಹತಾಃ ತೇ ಪರಿಪಂಥಿನಃ" ಎನ್ನುತ್ತಾಳೆ.

ಆದರೆ ಪರಿಪಂಥಿಗಳು ಹತರಾಗಿದ್ದಿಲ್ಲ. ತಾತ್ಕಾಲಿಕವಾಗಿ ಹತಾಶರಾಗಿದ್ದರು ಅಷ್ಟೇ. ಕೈಕೇಯಿ ತನ್ನ ಛಲ ಸಾಧಿಸಿದಳು – ಜ್ಞಾತಿದಾಸಿ ಕುಬ್ಜೆ ಮಂಥರೆಯ ಧೂರ್ತ ಹಂಚಿಕೆಯಿಂದ. ಪಟ್ಟಾಭಿಷೇಕದ ಮುಹೂರ್ತಕ್ಕೆ ವನವಾಸ ಆರಂಭ ವಾಯಿತು. ಪುತ್ರಶೋಕದಿಂದ ದಶರಥ ಸತ್ತನು. ಅಯೋಧ್ಯೆಯ ಒಂದೊಂದು ಕಲ್ಲೂ ಗೋಳಿಟ್ಟಿತು.

ಆದರೆ ಇಲ್ಲಿಗೆ ಮುಗಿಯಿತೇ ? ಇಲ್ಲ. ಕೈಕೇಯಿಯ ಗೋಳೇ ಬೇರೆ ಬಗೆ. ಅದು ನಿಜವಾಗಿಯೂ ವಿಚಿತ್ರ ಮರುಕದ್ದು. ಅವಳ ಗೆಲುವು ಸೋಲಿಗಿಂತ ಕೀಳಾಯಿತು. ಮಗನಿಗಾಗಿ ಮಾಡಿದ್ದನ್ನೆಲ್ಲ ಮಗನೇ ಒದ್ದು ಎದ್ದು ಹೋದ–ರಾಮನನ್ನು ಕರೆದು ತರಲು. ಕೈಕೇಯಿಯ ಮನೋಭಂಗ ಅವಳ ಮಾನಭಂಗಕ್ಕಿಂತ ಅಸಹ್ಯ.

ಸುಮಿತ್ರೆಯೋ ತಪಸ್ವಿನಿ. ತ್ಯಾಗಕ್ಕಾಗಿಯೇ ಹುಟ್ಟಿ ಬಂದವಳು–ಮೂಕ ವೇದನೆಯ ವೇದಿಕೆ ಅವಳ ಹೃದಯ. ಮಗನಿದ್ದೂ ಸ್ವೇಚ್ಛೆಯಿಂದ ಅವನನ್ನು 14 ವರ್ಷ ಕಳೆದುಕೊಂಡಳು. ರಾಣಿಯಾಗಿದ್ದರೂ ರಾಜ್ಞೀಪದದ ಯಾವ ಬಿರುದು ಬಾವಲಿಗಳಿಲ್ಲದೆ ದಶರಥನ ದಾಸಿಯಂತೆ ಸೇವೆಯಲ್ಲಿ ಸವೆದು ಬದುಕಿದಳು. ಇದ್ದ ಒಬ್ಬ ಮಗನನ್ನು ರಾಮನೊಂದಿಗೆ ವನವಾಸಕ್ಕೆ ಅಟ್ಟಿದಳು. ದಶರಥನ ಮರಣದ ಸಮಯ ಅವನ ಶುಶ್ರೂಷೆ ಅಗತ್ಯದಿಂದ ನೋಡಿಕೊಂಡವಳು ಸುಮಿತ್ರೆ ಹೊರತು ಕೌಸಲ್ಯೆಯಲ್ಲ. ಈ ಬಡಪಾಯಿಗೆ ಅರಮನೆಯಲ್ಲಿ ತಕ್ಕ ಪ್ರತಿಷ್ಠೆ ಇದ್ದಿಲ್ಲವೆಂದೇ ಅನಿಸುತ್ತದೆ. ಅದು ಅವಳ ಹೆಸರಿನಿಂದಲೇ ಧ್ವನಿತವಾಗುತ್ತದೆ.

ಸಾಮಾನ್ಯವಾಗಿ ಅಂದಿನ ರಾಣಿಯರನ್ನೂ ರಾಜಕುಮಾರಿಯರನ್ನೂ ಗುರುತಿಸುವದು ಅವರ ದೇಶದ ಕುಮಾರಿಯೆಂದು–ಇಂದಿಗೂ ಹಾಗೆಯೇ. ರಾಜಮಹಾರಾಜರ ಸ್ಥಾನಮಾನಗಳ ರದ್ದತಿ ಆದಮೇಲೂ ರಾಜಮಾತಾ ಆಫ್ ಗ್ವಾಲ್ಹೇರ ಶ್ರೀಮತಿ...ಆಫ್ ಜಯಪೂರ ಎಂದೆಲ್ಲ ಕರೆಯುವದುಂಟು. ಅಂದು ಕೋಸಲ ದೇಶದ ರಾಜಕನ್ಯೆ ಕೌಸಲ್ಯೆ, ಕೇಕಯದ ರಾಜಕನ್ಯೆ ಕೈಕೇಯೀ. ಮಿಥಿಲೆ-ವಿದೇಹದವಳು ಮೈಥಿಲಿ, ವೈದೇಹಿ ಇತ್ಯಾದಿ. ಕೌಸಲ್ಯೆ ಕೈಕೇಯಿಗಳ ಅಂಕಿತ ನಾಮವೇನೋ ಗೊತ್ತಿಲ್ಲ. ಆದರೆ ಈ ಸುಮಿತ್ರೆಯ ತವರಿನ ಹೆಸರೇ ಗೊತ್ತಿಲ್ಲ. ಆಕೆ ತನ್ನ ರಾಜಮನೆತನದ ಅಥವಾ ದೇಶದ ಹೆಸರಿನಿಂದ ಗುರುತಿಸಲ್ಪಟ್ಟೇ ಇಲ್ಲ. ಅಂದರೆ ಆಕೆಯನ್ನು ಇತರ ರಾಣಿಯರೂ ದಶರಥನೂ ಅವನ ರಾಜಪುತ್ರರೂ ಎಷ್ಟೇ ಮಮತೆ-ಮರ್ಯಾದೆಗಳಿಂದ ಕಂಡರೂ ಅರಮನೆಯಲ್ಲಿ ಅವಳ ಅಂತಸ್ತು ರಾಣಿಯಂತೆ ಇದ್ದಿಲ್ಲವೋ ? ಆಕೆ ದಶರಥನ ಉಪ ಪತ್ನಿಯಂತೆ ಇದ್ದಳೋ ? ಏಕೆಂದರೆ ಅವಳ ಇಬ್ಬರು ಹುಡುಗರೂ ಹಾಗೆಯೇ ; ಒಬ್ಬ ರಾಮನನ್ನೂ ಇನ್ನೊಬ್ಬ ಭರತನನ್ನೂ ಅನುಚರನಂತೆ ಅನುಸರಿಸಿಯೇ ಬದುಕಿದರು !

ಲಕ್ಷ್ಮಣನ ಅನಾವಶ್ಯಕ ವನವಾಸದ ಸ್ವೇಚ್ಛಾ ಪ್ರಾರಬ್ಧದಿಂದಾಗಿ ಅವನ ಹೆಂಡತಿ ಊರ್ಮಿಳೆಗೆ ಅಯೋಧ್ಯೆಯಲ್ಲಿಯೇ ವನವಾಸವಾಯಿತು. ಪತಿಯಿಂದ ವಿಯೋಗ ಘಟಿಸಿತು. ಅದೇ ಅವಸ್ಥೆ ಭರತನ ಹೆಂಡತಿಗೂ. ಆ ಆದರ್ಶ ಬಂಧು ರಾಮನಿಗಾಗಿ ಸಿಂಹಾಸನ ಬಿಟ್ಟು ವಿರಕ್ತನಾಗಿ ನಂದಿಗ್ರಾಮ (ಶೃಂಗವೇರಪುರ ?) ದಲ್ಲಿ ವ್ರತಸ್ಥನಾಗಿ ಬದುಕಿದನು. ಅಂದಾಗ ಅವನಿಗೂ ಅವನ ಹೆಂಡತಿಗೂ ಕೂಡಿಯೇ

ವ್ಯಾಯೋಗ-ವನವಾಸ. (ಅವನ ಗೋಳಿನ ಗೆರೆಯನ್ನೆ ಶತ್ರುಘ್ನನೂ ಅವನ ಹೆಂಡತಿಯೂ ಗೀರಿರಬೇಕು.)

ಹೀಗೆ ಅಯೋಧ್ಯೆಯ ಕ್ಷೀರಸಾಗರ ಉಪ್ಪು ನೀರಾಯ್ತು, ಅಯೋಧ್ಯೆಯಂತೆಯೇ ಕಿಷ್ಕಿಂಧೆ. ಅಲ್ಲಿಯೂ ಯಾರಿಗೆ ಸುಖವಿದೆ? ರಾಮನಂತೆ ಸುಗ್ರೀವನೂ ಹೆಂಡತಿಯನ್ನು ಕಳೆದುಕೊಂಡವನು. ವಾಲಿಗೂ ಆಕ್ರೋಶ ತುಂಬಿದ ನಿಶ್ಚಿಂತವಲ್ಲದ ಬದುಕು. ಸುಗ್ರೀವನಿಗೆ ಶುದ್ಧ ವನವಾಸವೇ. ವಾಲಿಯ ಹೆಂಡತಿ ತಾರೆಗೆ? ಆಕೆಯೂ ದುಃಖಿನಿ. ವಾಲಿಯ ವಧೆ ರಾಮನಿಗೆ ಹಿತವಾಯಿತೇ? ಅದೊಂದು ಕಲಂಕವನ್ನೇ ತಂದಿತು. ಸುಗ್ರೀವನಿಗಾದರೂ ನೆಮ್ಮದಿಯೋ?

ಲಂಕೆಯ ಕಥೆಯೂ ಅಂತೆಯೇ. ವಿಭೀಷಣ, ರಾವಣ, ಮಂಡೋದರಿ ಪ್ರತಿಯೊಬ್ಬರೂ ತಮ್ಮ ತಮ್ಮ ರೀತಿಯಲ್ಲಿ ದುಃಖಿಗಳೇ. ಬೇಕಿದ್ದು ಬೇಡಿದ್ದು ಸಿಗದ ದುಃಖ ಒಂದು. ಬೇಡಾದ್ದೂ ಬಯಸದ್ದೂ ಸಿಕ್ಕ ದುಃಖ ಇನ್ನೊಂದು. ಚಿನ್ನದ ಜಿಂಕೆ ಚಿನ್ನದ ಲಂಕೆ ಸುಟ್ಟು ಸೂರೆ ಆಯಿತು. ಅಶೋಕವನ ಒಂದೇ ಹಸಿರಾಗಿ ಉಳಿಯಿತು – ಸೀತೆಯ ಶೋಕದ ಜೀವಂತ ಸ್ಮಾರಕವಾಗಿ ರಾಮನ ವೈರದಿಂದ ಅತಿದರ್ಪದಿಂದ ಅತಿಮೋಹದಿಂದ ರಾವಣ ದುರಂತ ಕಂಡ. ಅವನೊಂದಿಗೆ ಸಂಪರ್ಕ ಬಂದವರೆಲ್ಲರೂ ಅವನಂತೆಯೇ ಹತಾಶರಾದರು, ಹತರಾದರು.

ಅಹಲ್ಯೆ, ಶಬರಿ, ಚಂದ್ರಸೇನೆ–ಒಬ್ಬೊಬ್ಬರೂ ಪರಮ ದುಃಖಿಗಳೇ. ಆತ್ಮದ ಅಂತರ್ವಿರಹದಲ್ಲಿ ಬೆಂದು ಬಳಲಿದವರು. ಅವರ ಕಥೆಯ ವಿಸ್ತರಣೆ ಇಲ್ಲಿ ಅಪ್ರಸ್ತುತ.

ಸೀತೆಯಂತೂ ಕರುಣೆಯ ಪೂರ್ಣಾವತಾರ. ರಾಮರಂಥವರು ಹಲವರು ಹುಟ್ಟಬಹುದು. ಸೀತೆಯಂಥವಳು ಆಕೆಯೊಬ್ಬಳೇ. ಮೊದಲು ಪಟ್ಟ ಕಳೆದುಕೊಂಡಳು. ಆಮೇಲೆ ಪತಿಯನ್ನೇ ಕಳೆದುಕೊಂಡಳು. ಕೊನೆಗೆ ತಾನೇ ಪತಿಯಿಂದ ದೂರಳಾಗಿ ಮರಳಿಮಣ್ಣಿಗೆ ಕೂಡಿದಳು. ರಾವಣನು ಒಯ್ದ ದುಃಖಕ್ಕಿಂತ ರಾಮನೇ ಕೈಬಿಟ್ಟ–ಅದೂ ಸುಳ್ಳು ನೆವ ಹೇಳಿ ಅಡವಿಯಲ್ಲಿ ಬಿಟ್ಟುಕೊಟ್ಟ!– ದುಃಖವೇನು ಸಾಮಾನ್ಯವೇ? ಅವಳನ್ನು ಬಿಟ್ಟು ಏಕಾಕಿಯಾದ ರಾಮನೇನು ಸುಖಿಯಾದನೇ? ಅವನಿಗೆ ಜಗತ್ತೇ ಅರಣ್ಯವಾಗಿ ಕಾಡಿತು. ಅವನ ಆ ದಾರುಣ ಚಿತ್ರಣ ಭವಭೂತಿ ಮಾಡಿದ್ದಾನೆ. ಅದರ ಪರಿಸ್ಫೋಟ ಡಾ॥ ಕೀರ್ತಿನಾಥ ಕುರ್ತಕೋಟಿ ಅನ್ಯಾದೃಶವಾಗಿ ಮಾಡಿದ್ದಾರೆ. (ಅದು ಇಂಗ್ಲಿಷಿನಲ್ಲಿ ಬಂದಿದ್ದರೆ ವಿಶಾಲ ವಿಮರ್ಶಾ ಪ್ರಪಂಚದ ಪ್ರಶಂಸೆಗೆ ಪಾತ್ರವಾಗುತ್ತಿತ್ತು!)

ಹೀಗೆ ವಿಯೋಗ-ವಿರಹ-ಆಳವಾದ ವ್ಯಥೆ ಶೋಕ-ಕರುಣ ರಸಗಳ ಗಂಗಾ-ಯಮುನೆಗಳಾಗಿ ವಾಲ್ಮೀಕಿಯ ರಸಸರಸ್ವತಿಯೊಂದಿಗೆ ಕೂಡಿ ತ್ರಿವೇಣೀ ಸಂಗಮ

ವಾಗಿದೆ ರಾಮಾಯಣ ಕಾವ್ಯ. "ಸಾಕಪ್ಪ, ನಿನ್ನ ರಾಮಾಯಣ?"–ರಾಮಾಯಣವು ನರ, ವಾನರ ಮತ್ತು ರಾಕ್ಷಸ ಕುಲಗಳ ಆಳಿಗಾಲವನ್ನೆ ಚಿತ್ರಿಸಿದಂತಿದೆ. ನಿಜವಾಗಿಯೂ ಈ ಮೂರೂ ಸಂಸ್ಕೃತಿಗಳ ದೃಷ್ಟಿಯಿಂದ ಅಯೋಧ್ಯೆ, ಕಿಷ್ಕಿಂಧೆ ಮತ್ತು ಲಂಕೆ ಈ ನಗರಗಳ ನಾಗರಿಕತೆಯ ತೌಲನಿಕ ಅಭ್ಯಾಸವು ಉದ್ಬೋಧಕವಾದೀತು.

ಮುಖ್ಯ ಕಥೆಯಲ್ಲಿ ಅಡ್ಡ ಹಾಯುವ ಶೂರ್ಪಣಖಿ ಮತ್ತು ಉತ್ತರಕಾಂಡದ (ಪ್ರಕ್ಷಿಪ್ತ) ಅಗಸನ ಕಥೆಯು ತನ್ನದೇ ರೀತಿಯಲ್ಲಿ ಕರುಣಾಮಯವೇ ಸರಿ. ಶೂರ್ಪಣಖಿ ರಾಮನನ್ನು ಕಂಡು ಮೋಹಿತಳಾದರೆ ಅದು ಅವಳ ತಪ್ಪೇ? ಆದರೆ ಅದಕ್ಕೆ ಆಕೆ ಪಡೆದ ಪ್ರತಿಫಲವೇನು? ಕ್ರೂರವಾದ ವಿದ್ರೂಪದ ಮಾನಭಂಗ. ಅಗಸನ ದುಃಖವೇ ಬೇರೆ. ಅವನ ಕತ್ತೆಗೂ ಅದು ಅಸಹ್ಯ! ಹೆಂಡತಿಯ ಬಗೆಗೆ ಅಸಾಧ್ಯ ಸಂಶಯ ದಿಂದ ಈ ಬಡಪಾಯಿ ತೊಳಲಾಡಿದ. ಅವನ ದುಃಖದ ಉದ್ಗಾರ ರಾಮಾಯಣದ ಮುಂದಿನ ದುರಂತಕ್ಕೇ ಮುಳುವಾಯಿತು. (ಅಂದರೆ ಈ ಪ್ರಸಂಗ ಮೂಲ ರಾಮಾಯಣದ ಭಾಗವೆಂದೇ ಭಾವಿಸಿದರೆ.)

ಆದಿಕವಿಯ ಬದುಕೇ ದುಃಖಿತಪ್ತ ತೇಜಸ್ಸು. ಕ್ರೂರವ್ಯಾಧ ವಾಲ್ಮೀಕಿಯಾದ ಬಗೆ ಆವನ ಪಾಪದ ಪಾಲುಗಾರಿಕೆಯ ಪ್ರಶ್ನೆಯಿಂದಾಗಿ. ದಾರಿ ದರೋಡೆಮಾಡಿ ದುಡ್ಡು ದೋಚಿ ಹಾಕುವ ಈ ವ್ಯಾಧನಿಗೆ ಒಂದು ದಿನ ಥಟ್ಟನೆ ಮನದಟ್ಟಾಯಿತು–ತಾನು ನಿಜವಾಗಿಯೂ ತನ್ನ ಪಾಪ ಮಾರ್ಗದಲ್ಲಿ ಏಕಾಕಿ. ಅವನ ಪಾಪದ ಫಲ ಅವನ ಮಡದಿ ಮಕ್ಕಳಿಗೆ ಬೇಕು. ಆದರೆ ಪಾಪದಲ್ಲಿ ಪಾಲು ಬೇಡ. ಅದನ್ನು ಅವನೊಬ್ಬನೇ ಹೊರಬೇಕು–ಎಂದು ಹಳ್ಳಿಯ ಹೈದನೂ ಹೇಳುವಷ್ಟು ಈ ಮಹಾ ಕಾವ್ಯ ಕಣ್ಣೀರಿನ ಕೋಡಿ, ಗೋಳಾಟದ ಗಾಥೆ ಎಂದು ಜನಜನಿತವಾಗಿಬಿಟ್ಟದ್ದೂ ಇದರ ಪ್ರಧಾನರಸ ಕರುಣವೆಂಬುದಕ್ಕೇ ಸಾಕ್ಷಿ.

ಮಹಾಕಾವ್ಯಕ್ಕೆ ವಂಶಪ್ರಜ್ಞೆಯೇ ಜೀವಾಳವೆನ್ನುತ್ತಾರೆ. ಇಲ್ಲಿ ಆ ವಂಶ ಪ್ರಜ್ಞೆಗೇ ಮತ್ತೆ ಮತ್ತೆ ವಿಚ್ಛಿತ್ತಿ. ದಶರಥನಿಗೆ ನಿಷ್ಪುತ್ರಿಕತೆಯ ಹೃದ್ರೋಗ. ರಾಮನಿಗೆ ಗರ್ಭಿಣಿ ಸೀತೆಯನ್ನು ಅಡವಿಗೆ ಅಟ್ಟಿ ತಾನಾಗಿ ತಂದುಕೊಂಡ ಸಂತತಿ ವಿಚ್ಛೇದ. ಅವನಿಗೆ ಲವಕುಶರ ಸಮಾಗಮ ಒಂದು ದೈವೀ ಯೋಗಾಯೋಗ. ಇಲ್ಲವಾದರೆ ಸೀತೆಯನ್ನು ಕಳೆದುಕೊಂಡ ರಾಮನು ತನ್ನ ವಂಶವನ್ನು ಕಳೆದುಕೊಂಡಂತೆಯೇ. ದಶರಥನ ನಿಷ್ಪುತ್ರಿಕತೆಯನ್ನು ಹೋಗಲಾಡಿಸುವ ಶಾಪವು ತಂದದ್ದು ಪುತ್ರಶೋಕದಿಂದ ಮರಣ! ಈ ಶಾಪವಾಣಿಯ ಮೂಲವೂ ಶ್ರವಣನ ತಾಯ್ತಂದೆಗಳ ಪುತ್ರಶೋಕ! ಕಿಷ್ಕಿಂಧೆಯ ಕಥೆ ಏನು? ವಾಲಿಯ ಮಗನಿಗೆ ಪಟ್ಟವಿಲ್ಲ. ಪಟ್ಟವೇರಿದ ಸುಗ್ರೀವನಿಗೆ ಸಂತತಿ ಇಲ್ಲ. ಹನುಮಂತನಂತೂ ಹೇಳಿಕೇಳಿ ಬ್ರಹ್ಮಚಾರಿ.

ಮೂಲದ ಕಾವ್ಯಪ್ರತೀಕವಾದ ಕ್ರೌಂಚ ಮಿಥುನಕ್ಕೇ ಅನ್ಯೋನ್ಯ ವಿಯೋಗದಿಂದ ವಂಶ ವಿಚ್ಛೇದ. ಕೊನೆಯಲ್ಲಿ ರಾವಣನ ಮಗ ಅವನ ಮುಂದೆಯೇ ಸಾಯುತ್ತಾನೆ. ಇತ್ತ ಲವಕುಶರೂ ತಾಯ್ತಂದೆಗಳನ್ನು ದೈವಗೇಡಿಗಳಂತೆ ಕಳೆದುಕೊಳ್ಳುತ್ತಾರೆ.

ಜಾತಿಪ್ರಜ್ಞೆಯ ದೃಷ್ಟಿಯಿಂದಲೂ ಮೂರು ಸಂಸ್ಕೃತಿಗಳ ಸಂಘರ್ಷವಾದ ರಾಮಾಯಣ ನರಕಕ್ಕೆ ಸಾಗಬೇಕು! ಈ ದಾರುಣ ಪ್ರಜ್ಞೆ ಏನು ಕಡಿಮೆಯ ದುರಂತವೇ? ಈ ಪ್ರಜ್ಞೆಯಿಂದ ಕವಿಯಲ್ಲಿ ಪುನರ್ಜನ್ಮವಾಯಿತು. ಅವನ ಆತ್ಮ ಎಚ್ಚೆತ್ತಿತು. ವಜ್ರಕಠಿಣವಾದ ಅವನ ಹೃದಯ ಕುಸುಮ ಕೋಮಲವಾಯಿತು.

"ನ ಅನೃಷಿಃ ಕುರುತೇ ಕಾವ್ಯಂ" ಎಂಬ ಮಾತು ವಾಲ್ಮೀಕಿಯಲ್ಲಿ ಇಮ್ಮಡಿ ಸಾರ್ಥಕವಾಗಿದೆ. ಆತ ಋಷಿ, ಆದ್ದರಿಂದ ಕಾವ್ಯ ರಚಿಸಿದನು. ಮಾತ್ರವಲ್ಲ ಈ ಕಾವ್ಯ ಸಿದ್ಧಿಯಿಂದಲೇ ಅವನು ಋಷಿಯಾದನು. ವೇದದ ಋಚೆಗಳನ್ನು ರಚಿಸಿದ್ದರಿಂದ ಅನೇಕರು ಋಷಿಗಳಾಗಿದ್ದಾರೆ. ವಾಲ್ಮೀಕಿ ಆದಿಕಾವ್ಯದ ಕವಿಯಾದ್ದರಿಂದಲೇ ಋಷಿಯೆನಿಸಿಕೊಂಡಿರಬೇಕೆಂದು ನನ್ನ ಭಾವನೆ. ಏಕೆಂದರೆ ವಾಲ್ಮೀಕಿಯಲ್ಲಿ ಬೇರೆ ಋಷಿಗಳಿಂದ ಭಿನ್ನವಾದ ಒಂದು ವಿಶೇಷವಿದೆ. ಇವನು ವೈದಿಕ ಋಷಿಯೇ ಅಲ್ಲ. ರಾಮಾಯಣದಲ್ಲಿ ಬರುವ ವಸಿಷ್ಠ ವಿಶ್ವಾಮಿತ್ರಾದಿ ಋಷಿಗಳು ಋಗ್ವೇದದಲ್ಲಿಯೂ ಮಂತ್ರದ್ರಷ್ಟಾರರಾಗಿ ಕಾಣಿಸಿಕೊಳ್ಳುತ್ತಾರೆ. ಮಹಾಭಾರತಾಚಾರ್ಯ ವ್ಯಾಸನು ಮೂಲತಃ ವೇದವ್ಯಾಸನೇ. ವೇದಗಳ ಸಂಹಿತಾ ಮಂಡಲಗಳ ಸಂಕಲನದಿಂದಲೇ ಆತ ವ್ಯಾಸನೆನಿಸಿಕೊಂಡವನು. ಇದು ಅಲ್ಲದೆ ಬ್ರಹ್ಮ (ಶಾರೀರಿಕ) ಸೂತ್ರಗಳನ್ನು ಅವನೇ ರಚಿಸಿ ಉತ್ತರ ಮೀಮಾಂಸೆಗೆ ಅಸ್ತಿಭಾರ ಹಾಕಿಕೊಟ್ಟ ಮಹಾದಾರ್ಶನಿಕನು. ಇಂಥ ಯಾವುದೇ ಇತರ ಆರ್ಷೇಯ ಕರ್ತೃತ್ವ ವಾಲ್ಮೀಕಿಯದಲ್ಲ. ರಾಮಾಯಣದ ಹೊರತು ಹೊರಗೆ ಇವನಿಗೆ ಅಸ್ತಿತ್ವವೇ ಇಲ್ಲ. ಆದ್ದರಿಂದಲೇ ಅಂದದ್ದು: ವಾಲ್ಮೀಕಿಯು ಈ ಆದಿಕಾವ್ಯದ ರಚನೆಯಿಂದಲೇ ಋಷಿಯಾದನೆಂದು.

ಈ ಆದಿಕವಿಯ ಅಪಾರ ಕರುಣೆಯೇ ರಾಮಾಯಣದ ಕಾವ್ಯವಾಹಿನಿಯಾಗಿ ಯುಗ ಯುಗಾಂತರಗಳಿಂದಲೂ ಹರಿದು ಬಂದಿತು. ಕರುಣೆಯೇ ಈ ಮಹಾಕಾವ್ಯದ ಪ್ರಧಾನರಸ. ಇದರಲ್ಲಿ ವ್ಯವಹರಿಸುವ ಒಂದೊಂದು ಪಾತ್ರವೂ "ಏಕೋ ರಸಃ ಕರುಣ ಏವ" ತಾಳಿದ ಬೇರೆ ಬೇರೆ ವಿವರ್ತ. ನಾಯಕ ಪಾತ್ರಗಳೂ ಪ್ರತಿನಾಯಕ ಉಪನಾಯಕ ಪಾತ್ರಗಳೂ ಒಂದೊಂದೂ ಮಾನವೀಯ ಮರ್ಮಾಹತಿಯ ವಿವಿಧ ಆವಿಷ್ಕಾರಗಳು. ಅಲ್ಲಿಯ ಎಲ್ಲ ರಸಾವತಾರಗಳಿಗೂ ಕರುಣೆಯೇ ಹಿನ್ನೆಲೆ.

ಕರುಣೆಯಿಂದಲೇ ವೀರ; ಕರಣ ಕಳವಳಿಸುವುದರಿಂದಲೇ ಶೃಂಗಾರ. (ಅನುಕಂಪೆಯ ಒಡಲಲ್ಲಿಯೇ ಅನುರಾಗದ ಉದ್ಭಾವನೆ. Pity is the source of love!)

ರೌದ್ರ, ಭಯಾನಕ, ಬೀಭತ್ಸ ಇವೆಲ್ಲವೂ ಕರುಣೆಗೇ ಕಾರಣ. ಹಾಸ್ಯವಂತೂ ಕರುಣ ರಸಕ್ಕೆ ತೊಡಿಸಿದ ಚಿನ್ನದ ಮುಖವಾಡ. We laugh lest we weep. "ಹರುಷ ರಸವು ಕರುಣವಸುವು–ಜೀವಧರ್ಮಧಾರಣಾ"–ಅಂದಿಲ್ಲವೇ ಅಂಬಿಕಾತನಯ ದತ್ತರು?

ಸುಖಕ್ಕೆ ನೂರು ಮುಖ. ದುಃಖಕ್ಕೆ ಒಂದೇ ಬಾಯಿ. ಸುಖ ಮನುಷ್ಯ ಮನುಷ್ಯನನ್ನು ಆತ್ಮ ಸಂತೃಪ್ತಿಯಲ್ಲಿ ಪ್ರತ್ಯೇಕಿಸುತ್ತದೆ. ದುಃಖ, ಅದರಿಂದ ಹುಟ್ಟುವ ಕರುಣೆ ಅವರನ್ನು ಒಂದಾಗಿಸುತ್ತದೆ. ಅಂದಾಗ ಜನಾಂಗದ ಹೃದಯ ವನ್ನು ಸೂರೆಗೈದ ರಾಮಾಯಣದ ಶಕ್ತಿ ಕೇವಲ ಕರುಣ.

ಬ್ರಯೊಫೈಟ್ ಗುಂಪಿನ ಸಸ್ಯಗಳಲ್ಲಿ ಬೀಜಾಣುಜನಕದ ಉಗಮ ಮತ್ತು ವಿಕಾಸದ ಒಂದು ಸಮೀಕ್ಷೆ

ಎಂ. ಎಸ್. ಎಸ್. ರಾವ್

[An appraisal of theo rigin and Evolution of Sporophyte in Bryophytes]

ಈ ಸಮಸ್ಯೆಗೆ (ಜಿಜ್ಞಾಸೆ) 2 ಭಿನ್ನವಿಕಾಸ ಮಾರ್ಗಗಳನ್ನು ಸೂಚಿಸಲಾಗುತ್ತದೆ.

I ಪ್ರಗತಿದಾಯಕ ವಿಕಾಸ ತತ್ವ (Theory of Progressive Evolution) ಹಾಗೂ ಬೀಜಾಣು ನಾಶನ ತತ್ವ (Theory of Sterlization)

II ವಿಗತಿದಾಯಕ ವಿಕಾಸ ತತ್ವ (Theory of Retrogressive Evolution)

ಪ್ರಗತಿದಾಯಕ ವಿಕಾಸ ತತ್ವ

1890ರಲ್ಲಿ "ಬವರ್" (Bower) ಎಂಬಾತ "ಪ್ರತಿವಿನ್ಯಾಸ ಪರ್ಯಾಯ" (antithetic alternation) ಎಂಬ ಒಂದು ಸಿದ್ಧಾಂತಕ್ಕೆ ಜೀವ ವಿಜ್ಞಾನದ ದೃಷ್ಟಿಯಿಂದ ಒಂದು ಹೊಸ ತಿರುವು ಅಥವಾ ರೂಪು ಕೊಟ್ಟನು. ಅದರ ಸಾರಾಂಶ ಇಷ್ಟೆ.

ಎರಡು ನಿರ್ದಿಷ್ಟ ಸಂತತಿಗಳ ಪರ್ಯಾಯವೆಂಬುದು (alternation of 2 Phylogenetically distinct generation) ಬ್ರಯೊಫೈಟ್ ಗುಂಪಿನ ಸಸ್ಯಗಳಲ್ಲಿ ಒಂದು ಸಹಜ ಸಿದ್ಧವಾದ ನಿಯಮವೇ ಆಗಿರುತ್ತದೆ. ಏಕೆಂದರೆ ಆ ಸಸ್ಯಗಳು ನೀರನ್ನು ಬಿಟ್ಟು ಭೂಮಿಯ ಕಡೆಗೆ ತೆರಳಿದುದರಿಂದ ಬೀಜಾಣು ಜನಕದ ಉಗಮ (origin of sporophyte) ಸಾಧ್ಯವೂ ಅನಿವಾರ್ಯವೂ ಆಯಿತು.

ಅನೇಕ ಭೂ ಸಸ್ಯಗಳು ಮೊದ ಮೊದಲಿಗೆ ನದಿ, ನಾಲೆ, ಸಾಗರಗಳಲ್ಲಿ ಬೆಳೆಯುತ್ತಿದ್ದ ಹಸಿರು ಜಲಚರ ಸಸ್ಯಗಳಿಂದಲೇ ಉತ್ಪತ್ತಿಯಾಗಿವೆ. ಆ ಜಲಚರ ಸಸ್ಯಗಳಿಗೆ ನೀರು ಮತ್ತಿತರ ಹಲವಾರು ಸೂಕ್ತ ಬಾಹ್ಯ ಸನ್ನಿವೇಶ ಸೌಕರ್ಯಗಳು ಅಲ್ಲಿ ಲಭ್ಯವಾಗಿದ್ದವು. ಮೇಲಾಗಿ ಜಲಚರ ಜೀವಾಣುಗಳಿಗೂ ಮತ್ತು ಪರಿಣಾಮಕಾರಿ ಲೈಂಗಿಕ-ಅಲೈಂಗಿಕ ಪುನರುತ್ಪತ್ತಿಗಳಿಗೂ ಜಲ ಸನ್ನಿವೇಶವು ಪೋಷಕ ಮತ್ತು ಅನಿವಾರ್ಯವೇ ಆಗಿತ್ತು. ಕ್ರಮೇಣ ಕೆಲವು ಜಲಚರ ಸಸ್ಯಗಳು ಭೂಮಿಯ ಕಡೆಗೆ

ವಾಲಿದಂತೆಲ್ಲ, ಆ ಆದಿ ಭೂ ಸಸ್ಯಗಳಲ್ಲಿ ಪುನರುತ್ಪತ್ತಿಗೆ ಅವಶ್ಯವಿದ್ದ ನೀರು ಮತ್ತಿತರ ಸೌಕರ್ಯಗಳು ಆಗೊಮ್ಮೆ ಈಗೊಮ್ಮೆ ಮಾತ್ರ ಲಭ್ಯವಾಗತೊಡಗಿದವು.

ಹೀಗೆ ಪ್ರತ್ಯುತ್ಪಾದನೆಗೆ ಅವಶ್ಯವಿದ್ದ ನೀರು ವರ್ಷದಲ್ಲಿ ಕೆಲಕಾಲ ಇಲ್ಲದೆ ಹೋಗುತ್ತಿದ್ದುದರಿಂದ, 'ಆರ್ಕಿಗೋನಿಯೇಟಿ' (Archegoniatae) ಎಂಬ ವಿಶಿಷ್ಟ ಗುಂಪಿಗೆ ಸೇರಿದ ಭೂ ಸಸ್ಯಗಳಲ್ಲಿ ಲೈಂಗಿಕ ಮತ್ತು ಅಲೈಂಗಿಕ ಸಂತತಿಯ ಪರ್ಯಾಯ ಕ್ರಮವೊಂದು (Alternation of sexual and aexual generations) ಆರಂಭವಾಯಿತು.

ಲಿಂಗಾಣು ಜನಕವು (Gametophyte) ಲೈಂಗಿಕ ರೀತಿ ಗಂಡು-ಹೆಣ್ಣು ಲಿಂಗಾಣುಗಳನ್ನು (male and female gametes) ಒಂದು ಹಂತದಲ್ಲಿ ಉತ್ಪಾದಿಸುವುದು ನಿಸರ್ಗದ ನಿಯಮ. ನಂತರ ಗರ್ಭ ಧರಿಸಿದ ಅಂಡಾಣು ಅಥವಾ ಯುಗ್ಮವೆಂಬುದು (Zygote) ಮತ್ತೆ ನೇರವಾಗಿ ಹೊಸ ಲಿಂಗಾಣುಜನಕ ಸಸ್ಯಗಳನ್ನು ಉತ್ಪಾದಿಸುವುದಕ್ಕೆ ಬದಲು 'ಬೀಜಾಣುಜನಕ'ವೆಂಬ (Sporophyte) ಹೊಸ ಸಸ್ಯ ಅಥವಾ ಹಂತಕ್ಕೆ ಅನುವುಮಾಡಿಕೊಡುತ್ತದೆ. ಈ ಸಸ್ಯ ಅಥವಾ ಹಂತವು ತನ್ನ ಸರದಿಯಲ್ಲಿ ನಿರ್ಲಿಂಗ ರೀತಿ ಬೀಜಾಣುಗಳನ್ನು (Spores) ಉತ್ಪಾದಿಸಿ, ಅವುಗಳ ಮೂಲಕ ಮತ್ತೆ ಲಿಂಗಾಣು ಜನಕಗಳಿಗೆ ಎಡೆ ಮಾಡಿಕೊಡುತ್ತದೆ. ಇದರಿಂದ ಸಸ್ಯ ಜೀವನ ಕ್ರಮ ದೀರ್ಘ ಅಥವಾ ಲಂಬಿತವಾಗುವುದಲ್ಲದೆ, ಜೀವನ ಚಕ್ರದಲ್ಲಿ 2 ಮುಖ್ಯ ಹಂತಗಳು ಕಾಣಿಸಿಕೊಳ್ಳುವಂತಾಗುತ್ತದೆ. ಒಂದು, ಲೈಂಗಿಕ ಹಂತ; ಇನ್ನೊಂದು, ಅಲೈಂಗಿಕ ಹಂತ. ಇವೆರಡೂ ಹಂತಗಳು ಮುಗಿದ ಮೇಲೇ ಇಡೀ ಜೀವನ ಚಕ್ರ ಪೂರ್ತಿಗೊಳ್ಳುವಂತಾಗುತ್ತದೆ. ಬ್ರಯೊಫೈಟ್ ಗುಂಪಿನ ಸಸ್ಯಗಳಲ್ಲಿ ಲಿಂಗಾಣುಜನಕ ಸಸ್ಯವು (Gametophyte) ಪ್ರಧಾನವೂ ಸ್ವತಂತ್ರವೂ ಆಗಿರುತ್ತದೆ. ಆದರೆ ಬೀಜಾಣು ಜನಕ ಸಸ್ಯವು ಮಾತ್ರ (Sporophyte) ಲಿಂಗಾಣು ಜನಕ ಸಸ್ಯದ ಮೇಲೇ ಪೂರ್ಣವಾಗಿಯೋ, ಭಾಗಶಃವೋ ಅವಲಂಬಿತವಾಗಿರುತ್ತದೆ ಎಂಬುದು ಗಮನಾರ್ಹ.

ಬೀಜಾಣು ಜನಕದಲ್ಲಿ ಅಂತಸ್ಥ ಬೀಜಾಣು ಜನ ಕೋಶಗಳು (Potentially Sporogenous Cells) ಹಂತ ಹಂತವಾಗಿ ಬೀಜಾಣು ನಾಶನ ಹೊಂದಿ (Progressively Sterlised) ಸುಧಾರಿಸಿದ ಹಾಗೂ ಅಲ್ಪ ಸ್ವಾತಂತ್ರ್ಯ ಪಡೆದ ಬೀಜಾಣುಜನಕವಾಗಿ ರೂಪುಗೊಳ್ಳುವುದುಂಟು.

ಬ್ರಯೊಫೈಟ್ ಗುಂಪಿನ ಸಸ್ಯಗಳಲ್ಲಿ ಅತ್ಯಂತ ಸರಳ ರೂಪದ ಹಾಗೂ ಕೆಳ ಮಟ್ಟದ ಬೀಜಾಣುಜನಕಗಳಿಂದ ಹಿಡಿದು ಸಾಕಷ್ಟು ಪ್ರಗತಿ ಮತ್ತು ಸಂಕೀರ್ಣತೆ ಹೊಂದಿದ ಉಚ್ಚ ಮಟ್ಟದ ಬೀಜಾಣುಜನಕಗಳು ಇವೆ. ಈ ರೀತಿ ಬೀಜಾಣುಜನಕದ

ಬೆಳವಣಿಗೆ ಮತ್ತು ವಿಕಾಸದ ಶ್ರೇಣಿಯಲ್ಲಿ ಸಂಕೀರ್ಣತೆಯೂ ಮತ್ತು ಬೀಜನಾಶನವೂ ಪ್ರಗತಿಪಥದಲ್ಲಿ ಹಂತ ಹಂತವಾಗಿ ಸಾಗಿರುವುದು ಕಂಡುಬರುತ್ತದೆ.

ವಿಧಾಯಕ ಹಾಗೂ ಪ್ರಗತಿ ಪಥದಲ್ಲಿ ಬೀಜಾಣು ನಾಶನದ ಮೂಲಕ (Progressive Sterlization) ಸಾಗಿದ ಈ ವಿಕಾಸ ತತ್ವವನ್ನು ಕೇವರ್ಸ್ (Cavers) ಎಂಬಾತನು 1910ರಲ್ಲಿಯೂ ಮತ್ತು ಕ್ಯಾಂಬೆಲ್ (Campbell) ಎಂಬಾತನು 1918-40ರ ಅವಧಿಯಲ್ಲಿಯೂ ಪುಷ್ಟೀಕರಿಸಿದ್ದಾರೆ. ವಿವರ ವಾದ ಸರಣಿಗಳನ್ನು ಈ ರೀತಿ ಸಂಕ್ಷಿಪ್ತವಾಗಿ ಸೂಚಿಸಬಹುದು.

1 ಅತ್ಯಂತ ಸರಳ ರೂಪದ ಹಾಗೂ ಕೆಳವರ್ಗದ ಬೀಜಾಣು ಜನಕದಲ್ಲಿ ಪ್ರಾಯಶಃ ಬೀಜಾಣುಧಾನಿ ಅಥವಾ ಕೋಶದ ಹೊರ ಭಿತ್ತಿ-ಕವಚವೊಂದನ್ನು (Sporangium Wall) ಬಿಟ್ಟು ಉಳಿದೆಲ್ಲ ಭಾಗವೂ ಬೀಜಾಣುಗಳನ್ನು ಉತ್ಪಾದಿಸುವುದರಲ್ಲಿ ತೊಡಗುತ್ತವೆ. ಈ ಭಿತ್ತಿ ಕವಚವು ಕೂಡ ಬೆಳೆಯುವ ಬೀಜಾಣುಗಳಿಗೆ ಒಂದು ಹಂತದಲ್ಲಿ ಆಹಾರವಾಗಿ ಬಳಕೆಯಾಗುತ್ತದೆ. ಕೆಲವು ಬೀಜಾಣು ಜನಕಗಳಲ್ಲಿ ಒಮ್ಮೊಮ್ಮೆ ಬೀಜಾಣು ನಾಶನ ಹಾಗೂ ನಿಷ್ಫಲ ಹೊಂದುವ (Sterlization) ಬೀಜಾಣು ಮಾತೃಕೋಶಗಳನ್ನು (Spore mother cells) ಮುಂದೆ ಬರುವ ನಿಜವಾದ "ಇಲೇಟರ್ಸ್" (Elaters) ಎಂಬ ವಿಶಿಷ್ಟ ಕೋಶಗಳ ಮುನ್ಸೂಚಕವೆಂದು ಭಾವಿಸಬಹುದು. ಈ "ಇಲೇಟರ್ಸ್" ಎಂಬ ಕೋಶಗಳು ಆರ್ದ್ರತಾಗ್ರಾಹಿಯಾಗಿರುತ್ತವೆ. ಅವು ಬೀಜಾಣುಜನಕದ ಸಂಪುಟಕವು (Capsule) ಬಿರಿಯುವುದಕ್ಕೂ ಮತ್ತು ಬೀಜಾಣುಗಳನ್ನು ಹೊರಕ್ಕೆ ಸಿಂಪಡಿಸುವುದಕ್ಕೂ ಕಾರಣವಾಗುತ್ತವೆ. ಅದರಿಂದ ಬೀಜಾಣುಗಳು ಚೆಲ್ಲಾಪಿಲ್ಲಿಯಾಗಿ ಹೊರಬಂದು ದೂರ ದೂರ ಪ್ರಸಾರವಾಗಲು ಕಾರಣವಾಗುತ್ತವೆ ಎಂಬುದನ್ನು ಗಮನಿಸಬೇಕು.

2. ಇಂತಹ ಆರಂಭ ಸ್ಥಿತಿಯಿಂದ ಮುಂದಿನ ಬೀಜಾಣುಜನಕಗಳು ಹೆಚ್ಚೆಚ್ಚು ಸಂಕೀರ್ಣತೆ ಹೊಂದುತ್ತ ಸಾಗುವುವು. ಅವುಗಳಲ್ಲಿ ಕೆಲವು ಪ್ರಾಯಶಃ ಒಂದು ಪಥದಲ್ಲಿ ಸಾಗಿದರೆ, ಇನ್ನು ಕೆಲವು ಮತ್ತೊಂದು ಪಥದಲ್ಲಿ ಸಾಗಿವೆಯೆಂಬಂತೆ ತೋರುತ್ತದೆ. ಅಂತಹ ಬೀಜಾಣುಜನಕಗಳಲ್ಲೆಲ್ಲ ಗರ್ಭ ಧರಿಸಿದ ಅಂಡವು (Fertilized Egg) ಸರ್ವಸಾಮಾನ್ಯ ಹಾಗೂ ಆರಂಭ ಬಿಂದು ಎನ್ನಬಹುದು. ನಂತರ ಅದು ಪಾದ (Foot), ಸಂಪುಟಿಕ ವೃಂತ (Seta) ಮತ್ತು ಸಂಪುಟಿಕ ಅಥವಾ ಕೋಶ (Capsule) ಎಂಬ ಮೂರು ಭಾಗಗಳಾಗಿ ರೂಪುಗೊಳ್ಳುತ್ತದೆ. ಈ ಸಂಪುಟಿಕದಲ್ಲಿಯೇ ಬೀಜಾಣುಗಳು ಉತ್ಪತ್ತಿಯಾಗುವುವು. ಮೇಲೆ ನಮೂದಿಸಿದ ಭಾಗಗಳು ತಮ್ಮ ರೂಪ, ರಚನೆ, ಗಾತ್ರ, ಇತ್ಯಾದಿಗಳ ದೃಷ್ಟಿಯಿಂದ ಬ್ರಯೊಫೈಟ್ ಗುಂಪಿನ ವಿವಿಧ ವರ್ಗಗಳ ಸಸ್ಯಗಳಲ್ಲಿ ಬಹಳಷ್ಟು ವೈವಿಧ್ಯತೆಯನ್ನು ತೋರುತ್ತವೆ.

(ಅ) **ಪಾದ :** (Foot) ಇದು ತನ್ನ ಆಕಾರ, ರಚನೆ, ಗಾತ್ರಗಳಲ್ಲಿ ಬಹು ವೈವಿಧ್ಯಮಯವಾಗಿರುವುದುಂಟು. ಇದು ಹೆಚ್ಚಾಗಿ ಲಿಂಗಾಣುಜನಕ ಸಸ್ಯದೊಳಗೇ ಹೂತುಹೋದಂತಿರುತ್ತದೆ. ಅದರ ಮುಖ್ಯ ಕಾರ್ಯ ಲಿಂಗಾಣುಜನಕದಂತಹ ಮೂಲ ಸಸ್ಯದಿಂದ ನೀರು ಆಹಾರಗಳನ್ನು ಹೀರಿಕೊಂಡು, ಮೇಲಿನ ಸಂಪುಟಿಕದಲ್ಲಿರುವ ಬೀಜಾಣುಕೋಶಗಳಿಗೆ ಅದನ್ನು ಒದಗಿಸುವುದೇ ಆಗಿರುತ್ತದೆ. ಜತೆಗೆ ಬೀಜಾಣುಜನಕವನ್ನು ಲಿಂಗಾಣುಜನಕದಲ್ಲಿ ನೆಲೆಯೂರಿಸುವುದೂ ಒಂದು ಮಹತ್ವದ ಕಾರ್ಯವೇ ಇರಬೇಕು.

(ಬ) **ಸಂಪುಟಿಕ ವೃಂತ :** (Seta) ಇದು ಉದ್ದ, ಗಾತ್ರ, ವ್ಯಾಸ ಮತ್ತು ಒಳ ರಚನೆ ಇತ್ಯಾದಿಗಳಲ್ಲಿ ವೈವಿಧ್ಯಪೂರ್ಣವಾಗಿರುವುದುಂಟು. ಇದು ಕೆಳಗಿನ ಪಾದವನ್ನೂ, ಮೇಲಿನ ಸಂಪುಟಿಕವನ್ನೂ ಕೂಡಿಸುವ ಸೇತುವೆಯಂತಿರುತ್ತದೆ. ಇದರ ಮೂಲಕವೇ ಆಹಾರಾದಿಗಳು ಮೇಲಕ್ಕೆ ಸಾಗಿಹೋಗಬೇಕು. ಮೇಲಾಗಿ ಸಂಪುಟಿಕವು ಬಿರಿದು ಬೀಜಾಣುಗಳು ಹೊರಬರುವ ವೇಳೆಗೆ ಈ ವೃಂತವು ಗಾಳಿಯಲ್ಲಿ ಅತ್ತಿತ್ತ ವಾಲಿ ಬೀಜಾಣುಗಳು ಸುಲಭ ಪ್ರಸಾರ ಹೊಂದಲೂ ಅನುಕೂಲವಾಗುವುದುಂಟು.

(ಕ) **ಸಂಪುಟಿಕ ಅಥವ ಕೋಶ :** (Capsule) ಇದು ತನ್ನ ಎಲ್ಲ ವಿಭಾಗಗಳಲ್ಲಿಯೂ ಅತ್ಯಂತ ವೈವಿಧ್ಯತೆಯನ್ನು ತೋರುತ್ತದೆ. ಉದಾಹರಣೆಗೆ ಕೋಶದ ಸುತ್ತಲಿನ ಭಿತ್ತಿ ಒಂದೇ ಪದರಿನಿಂದಾಗಿದ್ದು, ತುದಿಯಲ್ಲಿ ಮಾತ್ರ ಹಲವಾರು ಸಾಲಿನ ಪದರುಗಳಿರಬಹುದು. ಕೆಲವದರಲ್ಲಿ ಸುತ್ತಲೂ ಒಂದೇ ತೆರನಾಗಿ 2 ರಿಂದ 8 ಪದರುಗಳ ಭಿತ್ತಿ ಇರಬಹುದು. ಕೋಶ ಬಿರಿಯುವಿಕೆಯು ಅನಿಯಮಿತವಾಗಿಯೋ ಇಲ್ಲವೇ ಮೊದಲೇ ನಿಗದಿಪಡಿಸಿದಂತೆ ಸೀಳುವ 4 ಭಾಗ ಅಥವಾ ಕವಾಟುಗಳಾಗಿ (valves) ಇರಬಹುದು. ಸಂಪುಟಿಕದೊಳಗಿರುವ ಕೋಶಗಳೆಲ್ಲವೂ ಬೀಜಾಣುಗಳನ್ನು ಉತ್ಪಾದಿಸಬಹುದು ; ಇಲ್ಲವೆ ಅವುಗಳಲ್ಲಿ ಕೆಲವು, ಬೀಜಾಣುಗಳನ್ನು ಉತ್ಪಾದಿಸುವಲ್ಲಿ ವಿಫಲವಾಗಬಹುದು ; ಇಲ್ಲವೆ ಕೆಲವು, ದಾದಿ ಕೋಶಗಳಾಗಿ (Nurse cells) ವರ್ತಿಸಬಹುದು ; ಇಲ್ಲವೆ ಕೆಲವು, 'ಇಲೇಟರ್ಸ್' ಎಂಬ ವಿಶಿಷ್ಟ ಕೋಶಗಳಾಗಿ ಮಾರ್ಪಾಟಾಗಬಹುದು.

3. 'ಹಿಪಾಟಿಸಿ' ಅಥವಾ 'ಲಿವರ್‌ವರ್ಟ್ಸ್' (Hepaticeae or Liver-worts) ಎಂಬ ವರ್ಗಕ್ಕೆ ಸೇರಿದ 'ರಿಕ್ಸಿಯ' ಸಸ್ಯಗಳಲ್ಲಿ (Riccia) ಅತ್ಯಂತ ಕೆಳಮಟ್ಟದ ಹಾಗೂ ಸರಳ ರೂಪದ ಬೀಜಾಣುಜನಕವು ಕಾಣಸಿಕೊಳ್ಳುತ್ತದೆ. ಇದರಲ್ಲಿ ಹೊರಗೆ ಒಂದೇ ಪದರಿನ ಬರಡು ಕೋಶಗಳ ಕವಚವೊಂದು ಇರುತ್ತದೆ. ಉಳಿದ ಒಳಗಿನ ಕೋಶಗಳೆಲ್ಲ ಬೀಜಾಣುಜನಕ ಕೋಶಗಳೇ ಆಗಿರುತ್ತವೆ. ಆದರೆ ಬೀಜಾಣು

ಜನಕವು ಸಂಕೀರ್ಣತೆ ಹೊಂದುತ್ತ ಸಾಗಿದಂತೆ, ಕೆಲವು ಬೀಜಾಣು ಮಾತೃ ಕೋಶಗಳು ಬೀಜಾಣುಗಳನ್ನು ಉತ್ಪಾದಿಸುವ ತಮ್ಮ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತವೆ. ಅಂತಹ ಕೋಶಗಳೇ ಕ್ರಮೇಣ 'ಇಲೇಟಸ್' ಎಂಬ ವಿಶಿಷ್ಟ ಕೋಶಗಳನ್ನು ಹೋಲುತ್ತವೆ. ಇದು ಬೀಜಾಣು ಜನಕದ ಸಂಕೀರ್ಣತೆ ಮತ್ತು ವಿಕಾಸ ಕ್ರಮದಲ್ಲಿ ಮಹತ್ವದ ಹಂತವೆಂದು ಭಾವಿಸಬಹುದು. ಇಂತಹ ವಸ್ತುಸ್ಥಿತಿಯನ್ನು ಸಂಕೀರ್ಣತೆಯ ಶ್ರೇಣಿಯಲ್ಲಿ ಮೇಲೆ ಏರಿದಂತೆಲ್ಲ 'ಕಾರ್ಸಿನಿಯ' (Corsinea) ಸ್ಫೀರೊಕಾರ್ಪಸ್' (Sphaerocarpus) ಮುಂತಾದ ಸಸ್ಯಗಳ ಬೀಜಾಣು ಜನಕಗಳಲ್ಲಿ ಕಾಣಬಹುದು.

ಇನ್ನೂ ಸ್ವಲ್ಪ ಹೆಚ್ಚು ಪ್ರಗತಿ ಹಾಗೂ ಸಂಕೀರ್ಣತೆ ಹೊಂದಿದ ಬೀಜಾಣು ಜನಕವನ್ನು 'ಟಾರ್ಜಿಯೋನಿಯ' (Targionia) ಎಂಬ ಸಸ್ಯದಲ್ಲಿ ಕಾಣಬಹುದು. ಅದರಲ್ಲಿ ಕೆಳಗೆ ಅಗಲವಾದ ಪಾದ (Bultonj foot) ಮಧ್ಯದಲ್ಲಿ ಕಿರಿದಾದ ಸಂಪುಟಿಕ ವೃಂತ (Narrow Seta) ಮತ್ತು ತುದಿಯಲ್ಲಿ ಒಂದೇ ಪದರಿನ ಕವಚವುಳ್ಳ ಸಂಪುಟಿಕವು (Single layered carsule) ಕಂಡು ಬರುತ್ತದೆ. ಅದರ ನೆತ್ತಿಯು ಮಾತ್ರ ಹಲವಾರು ಸಾಲಿನ ಕೋಶಗಳಿಂದಾಗಿರುವುದುಂಟು. ಸಂಪುಟಿಕದೊಳಗೆ ಅನೇಕ "ಇಲೇಟರ್ಸ್" ಗಳೂ ಬೀಜಾಣುಗಳೊಂದಿಗೆ ಬೆರೆತಂತೆ ಇರುತ್ತವೆ.

ಇನ್ನೂ ಸ್ವಲ್ಪ ಸುಧಾರಿಸಿದ ಹಾಗೂ ಸಂಕೀರ್ಣತೆ ಹೊಂದಿದ ಬೀಜಾಣು ಜನಕವನ್ನು "ಮಾರ್ಕಾಂಷಿಯ" (Marchantia) ಎಂಬ ಸಸ್ಯದಲ್ಲಿ ಕಾಣಬಹುದು. ಇದರಲ್ಲಿ ಭ್ರೂಣದ ಕೆಳಗಿನ ಅರ್ಧಭಾಗವು ಲಂಗರಿನಂತಹ ದೊಡ್ಡ ಪಾದವಾಗಿಯೂ ಮತ್ತು ಸಂಪುಟಿಕ ವೃಂತದ ಸ್ವಲ್ಪ ಭಾಗವಾಗಿಯೂ ರೂಪಾಂತರ ಹೊಂದುತ್ತದೆ. ಭ್ರೂಣದ ಮೇಲಿನ ಅರ್ಧ ಭಾಗವು ಸಂಪುಟಿಕ ವೃಂತದ ಉಳಿದರ್ಧ ಭಾಗವಾಗಿಯೂ ಮತ್ತು ಇಡೀ ಸಂಪುಟಿಕವಾಗಿಯೂ ಮಾರ್ಪಾಟಾಗುವುದುಂಟು. ಸಂಪುಟಿಕದ ಹೊರಮೈ ಆದರೂ ಒಂದೇ ಪದರಿನ ಕವಚವಾಗಿದ್ದು, ಅದರ ನೆತ್ತಿಯ ಮೇಲೆ ಮಾತ್ರ ಹಲವಾರು ಸಾಲಿನ ಕೋಶಗಳಿರುತ್ತವೆ. ಸಂಪುಟಿಕದೊಳಗಿನ ಕೋಶಗಳಲ್ಲಿ ಸುಮಾರು ಅರ್ಧದಷ್ಟು ಭಾಗ ಬೀಜಾಣುಗಳಾಗಿಯೂ, ಇನ್ನುಳಿದ ಅರ್ಧ ಭಾಗವು "ಇಲೇಟರ್ಸ್" ಎಂಬ ವಿಶಿಷ್ಟ ಕೋಶಗಳಾಗಿಯೂ ಪರಿವರ್ತನೆ ಹೊಂದುತ್ತವೆ.

ಮುಂದೆ "ಜುಂಗರ್ ಮೇ ನಿಯೇಲಿಸ್" (Jungermaniales) ಎಂಬ ವರ್ಗದಲ್ಲಿ ಇನ್ನೂ ಹೆಚ್ಚು ಸುಧಾರಿಸಿದ ಹಾಗೂ ಸಂಕೀರ್ಣತೆ ಹೊಂದಿದ ಬೀಜಾಣುಜನಕವು ಅಸ್ತಿತ್ವಕ್ಕೆ ಬರುತ್ತದೆ. ಇದರ ಬೀಜಾಣುಜನಕದಲ್ಲಿ ಸ್ಪಷ್ಟ ಹಾಗೂ ಪ್ರತ್ಯೇಕವಾದ ಪಾದ, ಸಂಪುಟಿಕವೃಂತ, ಮತ್ತು ಸಂಪುಟಿಕ ವಲಯ ಇತ್ಯಾದಿಗಳು ರೂಪುಗೊಳ್ಳುತ್ತವೆ. ಮೇಲಾಗಿ ಸಂಪುಟಿಕದೊಳಗೆ ನಿಜವಾಗಿಯೂ ಬೀಜಾಣುಗಳನ್ನು ಉತ್ಪಾದಿಸುವ ಕೋಶಗಳು, ಇಡೀ ಬೀಜಾಣು ಜನಕದ ಒಂದು ಅಲ್ಪಾಂಶವಾಗಿಯಷ್ಟೇ ಉಳಿಯುತ್ತವೆ.

ಅದೂ ಅಲ್ಲದೆ ಬೀಜಾಣುಜನಕದ ಬೆಳವಣಿಗೆ ಮತ್ತು ರೂಪರಚನೆಯಲ್ಲಿಯೂ ಸಾಕಷ್ಟು ವೈವಿಧ್ಯತೆಗಳು ಕಂಡು ಬರುತ್ತವೆ. ಸಂಪುಟಿಕದ ಭಿತ್ತಿಯೂ 1 ರಿಂದ 8 ಪದರುಗಳಷ್ಟು ಕೋಶಗಳಿಂದಾಗಿದ್ದು, ತುದಿಯು 4 ಕವಾಟುಗಳಾಗಿ ವ್ಯವಸ್ಥಿತ ರೀತಿಯಲ್ಲಿ ಬಿರಿಯುವುದುಂಟು. ಜತೆಗೆ "ಪೆಲ್ಲಿಯ" (Pellia) ದಂತಹ ಸಸ್ಯದಲ್ಲಿ ಸಂಪುಟಿಕದ ಕೆಳಗಿನಿಂದ "ಇಲೇಟರ್ಸ್" ಎಂಬ ಬರಡು ಕೋಶಗಳೂ, "ರಿಸ್ಸಿಯಾರ್ಡಿಯ" (Ricciardia) ಎಂಬ ಸಸ್ಯದಲ್ಲಿ ಸಂಪುಟಿಕದ ಮೇಲಿನಿಂದ "ಇಲೇಟರ್ಸ್" ಎಂಬ ಕೋಶಗಳೂ ರೂಪುಗೊಳ್ಳುವುದುಂಟು.

ಇನ್ನು ಮುಂದೆ ಅಥವಾ ಮೇಲೆ ಹೋದರೆ,"ಅಂತಾಸಿರಾಸ್"(Anthoceros) ಎಂಬ ಸಸ್ಯಗಳಲ್ಲಿ ಮತ್ತಷ್ಟು ಸುಧಾರಿಸಿದ ಮತ್ತು ವೈಶಿಷ್ಟ್ಯತೆ ಪಡೆದ ಬೀಜಾಣು ಜನಕವು ಕಂಡುಬರುತ್ತದೆ. ಅದರಲ್ಲಿ ಕೆಳಗೆ ಗೋಲಾಕಾರದ ಚಿಕ್ಕ ಪಾದವೊಂದು ಲಿಂಗಾಣುಜನಕ ಸಸ್ಯದಲ್ಲಿ ಹುದುಗಿರುತ್ತದೆ. ಅದರ ಮೇಲೆ ನಳಿಕೆಯಾಕಾರದ ಹಾಗೂ ಉದ್ದನೆಯ ಸಂಪುಟಿಕವೊಂದು ಬೆಳೆಯುತ್ತದೆ. ಇವೆರಡರ ನಡುವೆ, ಅರ್ಥಾತ್ ಸಂಪುಟಿಕ ಮತ್ತು ಪಾದದ ಮಧ್ಯೆ, ವರ್ಧಮಾನ ಸ್ಥಿತಿಯಲ್ಲಿರುವ ಕೋಶಗಳು (meristematic cells) ಇರುತ್ತವೆ. ಸಂಪುಟಿಕದ ಹೊರಮೈಯಲ್ಲಿ ಹಲವಾರು ಪದರುಗಳ ಹಾಗೂ ಆಹಾರ ಸಂಶ್ಲೇಷಿಸಬಲ್ಲ ಪ್ಯಾರೆಂಕೈಮಾ ಕೋಶಗಳೂ, ಅವುಗಳಲ್ಲಿ ಅಲ್ಲಲ್ಲೇ ಕೆಲವು ಸೂಕ್ಷ್ಮ ಪತ್ರರಂಧ್ರಗಳೂ (Stomata) ಮತ್ತು ಒಳಗೆ ವಾಯುಭರಿತ ಕೋಶಾವಕೋಶಗಳೂ (Inter cellular Spaces with air) ಇತ್ಯಾದಿಗಳೆಲ್ಲ ಉಂಟು. ಅದಕ್ಕೂ ಒಳಗಿನ ಭಾಗದಲ್ಲಿ ಕಿರಿದಾಗಲದ ಉದ್ದನೆಯ ಪಟ್ಟಿಯಂತಿರುವ "ಬೀಜಾಣು" (Spores) ಮತ್ತು ಇಲೇಟರ್ಸ್ (elaters) ಗಳನ್ನು ಉತ್ಪಾದಿಸಬಲ್ಲ ಬೀಜಾಣು ಜನಕೋಶಗಳು ಇರುವುದುಂಟು. ಇದಕ್ಕೂ ಒಳಗೆ ಅಂದರೆ – ನಟ್ಟನಡುವೆ 'ಬರಡು ಸ್ಥಂಭಿಕ' (Sterile columella) ಎಂಬ ಉದ್ದುದ್ದನೆಯ ಸರಳ ಕೋಶಗಳು ಇರುತ್ತವೆ. ಹೀಗಾಗಿ ಬೀಜಾಣು ಜನಕದಲ್ಲಿ ಬೀಜಾಣುಜನ ಕೋಶಗಳು ಅತ್ಯಲ್ಪ ಮಿತಿ ಅಥವಾ ಪ್ರಮಾಣಕ್ಕೆ ಇಳಿಯುವುದು. ಅಲ್ಲದೆ, ಬೀಜಾಣು ಜನಕವೇ ಅನಿರ್ಬಂಧಿತವಾಗಿ ಬೆಳೆಯಬಲ್ಲ ಸಾಮರ್ಥ್ಯವನ್ನೂ ಮತ್ತು ಕೆಲಮಟ್ಟಿಗೆ ಹರಿದ್ರೇಣು, ಪತ್ರರಂಧ್ರ, ವಾಯುಕೋಶಾವಕೋಶ ಇತ್ಯಾದಿಗಳನ್ನೂ ಹೊಂದಿ, ತನ್ನಷ್ಟಕ್ಕೆ ತಾನೇ ಕೆಲಮಟ್ಟಿಗೆ ಸ್ವತಂತ್ರವಾಗಿರಬಲ್ಲ ಅರೆ ಸಾಮರ್ಥ್ಯವನ್ನು ಗಳಿಸಿಕೊಳ್ಳುತ್ತದೆ. ಬೀಜಾಣು ಜನಕದಲ್ಲಿ ಅಳವಡಿಕೆಯಾಗಿರುವ ಇಂತಹ ವಿಶೇಷ ಗುಣಗಳೇ 'ಬ್ರಯೊಫೈಟ್' ಗುಂಪಿನ 'ಅಂತಸಿರಾಸ್' (Anthaceros) ಸಸ್ಯಗಳಿಗೂ ಮತ್ತು 'ಟೆರಿಡೊಫೈಟ್' ಗುಂಪಿನ 'ಸೈಲೊಫೈಟೇಲಿಸ್' (Psilophytales) ವರ್ಗದ ಸಸ್ಯಗಳಿಗೂ ಸ್ವಲ್ಪ ಸಾಮ್ಯ–ಸಂಬಂಧ ಇದೆಯೆಂಬುದನ್ನು ಸೂಚಿಸುತ್ತವೆ.

ವಿಕಾಸ ಶ್ರೇಣಿಯಲ್ಲಿ ಇನ್ನೂ ಮುಂದೆ ಅಥವಾ ಮೇಲೆ ಹೋದರೆ, ಬ್ರಯೊಫೈಟ್ ಗುಂಪಿನಲ್ಲಿಯೇ ಅತ್ಯುಚ್ಚ ವರ್ಗದ 'ಮಾಸಸ್' ಅಥವಾ 'ಮಸ್ಸೈ' (Mosses or Musei) ಎಂಬ ಸಸ್ಯಗಳಲ್ಲಿ ಮೇಲೆ ನಮೂದಿಸಿದ ಗುಣ ವಿಶೇಷಗಳೇ ಮತ್ತಷ್ಟು ಸ್ಫುಟವಾಗಿರುವುದು ಕಂಡುಬರುತ್ತದೆ. ಉದಾಹರಣೆಗೆ, 'ಫ್ಯುನೇರಿಯ' (Funaria) ಅಥವಾ 'ಪಾಲಿಟ್ರೈಕಮ್' (Polytrichum) ಮುಂತಾದ ಸಸ್ಯಗಳಲ್ಲಿ ಬೀಜಾಣು ಜನಕದ ಪಾದವು ಕಿರಿದಾಗಿದ್ದು ಅದು ಅಂಗಾಣು ಜನಕದ ತುದಿಗೆ ಅಂಟಿಕೊಂಡಿರುತ್ತದೆ. ಸಂಪುಟಿಕ ವೃಂತವು ಬಹು ನೀಳವೂ, ಎತ್ತರವೂ ಆಗಿದ್ದು, ಗಾಳಿಯಲ್ಲಿ ಬೇಕಾದ ಹಾಗೆ ಬಳುಕುವ ಸಾಮರ್ಥ್ಯ ಪಡೆದಿರುತ್ತದೆ. ಮೇಲಾಗಿ ಅದು ಸಂಪುಟಿಕವನ್ನು ಅಂಗಾಣು ಜನಕದಿಂದ ಸಾಕಷ್ಟು ಮೇಲೆ ಎತ್ತಿ ಹಿಡಿಯುತ್ತದೆ. ಇದರಿಂದ ಮುಂದೆ ಬೀಜಾಣುಗಳು ಸುಲಭವಾಗಿ ಹೊರಬಂದು ದೂರ ಸಾಗಿ ಹೋಗಬಲ್ಲವು. ಸಂಪುಟಿಕದಲ್ಲಿ ಕೋಶ ವಿತರಣೆಗಳೆಲ್ಲ 'ಆಂತಸಿರಾಸ್' ಸಸ್ಯದಲ್ಲಿದ್ದಂತೆಯೇ ಇರುವುದುಂಟು. ಜತೆಗೆ ಸಂಪುಟಕದ ತುದಿಯಲ್ಲಿ ವೃತ್ತಾಕಾರದ 'ಒಪರ್‌ಕ್ಯೂಲಮ್' (Operculum) ಎಂಬ ಒಂದು ಮುಚ್ಚಳವಿರುತ್ತದೆ. ಅದು ಕಳಚಿ ಬಿದ್ದಮೇಲೆ ಒಳಗಿನ 2 ಸಾಲುಗಳ ಹಲ್ಲುಗಳು (Peristomial teeth) ಸೆಟೆದು ನಿಂತು, ಸಂಪುಟಿಕದ ಬಾಯಿ ತೆರೆಯುವಂತಾಗುತ್ತದೆ. ಆಗ ಒಳಗಿನ ಬೀಜಾಣುಗಳು ಸ್ವಲ್ಪ ಸ್ವಲ್ಪವಾಗಿ ಹೊರಬರಲು ಅನುಕೂಲವಾಗುತ್ತದೆ. ಸಂಪುಟಿಕದ ಹೊರ ಮೈಯಲ್ಲಿ ಹರಿದ್ರೇಣುಗಳುಳ್ಳ ಕೋಶಗಳು, ಪತ್ರರಂಧ್ರಗಳು ಇತ್ಯಾದಿಗಳೆಲ್ಲಾ ಇರುವುದರಿಂದ, ಅವು ಆಹಾರ ತಯಾರಿಕೆಗೆ ಕೆಲಮಟ್ಟಿಗೆ ಪೋಷಕವಾಗಿರುತ್ತವೆ. ಹೀಗಾಗಿ ಬೀಜಾಣು ಜನಕವು ಲಿಂಗಾಣು ಜನಕದ ಮೇಲೇ ಇದ್ದರೂ, ತುಸುಮಟ್ಟಿಗೆ ಆಹಾರ ತಯಾರಿಕೆಯ ದೃಷ್ಟಿಯಿಂದಲಾದರೂ ಸ್ವತಂತ್ರವಾಗಿರುತ್ತದೆ. ಒಳಗೆ ಬರಡು ಕೋಶಗಳಿಂದಾದ ಸ್ಥಂಭಿಕವು (Sterile columella) ಆಹಾರಾದಿಗಳನ್ನು ಸಾಗಿಸಲು ಸಮರ್ಥವಾಗಿರುತ್ತದೆ. ಪ್ರಾಯಶಃ ಇದೇ ಮುಂದೆ 'ಟೆರಿಡೊಫೈಟ್' ಗುಂಪಿನ ಸಸ್ಯಗಳಲ್ಲಿ ನೀರ್ನಾಳ (Xylem) ಮತ್ತು ಆಹಾರನಾಳ (Phloem) ಎಂಬ ನಾಳಮಯ ಕೋಶಗಳಾಗಿ ರೂಪಾಂತರ ಹೊಂದುವುದು.

ವಿಗತಿ ರೂಪದ ವಿಕಾಸ ತತ್ವ : (Theory of Retrogressive evolution)

ಆದರೆ 1919ರಲ್ಲಿ 'ಕಾಶ್ಯಪ' (Kashyap) ಮತ್ತು 'ಚರ್ಚ್' (Church), 1930ರಲ್ಲಿ 'ಗೊಬೆಲ್' (Goebel) ಮತ್ತು 1939ರಲ್ಲಿ 'ಇವಾನ್ಸ್' (Evans) ಎಂಬುವರೆಲ್ಲ ಬ್ರಯೊಫೈಟ್ ಗುಂಪಿನ ಸಸ್ಯಗಳ ಬೀಜಾಣು ಜನಕಗಳು ವಿಕಾಸ ಶ್ರೇಣಿಯಲ್ಲಿ ಕೆಳಮುಖವಾಗಿ ಅಥವಾ ಹಿಂಬದಿಯಾಗಿ ಸಾಗಿದಂತೆ ತೋರುತ್ತದೆ ಎಂದು ವಾದಿಸುವುದುಂಟು. ಅದರಿಂದ ಇಂದಿನ 'ಹಿಪಾಟಿಸಿ' (Hepaticeae) ವರ್ಗದ

ಬೀಜಾಣು ಜನಕಗಳು ಅತಿ ಸರಳ ಹಾಗೂ ಆರಂಭ ಮಟ್ಟದ್ದಾಗಿವೆ, ಎಂಬುದನ್ನಾಗಲೀ, ಅಂತಹವುಗಳಿಂದಲೇ 'ಮಾರ್ಕಾಂಷಿಯು' (Marchamtia) ಮತ್ತು 'ಆಂತಾಸಿರಾಸ್' (Anthoceros) ಸಸ್ಯಗಳ ಬೀಜಾಣು ಜನಕಗಳು ಹೆಚ್ಚೆಚ್ಚು ಸಂಕೀರ್ಣತೆ ಹೊಂದಿ ಪ್ರಗತಿದಾಯಕ ವಿಕಾಸ ಕ್ರಮದಲ್ಲಿ ಮುಂದೆ ಸಾಗಿವೆ, ಎನ್ನುವುದಾಗಲೀ ಸರಿಯಲ್ಲ. ಬದಲಾಗಿ ಈ ಸರಳ ರೂಪದ ಬೀಜಾಣು ಜನಕಗಳು ವಿಗತಿದಾಯಕ ವಿಕಾಸ ಕ್ರಮದಲ್ಲಿ ಹಿಂದೆ ಸಾಗಿ, ಕಡೆಗೆ ಅತ್ಯಂತ ಕ್ಷೀಣ ಹೊಂದಿವೆ ಎಂದು ಭಾವಿಸಬೇಕು, ಎನ್ನುವುದು ಅವರ ವಾದ.

'ಚರ್ಚ್' (Church) ಎಂಬಾತನು 1919ರಲ್ಲಿ ಹೀಗೆ ಪ್ರತಿಪಾದಿಸಿದ್ದಾನೆ. ಬ್ರಯೊಫೈಟ್ ಗುಂಪಿನ ಸಸ್ಯಗಳಲ್ಲಿ ಹಿಂದಿನ ಅಥವಾ ಪೂರ್ವಜ ಬೀಜಾಣು ಜನಕಗಳೆಲ್ಲ ಅತ್ಯಂತ ಸಂಕೀರ್ಣತೆ ಹೊಂದಿ ಸ್ವತಂತ್ರವಾದುವೇ ಆಗಿದ್ದವು. ಅವುಗಳಲ್ಲಿ ವಿಗತಿದಾಯಕ ವಿಕಾಸ ಕ್ರಮ ಆರಂಭವಾಗಿ, ಕಡೆಗೆ ಅತ್ಯಂತ ಸರಳ ರೂಪದ ಬೀಜಾಣು ಜನಕಗಳು ಕಾಣಿಸಿಕೊಂಡವು. ಅಂತಹವುಗಳನ್ನೇ ನಾವು ಇಂದು 'ಹಿಪಾಟಿಸಿ' ಎಂಬ ವರ್ಗದಲ್ಲಿ, ಅದರಲ್ಲಿಯೂ, 'ರಿಕ್ಸಿಯು' (Riccia) ಎಂಬ ಸಸ್ಯಗಳಲ್ಲಿ ಕಾಣುತ್ತೇವೆ. ಅಂತಹ ಸಂಕೀರ್ಣ ಬೀಜಾಣು ಜನಕಗಳಲ್ಲಿ ಉಂಟಾದ ಕ್ಷೀಣತೆಯ ಹಂತ ಹಂತ ಬದಲಾವಣೆಗಳೆಂದರೆ—

1. ಅತೀವ ಆರ್ದ್ರತಾ ಶೋಷಣೆ ಅಥವಾ ನಿರ್ಜಲೀಕರಣದ ನಿಮಿತ್ತ ರಕ್ಷಾಕವಚ ಹೊಂದುವಿಕೆಯಿಂದ ಉಂಟಾದ ಎಲೆಗಳ ನಾಶ (Loss of leaves through intense descication and insulation).
2. ಲಿಂಗಾಣು ಜನಕದ ಮೇಲೆ ವಿಪರೀತ ಅವಲಂಬನೆ ಹೊಂದಿದುದರಿಂದ ಆಹಾರ ಸಂಶ್ಲೇಷಣಾ ಕೋಶ ವ್ಯವಸ್ಥೆಯಲ್ಲಿ ವಾಯು ತುಂಬಿದ ಕೋಶಾವಕೋಶಗಳು ಕಣ್ಮರೆಯಾದುದು.
3. ಆಹಾರ ಸಂಶ್ಲೇಷಣಾ ಕೋಶಗಳೇ ಕಡಿಮೆಯಾಗುತ್ತ ಬಂದುದು.
4. ಸೂಕ್ಷ್ಮ ಪತ್ರರಂಧ್ರಗಳು (Stomata) ಕೇವಲ ಅವಶೇಷದ ಕುರುಹುಗಳಾಗಿ (Vestigial structures) ಉಳಿದು, ಕಡೆಗೆ ಸಂಪೂರ್ಣ ಅದೃಶ್ಯವಾಗುತ್ತ ಬಂದುದು.
5. ಸಂಪುಟಿಕದಲ್ಲಿ ಬಿರಿಯುವ ಸಾಧನವು ಅತ್ಯಂತ ಸರಳವೂ ಸುಲಭವೂ ಆಗುತ್ತ ಬಂದುದು.
6. ಸಂಪುಟಿಕದ ಭಿತ್ತಿಯಲ್ಲಿ ಆಹಾರ ಸಂಶ್ಲೇಷಿಸುವ ಹಸಿರು ಕೋಶಗಳು ಕ್ಷೀಣಿಸುತ್ತ ಬಂದುದು.

7. ಸಂಪುಟಿಕ ಭಿತ್ತಿಯು ಮಂದ ಅಥವಾ ದಪ್ಪ ಇಳಿಮುಖವಾಗುವುದರ ಜತೆಗೆ, ಆ ಕೋಶಗಳಲ್ಲಿ ಯಾವುದೇ ತರಹದ ಲೇಪನ ಇಲ್ಲವೆ ವಿಶಿಷ್ಟ ರಚನೆಗಳು ಇಲ್ಲದಂತಾದುದು.

8. ಸಂಪುಟಿಕ ವೃಂತದ ಉದ್ದವೇ ಕ್ರಮೇಣ ಕಿರಿದಾಗುತ್ತ, ಕಡೆಗೆ ವೃಂತ ಮತ್ತು ಪಾದ ಅತ್ಯಲ್ಪವಾದುದು.

9. ಬೀಜಾಣು ಜನಕೋಶಗಳು ಸಾಮರ್ಥ್ಯ ಮತ್ತು ಸಾರವತ್ತತೆ ಹಂತ ಹಂತವಾಗಿ ವರ್ಧಿಸುತ್ತ ಹೋದುದು. ಇದರಿಂದ ಸಂಪುಟಿಕದಲ್ಲಿರುವ ಎಲ್ಲ ಕೋಶಗಳೂ ಬೀಜಾಣುಗಳನ್ನು ಉತ್ಪಾದಿಸುವ ಸಾಮರ್ಥ್ಯ ಪಡೆಯುತ್ತ ಹೋದುದು. ಅಂತೆಯೇ ಬರಡು ಕೋಶಗಳೇ ಆಗಲೀ, 'ಇಲೇಟಸ್'ಗಳೇ ಆಗಲೀ, ಕ್ರಮೇಣ ಇಲ್ಲದಂತಾದುದು...ಇತ್ಯಾದಿ.

'ಆಂತಸಿರೊಟೇಲಿಸ್' (Anthocerotales) ಎಂಬ ವರ್ಗದ ಸಸ್ಯಗಳ ಬೀಜಾಣು ಜನಕಗಳು, ಪ್ರಗತಿದಾಯಕ ವಿಕಾಸ ಕ್ರಮದ ದೃಷ್ಟಿಯಿಂದ ಉಚ್ಚಮಟ್ಟದವೆನಿಸಿದರೂ, ವಿಗತಿದಾಯಕ ವಿಕಾಸ ಕ್ರಮದ ದೃಷ್ಟಿಯಿಂದ ಹಿಂದುಳಿದವೂ, ಕೆಳಮಟ್ಟದವೂ ಆಗಿವೆಯೆಂಬ ಒಂದು ವಾದ ಸರಣಿಯುಂಟು. ಏಕೆಂದರೆ 'ಆಂತಾಸಿರಾಸ್' ನಂತಹ ಕೆಲವು ಸಸ್ಯಗಳ ಬೀಜಾಣುಜನಕದ ಸಂಪುಟಿಕದಲ್ಲಿ ಸೂಕ್ಷ್ಮ ಪತ್ರರಂಧ್ರಗಳುಳ್ಳ ದಪ್ಪ ಬಹಿಶ್ಚರ್ಮವೂ, ಅದರೊಳಗೆ ವಾಯು ತುಂಬಿದ ಕೋಶಾವಕಾಶಗಳೂ, ಕೆಲಮಟ್ಟಿಗೆ ಆಹಾರ ಸಂಶ್ಲೇಷಿಸಬಲ್ಲ ಹಸಿರು ಕೋಶಗಳೂ ಇರುವುದುಂಟು. ಇದೇ ವರ್ಗಕ್ಕೆ ಸೇರಿದ ಇನ್ನಿತರ ಕೆಲವು ಸಸ್ಯಗಳಲ್ಲಿ ಹಸಿರು ಕೋಶಗಳಿದ್ದರೂ, ಪತ್ರರಂಧ್ರಗಳು ಮಾತ್ರ ಇರದೇ ಹೋಗುವುದೂ ಉಂಟು. ಇವೆಲ್ಲ ಬೀಜಾಣುಜನಕವು ವಿಗತಿದಾಯಕ ವಿಕಾಸ ಕ್ರಮದಲ್ಲಿ ಹಿಂದುಳಿದಿದೆ ಎಂದು ಸಾರುವ ಲಕ್ಷಣಗಳು.

'ಹಿಪಾಟಿಸಿ' (Hepaticeae) ವರ್ಗದ ಬೀಜಾಣುಜನಕಗಳೆಲ್ಲ 'ಆಂತಸಿರೊಟೇಲಿಸ್' ವರ್ಗದ ಬೀಜಾಣುಜನಕಗಳಿಗಿಂತ ಹೆಚ್ಚು ಕ್ಷೀಣವಾಗಿದ್ದು, ಅವು ವಿಗತಿದಾಯಕ ವಿಕಾಸ ಕ್ರಮದ ದೃಷ್ಟಿಯಿಂದ ಮುಂದುವರೆದಂತಹವು ಎಂಬ ಭಾವನೆಯೂ, ವಾದಸರಣಿಯೂ ಇದೆ.

1939ರಲ್ಲಿ 'ಬೋಲ್ಡ್' (Bold) ಎಂಬಾತನು ಹೀಗೆ ಪ್ರತಿಪಾದಿಸಿದ್ದಾನೆ, "ಬೀಜಾಣುಜನಕದ ಹಂತದಲ್ಲಿ ದ್ಯುತಿಸಂಶ್ಲೇಷಣೆಯಿಂದ ತನ್ನ ಆಹಾರವನ್ನು ತಾನೇ ತಯಾರಿಸಿಕೊಳ್ಳುವ ಸಾಮರ್ಥ್ಯವು ಒಂದು ಆದಿ ಲಕ್ಷಣವೇ (Primitive Character) ಹೊರತು ಬೀಜಾಣುಜನ ಕೋಶಗಳು ಬೀಜ ನಾಶನ ಹೊಂದುವಾಗ (Sterlization

of Sporogenous Cells) ಪಡೆದ ಉತ್ತರೋತ್ತರ ಹಾಗೂ ಮರುಲಕ್ಷಣಗಳೇನಲ್ಲ. (not a Secondary altrimte)."

1939 ರಲ್ಲಿಯೇ 'ಇವಾನ್ಸ್' (Evans) ಎಂಬಾತನು ಹೀಗೆ ಅಭಿಪ್ರಾಯ ಪಟ್ಟಿದ್ದಾನೆ:

"ಬೀಜಾಣುಜನಕದ ಬೆಳವಣಿಗೆ ಕುಂಠಿತವಾಗದಂತೆ, ಮತ್ತು ಅದರ ಅವಲಂಬನೆ ಲಿಂಗಾಣುಜನಕದ ಮೇಲೆ ಹೆಚ್ಚಾದಂತೆ ಆಹಾರಸಂಶ್ಲೇಷಣಾಕೋಶಗಳಲ್ಲಿ ವಾಯುಕೋಶಗಳು ಅದೃಶ್ಯವಾಗುತ್ತ ಬಂದವು. ಪಸಿರು ಕೋಶಗಳ ಸಂಖ್ಯಾ ಪ್ರಮಾಣವು ಕಡಿಮೆಯಾಗುತ್ತ ಹೋಯಿತು. ಪತ್ರರಂಧ್ರಗಳು ತಮ್ಮ ಕಾರ್ಯ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತ ಹೋಗಿ, ಕಡೆಗೆ ಅದೃಶ್ಯವಾದವು. ಹೀಗೆ 'ಆಂತಸಿರೊಟೀಲಿಸ್' ವರ್ಗದ ಬೀಜಾಣುಗಳಿಗಿಂತ 'ಮಾರ್ಕಾಂಷಿಯೇಲಿಸ್' ಮತ್ತು 'ಜುಂಗರ್‌ಮೇನಿಯೇಲಿಸ್' ವರ್ಗದ ಬೀಜಾಣುಜನಕಗಳು ಸಾಕಷ್ಟು ಕ್ಷೀಣವೂ ಸರಳವೂ ಆಗುತ್ತ ಬಂದವು. ಕಡೆಗೆ 'ಓಪಾಟಿಸಿ' ವರ್ಗದ 'ರಿಕ್ಸಿಯ' ಎಂಬ ಸಸ್ಯದ ಬೀಜಾಣುಜನಕಗಳಲ್ಲಿ ಈ 'ಕ್ಷೀಣತೆ' (Reduction) ಎಂಬುದು ಪರಾಕಾಷ್ಠತೆಯನ್ನು ಮುಟ್ಟಿದೆ. ವಿಗತಿದಾಯಕ ವಿಕಾಸ ಕ್ರಮದಲ್ಲಿ ಇವೆಲ್ಲ ಹಂತ ಹಂತವಾಗಿ ಹಾಗೂ ಹಿಂಬರಿಕೆಯಾಗಿ ಉಂಟಾದ ಮಹತ್ವದ ಘಟನೆಗಳು."

ಒಟ್ಟಿನಲ್ಲಿ ಬ್ರಯೊಫೈಟ್ ಗುಂಪಿನ 'ರಿಕ್ಸಿಯ' ಸಸ್ಯಗಳಲ್ಲಿರುವ ಬೀಜಾಣು ಜನಕಗಳು ಅತ್ಯಂತ ಸರಳವಾಗಿರುವುದೇನೋ ನಿಜ. ಆದರೆ ಅವು ವಿಕಾಸ ದೃಷ್ಟಿಯಿಂದ ಕೆಳಮಟ್ಟದವು ಅಥವಾ ಆರಂಭ ಹಂತದವು ಎನ್ನಬೇಕೇ, ಇಲ್ಲವೆ ಅತ್ಯುಚ್ಚಮಟ್ಟದವು ಎನ್ನಬೇಕೇ ಎಂಬುದು ಒಂದು ಜ್ವಲಂತ ಜೀವ ವೈಜ್ಞಾನಿಕ ಜಿಜ್ಞಾಸೆ. ಇದನ್ನು ಪುಷ್ಟೀಕರಿಸುವ ಹಾಗೂ ನಿರಾಕರಿಸುವ 2 ಗುಂಪುಗಳೂ ಉಂಟು. ಅವರ ಅಭಿಪ್ರಾಯದಲ್ಲಿ ವಿಕಾಸವೇ 2 ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಸಾಗುವುದುಂಟು. (1) ಪ್ರಗತಿದಾಯಕ ವಿಕಾಸ ಕ್ರಮ (Progressive evolution) (2) ವಿಗತಿದಾಯಕ ವಿಕಾಸ ಕ್ರಮ (Reprogressive evolution).

ಹೀಗಾಗಿ 'ರಿಕ್ಸಿಯ'ದ ಬೀಜಾಣುಜನಕವು ಪ್ರಗತಿದಾಯಕ ವಿಕಾಸ ಕ್ರಮದಲ್ಲಿ ಅತಿ ಕೆಳಮಟ್ಟದ್ದೂ, ಆರಂಭ ಹಂತದ್ದೂ ಎನ್ನುವುದು ಒಂದು ವಾದ ಮತ್ತು ಗುಂಪು. ಆದರೆ ವಿಗತಿದಾಯಕ ವಿಕಾಸ ಕ್ರಮದಲ್ಲಿ ಅದು ಉಚ್ಚ ಮಟ್ಟದ್ದು ಮತ್ತು ಕೊನೆಯ ಹಂತದ್ದು ಎನ್ನುವುದು ಮತ್ತೊಂದು ವಾದ ಮತ್ತು ಗುಂಪು. ಇದು ಒಂದೇ ಸಮಸ್ಯೆಯನ್ನು 2 ಭಿನ್ನ ದೃಷ್ಟಿಕೋನಗಳಿಂದ ನೋಡುವ ಮಾದರಿ ಎನ್ನಬಹುದಲ್ಲವೇ !

ನೆಲವಿಲ್ಲದೆ ಬೇರಿಲ್ಲ

ಜಯಸುದರ್ಶನ

ಇರಲಿಲ್ಲ ಇದೂ. ಇಲ್ಲಾವುದೂ,
ಬರೇ ನೆರೆ ನಂಬಿ ನಿಂತ ಅನಂತ
ಪ್ರಶ್ನೆ. ಅನಂತದುದ್ದಕ್ಕು ಇಲ್ಲದ ದಿಕ್ಕುಗಳ
ವಾಕ್ಕುಗಳ, ಕತ್ತಲಲ್ಲೇ ತನ್ನ ಕಂಡುಕೊಂಡ ಬೆಳಕಿನ
ಕಾಣ್ಕೆ; ವಸ್ತು, ಸ್ಥಿತಿ.
ನಂಬಬೇಕು ಯಾವನ್ನು ಎಂಬುದು ಇನ್ನೊಂದು ಪ್ರಶ್ನೆಯಾದರೂ
ಮೊದಲು ನಂಬಿಕೆಯದೇ ಪ್ರಶ್ನೆ–
ಶೂನ್ಯದಲ್ಲೇ ಮೂಡಿ, ಅಲ್ಲೇ ತೂಗಾಡುವ
ಗ್ರಹ–ನೀಹಾರಿಕೆಗಳ ಹಾಗೆ; ಪ್ರಶ್ನೆಗೆ
ಉತ್ತರ ಪ್ರಶ್ನೆಯಲ್ಲೇ.

ಅಲ್ಲಿರಲಿಲ್ಲ ಹೊತ್ತು,
ಸೂರ್ಯ, ಚಂದ್ರ, ತಾರೆಗಳ ತಿರುಗಣೆಯು ಬೆಪ್ಪಾಗಿ ನೋಡುತ್ತಿದ್ದ
ಸೊನ್ನೆ ದಿಕ್ಕಾಪಾಲು;
ಕಣ್ಣು ಹುಟ್ಟುವ ಮುಂಚೆ ಬೆಳಕಿನ ಹುಟ್ಟು
ಅದರಾಚೆ ಥಾಳ ಕತ್ತಲ ಬೊಟ್ಟು
ನೆಲವೆಂಬೊಂದು ಆಕಾಶ ಕಾಯ
ಸಮಯಕ್ಕೆ ಮೂಡಿ, ಬೆಳಕನ್ನು ಕೂಡಿತೋ,
ಅಥವ ಮಡಿಲಲ್ಲಿ ತೂಗಿ ಜೋಗುಳವ ಹಾಡಿತೋ, ಕಣ್ಣಿಗೆ ಇಲ್ಲ ಗೊತ್ತು,
ನೋಡುವುದೆ ಕ್ಷಣದಿಂದ ಕ್ಷಣಕ್ಕೆ ನಡೆದ ಕೆಲಸ;
ಮುಗಿಯದೋ ನೋಟ;
ನಕ್ಷತ್ರ, ನೀಹಾರಿಕೆಗಳಾಚೆ, ಕತ್ತಲು
ಆಚೆ ತಪಸ್ಸು ಮಾಡುತ್ತಿರುವಲ್ಲು ಬೆಳಕಿನ
ಪಯಣ, ಅದರ ಹಿಂದೆಯೆ ಮುಗಿ-
ಬೀಳುತ್ತಿರುವ ಕಣ್ಣಿನ ಧ್ಯಾನ
ಆದರೂ ತಳವೂರಿವಲ್ಲೆಲ್ಲ

ನೆಲವಿಲ್ಲದೆ ಬೇರಿಲ್ಲ
ಕಣ್ಣಿಗೆ ಮತ್ತು ಜೀವಕ್ಕೆ,
ನಿಷ್ಕಾರಣವೆನ್ನುವಂತಿರುವ ಈ ಸಂಭ್ರಮಕ್ಕೆ.

ನೆಲವಿಲ್ಲದೆ ಬೇರಿಲ್ಲ ಹಸಿರಿಗೆ,
ಮನಸ್ಸಿನಲಿ ಸ್ವಾಂತಕ್ಕೆ ಮೈತಳೆದ ಅನಂತ ಕಲ್ಪನೆಗೆ, ಕಲ್ಪನೆ ಬೇರುಗಳನ್ನು
ಬೆಳೆಸಿಕೊಳ್ಳಲಿಕ್ಕೆ,
ಕನಸುಗಳ ನಾಯಿಕೊಡೆ ಹಸಿರು ಮುರಿಯುವುದಕ್ಕೆ,
ಬೇರು ಆಳಕ್ಕೆ ಇಳಿಯಬೇಕು,
ಮತ್ತು ಬೇರಿಗೆ ತನ್ನಾಳದ ಸತ್ವವೂಡಲು
ನೆಲಬೇಕು.
ಇಲ್ಲಿರುವುದು ಬೇರೆಲ್ಲಿಯೂ, ಎಲ್ಲೆಲ್ಲಿಯೂ
ಇರಬಹುದು, ಇರದಿರಬಹುದು
ಸಧ್ಯಕ್ಕಂತು ನೆಲವಿರುವವರೆಗೆ
ಯಾಕದರ ಗೊಡವೆ ?
ಸೂರ್ಯ ಉರುವಲು ಮುಗಿಸಿ, ತಣ್ಣಗಾದನು,
ನೆಲ ಮಂಜಿನ ಬಯಲಾದೀತು ಎಂದಾದರೂ, ಅಥವ ಆಕಾಶದಲಿ ಧೂಳಿಪಟವಾಗಿ
ಅನಂತವನ್ನು ಅನಾಥ ಮಾಡೀತು,
ಆಗಲೂ ಬಯಲಲ್ಲಿ ಹುಟ್ಟಿದವು ಬಯಲಾಗಲಿಕ್ಕೇನು ಅಡ್ಡಿ ?
ನೆಲಕ್ಕಿಲ್ಲ, ಇಲ್ಲ ತಾರಾಮಂಡಳಕ್ಕೆ, ಬೆಳಕಿನ ಹಣತೆ ಹಿಡಿದು ಸೃಷ್ಟಿಯರ್ಥ ಹುಡುಕುವ
ಆಕಾಶ ಗಂಗೆಗೆ
ಇಲ್ಲ ಆತಂಕ,
ಹೀಗಾಗಿ ನಮಗೂ ಇಲ್ಲ ಸಮಯದ ಪರಿವೆ ; ಅರಿವು ಮಾತ್ರ.
ವೇಳೆಯೆಲ್ಲ ಬೇರುಗಳನಾಳ, ನೆಲದಾಳ,
ಅಂತರಿಕ್ಷದ ಮುರಿಯದಾಳ-
ಗಳಲ್ಲಿ ಇಳಿಸಿ, ಪಡೆದುಕೊಳ್ಳಬೇಕು
ಅರ್ಥಗಳೆ ಬಂಧಿಸದ ಅತೀತಗಳ,
ನೇತಿನೇತಿಗಳ, ಸ್ವಂತಿಕೆಯೆ ಇರದ
ಏಕೋಭಾವವ,
ನೆಲವಿಲ್ಲದೆ ಬೇರಿಲ್ಲ,
ಅಂತರಾಳಕ್ಕೆ ಅಲ್ಲೇ ಅಂಬೆಗಾಲು.

ಹಿಂದೆ ಇತ್ತು ಬೇರೊಂದು ಗತಿ
ಎಂದಿಲ್ಲ, ಮುಂದೆ ಯಾರಿಗೆ ಗೊತ್ತು,
ಆಕಾಶದಲಿ ಅಂಡಲೆವ ಅವಕಾಶಗಳೆಲ್ಲವುಗಳಲ್ಲಿ
ನಮ್ಮ ಬೇರುಗಳು ಇಳಿದಾವು,
ನೆಲದ ಕಣಸುಗಳನ್ನು ವಿಸ್ಮಯಗೊಂಡ ಸೊನ್ನೆಯಲಿ ತೆರೆದಾವು.
ಶಬ್ದಕೋಶದಸಂಖ್ಯ ಶಬ್ದಗಳೆಲ್ಲ ಅರ್ಥ
ಪೂರ್ಣ ಕಾವ್ಯದಲಿ ಅರ್ಥವಂತಿಕೆಯ ಪಡೆದುಕೊಂಡು,
ನಿಂತೀತು ಇಡಿಯಾದ ಸ್ವರೂಪ ಸಾಕಾರ
ಕನಸಿಗೂ ಕಾಣ್ಕೆಗೂ ನಡುವೆ,
ಕ್ರಿಯೆ ಸಕ್ರಿಯವಾಗಿ, ಇರದು ವ್ಯತ್ಯಾಸ,
ಬೇರಿನನ್ವೇಷಣೆಗೆ ನೆಲವೆ ಪಾತ್ರ.

ಸೆಂಟ್ರಲ್ ಕಾಲೇಜ್ ಕರ್ಣಾಟಕ ಸಂಘ: ಅನುಭವಗಳು-1

ಗುರುರಾವ್ ದೇಶಪಾಂಡೆ

ಕವಿವರ್ಯ ಕುವೆಂಪುರವರು ಹಾಡಿರುವ, "ಕನ್ನಡವೆನೆ ಕುಣಿದಾಡುವುದೆನ್ನೆದೆ" ಎಂಬುದು ನನ್ನ ಮಟ್ಟಿಗೆ ಅಕ್ಷರಶಃ ನಿಜವಾಗಿದೆ. ಚಿಕ್ಕಂದಿನಿಂದಲೂ ಪಠ್ಯಪುಸ್ತಕಗಳಲ್ಲಿನ ಪದ್ಯಗಳನ್ನು ರಾಗವಾಗಿ ಹಾಡುವುದು ನನಗೆ ಬಹು ಪ್ರಿಯವಾಗಿತ್ತು. ನನ್ನಲ್ಲಿರುವ ಕನ್ನಡದ ಅಭಿಮಾನಕ್ಕೆ ಪುಟಕೊಟ್ಟವರು ಪ್ರೌಢಶಾಲೆಯಲ್ಲಿ ನನಗೆ ಕನ್ನಡ ಅಧ್ಯಾಪಕರಾಗಿದ್ದ ದಿವಂಗತ ವಿದ್ವಾನ್ ಕುಕ್ಕೇ ಶ್ರೀ ಸುಬ್ರಹ್ಮಣ್ಯಶಾಸ್ತ್ರಿಗಳು. ಆ ಕಾಲದಲ್ಲಿ ಈಗಿನಂತೆ ಅಯ್ದು ಭಾಗಗಳನ್ನೊಳಗೊಂಡ ಪಠ್ಯಪುಸ್ತಕಗಳನ್ನು ಇಡುತ್ತಿರಲಿಲ್ಲ. ನಾನು ಪ್ರೌಢಶಾಲೆಯ ಮೊದಲನೆಯ ತರಗತಿಯಲ್ಲಿ ಓದುತ್ತಿದ್ದಾಗ "ಜೈಮಿನಿ ಭಾರತ" ಮತ್ತು "ಮುದ್ರಾಮಂಜೂಷ" ಇವು ಪಠ್ಯಪುಸ್ತಕಗಳಾಗಿದ್ದವು. ನಮ್ಮ ಕನ್ನಡ ಅಧ್ಯಾಪಕರು ಉದ್ದಾಮ ಪಂಡಿತರು. ಅವರ ಅಸ್ಖಲಿತ ವಾಣಿಯು ನಮ್ಮನ್ನು ಹುರಿಮುಂಬಿಸಿ "ಕನ್ನಡ......ಕನ್ನಡ......ಹಾ...ಸವಿಗನ್ನಡ" ಎಂಬುವಂತೆ ಮಾಡುತ್ತಿತ್ತು. ಅಂದಿನಿಂದ ಎಡೆಬಿಡದೆ ಕನ್ನಡ ಗ್ರಂಥಗಳನ್ನು ಓದುವುದೆಂದರೆ ನನಗೆ ತುಂಬಾ ಆನಂದವಾಗುತ್ತಿತ್ತು.

ಸಾವಿರದೊಂಭೈನೂರ ಹದಿನೆಂಟರಲ್ಲಿ ಮದ್ರಾಸು ವಿಶ್ವವಿದ್ಯಾನಿಲಯದ 'ಇಂಟರ್ ಮಿಡಿಯೇಟ್' ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಆಗತಾನೇ ಪ್ರಾರಂಭವಾಗಿದ್ದ ಮೈಸೂರು ವಿಶ್ವವಿದ್ಯಾನಿಲಯದ ಎರಡನೇ ವರ್ಷದ ಬಿ. ಎ., ತರಗತಿಗೆ ಸೇರಿದ್ದೆನು. ಆಗ ದಿವಂಗತ ಡಾ॥ ಎ. ಆರ್. ಕೃಷ್ಣಶಾಸ್ತ್ರಿಗಳು ನಮಗೆ ಕನ್ನಡ ಅಧ್ಯಾಪಕರಾಗಿ ಬಂದಿದ್ದರು. ಅವರ ಕನ್ನಡದ ಅಭಿಮಾನವನ್ನು ಬಣ್ಣಿಸಲು ನಾನು ಅಸಮರ್ಥನು. ಹತ್ತೊಂಬತ್ತನೇ ಶತಮಾನದ ಮಧ್ಯಭಾಗದಿಂದಲೂ ಕನ್ನಡಕ್ಕೆ ದೊರಕಬೇಕಾದ ಸ್ಥಾನಮಾನಗಳು ದೊರಕದೆ ನಾಗರೀಕರಲ್ಲಿ, ವಿದ್ಯಾರ್ಥಿಗಳಲ್ಲಿ, ಕನ್ನಡದ ಅಭಿಮಾನವು ಕ್ಷೀಣಿಸುತ್ತಾ ಬಂದಿತ್ತು. ಇಪ್ಪತ್ತನೆಯ ಶತಮಾನದ ಆರಂಭದಿಸೆಯಲ್ಲಿ ಧಾರವಾಡದಲ್ಲಿ "ವಿದ್ಯಾವರ್ಧಕ ಸಂಘ"ಎಂಬ ಸಂಸ್ಥೆಯನ್ನು ಸ್ಥಾಪಿಸಿಕೊಂಡು ಕನ್ನಡಕ್ಕಾಗಿ ಶ್ರಮಿಸುತ್ತಿದ್ದರು. ಈ ಸಂದರ್ಭದಲ್ಲಿ ಕನ್ನಡ ಮಾತೆಯ ಸುಪುತ್ರರಾಗಿದ್ದು, ಕನ್ನಡಕ್ಕಾಗಿ ದುಡಿದು ಕೀರ್ತಿವೆತ್ತ ದಿವಂಗತ ಶ್ರೀ ಆಲೂರು ವೆಂಕಟರಾಯರನ್ನು ನಾನು ಸ್ಮರಿಸಬೇಕು. ನಮ್ಮ ಅಧ್ಯಾಪಕರು ಮುಕ್ಕಾಲು ಗಂಟೆ ಪಾಠಮಾಡಿದರೆ ಕಾಲುಗಂಟೆಗಳ ಕಾಲ ನಮ್ಮಲ್ಲಿ ಕನ್ನಡದ

ಅಭಿಮಾನವನ್ನು ಕೆರಳಿಸಲು ಪ್ರಯತ್ನಿಸುತ್ತಿದ್ದರು. ಇದರ ಫಲವಾಗಿಯೇ "ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘ"ವು ಅಸ್ತಿತ್ವಕ್ಕೆ ಬಂದಿತು. ನಾನು ಆ ಸಂಘದ ಪ್ರಥಮ ಕಾರ್ಯದರ್ಶಿಯಾಗಿ ಎರಡು ವರ್ಷಗಳಕಾಲ ಸೇವೆ ಸಲ್ಲಿಸಿದೆನು.

"ಕರ್ನಾಟಕ ಸಂಘ"ವನ್ನೇನೊ ಸ್ಥಾಪಿಸಿದ್ದಾಯಿತು. ಹಾಗೂ ಹೀಗೂ ಮಾಡಿ ಒಂದು ನೂರು ಜನ ವಿದ್ಯಾರ್ಥಿಗಳನ್ನು ಸಂಘದ ಸದಸ್ಯರುಗಳನ್ನಾಗಿ ಮಾಡಿದ್ದೂ ಆಯಿತು. ಭೌತಶಾಸ್ತ್ರದ ಪ್ರಾಧ್ಯಾಪಕರಾಗಿದ್ದ ದಿವಂಗತ ಶ್ರೀ ಬಿ. ವೆಂಕಟನಾರಣಪ್ಪ ನವರು, (ಆಗ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಗಳು) ನಮ್ಮ ಸಂಘದ ಅಧ್ಯಕ್ಷರು. ನಮ್ಮ ಕನ್ನಡ ಅಧ್ಯಾಪಕರೇ ನಮ್ಮ ಸಂಘದ ಉಪಾಧ್ಯಕ್ಷರಾಗಿ ಆಯ್ಕೆ ಆದರು. ಸಂಘವನ್ನೇನೋ ಸ್ಥಾಪಿಸಿದ್ದಾಯಿತು. ಸಂಘದ ಆರಂಭ ಭಾಷಣ ಮಾಡುವುದಕ್ಕಾಗಿ ಭಾಷಣಕಾರರೊಬ್ಬರನ್ನು ಹುಡುಕುವ ಹೊಣೆಗಾರಿಕೆ ನನ್ನ ದಾಗಿದ್ದಿತು. ಕನ್ನಡದ ಏಳಿಗೆಗಾಗಿ ಶ್ರಮಿಸುತ್ತಿದ್ದವರಲ್ಲಿ ಮೈಸೂರು ಕಾಲೇಜಿನ ಆಂಗ್ಲಭಾಷಾ ಪ್ರಾಧ್ಯಾಪಕರಾಗಿದ್ದ ದಿವಂಗತ ಬಿ. ಎಂ. ಶ್ರೀ. ಯವರು ಒಬ್ಬರೆಂದು ಕೇಳಿದ್ದೆನು. ಅವರಿಗೆ ಪ್ರಾರ್ಥನಾ ಪತ್ರ ಕಳುಹಿಸಿದೆನು. ಅವರು ಕೂಡಲೇ ಉತ್ತರ ಬರೆದು ತಾವು ಇಂಗ್ಲೀಷಿನಲ್ಲಿ ಭಾಷಣ ಮಾಡುವುದಾಗಿಯೂ ನಂತರ ಆ ಭಾಷಣವನ್ನು ಕನ್ನಡಕ್ಕೆ ಪರಿವರ್ತಿಸಿ ಕೊಡುವುದಾಗಿಯೂ ಉತ್ತರ ಬರೆದರು. ನನ್ನ ದೇಹದಲ್ಲಿ ಆ ಕಾಲದಲ್ಲಿ ಬಿಸಿರಕ್ತ ಸಂಚರಿಸುತ್ತಿತ್ತು. ಹಿಂದೂ ಮುಂದೂ ಯೋಚನೆ ಮಾಡದೆ ನಮ್ಮ ಸಂಘದಲ್ಲಿ ಕನ್ನಡದಲ್ಲಿಯೇ ಭಾಷಣಗಳನ್ನು ಇಟ್ಟುಕೊಳ್ಳಬೇಕೆಂದು ಸಂಕಲ್ಪ ಮಾಡಿದ್ದೇವೆ. ಆದ್ದರಿಂದ ತಮ್ಮ ಭಾಷಣವನ್ನು ಇಂಗ್ಲೀಷಿನಲ್ಲಿ ಮಾಡಲು ಅವಕಾಶ ಕೊಡಲು ಸಾಧ್ಯವಿಲ್ಲವೆಂದು ಬರೆದುದಾಯಿತು. ನಂತರ ಈ ಅಂಶವನ್ನು ನಮ್ಮ ಅಧ್ಯಕ್ಷರಿಗೂ ಉಪಾಧ್ಯಕ್ಷರಿಗೂ ತಿಳುಹಿಸಿದೆನು. ಅವರಿಗೇಕಯ್ಯಾ ಹಾಗೆ ಬರೆದೆ......ಅವರು ಉದ್ದಾಮ ಪಂಡಿತರು ಎಂದು ಹೇಳಿದರು. ಇದು ನಡೆದ ಸುಮಾರು ಹದಿನೈದು ವರ್ಷಗಳನಂತರ ಶಿವಮೊಗ್ಗಾದಲ್ಲಿ ಸ್ಥಾಪಿಸಿದ "ಕರ್ನಾಟಕ ಸಂಘ"ದ ವಾರ್ಷಿಕೋತ್ಸವಕ್ಕೆ ಪೂಜ್ಯ "ಶ್ರೀ"ಯುವರು ಅಧ್ಯಕ್ಷರಾಗಿ ಬಂದಿದ್ದರು. ಆ ಸಂಘಕ್ಕೆ ಶ್ರೀವರ್ಮಾ ಕೂಡಲಿ ಚಿದಂಬರಂ ರವರೊಂದಿಗೆ ನಾನು ಜಂಟೀ ಕಾರ್ಯ ದರ್ಶಿಯಾಗಿ ಕೆಲಸ ಮಾಡುತ್ತಿದ್ದೆನು. ಅಲ್ಲಿಯುವರೆಗೆ ನಾನು "ಶ್ರೀ"ಯುವರನ್ನು ನೋಡಿಯೇ ಇರಲಿಲ್ಲ. ಶ್ರೀ ಚಿದಂಬರಂರವರು ಅವರ ವಿದ್ಯಾರ್ಥಿಗಳು "ಶ್ರೀ" ರವರು ಸಭಾ ಮಂದಿರಕ್ಕೆ ಬರುತ್ತಿದ್ದಹಾಗೆ ನನ್ನ ಸ್ನೇಹಿತರು "ಶ್ರೀ"ರವರಿಗೆ "ಸೆಂಟ್ರಲ್ ಕಾಲೇಜು ಕರ್ನಾಟಕ ಸಂಘದ ಪ್ರಥಮ ಕಾರ್ಯದರ್ಶಿಗಳಾಗಿದ್ದ ದೇಶಪಾಂಡೆಯುವರು" ಎಂದು ನನ್ನನ್ನು ಪರಿಚಯ ಮಾಡಿಕೊಟ್ಟರು. ಆಗ "ಶ್ರೀ" ಯುವರು ಮುಗುಳು ನಗೆ ಬೀರಿ "O...You are the Secretary who refused

to have my address in your Sangha…I stand the test today, Mr. Deshapande…" ಎಂದು ಸಭಾ ಭವನವನ್ನು ಪ್ರವೇಶಿಸಿದರು. ಅಂದು ಕನ್ನಡದಲ್ಲಿ ಅಮೋಘವಾಗಿ ಅಧ್ಯಕ್ಷ ಭಾಷಣ ಮಾಡಿದರು. ಮಾರನೆಯ ದಿನ ಪುರಭವನದಲ್ಲಿ ಅವರ ಉಪನ್ಯಾಸ ಒಂದನ್ನು ಏರ್ಪಡಿಸಿದ್ದೆವು. ಅಂದು ಜನ್ನ ಮಹಾಕವಿಯ "ಯಶೋಧರ ಚರಿತ್ರೆ"ಯ ಮೇಲೆ ಬೆಳಗಿನ ಎಂಟು ಗಂಟೆಯಿಂದ ಹನ್ನೆರಡು ಗಂಟೆ ವರೆವಿಗೂ ಉಜ್ವಲವಾದ ಭಾಷಣವನ್ನು ಮಾಡಿ ನಾಗರೀಕರಿಗೆ ಸಂತೋಷವನ್ನುಂಟು ಮಾಡಿದರು. ಕನ್ನಡಕ್ಕೆ ಅವರು ಮಾಡಿರುವ ಸೇವೆ, ತ್ಯಾಗ ಅಮೋಘವಾದದು.

ಆದರೆ ನಮ್ಮ ಕರ್ನಾಟಕ ಸಂಘದ ಆರಂಭ ಭಾಷಣಕ್ಕಾಗಿ ಭಾಷಣಕಾರರನ್ನು ಹುಡುಕುವುದು ಭಗೀರಥ ಯತ್ನವಾಯಿತು. ಹಾಗೂ ಹೀಗೂ ಸುತ್ತಾಡಿ ಕೊನೆಗೆ ದಿವಂಗತ ಶ್ರೀ ಮಹಾಮಹೋಪಾಧ್ಯಾಯ, ಪ್ರಾಕ್ತನ ವಿಮರ್ಶ ವಿಚಕ್ಷಣ ರಾವ್ ಬಹದ್ದೂರ್ ಆರ್. ನರಸಿಂಹಾಚಾರ್ಯರವರನ್ನು ಒಪ್ಪಿಸಿ ಕರೆದುಕೊಂಡು ಬಂದು ಆರಂಭ ಭಾಷಣವನ್ನು ಮಾಡಿಸಿದ್ದಾಯಿತು. ನಂತರ ನಮ್ಮ ಸಭೆಗಳು ಕ್ರಮವಾಗಿ ನಡೆದುಕೊಂಡು ಹೋಗುತ್ತಿದ್ದವು. ಸಂಘದಲ್ಲಿ ಮೊಟ್ಟಮೊದಲನೆಯ ಉಪನ್ಯಾಸವು ಶ್ರೀಮಾನ್ ಎಸ್. ವಿ. ರಂಗಣ್ಣನವರದು. ನಂತರ ಶ್ರೀ ಸಿ. ಕೆ. ವೆಂಕಟರಾಮಯ್ಯನವರು, ಪ. ಕೃಷ್ಣರಾಯರವರೂ ಇನ್ನೂ ಕೆಲವು ವಿದ್ಯಾರ್ಥಿಗಳು ಲೇಖನಗಳನ್ನು ಬರೆದು ಸಂಘದಲ್ಲಿ ಓದಿದರು. ಸಂಘದ ಸದಸ್ಯರೆಲ್ಲರೂ ತಪ್ಪದೇ ಸಭೆಗಳಿಗೆ ಬರುತ್ತಿದ್ದರು. ಅಂತೂ ಸೆಂಟ್ರಲ್ ಕಾಲೇಜಿನಲ್ಲಿ ಕರ್ನಾಟಕ ಸಂಘವು ಅಸ್ತಿತ್ವಕ್ಕೆ ಬಂದು ಅದರ ಕೆಲಸಗಳು ಸುಗಮವಾಗಿ ನಡೆದುಕೊಂಡು ಹೋಗುವಂತಾಯಿತು. ನಮ್ಮ ಅಧ್ಯಾಪಕರಾದ ದಿವಂಗತ ಡಾ॥ ಕೃಷ್ಣಶಾಸ್ತ್ರಿಗಳವರ ಸಂತೋಷವನ್ನು ವರ್ಣಿಸಲು ಸಾಧ್ಯವಿಲ್ಲ. ಅವರಿಗೆ ಉತ್ಸಾಹ ಇಮ್ಮಡಿಸಿ ಆ ವರುಷವೇ ಒಂದು ತ್ರೈಮಾಸಿಕವನ್ನು ಪ್ರಾರಂಭಿಸಿಯೇ ಬಿಡಬೇಕೆಂದು ಸಂಕಲ್ಪ ಮಾಡಿಬಿಟ್ಟರು. ಆ ಸಂಕಲ್ಪದ ಫಲವಾಗಿ "ಪ್ರಬುದ್ಧ ಕರ್ನಾಟಕ"ವು ಪ್ರಾರಂಭವಾಯಿತು, ಅಂದು ಪ್ರಾರಂಭವಾದ "ಕರ್ನಾಟಕ ಸಂಘ" ಮತ್ತು "ಪ್ರಬುದ್ಧ ಕರ್ನಾಟಕ"ಗಳು ಪ್ರಗತಿ ಪಥದಲ್ಲಿವೆ. ಸೆಂಟ್ರಲ್ ಕಾಲೇಜಿನ "ಕರ್ನಾಟಕ ಸಂಘ" ಮತ್ತು "ಪ್ರಬುದ್ಧ ಕರ್ನಾಟಕ" ಇವೆರಡೂ ಡಾ॥ ಕೃಷ್ಣಶಾಸ್ತ್ರಿಗಳ ಕೈ ಕೂಸುಗಳು. ಅವುಗಳ ವಜ್ರಮಹೋತ್ಸವವನ್ನು ನೋಡಿ ಆನಂದಿಸಲು ಅವರಿರಲಿಲ್ಲವಲ್ಲವೆಂದು ನಾನು ತುಂಬಾ ವಿಷಾದಿಸಿದ್ದೇನೆ.

ಆಗ "ಪ್ರಬುದ್ಧ ಕರ್ನಾಟಕ"ದ ಐದುನೂರು ಪ್ರತಿಗಳನ್ನೇ ಅಚ್ಚು ಹಾಕಿಸಿದ್ದು. ನಮ್ಮ ಸದಸ್ಯರುಗಳು ನೂರು ಜನ ವಿದ್ಯಾರ್ಥಿಗಳು ಅದಕ್ಕೆ ಚಂದಾದಾರರು. ನಾಗರಿಕರಲ್ಲಿ, ಚಂದಾದಾರರನ್ನು ಹುಡುಕಲು ದಿನವಹಿ ಪ್ರತಿಗಳನ್ನು ಬಗಲಲ್ಲಿ ಇಟ್ಟುಕೊಂಡು ಬೆಂಗಳೂರು ಪೇಟೆಯಲ್ಲಿ ಸುತ್ತುವುದೇ ನನ್ನ ಕೆಲಸವಾಯಿತು.

ಹೋದೆಲ್ಲೆಲ್ಲಾ ವಿದ್ಯಾವಂತರೆನಿಸಿಕೊಂಡವರು ಸಹ ಚಂದಾದಾರರಾಗುವುದಕ್ಕೆ ಒಪ್ಪುವುದು ಕಷ್ಟವಾಗಿದ್ದಿತು. ಹಾಗೂ ಹೀಗೂ ಚಂದಾದಾರರುಗಳನ್ನು ಕ್ರಮೇಣ ಕೂಡಿಸುತ್ತಾ ಬಂದುದಾಯಿತು. "ಪ್ರಬುದ್ಧ ಕರ್ನಾಟಕ" ಮತ್ತು "ಕರ್ನಾಟಕ ಸಂಘ"ವು ಐವತ್ತು ವರ್ಷಗಳ ತುಂಬು ಜೀವನವನ್ನು ಕಂಡಿವೆ. ಈಗ ಕನ್ನಡದ ಅಭಿಮಾನವು ಅಂದಿಗಿಂತ ಹೆಚ್ಚಾಗಿದೆ. ಆದರೂ ಇನ್ನೂ ಆಗಬೇಕಾದದ್ದು ಬಹಳವಿದೆ.

ಕರ್ನಾಟಕ ಸಂಘ: ಅನುಭವಗಳು-2

ಎಸ್. ವಿ. ರಂಗಣ್ಣ

ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘ 1918 ರಲ್ಲಿ ಸ್ಥಾಪನೆಗೊಂಡಿತು. ದಿವಂಗತ ಪ್ರೊಫೆಸರ್ ಎ. ಆರ್. ಕೃಷ್ಣಶಾಸ್ತ್ರಿಗಳು ಅದರ ಸ್ಥಾಪನಾಚಾರ್ಯರು. 1915 ರಲ್ಲೇ ಅವರು 'ಕನ್ನಡ ಟ್ಯೂಟರ್' ಆಗಿ ಆ ಕಾಲೇಜಿಗೆ ಬಂದಿದ್ದರು. ವಿದ್ಯಾರ್ಥಿಗಳಲ್ಲಿ ಕನ್ನಡದ ಅಭಿಮಾನವನ್ನು ಬಿತ್ತಿ ಬೆಳೆಸುವುದಕ್ಕೆ ಅವರಿಗೆ ಎರಡು ವರ್ಷ ಹಿಡಿಯಿತು ಎನ್ನಬಹುದು. 1917 ರಲ್ಲಿ ಎಲ್ಲ ಕನ್ನಡ ವಿದ್ಯಾರ್ಥಿಗಳಲ್ಲೂ ಆ ಅಭಿಮಾನ ಉತ್ಸಾಹದ ಮಮತೆಯಾಗುವಂತೆ ಮಾಡಿದರು. ಬಿ.ಎ. ತರಗತಿಯ ಮಿತಸಂಖ್ಯೆಯುವರಾದ ನಮಗಂತೂ ಒಂದು ಬಗೆಯ ಆವೇಶ. ನನಗೂ ಆಪ್ತಮಿತ್ರರಿಬ್ಬರಿಗೂ ಸಾಯಂಕಾಲ ಐದಾರು ಮೈಲಿ ನಡೆದಾಡುವುದು ವಾಡಿಕೆಯಾಗಿತ್ತು. ಕನ್ನಡದ ಸೊಬಗನ್ನೂ ಲಾಲಿತ್ಯವನ್ನೂ ಕಂಡು ಹಿಗ್ಗುತ್ತಿದ್ದೆವು; ಕನ್ನಡ ಕನ್ನಡ ಎಂದು ಜಪಿಸುತ್ತಿದ್ದೆವು. 1918 ರಲ್ಲಿ ಕಾಲೇಜಿನ ವಾತಾವರಣ ಅನುಕೂಲವಾಗಿ ತೋರಿತು; ಕರ್ಣಾಟಕ ಸಂಘ ಜನ್ಮತಾಳಿತು. ಅದರ ಅಧ್ಯಕ್ಷರು ದಿವಂಗತ ಪ್ರೊಫೆಸರ್ ಬೆಳ್ಳಾವೆ ವೆಂಕಟನಾರಣಪ್ಪನವರು. ಶ್ರೀಯುತ ದೇಶಪಾಂಡೆ ಗುರುರಾಯರು ಕಾರ್ಯದರ್ಶಿಗಳು. ಸಂಘದ ಚಾಲಕ ಶಕ್ತಿಯೂ ಜೀವದುಸಿರೂ ಆಗಿದ್ದ ಕೃಷ್ಣಶಾಸ್ತ್ರಿಗಳಿಗೆ ಯಾವ ಅಧಿಕಾರ ಸ್ಥಾನವೂ ಇದ್ದಂತೆ ನನಗೆ ನೆನಪಿಲ್ಲ. ಯಾವುದು ನಡೆಯಬೇಕಾದರೂ ಅವರ ಮೂಲಕವೇ; ಎಂದಮೇಲೆ ಅವರಿಗೆ ಬೇರೆ ಅಧಿಕಾರ ಸ್ಥಾನವೇತಕ್ಕೆ? ಅಲ್ಲದೆ ತಾವೇ ದುಡಿದು ಶಿಷ್ಯರಿಗೆ ಹೆಸರನ್ನು ಕೊಡಿಸುವುದು ಅವರ ಜಾಯಮಾನ.

ಸಂಘದ ಪ್ರಾರಂಭೋತ್ಸವದ ಪ್ರಕರಣ—ಹಗರಣವೆಂದರೂ ತಡೆಯುತ್ತದೆ.—ವನ್ನು ನಾನೆಂದೂ ಮರೆಯಲಾರೆ. ದಿವಂಗತ ಬಿ. ಎಂ. ಶ್ರೀಕಂಠಯ್ಯನವರು ಆಗ ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿದ್ದರು. ಕನ್ನಡವನ್ನು ಬಲ್ಲವರಲ್ಲಿ ಗಣ್ಯರೆಂದೂ ಅವರಿಗೆ ಖ್ಯಾತಿಯಿತ್ತು. ನಮ್ಮ ಗುರುಗಳ ಗುರುಗಳಾದ್ದರಿಂದ ಅವರ ಹರಕೆ ಸಂಘಕ್ಕೆ ಶ್ರೇಯಸ್ಕರವೆಂದು ನಂಬಿ, ದಯೆಯಿಟ್ಟು ಬಂದು ಹರಸಬೇಕೆಂದು ಅವರನ್ನು ಬೇಡಿದ್ದಾಯ್ತು. ಸಂತೋಷದಿಂದ ಬರುವುದಾಗಿಯೂ ಇಂಗ್ಲಿಷಿನಲ್ಲಿ ಭಾಷಣ ಮಾಡುವುದಾಗಿಯು ಅವರು ಉತ್ತರ

ಕೊಟ್ಟರು. ಕನ್ನಡದಲ್ಲೇ ಮಾತನಾಡಿ ಅನುಗ್ರಹಿಸಬೇಕೆಂದು ಪುನಃ ಅವರನ್ನು ಪ್ರಾರ್ಥಿಸಲಾಯ್ತು. ಇಂಗ್ಲಿಷಿನಲ್ಲೇ ಭಾಷಣ ಮಾಡುವುದಾಗಿ ಅವರು ಪುನಃ ಹೇಳಿದರು. ಜಿಜ್ಞಾಸೆ ಎದ್ದಿತು. ಕೃಷ್ಣಶಾಸ್ತ್ರಿಗಳು "ಆಗಲಿ; ನಾವೇಕೆ ಹಠ ಹಿಡಿಯಬೇಕು? ಅವರ ಆಶೀರ್ವಾದ ಮುಖ್ಯ; ಇಂಗ್ಲಿಷಿನಲ್ಲೇ ನಡೆದರೆ ಪ್ರಮಾದವೇನು?" ಎಂದು ಸಲಹೆ ಕೊಟ್ಟರು. ನಮಗೇಕೊ ಅದು ಒಪ್ಪಾಗಲಿಲ್ಲ. ನಾವು ಗುಟ್ಟಾಗಿ "ಸರದಾರ್" ಎಂದು ಕರೆಯುತ್ತಿದ್ದ ಗುರುರಾಯರಿಗಂತೂ ಸ್ವಲ್ಪ ಬಿಸಿಯೇ ಏರಿತು. ಕೃಷ್ಣಶಾಸ್ತ್ರಿಗಳನ್ನು ಮೀರುವುದಕ್ಕೆ ಮನಸಂದೆವು. ಕಾರ್ಯದರ್ಶಿಗಳಿಂದ ಮಾನ್ಯ ಆಹ್ವಾನಿತರಿಗೆ ಕೊನೆಯ ಪತ್ರ ಹೋಯ್ತು. ಕನ್ನಡದಲ್ಲಿ ಭಾಷಣ ಮಾಡುವುದು ಆಗದಿದ್ದಲ್ಲಿ ನಮ್ಮನ್ನೂ ಮತ್ತು ಸಂಘವನ್ನೂ ಕ್ಷಮಿಸಬೇಕೆಂದು ಕೋರಿತ್ತು. ದಿವಂಗತ ಆರ್. ನರಸಿಂಹಾಚಾರ್ಯರಿಂದ ಪ್ರಾರಂಭ ಭಾಷಣ ನೆರವೇರಿತು.

ಶ್ರೀಕಂಠಯ್ಯನವರಿಗೆ ಇದ್ದದ್ದು ಛಲವಲ್ಲ, ಯಾವುದೋ ವಾಙ್ನಿಯಮ ಎಂದು ನಾನು ವರ್ಷಗಳ ಮೇಲೆ ಊಹಿಸಿಕೊಂಡೆ. 1919 ರಿಂದ ನನಗೆ ಅವರೊಂದಿಗೆ ನಿಕಟ ಸಂಪರ್ಕ ಉಂಟಾಯ್ತು. ಅಲ್ಲಿಂದ ಏಳೆಂಟು ವರ್ಷ ಮನೆಯಲ್ಲಿ, ನಾವಿಬ್ಬರೇ ಇರುವಾಗ, ಕುಶಲಪ್ರಶ್ನೆ ಕೇಳುವಂದು, ಯಾವಾಗಲೂ ಅವರು ಇಂಗ್ಲಿಷನ್ನೇ ಉಪಯೋಗಿಸುತ್ತಿದ್ದರು. 1921 ರಲ್ಲಿ ಮಹಾರಾಜಾ ಕಾಲೇಜಿನ ಕರ್ನಾಟಕ ಸಂಘ ಉದಯಿಸಿತು. ಅದಕ್ಕೆ ಶ್ರೀಕಂಠಯ್ಯನವರೇ ಅಧ್ಯಕ್ಷರು. ಕನ್ನಡ ಉಪಪ್ರಾಧ್ಯಾಪಕರಾದ ದಿವಂಗತ ಬಿ. ಕೃಷ್ಣಪ್ಪನವರು ಉಪಾಧ್ಯಕ್ಷರು. ನಾನೊಬ್ಬ ಸದಸ್ಯ. ಒಮ್ಮೆ ಕಾರ್ಯದರ್ಶಿ ವಂದನಾರ್ಪಣೆ ಮಾಡುತ್ತ "ನಮ್ಮ ಸಂಘವನ್ನೂ ನಮ್ಮನ್ನೂ ಪೋಷಿಸುವುದಕ್ಕೆ ನಮಗೆ 'ಅಯ್ಯ (–ಅಜ್ಜ) 'ಅಪ್ಪ' 'ಅಣ್ಣ' ಮೂವರೂ ಇದ್ದಾರೆ!" ಎಂದು ಹೇಳಿದ್ದು ಜ್ಞಾಪಕವಿದೆ. ಅದಿರಲಿ, ವಿ. ಸೀ. ಅವರು ಕನ್ನಡದಲ್ಲಿ ಉಪನ್ಯಾಸ ಕೊಟ್ಟರು. ಆ ಕರ್ನಾಟಕ ಸಂಘದ ಆಶ್ರಯದಲ್ಲಿ, ಅಧ್ಯಕ್ಷರಾಗಿದ್ದ ಶ್ರೀಕಂಠಯ್ಯನವರು ಕನ್ನಡದಲ್ಲಿ ಕೆಲವೇ ವಾಕ್ಯಗಳನ್ನಾಡಿ, ಇದ್ದಕ್ಕಿದ್ದಂತೆ "why this pretence? English is in our hearts; English is at the tip of our tongues. Why not speak in English?" ಎಂದು ಸಾರಿ, ಪೂರ್ತಿ ಅಧ್ಯಕ್ಷ ಭಾಷಣವನ್ನು ಇಂಗ್ಲಿಷಿನಲ್ಲೇ ಮಾಡಿ ಮುಗಿಸಿದರು. ಸುಮಾರು 1926 ರಿಂದ ಅವರ ಕನ್ನಡ ವಾಙ್ಮಿತೆ–ಅಂಥಾದ್ದನ್ನು ಮತ್ತೆಲ್ಲಿ ತರೋಣ?–ತಲೆ ಎತ್ತಿತೆಂದು ಹೇಳಬಹುದು. ಈ ವಿವರಗಳನ್ನು ತಿಳಿಸುವುದಕ್ಕೆ ನಿಮಿತ್ತ ಇಷ್ಟೆ: ತರುಣರಾದ ನಾವು "ಕನ್ನಡ ಇಲ್ಲದಿದ್ದರೆ ಬರಬೇಡಿ!" ಎಂದದ್ದೂ ತಪ್ಪಲ್ಲ. ಶ್ರೀಕಂಠಯ್ಯನವರು "ಇಂಗ್ಲಿಷೊಂದಿಗೇ ಬಂದೇನು!" ಎಂದದ್ದೂ ತಪ್ಪಲ್ಲ. ಆದರೂ ತಪ್ಪು ಅರ್ಥಮಾಡಿಕೊಂಡದ್ದರಿಂದ ಕೊಂಚ ವಿರಸ ಉಂಟಾಯ್ತು.

ಒಂದು ಸಮಾಧಾನ. ಮುಂದೆ ಅವರೇ ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘಕ್ಕೆ ಅಧ್ಯಕ್ಷರಾದರು. ಅದರ ಬೆಳ್ಳಿಯ ಹಬ್ಬದ ಸಮಾರಂಭದಲ್ಲಿ ಅವರೇ ಸ್ವಾಗತ ಸಮಿತಿಯ ಅಧ್ಯಕ್ಷರು.

ಈ ಸಂದರ್ಭದಲ್ಲಿ ನನಗಾದ ಒಂದು ವಿಶೇಷ ಅನುಭವವನ್ನು ಅರುಹಬಯಸು ತ್ತೇನೆ. ರಜತ ಮಹೋತ್ಸವಕ್ಕೆ ಅಧ್ಯಕ್ಷರನ್ನಾಗಿ ಯಾರನ್ನು ಕರೆಯಬೇಕೆಂಬ ಪ್ರಶ್ನೆ ಎದ್ದಿತು. ಆಗ ಮೊದಲ ಅಧ್ಯಕ್ಷರಾದ ವೆಂಕಟನಾರಣಪ್ಪನವರು ಗತಿಸಿದ್ದರು. ಸಂಘವನ್ನು ಕೃಷ್ಣಶಾಸ್ತ್ರಿಗಳಂತೆಯೇ ಅಕ್ಕರೆಯಿಂದ ಪಾಲಿಸಿಕೊಂಡು ಬಂದಿದ್ದ ವೆಂಕಣ್ಣಯ್ಯನವರೂ ಪರಂಧಾಮವನ್ನೈದಿದ್ದರು. ಕೃಷ್ಣಶಾಸ್ತ್ರಿಗಳೇ ಅಧ್ಯಕ್ಷ ರಾಗುವುದು ಯುಕ್ತವೆಂದು ಎಲ್ಲರಿಗೂ ತೋರಿತು. ಆಗ ಅವರು ಮೈಸೂರಿನಲ್ಲಿದ್ದರು. ನಾವು ಕಳಿಸಿದ ಆಹ್ವಾನಕ್ಕೆ ಅವರಿಂದ ನಕಾರ ಬಂತು. ಅವರಲ್ಲಿಗೆ ನಾನೇ ನಡೆದು ಮುಖತಃ ಮಾತನಾಡಿ ಒಪ್ಪಿಸಿಕೊಂಡು ಬರುತ್ತೇನೆ ಎಂದು ಜಂಭಕೊಚ್ಚಿ, ಮೈಸೂರಿಗೆ ಬಂದೆ. ನನ್ನನ್ನು ಕಂಡರೆ ಅವರಿಗೆ ತುಂಬ ವಾತ್ಸಲ್ಯ. ನಾನಾ ಯುಕ್ತಿವಾದಗಳನ್ನು ಅವರ ಮುಂದಿಟ್ಟೆ; ಒಂದಕ್ಕೂ ಅವರು ಜಗ್ಗಲಿಲ್ಲ. ತಿರುತಿರುಗಿ "ಆಗುವುದಿಲ್ಲ" ಎಂಬುದೇ ಅವರ ಜವಾಬಾಗಿತ್ತು. ಕಡೆಗೆ ನಾನು ಕೊಂಚ ಆಗ್ರಹದಿಂದ "ಏನು ಸಾರ್, ಶಿಷ್ಯ ಇಷ್ಟೊಂದು ಕೇಳಿಕೊಂಡರೂ ನೀವು ಒಪ್ಪಬಾರದೆ?" ಎಂದುಬಿಟ್ಟೆ. ಅದಕ್ಕೂ ಅವರು ತಂಪಾಗಿ "ನಿಮಗೆ ಗುರುಭಕ್ತಿ ಇದ್ದರೆ ನನಗೂ ಗುರುಭಕ್ತಿ ಬೇಡವೆ? ಶ್ರೀಕಂಠಯ್ಯನವರು ಇರುವಾಗ ಅವರ ಎದುರಿನಲ್ಲಿ ನಾನು ಹೇಗೆ ಅಧ್ಯಕ್ಷನಾಗಲಿ?" ಎಂದು ನುಡಿದು ನನ್ನ ಬಾಯಿ ಕಟ್ಟಿದರು. ಇಂಥ ಪರಮ ನಿಸ್ವಾರ್ಥಿಗಳು ನೆಟ್ಟ ಸಂಸ್ಥೆ ನಮ್ಮ ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘ; ಕವಿ ವರ್ಡ್ಸ್‌ವರ್ತ್ ಹೇಳಿದ ವಾಕ್ಯ, "ಆ ಮುಂಜಾನೆ ಬದುಕಿದ್ದದ್ದೆ ಪರಮಾನಂದ!" ನನಗೂ ಅನ್ವಯಿಸುತ್ತದೆ; ಆದರೆ ಅದರ ಮುಂದಣ ವಾಕ್ಯಕ್ಕೆ ಒಂದೆರಡು ಪದದ ಬದಲಾವಣೆ ಬೇಕು: "ವಯಸ್ಕನಾಗಿ ಈಗ ಅದನ್ನು ಸ್ಮರಿಸಿಕೊಳ್ಳುವುದು ನಿಜವಾಗಿ ಸ್ವರ್ಗ!"

ಕಾವ್ಯಭಾಷೆ – ಭಾಷಾವೈಜ್ಞಾನಿಕ ವಿವೇಚನೆ*

ಕೃಷ್ಣಪರಮೇಶ್ವರ ಭಟ್ಟ

1

ಕಾವ್ಯಾಭ್ಯಾಸದ ಒಂದು ಅಂಗವಾಗಿ ಕಾವ್ಯಭಾಷೆಯನ್ನು ಭಾಷಾ ವಿಜ್ಞಾನದ ದೃಷ್ಟಿಯಿಂದ ವಿವೇಚಿಸುವ ಪ್ರಯತ್ನ ಈಗಾಗಲೇ ಸಾಕಷ್ಟು ಪ್ರಮಾಣದಲ್ಲಿ ನಡೆದಿದೆ. ಕಾವ್ಯಭಾಷೆಯ ವಿಶ್ಲೇಷಣೆ, ತನ್ಮೂಲಕ ಕಾವ್ಯವಿಮರ್ಶೆ–ಇವುಗಳನ್ನು ಪ್ರಧಾನ ಉದ್ದೇಶಗಳನ್ನಾಗಿಟ್ಟುಕೊಂಡು ಶೈಲಿವಿಜ್ಞಾನ[1] (Stylistics) ವೆಂಬುದು ಭಾಷಾವಿಜ್ಞಾನದ ಒಂದು ಪ್ರತ್ಯೇಕ ಶಾಖೆಯಾಗಿ ಬೆಳೆಯುತ್ತಿದೆ. ಹೀಗಿದ್ದರೂ ಭಾಷಾವಿಜ್ಞಾನದ ದೃಷ್ಟಿಯಿಂದ ಕಾವ್ಯದ ವಿಶ್ಲೇಷಣೆ-ವಿಮರ್ಶೆಗಳಿಗೆ ತೊಡಗುವುದು ಸಾಧುವಾದದ್ದೇ ?–ಎಂಬ ವಿಷಯದಲ್ಲಿ ವಿಮರ್ಶಕರು ಹಾಗೂ ಭಾಷಾವಿಜ್ಞಾನಿಗಳಲ್ಲಿ ತೀವ್ರ ಭಿನ್ನಾಭಿಪ್ರಾಯಗಳಿವೆ. (ನೋಡಿ : Virginia Tufte, 1971)

---

* ಇದೇ ಲೇಖಕನ 'Linguistic Study of Poetic Language' (1973) ಎಂಬ ಲೇಖನದ ರೂಪಾಂತರ ಅನುವಾದ.

1 ಇಂಗ್ಲೀಷಿನ 'stylistics' ಎಂಬ ಪದಕ್ಕೆ ಸಂವಾದಿಯಾಗಿ 'ಶೈಲಿವಿಜ್ಞಾನ' ಎಂಬ ಪದವನ್ನು ಉಪಯೋಗಿಸುತ್ತಿದ್ದೇನೆ. ಶೈಲಿವಿಜ್ಞಾನವನ್ನಾಧರಿಸಿದ ವಿಮರ್ಶೆಯನ್ನು 'ಶೈಲೀಯ ವಿಮರ್ಶೆ' ಎಂದು ಕರೆದಿದ್ದೇನೆ.

ಇತ್ತೀಚೆಗೆ, 'ಶೈಲಿವಿಜ್ಞಾನ'ವೆಂಬುದು ಕೇವಲ ಕಾವ್ಯವಿಮರ್ಶೆಯನ್ನು ಕುರಿತ ಭಾಷಾವಿಜ್ಞಾನದ ಶಾಖೆಯಾಗಿರದೆ, ಇನ್ನೂ ಅನೇಕ ಅಭ್ಯಾಸ ಕ್ಷೇತ್ರಗಳನ್ನು ಸೂಚಿಸುವ ಸಾಮಾನ್ಯ (general) ವಾದ ಹೆಸರಾಗಿದೆ.

(ನೋಡಿ : Harold Love : "The computer and literary editing."
Roger Webster : "A method of author identification."
D. R. Tallentire: "Mathematical modelling in stylistics."
Patrica Koster : "Computer stylistics : Swift and some other contemporaries."
Louis T. Milic : "The possible usefulness of poetry generation."

ಭಾಷಾವಿಜ್ಞಾನಿಗಳಲ್ಲಿಯೂ ಕೆಲವರು ಇಂತಹ ಪ್ರಯತ್ನವನ್ನು ಉದಾಸೀನಭಾವದಿಂದ ನೋಡುವವರೂ ಉಂಟು. ಕಾವ್ಯಭಾಷೆಯ ಅಭ್ಯಾಸದಲ್ಲಿ ಭಾಷಾವೈಜ್ಞಾನಿಕ ವಿವೇಚನೆಗೆ ಅವಕಾಶವುಂಟು ಹಾಗೂ ಅಂತಹ ಪ್ರಯತ್ನ ಅವಶ್ಯಕವೂ ಹೌದು ಎಂಬ ಶೈಲಿವಿಜ್ಞಾನಿಗಳ ಹೇಳಿಕೆಗೆ ಮುಖ್ಯವಾದ ಕಾರಣಗಳು ಎರಡು: 1. ಕಾವ್ಯವು ಭಾಷೆಯ ಮೂಲಕ ಪ್ರಕಟವಾಗುವ ಕಲೆ (verbal art). ಆದ್ದರಿಂದ ಕಾವ್ಯದಲ್ಲಿ ತೋರುವ ಅಥವಾ ತೋರಬಹುದಾದ ವೈಚಿತ್ರ್ಯ, ವಿನ್ಯಾಸಗಳೆಲ್ಲ ತತ್ಸಂಬಂಧವಾಗಿ ಭಾಷೆಯ ಮೂಲಕವೆ ಪ್ರಕಟವಾಗಬೇಕು; 2. ಕಾವ್ಯದ ಅಧ್ಯಯನ, ವಿಶ್ಲೇಷಣೆ, ವಿಮರ್ಶೆಗಳಿಗೆ ತೊಡಗುವಾಗ ಆಗಬಹುದಾದ ವೈಚಾರಿಕ ವ್ಯಭಿಚಾರ (irregularity) ಗಳನ್ನು ಇಂತಹ ವಿವೇಚನೆ ನಿಯಂತ್ರಿಸುತ್ತದೆ. ಆದರೆ ಕಾವ್ಯಕಲೆಯನ್ನು ಒಂದು ಕೌತುಕ (mystery) ವೆಂದು ಕರೆದು, ಅದನ್ನು ಪ್ರಯೋಗಶಾಲೆಯಲ್ಲಿಯ ಪರೀಕ್ಷಾ ವಿಧಾನಗಳಿಗೆ ಅಳವಡಿಸಿ, ವಿಶ್ಲೇಷಿಸುವುದು ಅಸಾಧ್ಯವೆಂಬ ವಿಮರ್ಶಕರ ಅಭಿಪ್ರಾಯ ಇಂತಹ ಪ್ರಯತ್ನವನ್ನು ಅಲ್ಲಗಳೆಯುತ್ತದೆ.

ಕಾವ್ಯವನ್ನಾಗಲೀ ಅಥವಾ ಇತರ ಯಾವುದೇ ಸಾಹಿತ್ಯಪ್ರಕಾರವನ್ನಾಗಲೀ (ಕೆಲವುಮಟ್ಟಿಗಾದರೂ) ವಸ್ತುನಿಷ್ಠವಾಗಿ ನೋಡುವುದು ಸಾಧ್ಯವೇ, ಇಲ್ಲವೇ ಎನ್ನುವುದು ನಿಜವಾಗಿ, ಒಂದು ಗಂಭೀರವಾದ ಪ್ರಶ್ನೆಯೇ ಅಲ್ಲ. ನಿತ್ಯೋಪಯೋಗಿ ಯಾದ ಭಾಷೆಯಾಗಲಿ ಅಥವಾ ಕಾವ್ಯಭಾಷೆಯಾಗಲಿ, ಅಥವಾ ಭಾಷೆಯಲ್ಲಿ ತೋರುವ ಬದಲಾವಣೆಗಳಾಗಲೀ ಬಹುಮಟ್ಟಿಗೆ ಕ್ರಮಬದ್ಧವಾಗಿ (regularly) ಪ್ರಕಟವಾಗುತ್ತವೆ ಎನ್ನುವುದೆ ಇವುಗಳನ್ನು ಕುರಿತ ವಸ್ತುನಿಷ್ಠ ಅಧ್ಯಯನಗಳಿಗೆ ಆಧಾರ. ಇಲ್ಲಿ 'ಸಂಪೂರ್ಣವಾಗಿ' ಎಂದು ಹೇಳದೆ 'ಬಹುಮಟ್ಟಿಗೆ' ಎಂದು ಹೇಳುವುದಕ್ಕೆ ಕಾರಣ ನಮ್ಮ ಜ್ಞಾಪಕಶಕ್ತಿ ಭಾಷೆಯ ಪ್ರಕಟನೆಯಲ್ಲಿ ಮಹತ್ವದ ಪಾತ್ರವನ್ನು ವಹಿಸಿ, ಅದರಲ್ಲಿ ತೋರುವ ಕ್ರಮಬದ್ಧತೆಯನ್ನು ಅಸ್ತವ್ಯಸ್ತ ಗೊಳಿಸುತ್ತದೆ. ಪ್ರತಿಯೊಬ್ಬ ವ್ಯಕ್ತಿಯ ಜ್ಞಾಪಕಶಕ್ತಿಯ ಪ್ರಮಾಣವೂ ಬೇರೆ ಬೇರೆಯಾಗಿರುವುದರಿಂದ ಅವರವರ ಭಾಷೆಯಲ್ಲಿ ಅಥವಾ ಅವರಿಂದಾಗುವ ಭಾಷೆಯ ಬದಲಾವಣೆಯಲ್ಲಿ ಈ ಕ್ರಮಬದ್ಧತೆ ಬೇರೆ ಬೇರೆ ಪ್ರಮಾಣದಲ್ಲಿ ಹಾಗೂ ಅನೇಕ ರೀತಿಗಳಲ್ಲಿ ವ್ಯತ್ಯಾಸಗೊಳ್ಳುತ್ತದೆ. ವಿಮರ್ಶಕರಲ್ಲಿ ತೋರುವ ಭಿನ್ನಾಭಿಪ್ರಾಯ ಗಳಿಗೂ ಈ ಕ್ರಮಬದ್ಧತೆಯಲ್ಲಿಯ ವ್ಯತ್ಯಾಸವೇ ಬಹುಮಟ್ಟಿಗೆ ಕಾರಣ. ಆದರೂ ಈ ಕ್ರಮಬದ್ಧತೆ ಎಲ್ಲರ ವಿಚಾರ ಪ್ರಕ್ರಿಯೆಗಳಲ್ಲಿಯೂ ಕಾಣಿಸಿಕೊಳ್ಳುವುದರಿಂದಲೆ ಭಾಷೆಯನ್ನು ಪರಸ್ಪರ ಅರ್ಥವಿಸುವುದಕ್ಕೆ ಸಾಧ್ಯವಾಗುತ್ತದೆ. ಆದರೆ ಸಾಮಾನ್ಯವಾಗಿ ಎಲ್ಲ ಸಾಹಿತ್ಯಿಕ ಭಾಷೆಗಳಲ್ಲಿಯೂ ಪ್ರಕಟವಾದ **ಪ್ರಾಯೋಗಿಕ ವಿಮರ್ಶ ಕೃ**ತಿಗಳನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸಿ, ಇನ್ನೊಂದೆಡೆ, 'ಕಾವ್ಯವು ಪರಸ್ಪರ ಸಂಬಂಧ ರಹಿತವಾದ ನಂಬಿಕೆ, ಊಹೆಗಳಿಂದ ತುಂಬಿದ ಜಗತ್ತಿನ ಕೇಂದ್ರಸ್ಥಾನ' (I. A.

Richards, 1929) ವೆಂದು ಹೇಳಿ, ಅದರ ವಸ್ತುನಿಷ್ಠ ವಿವೇಚನೆ ಅಸಾಧ್ಯ ಎಂಬ ವಿಮರ್ಶಕರ ನಿಲುವು ಆಶ್ಚರ್ಯಕರವಾಗಿ ತೋರುತ್ತದೆ. "ಒಂದು ಕಾವ್ಯವನ್ನು ಕುರಿತ ಆಲೋಚನೆ, ಅಭಿಪ್ರಾಯಗಳು ಸ್ವತಂತ್ರವಾಗಿ ಮೂಡಿಬರುವಂತೆ ಹಾಗೂ ಅದನ್ನು ಕುರಿತ ಆದರ ತಿರಸ್ಕಾರಗಳಿಗೆ ಕಾರಣವನ್ನು ಹೇಳುವ **ತಂತ್ರ**ವೊಂದನ್ನು **ಸಿದ್ಧಪಡಿಸಿ**ಕೊಡುವುದು ; ನಾವು ಓದುವುದನ್ನು ಹಾಗೂ ಕೇಳುವುದನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುವಂತೆ ಈಗಿರುವುದಕ್ಕಿಂತಲೂ ಉತ್ತಮವಾದ ಶೈಕ್ಷಣಿಕ **ವಿಧಾನ**ವೊಂದನ್ನು ರೂಪಿಸುವುದು" (I. A. Richards, 1929) ಎಂಬ ಗುರಿಯನ್ನಿಟ್ಟುಕೊಂಡ **ಪ್ರಾಯೋಗಿಕ** ವಿಮರ್ಶೆಗಳು ಆಶಯದಲ್ಲಿ ಶೈಲಿವಿಜ್ಞಾನಕ್ಕಿಂತ ಭಿನ್ನವಾಗಿಲ್ಲ. ಶೈಲೀಯ ವಿಮರ್ಶೆ (Stylistic Criticism)ಗಳ ಕಾರ್ಯವಿಧಾನ ಹೆಚ್ಚು ವಸ್ತುನಿಷ್ಠವಾದುದು ಅಷ್ಟೆ. ಮೇಲೆ ಪ್ರಯೋಗವಾದ **ಪ್ರಾಯೋಗಿಕ, ತಂತ್ರ, ಸಿದ್ಧತೆ, ವಿಧಾನ** ಮುಂತಾದ ಪದಗಳು ಕಾವ್ಯಭಾಷೆಯಲ್ಲಿಯ ವಾಕ್ಯ, ವಾಕ್ಯಗುಚ್ಛಗಳಲ್ಲಿರುವ ಪರಸ್ಪರ ಸಂಬಂಧಗಳನ್ನೆ ಆಧರಿಸಿ ಹುಟ್ಟಿಕೊಂಡಿವೆ. ಇವು ಪರೋಕ್ಷವಾಗಿ ಈ ಸಂಬಂಧಗಳ ವಸ್ತುನಿಷ್ಠ ವಿವೇಚನೆ ಸಾಧ್ಯವೆಂಬುದನ್ನೆ ಸೂಚಿಸುತ್ತವೆ. ಹಾಗಿಲ್ಲದಿದ್ದಲ್ಲಿ ವಿಮರ್ಶೆಗೆ 'ಮಾದರಿ' (model)ಯಾಗಿ ಬರುವ ಪ್ರಾಯೋಗಿಕ ವಿಮರ್ಶೆಗಳನ್ನೂ ಬಹಿಷ್ಕರಿಸಬೇಕಾಗುತ್ತದೆ. ಆದರೆ ಪ್ರಸಿದ್ಧ ವಿಮರ್ಶಕರಿಂದ ಶೈಲೀಯ ವಿಮರ್ಶೆಗಳ ಬಗೆಗೆ ಈವರೆಗೆ ಬಂದ ನಿರಾಶಾಯುತ ಪ್ರತಿಕ್ರಿಯೆಗಳು ವಸ್ತುನಿಷ್ಠ ವಿವೇಚನೆಯನ್ನೇ ಸಂಪೂರ್ಣವಾಗಿ ಅಲ್ಲಗಳೆಯುವಂಥಾದ್ದಾಗಿರದೆ ಭಾಷಾವಿಜ್ಞಾನಿಗಳು ಸೂಚಿಸಿದ ವಿಧಾನಗಳಲ್ಲಿಯ ಅಸಮರ್ಪಕತೆಯನ್ನು ಕುರಿತದ್ದೂ ಆಗಿದೆ ಎಂಬ ಅಂಶ ಚಿಂತನೀಯ.

2

ಕಾವ್ಯಭಾಷೆಯ ಗ್ರಹಣ (perception)ವನ್ನು ಕುರಿತು ವಿಶ್ಲೇಷಣೆ ನಡೆಸಲು ವಿಧಾನವೊಂದನ್ನು ರೂಪಿಸಹೊರಡುವ ಭಾಷಾವಿಜ್ಞಾನಿ ಏಕಕಾಲದಲ್ಲಿ ಎರಡು ಕಾರ್ಯಗಳನ್ನು ನಿರ್ವಹಿಸಬೇಕಾಗುತ್ತದೆ: (1) ಭಾಷಾವಿಜ್ಞಾನಿಯಾಗಿ ಕಾವ್ಯದಿಂದ ದೊರೆತ ಶಾಬ್ದಿಕ ಹಾಗೂ ಛಾಂದಸಿಕ ಪರಿಕರಗಳನ್ನು ವಿಶ್ಲೇಷಿಸುವುದು, (2) ಈ ವಿಶ್ಲೇಷಣೆಯ ಫಲಿತಾಂಶಗಳನ್ನು ತಾನೇ ವಿಮರ್ಶಕನಾಗಿ ಆ ಕಾವ್ಯದ ಬಗೆಗೆ ಹೇಳಬಹುದಾದ ಮಾತುಗಳೊಂದಿಗೆ ಹೋಲಿಸುವುದು. ಈ ರೀತಿಯಲ್ಲಿ ರೂಪಿತವಾಗಿದ್ದರೆ ಮಾತ್ರ ಅಂಥ ವಿಧಾನಕ್ಕೆ ವೈಚಾರಿಕವಾಗಿ ಮಹತ್ವ ಲಭಿಸೀತು. ಹಾಗಾಗದಿದ್ದಲ್ಲಿ ಕಾವ್ಯಭಾಷೆಯೆನ್ನುವುದು ಭಾಷಾವಿಜ್ಞಾನಿಯ ದೃಷ್ಟಿಗೆ ಇನ್ನೊಂದು ಭಾಷೆಯ ಮಾದರಿಯಾಗಿ (Sample) ತೋರಬಹುದೇ ಹೊರತು ಭಾಷೆಯ ಇನ್ನೊಂದು ಪ್ರಕಾರವಾಗಿ ತೋರಲಿಕ್ಕಿಲ್ಲ. ಆದರೆ ವಿಶ್ಲೇಷಣೆಯ ವಿಧಾನ ರಚನೆಗೆ ಅಡ್ಡಿಯಾಗುವ ಒಂದು ಮುಖ್ಯ ತೊಂದರೆಯೆಂದರೆ ಕಾವ್ಯವನ್ನು ಕುರಿತ ಯಾವುದೇ

ವ್ಯಾವಹಾರಿಕವಾದ ವ್ಯಾಖ್ಯೆಯೂ (Operational definition) ದೊರೆಯದಿರುವುದು. ಕಾವ್ಯದ ಬಗೆಗೆ ನಮಗಿರುವ ಕಲ್ಪನೆ ತೀರ ಅಸ್ಪಷ್ಟವಾದುದೆ ಇದಕ್ಕೆ ಕಾರಣ. ಆದ್ದರಿಂದ ಭಾಷಾವಿಜ್ಞಾನಿಯ ದೃಷ್ಟಿ ಯಾವುದು ಕಾವ್ಯ ಎನ್ನುವುದರ ಬದಲಾಗಿ ಕಾವ್ಯದಲ್ಲಿ ಏನಿದೆ ಎನ್ನುವುದರ ಕಡೆಗೆ ಹೊರಳುತ್ತದೆ. ಸ್ವಾಭಾವಿಕವಾಗಿ ಕಾವ್ಯದ ಭಾಷೆ ಹಾಗೂ ಈ ಭಾಷೆಯ ವ್ಯವಹಾರ ಅಥವಾ ಛಂದೋರಚನೆ ಶೈಲಿ ವಿಶ್ಲೇಷಣೆಯ ವಿಷಯಗಳಾಗುತ್ತವೆ. ಭಾಷೆ ಮತ್ತು ಛಂದಸ್ಸುಗಳ ರಚನೆಯನ್ನು ಕಾವ್ಯರಚನೆಯೊಂದಿಗೆ ಸಮೀಕರಿಸಲು ಸಾಧ್ಯವಿಲ್ಲವೆಂಬುದು ಒಪ್ಪಬೇಕಾದ ಸಂಗತಿ. ಇದರಿಂದ ಶೈಲೀಯ ವಿಧಾನವು (Stylistic method) ಮೌಲ್ಯಮಾಪನದ ಹಂತದಲ್ಲಿ ಬಹುಮಟ್ಟಿಗೆ ಅಪ್ರಯೋಜಕವೆಂದು ಅರ್ಥವಾಗಬಹುದೇ ಹೊರತು ವಿಶ್ಲೇಷಣೆ, ವ್ಯಾಖ್ಯಾನಗಳಿಗೆ ಸಹಾಯಮಾಡುವುದಿಲ್ಲವೆಂದಲ್ಲ. ಮೌಲ್ಯಮಾಪನದಲ್ಲಿ ತೋರಿಸುವ ಯಶಸ್ಸು ವಿಶ್ಲೇಷಣೆಯ ಯಶಸ್ಸನ್ನೂ ಕೆಲಮಟ್ಟಿಗಾದರೂ ಅವಲಂಬಿಸಿದೆ ಎಂಬ ಮಾತನ್ನು ಒಪ್ಪಿಕೊಂಡರೆ, ಕಾವ್ಯವಿಮರ್ಶೆಯ ಈ ಕೊನೆಯ ಹಂತದಲ್ಲಿಯೂ ಶೈಲೀಯ ವಿಧಾನವನ್ನು ಸಂಪೂರ್ಣವಾಗಿ ನಿರ್ಲಕ್ಷಿಸುವಂತಿಲ್ಲ.

3

ಕಾವ್ಯಭಾಷೆಯ ಬಗೆಗೆ ಭಾಷಾವಿಜ್ಞಾನಿಗಳು ನೀಡಿದ ವಿವರಣೆ-ವಿಶ್ಲೇಷಣೆಗಳು ದೋಷಮುಕ್ತವಾಗಿಲ್ಲ ಎಂಬ ಅಂಶವನ್ನು ಹಿಂದೆಯೇ ಪ್ರಸ್ತಾಪಿಸಿದ್ದೇನೆ. ಅವುಗಳಲ್ಲಿ ಕೆಲವನ್ನು ಕುರಿತು ಇಲ್ಲಿ ಚರ್ಚಿಸಬಹುದು. ಕಾವ್ಯಭಾಷೆಯಲ್ಲಿ ತೋರುವ ರೂಪ ವಿಪರ್ಯಾಸ[2] (foregrounding) ಹಾಗೂ ಅದರಲ್ಲಿಯ ಪದ, ಪದಬಂಧ, ವಾಕ್ಯರಚನೆ ಇವುಗಳಲ್ಲಿ ತೋರುವ ಸಂಘಟನಾ ಶಕ್ತಿ (cohesive power) ಇವುಗಳನ್ನೇ ಕುರಿತ ಚರ್ಚೆಗಳು ಒಟ್ಟಿನಲ್ಲಿ ಕೆಲವು ಉತ್ತಮವಾದ ಅಂಶಗಳನ್ನೇನೊ ಹೇಳುತ್ತವೆ. ಆದರೆ ಕಾವ್ಯವಿಮರ್ಶೆಗೆ ಸಂಬಂಧಪಟ್ಟಂತೆ ಅವುಗಳ ಪ್ರಯೋಜನ ಸೊನ್ನೆ. ಈ ಭಾಷಾಪ್ರಕಾರವನ್ನು ಹೇಗೆ ಗ್ರಹಿಸಲಾಗುತ್ತದೆ ಎಂಬುದರ ಬಗೆಗೂ ಅವು ಏನನ್ನೂ ಹೇಳುವುದಿಲ್ಲ. ಅಲ್ಲದೆ ರೂಪವಿಪರ್ಯಾಸದ ಕಲ್ಪನೆಯ ಹಿಂದೆ ಅಡಗಿರುವ ಒಂದು ಅಪಾಯಕಾರಿ ಅಂಶವೆಂದರೆ ನಿತ್ಯೋಪಯೋಗಿ ಭಾಷೆಯ ರೂಪವನ್ನು ವಿಪರ್ಯಾಸಗೊಳಿಸುವುದರಿಂದಲೆ ಕಾವ್ಯರಚನೆ ಸಾಧ್ಯವೆನ್ನುವುದು. "ಯಾವುದೇ ಭಾಷೆಯಲ್ಲಿ ಅದರ ಶಿಷ್ಟಭಾಷೆಯ ಮಟ್ಟ (norm) ಹೆಚ್ಚು ಸ್ಥಿರವಾಗಿದ್ದಂತೆ ಅದನ್ನು ವಿರೂಪಗೊಳಿಸಲು ಹೆಚ್ಚಿನ ಅವಕಾಶಗಳಿರುತ್ತವೆ. ಹಾಗೂ ಇದರಿಂದ ಕಾವ್ಯರಚನೆಗೂ ಹೆಚ್ಚಿನ ಸಾಧ್ಯತೆ ಲಭಿಸುತ್ತದೆ. ಈ ಮಟ್ಟ

---

[2] 'ಹೂವು ಹಾಡಿತು' 'ಮನೆಗಳು ಮಲಗಿವೆ' 'ದಾಳಿಂಬೆ ನಕ್ಕಿತು' ಮುಂತಾದವುಗಳು ದಿನಬಳಕೆಯ ಭಾಷೆಯಲ್ಲಿ ಚಲಾವಣೆಹೊಂದದ ವಾಕ್ಯಗಳು. ಕಾರಣ ಇವು ಅರ್ಥವಾಗದ (semantically odd) ವಾಕ್ಯಗಳು. ಆದರೆ ಕಾವ್ಯದಲ್ಲಿ ಇಂತಹ ವಾಕ್ಯಗಳು ಬರಬಹುದು. ಇಂತಹ ವಾಕ್ಯಗಳಿಗೆ ರೂಪವಿಪರ್ಯಾಸಗೊಂಡ ವಾಕ್ಯಗಳು ಎನ್ನುತ್ತಾರೆ

ಅಸ್ಥಿರವಾಗುವಂಥದಾಗಿದ್ದರೆ (ಸಾಕಷ್ಟು ವ್ಯತ್ಯಾಸಗೊಳ್ಳುವಂಥದಾಗಿದ್ದರೆ) ಅದನ್ನು ವಿರೂಪಗೊಳಿಸಲು ಇರುವ ಅವಕಾಶ ಕಡಿಮೆ ಆದ್ದರಿಂದ (ಅಂತಹ ಭಾಷೆಯಲ್ಲಿ) ಕಾವ್ಯರಚನೆಯ ಸಾಧ್ಯತೆಯೂ ಕಡಿಮೆ." "ರೂಪವಿಪರ್ಯಾಸವಿಲ್ಲದೆ ಕಾವ್ಯ ರಚನೆ ಸಾಧ್ಯವಿಲ್ಲ"–ಎಂಬ ಜಾನ್ ಮುಕಾರೋವಸ್ಕಿಯ ಮಾತುಗಳನ್ನು ಪರಿಶೀಲಿಸಬಹುದು. (ನೋಡಿ: Donald C. Freeman (Ed), 1970) ಕಾವ್ಯವೆಂದರೆ ಚಮತ್ಕಾರ ಎಂದು ಇನ್ನೊಂದು ಬಗೆಯಲ್ಲಿ ಹೇಳುವ ರೀತಿಯಿದು !

ವ್ಯಾಕರಣ ವಿವೇಚನೆ ಹಾಗೂ ಗಣಕಯಂತ್ರದ ಸಹಾಯದಿಂದ ನಡೆಸುವ ಸಂಖ್ಯಾಶಾಸ್ತ್ರೀಯ ವಿಧಾನಗಳು (statistical approach) ಕಾವ್ಯವಿಶ್ಲೇಷಣೆಯ ಒಂದು ಮುಖದಲ್ಲಿ ಯಶಸ್ವಿಯಾಗಿವೆ. ಕಾವ್ಯವನ್ನು ಓದಿದಾಗ ಅನ್ನಿಸಬಹುದಾದ 'ಬಿಗಿ' 'ಸರಳ' 'ಸಂಕೀರ್ಣ' ಮುಂತಾದ ವೈಯಕ್ತಿಕ ಶೈಲಿವಿಶೇಷಗಳನ್ನು (ideosyncratic style features) ವಸ್ತುನಿಷ್ಠವಾದ ವಿಧಾನಗಳಿಂದ ಖಚಿತವಾಗಿ ತಿಳಿದುಕೊಳ್ಳಬಹುದು. ಆದರೆ ಇದು ಕಾವ್ಯವಿಮರ್ಶೆಗೆ ನೇರವಾಗಿ ಸಂಬಂಧಿಸಿದುದಲ್ಲ. ಕಾರಣ ಒಬ್ಬ ಕವಿ ಒಂದು (ಅಥವಾ ಕೆಲವು) ನಿರ್ದಿಷ್ಟ ಶೈಲಿಯನ್ನು ಪ್ರಕಟಪಡಿಸುತ್ತಾನೆಂದ ಮಾತ್ರಕ್ಕೆ ಅವನ ಕಾವ್ಯದ ಗುಣಮಟ್ಟ ಉತ್ತಮವಾಗಿದೆಯೆಂದು ಅರ್ಥವಲ್ಲ. ಕಾವ್ಯವಿಶ್ಲೇಷಣೆಯ ಇನ್ನೊಂದು ಮುಖದಲ್ಲಿ'ಕಾವ್ಯಭಾಷೆಯನ್ನು ಅರ್ಥೈಸುವುದರಲ್ಲಿ–ವ್ಯಾಕರಣ ರಚನೆಯನ್ನು ಕುರಿತು ವಿವೇಚನೆ ಫಲವತ್ತಾದದ್ದೆನ್ನು-ವುದರಲ್ಲಿ ಸಂಶಯವಿಲ್ಲ. ಆದರೆ ಇಲ್ಲಿಯೂ ವಿವರಣೆಗಳು ಕೆಲವೊಮ್ಮೆ ಚಮತ್ಕಾರ (artifact)ಗಳಾಗುವ ಅಪಾಯ ಇಲ್ಲದಿಲ್ಲ. ಕಾವ್ಯಭಾಷೆಯನ್ನು ವಿವರಿಸಲು ತೊಡಗುವ ಯಾವುದೆ ವ್ಯಾಕರಣ ಮಾದರಿ (grammatical model) ಈ ಕೆಲವು ಮೂಲಭೂತ ಪ್ರಶ್ನೆಗಳನ್ನು ಉತ್ತರಿಸಬೇಕಾಗುತ್ತದೆ: (1) ಕಾವ್ಯಭಾಷೆಯ ವ್ಯಾಕರಣ ಎಂದರೇನು ? (2) ಆಧುನಿಕ ಭಾಷಾ ವಿಜ್ಞಾನಿಗಳ ಪ್ರಕಾರ "ಒಂದು ಭಾಷೆಗಾಗಿ ರಚಿಸಿದ ವ್ಯಾಕರಣವು ಆ ಭಾಷೆಯಲ್ಲಿ ಮಾತನಾಡುವ ವ್ಯಕ್ತಿ ಹೇಳುವ, ಕೇಳುವ, ಗ್ರಹಿಸುವ, ವ್ಯಾಖ್ಯಾನಿಸುವ ಹಾಗೂ ಹೊಸ ಹೊಸ ಭಾಷಾರೂಪಗಳನ್ನು ಒಂದು ನಿರ್ದಿಷ್ಟವಾದ ಕ್ರಮದಲ್ಲಿ ಸೃಷ್ಟಿಸುವ ರೀತಿಯನ್ನು ವಿವರಿಸುವಂತಿರಬೇಕು.' (Chomsky, 1968)[3] ನಿತ್ಯಭಾಷೆಗಾಗಿ ರಚಿತವಾದ ಇಂತಹ ವ್ಯಾಕರಣವು

[3] ವ್ಯಾಕರಣವನ್ನು ಕುರಿತ ಈ ವ್ಯಾಖ್ಯೆ (definition) ತೀರ ವೈಜ್ಞಾನಿಕವಾದದ್ದೇನೂ ಅಲ್ಲ. ಕಾರಣ ಭಾಷಾರೂಪಗಳನ್ನು ಸೃಷ್ಟಿಸುವುದರಲ್ಲಿ ನಡೆಯುವ ಪ್ರತಿಕ್ರಿಯೆಗಳು, ಅವುಗಳನ್ನು ಕೇಳುವ, ಗ್ರಹಿಸುವ ಕಾಲದಲ್ಲಿ ನಡೆಯುವ ಮಾನಸಿಕ ಪ್ರತಿಕ್ರಿಯೆಗಳಿಗಿಂತ ಕೆಲಮಟ್ಟಿಗೆ ಭಿನ್ನವಾಗಿವೆ. ಆದ್ದರಿಂದ ಭಾಷಾರೂಪಗಳನ್ನು ಸೃಷ್ಟಿಸಲು ನೆರವಾಗುವ ನಿಯಮಗಳೆಲ್ಲ, ಅವುಗಳನ್ನು ಅರ್ಥಮಾಡಿಕೊಳ್ಳುವಾಗಲೂ ನೆರವಾಗುತ್ತವೆ ಎಂದು ಹೇಳುವಂತಿಲ್ಲ. ಆದರೆ ಚಾಮ್‌ಸ್ಕಿಯ ಈ ವ್ಯಾಖ್ಯೆ 'ಹೇಳುವ – ಕೇಳುವ' – ಎರಡೂ ರೂಪಗಳಿಗೂ ಒಂದೇ ವ್ಯಾಕರಣವಿರಬೇಕೆಂಬುದನ್ನು ಪರೋಕ್ಷವಾಗಿ ಹೇಳುತ್ತದೆ.

ಕಾವ್ಯಭಾಷೆಯನ್ನು ಗ್ರಹಿಸುವಾಗ ನಡೆಯಬಹುದಾದ ಮಾನಸಿಕ ಪ್ರಕ್ರಿಯೆಗಳನ್ನು ಸಮರ್ಪಕವಾಗಿ ವಿವರಿಸಬಲ್ಲದೇ ? ಇದೇ ಪ್ರಶ್ನೆಯನ್ನು ಮತ್ತೊಂದು ರೀತಿಯಲ್ಲಿ ಇಡಬಹುದು: ಕಾವ್ಯಭಾಷೆಯ ಗ್ರಹಿಕೆಯನ್ನು ವಿವರಿಸಲು ಮನಸ್ಸಿನಲ್ಲಿ ನಡೆಯುವ ಕೇವಲ ಶಾಬ್ದಿಕ ಪ್ರಕ್ರಿಯೆ (verbal process)ಗಳನ್ನು ಗಮನಿಸಿದರೆ ಸಾಕೇ ? ಅಥವಾ ಪ್ರತಿಮಾರಚನೆ ಮುಂತಾದ ಇತರ (non-verbal) ಪ್ರಕ್ರಿಯೆಗಳನ್ನೂ ಗಮನಿಸುವುದು ಅವಶ್ಯವಾಗುತ್ತದೆಯೆ ? (3) ಕಾವ್ಯದಲ್ಲಿ ತೋರುತ್ತದೆಯೆಂದು ಹೇಳಲಾಗುವ ಸೃಷ್ಟ್ಯಾತ್ಮಕತೆಯನ್ನು ಹೇಗೆ ವಿವರಿಸಬೇಕು ? ಈ ಸೃಷ್ಟ್ಯಾತ್ಮಕತೆ ಯೆಂಬುದು ನಮ್ಮ ಉಪಲಬ್ಧ ವ್ಯಾಕರಣ ಮಾದರಿಗಳಿಗೆ ಹೊಂದಿಕೊಳ್ಳದ ಭಾಷಾ ರಚನೆಗಳಿಗೆ ಅನ್ವಯವಾಗುತ್ತದೆಯೇ ಅಥವಾ ಅದು ಬೇರೆ ಇನ್ನಾವುದಾದರೂ ಸ್ತರಗಳಲ್ಲಿ ಕಾಣಿಸಿಕೊಳ್ಳುತ್ತದೆಯೇ ?

ಥೋರ್ನ್ ಎಂಬ ಭಾಷಾವಿಜ್ಞಾನಿ ಕಾವ್ಯಭಾಷೆಯನ್ನು ಬೇರೊಂದು ಭಾಷೆಯ ಮಾದರಿಯಾಗಿ ಪರಿಗಣಿಸಿ, ಅದಕ್ಕಾಗಿಯೆ ಪ್ರತ್ಯೇಕವಾದ ವ್ಯಾಕರಣ ವೊಂದನ್ನು ರಚಿಸಿ ಅದನ್ನು ವಿವರಿಸಬೇಕಾಗುತ್ತದೆ ಎನ್ನುತ್ತಾನೆ. (J. P. Thorne in Donald Freeman (Ed), 1970) ಇದನ್ನೊಪ್ಪಿದರೆ ವ್ಯಾಕರಣಕ್ಕಾಗಿ ಭಾಷೆ ಎಂದು ಹೇಳಿದ ಹಾಗಾಗುತ್ತದೆ. ಇಂತಹ ವ್ಯಾಕರಣಗಳು ಭಾಷೆಯ ಹೊರರಚನೆ (surface structure)ಯನ್ನು ಮಾತ್ರ ಗಮನಿಸಿ ಮಾಡಿದ ಚಮತ್ಕಾರಗಳಾಗು ತ್ತವೆಯೆ ಹೊರತು ಭಾಷೆಯನ್ನು ಅರ್ಥವಿಸಲು ಸಹಾಯಕವಾಗುವುದಿಲ್ಲ. ಒಂದು ವೇಳೆ, ಹಾಗಿಲ್ಲವೆಂದುಕೊಂಡರೆ ಒಬ್ಬನೇ ಓದುಗ/ವಿಮರ್ಶಕ ಪ್ರತಿಯೊಂದು ಕವನ ವನ್ನು ಓದುವಾಗಲೂ ಒಂದೊಂದು ರೀತಿಯ ಭಾಷಾಸಾಮರ್ಥ್ಯ (competence model)ವನ್ನು ಸಿದ್ಧಪಡಿಸಿಕೊಳ್ಳುತ್ತಾನೆ ಎನ್ನಬೇಕಾಗುತ್ತದೆ. ಉದಾಹರಣೆಗೆ–

(a) "ನಾನಾದೆ ನಕ್ಷತ್ರನೀಲಿ ; ಕಂಪಿನಲಾಲಿ."[4]

(b) "ಹಾರಿರೋ ಸೇರಿರೋ ಹರಿವ ನೀರ
ಉರಿವ ಬೆಳಕ
ಹಿರಿಗಾಳಿಯ ನೆರೆಯನು."[5]

ಈ ಸಾಲುಗಳನ್ನು ವ್ಯಾಕರಣಬದ್ಧರಚನೆಯೆಂದು ಸಾರಲು ಇವುಗಳಿಗೆ ಅನ್ವಯಿಸುವ ವ್ಯಾಕರಣ ನಿಯಮಗಳನ್ನು ರಚಿಸುವುದೇನೂ ಅಸಾಧ್ಯವಲ್ಲ. ಆದರೆ ಈ ನಿಯಮಗಳಿಂದ ಹೊರಡುವ ಅರ್ಥ ನಿಯೋಗಾತ್ಮಕವಾದುದೇ ಹೊರತು ನಮಗೆ

---

[4] ಕೆ. ಎಸ್. ನರಸಿಂಹಸ್ವಾಮಿ : 'ಶಿಲಾಲತೆ.'
[5] ದ. ರಾ. ಬೇಂದ್ರೆ : 'ನಾದಲೀಲೆ'

ಪ್ರತೀತಿಯಾಗುವ ಅರ್ಥವಲ್ಲ. ಅಲ್ಲದೆ ಪರಸ್ಪರ ವಿರೋಧವಾದ ಎರಡು ರಚನೆಗಳು ಒಂದೇ ಕವನದಲ್ಲಿ ಬಂದಾಗ ಅವುಗಳನ್ನು ಒಂದೇ ವ್ಯಾಕರಣದಲ್ಲಿ ಹೊಂದಿಸಿಕೊಳ್ಳುವುದು ಹೇಗೆಂಬುದು ತಿಳಿಯುವುದಿಲ್ಲ. ಉದಾಹರಣೆಗೆ, "ನಾನಾದೆ ನಕ್ಷತ್ರ ನೀಲಿ" ಎಂಬ ಸಾಲು ಕಾಣಿಸಿಕೊಳ್ಳುವ ಕವನದಲ್ಲಿಯೆ "ನಾನಾದೆ ಮುದುಕ" ಎಂಬಂತಹ ಒಂದು ಸಾಲು ಕಾಣಿಸಿಕೊಂಡರೆ ಅವುಗಳಲ್ಲಿ ಒಂದನ್ನು ವ್ಯಾಕರಣ ಬದ್ಧವೆಂದು ಸ್ವೀಕರಿಸಿ ಇನ್ನೊಂದಕ್ಕೆ 'ಅಪವಾದ'ದ ಪಟ್ಟಿಯನ್ನು ಹಚ್ಚಬೇಕಾಗುತ್ತದೆ!

ಥೋರ್ನೆಯ ವಿಶ್ಲೇಷಣೆ ಹೇಗೆ ಚಮತ್ಕಾರದತ್ತ ತಿರುಗುತ್ತದೆಯೆಂಬುದನ್ನು ಒಂದು ಉದಾಹರಣೆಯೊಂದಿಗೆ ನೋಡಬಹುದು : "he danced his did" ಎಂಬ ವಾಕ್ಯದಲ್ಲಿ "danced" ಎಂಬುದು ಅಕರ್ಮಕ ಕ್ರಿಯಾಪದವಾದದ್ದರಿಂದ ಅದರ ಮುಂದಿನ ಎರಡು ಪದಗಳಿಗೆ ಸ್ಥಾನವಿಲ್ಲ. ಆದ್ದರಿಂದ "his did" ಶೂನ್ಯವಾಗುತ್ತದೆ (did—> $\emptyset$) ಎಂದು ಹೇಳಿ ಈ ಪದಗಳಿಗೆ ಕವನದಲ್ಲಿ ಅರ್ಥವಿಲ್ಲವೆಂದು ಹೇಳಬಹುದು. ಒಂದು ವೇಳೆ, ಇವುಗಳನ್ನು ಉದಾರವಾಗಿ ಸ್ವೀಕರಿಸಿದರೆ, "did" ಎಂಬುದನ್ನು ಕರ್ಮದ ಸ್ಥಾನದಲ್ಲಿರುವ ನಾಮಪದ ಎಂದು ಹೇಳಿ "danced" ಎಂಬುದನ್ನು ಸಕರ್ಮಕ ಕ್ರಿಯಾಪದ ಎಂದು ವ್ಯಾಕರಣ ನಿಯಮದಲ್ಲಿ 'ತಿದ್ದುಪಡಿ' ಮಾಡಬೇಕಾಗುತ್ತದೆ. ಅಥವಾ "did" ಎಂಬುದನ್ನು "do" ಎಂಬ ಕ್ರಿಯಾಪದದ ಭೂತಕಾಲರೂಪ ಎನ್ನಬೇಕು. ಈ ರೀತಿ ವಿವರಣೆ ನೀಡುತ್ತ ಥೋರ್ನೆ ಈ ವಾಕ್ಯಕ್ಕೆ (ಲೆವಿನ್ ಸೂಚಿಸಿದ ಎರಡು ರೀತಿಯ ವಿಶ್ಲೇಷಣೆಗಳನ್ನೂ ಸೇರಿಸಿ) ಒಟ್ಟು ಐದು ರೀತಿಯ ವಿಶ್ಲೇಷಣೆಯನ್ನು ನೀಡುವುದು ಸಾಧ್ಯವೆನ್ನುತ್ತಾನೆ. ಆದರೆ ಕವನದ ಒಟ್ಟು ಚೌಕಟ್ಟಿನೊಳಗೆ ಈ ಐದು ರೂಪಗಳೂ ಸ್ವೀಕೃತವಾಗುತ್ತವೆಯೆ ? ಅಥವಾ ಕೇವಲ ಒಂದು ಮಾತ್ರವೇ ? ಇದನ್ನು ಹೇಗೆ ಅರ್ಥೈಸಬೇಕು ?–ಎಂಬುದರ ಬಗೆಗೆ ಏನನ್ನೂ ಹೇಳುವುದಿಲ್ಲ. ವಾಕ್ಯ ವಿಶ್ಲೇಷಣೆಗಳು, ಅರ್ಥಪ್ರತೀತಿಯ ಸಂದರ್ಭದಲ್ಲಿ ನಡೆಯುವ ಮಾನಸಿಕ ಪ್ರಕ್ರಿಯೆಗಳಿಗೆ ಸಂವಾದಿಯಾಗಿ ಬರುತ್ತವೆ ಎಂದುಕೊಂಡರೆ ಮೇಲೆ ಹೇಳಿದ ವಾಕ್ಯದಲ್ಲಿ ಅನೇಕಾರ್ಥಗಳು ಹುದುಗಿವೆ ಎಂದು ತಿಳಿದು, ಅವುಗಳಿಗಾಗಿ ಹುಡುಕಾಡಬೇಕಾಗುತ್ತದೆ. ಆದರೆ ಎಷ್ಟು ಹುಡುಕಾಡಿದರೂ ಕೊನೆಗೆ ಅರ್ಥಗಳೆಲ್ಲಿ ಎಂಬ ಪ್ರಶ್ನೆ ಹಾಗೆಯೇ ಭದ್ರವಾಗಿ ಉಳಿಯುತ್ತದೆ.

ವ್ಯಾಕರಣ ವಿಶ್ಲೇಷಣೆಯ ವಿಧಾನದಲ್ಲಿ ಇನ್ನೊಂದು ಪರಿಮಿತಿ ಇದೆಯೆನಿಸುತ್ತದೆ. ಉದಾಹರಣೆಗೆ "they loved tree by leaf" ಎಂಬ ವಾಕ್ಯವನ್ನು ತೆಗೆದುಕೊಂಡು ನೋಡಬಹುದು. ಇದಕ್ಕೆ ಎರಡು ಅರ್ಥಗಳಿರುವುದು ಸಾಧ್ಯ : (1) 'ಅವರು ಹಿತಮಿತವಾಗಿ ಪ್ರೀತಿಸಿದರು', (2) 'ಅವರು ಅತಿಯಾಗಿ/ನಿರಂತರ

ವಾಗಿ ಪ್ರೀತಿಸಿದರು.' ಮೇಲಿನ ವಾಕ್ಯವನ್ನು ಪ್ರತ್ಯೇಕವಾದ ಎರಡು ಸಂದರ್ಭ ಗಳಲ್ಲಿಟ್ಟು ಈ ಅರ್ಥಗಳನ್ನು ಖಚಿತಪಡಿಸಿಕೊಳ್ಳಬಹುದು :

(1.1) "they loved little by little, tree by leaf."

(1.2) "they loved when by now, tree by leaf."

ಇಲ್ಲಿ "tree by leaf" ಎಂಬ ಪದಗುಚ್ಛಕ್ಕೆ ಇರುವ ಎರಡು ಅರ್ಥಗಳು ಕೇವಲ ಸಾಂದರ್ಭಿಕ ಎನ್ನುವಂತಿಲ್ಲ. ಅಥವಾ ಇದು ಒಳ್ನುಡಿ (idiom)ಯ ಸ್ಥಾನ ಪಡೆದು ಶ್ಲೇಷೆಯಾಗಿ ಬಳಕೆಯಾಗಿದೆ ಎಂದು ಹೇಳುವುದೂ ಕಷ್ಟ. ಕಾರಣ ಇಲ್ಲಿ "tree" ಹಾಗೂ "leaf" ಎಂಬ ಪದಗಳು ಪ್ರತ್ಯೇಕವಾಗಿಯೇ ಪ್ರತೀತಿಗೊಳ್ಳುತ್ತವೆ. ಮೇಲಿನ ವಾಕ್ಯದಲ್ಲಿ ಹುದುಗಿರುವ ಎರಡು ಅರ್ಥಗಳಿಗೆ ಪ್ರತ್ಯೇಕವಾದ ಒಳರಚನೆ ಗಳನ್ನು ಹೆಸರಿಸಿ, ಅವುಗಳನ್ನು ಸೇರಿಸಿ ವಾಕ್ಯದ ಹೊರರಚನೆ (surface structure) ("they loved tree by leaf")ಯನ್ನು ಸಾಧಿಸುವುದೂ ಕಷ್ಟದ ಕೆಲಸ. ಇಂತಹ ಕಡೆ ಕೇವಲ ವ್ಯಾಕರಣ ವಿಶ್ಲೇಷಣೆಯಿಂದಾಗುವ ಲಾಭ ಅಷ್ಟಕ್ಕಷ್ಟೆ.

ಹೀಗೆ ಕಾವ್ಯಭಾಷೆಯ ಅರ್ಥ ಪ್ರತೀತಿಯಾಗುವ ರೀತಿಯನ್ನು ವಿವರಿಸುವಾಗ ಅಥವಾ ಅದನ್ನು ವ್ಯಾಖ್ಯಾನಿಸುವಾಗ ಅಂಶಿಕವಾಗಿ ವ್ಯಾಕರಣಬದ್ಧವಾದ (semigrammatical) (ಉದಾಹರಣೆಗೆ, "ನಾನಾದೆ ನಕ್ಷತ್ರನೀಲಿ") ವಾಕ್ಯಗಳದ್ದು ಒಂದು ರೀತಿಯ ಸಮಸ್ಯೆಯಾದರೆ, ಸಂಕೇತ–ಪ್ರತಿಮೆಗಳ ವಿಷಯದಲ್ಲಿ ಬರುವ ಸಮಸ್ಯೆ ಇನ್ನೂ ತೊಡಕಿನದು. ಇವೆಲ್ಲವುಗಳನ್ನೂ ಕುರಿತು ವಿವರಿಸುವುದು ಈ ಲೇಖನದ ಉದ್ದೇಶವಲ್ಲ. ಅಂಶಿಕವಾಗಿ ವ್ಯಾಕರಣಬದ್ಧವೆಂದು ತೋರಬಹುದಾದ ವಾಕ್ಯ ಅಥವಾ ಪದಗುಚ್ಛಗಳನ್ನು ಹೇಗೆ ಅರ್ಥೈಸಬಹುದು ಎಂಬುದನ್ನು ಕುರಿತ ವಿವರಣೆ ಮಾತ್ರ ಇಲ್ಲಿ ಪ್ರಸ್ತುತ.

ಸಾಧಾರಣೀಕರಣ ತತ್ವ (principle of abstraction) ಕಾವ್ಯಭಾಷೆಯನ್ನು ಅರ್ಥೈಸುವುದರಲ್ಲಿ ಪ್ರಯೋಜನಕಾರಿಯಾಗಬಹುದು. ಇಲ್ಲಿ ಸಾಧಾರಣೀಕರಣ ಎಂದರೇನು ಎಂಬುದನ್ನು ನಾನು ಹೇಳಬೇಕು. ಸಾಧಾರಣೀಕರಣ ಬೇರೆ ಬೇರೆ ರೇಖೆ (axis) ಗುಂಟ ಅವತರಿಸಬಹುದು. ಇದು ವಾಕ್ಯರೇಖೆಯಲ್ಲಿ ಅವತರಿಸಿದೆ ಎಂದರೆ ಪದವೊ ಪದಗುಚ್ಛವೊ ಏಕಕಾಲದಲ್ಲಿ ಅನೇಕ ವ್ಯಾಕರಣ ವರ್ಗಕ್ಕೆ ಸೇರುತ್ತದೆ ಎಂದರ್ಥ. ಉದಾಹರಣೆಗೆ "he danced his did" ಎಂಬಲ್ಲಿಯ "did" ಎಂಬುದು ಮೂರು ವರ್ಗಗಳನ್ನು ಪ್ರತಿನಿಧಿಸುತ್ತದೆ. (a) ಇದು ಈ ವಾಕ್ಯದಲ್ಲಿ, ನಾಮಪದವು ಶೂನ್ಯವಾಗಬೇಕಾದ ಸ್ಥಾನದಲ್ಲಿ ಬಂದಿದೆ; ($NP_2 \rightarrow \emptyset$). (b) "danced" ಎಂಬ ಕ್ರಿಯೆಯ ವಸ್ತು (ಕರ್ಮ) ವಾಗಿ ಬಂದಿದೆ; (c) "do" ಎಂಬುದರ ಭೂತ ಕಾಲದ ರೂಪವಾಗಿದೆ. ಹೀಗೆ ಒಂದೇ ಪದ ಹೆಚ್ಚು ಹೆಚ್ಚು ವ್ಯಾಕರಣ ವರ್ಗಗಳಿಗೆ ಸೇರಿದಂತೆ ಸಾಧಾರಣೀಕರಣದ ಪ್ರಮಾಣವೂ ಹೆಚ್ಚಾಗುತ್ತದೆ. ಅರ್ಥರೇಖೆ

(semantic axis) ಯೊಂದಿಗೆ ಸಾಧಾರಣೀಕರವು ತಲೆದೋರಿದೆಯೆಂದಾಗ, ಒಂದು ಪದದಿಂದ ಒಂದೊ, ಎರಡೊ ಅಥವಾ ಅನೇಕ ಅಂಶಗಳು (semantic features)



ವಿವಕ್ಷಿತ ಸಂದರ್ಭದಲ್ಲಿ, ಬಿಟ್ಟುಹೋಗಿವೆಯೆಂದೊ, ಹೊಸದಾಗಿ ಬಂದು ಸೇರಿ ಕೊಂಡಿವೆಯೆಂದೊ ಅಥವಾ ಕೆಲವು ಅಂಶಗಳ ಬದಲಾಗಿ ಇನ್ನು ಕೆಲವು ಬಂದು ಸೇರಿ ಕೊಂಡಿವೆಯೆಂದೊ ಅರ್ಥ. (ವ್ಯಾಕರಣದ ಪರಿಭಾಷೆಯಲ್ಲಿ ಹೇಳುವುದಾದರೆ ಅರ್ಥಾಂಶಗಳು ಲೋಪ,ಆಗಮ ಅಥವಾ ಆದೇಶಗಳಾಗಿ ಬರಬಹುದು.)ಉದಾಹರಣೆಗೆ "ಊರೊಳಗೆ ಕಾಡಾನೆ ನುಗ್ಗಿತು" ಎಂಬ ವಾಕ್ಯದಲ್ಲಿಯ "ಕಾಡಾನೆ" ಎಂಬ ಪದವನ್ನು ನೋಡಬಹುದು. ಇಲ್ಲಿ "ಆನೆ" ಎಂಬ ವಸ್ತುವನ್ನು ಸೂಚಿಸುವ ಎಲ್ಲ ಅಂಶಗಳೊಂದಿಗೆ (ಸಜೀವಿ, ಅಮಾನುಷ, ಪ್ರಾಣಿವರ್ಗ, ದೀರ್ಘಾಕೃತಿ, ಇತ್ಯಾದಿ.) "ಅಸಾಧು" ಎಂಬ ಅಂಶ ಸೇರಿಕೊಳ್ಳುತ್ತದೆ. ಈ ಎಲ್ಲ ಅಂಶಗಳೂ ಈ ಪದದ ಅರ್ಥಪ್ರತೀತಿ ಯಲ್ಲಿ ಅವಶ್ಯಕವಾಗುತ್ತವೆ. (ಹೋಲಿಸಿ : "ಕಾಡಾನೆ ನುಗ್ಗಿತು"; "ಕುರಿ ನುಗ್ಗಿತು") ಹೀಗೆಯೆ ಇನ್ನು ಕೆಲವು ವಾಕ್ಯಗಳನ್ನು ಗಮನಿಸಬಹುದು.

(1) "ನಾನಾದೆ ನಕ್ಷತ್ರನೀಲಿ, ಕಂಪಿನಲಾಲಿ".

(2) "ಹಾರಿರೋ ಸೇರಿರೋ ಹರಿವ ನೀರ
ಉರಿವ ಬೆಳಕ
ಹಿರಿಗಾಳಿಯ ನೆರೆಯನು."

(3) "ಐದಾಗಿ ಬಿರಿದ ದಾಳಿಂಬೆನಗೆ ನೀರೊಡೆದು ಹಳದಿಯ ಕೆಂಪರಳಿದೆ."[6]

(4) "colourless green ideas sleep."[7]

(5) "he danced his did."[8]

ಇಲ್ಲಿ ಮೊದಲ ಉದಾಹರಣೆಯಾದ "ನಾನಾದೆ ನಕ್ಷತ್ರನೀಲಿ" ಎಂಬ ಸಾಲಿನಲ್ಲಿಯ "ನಾನು" ಮತ್ತು "ನೀಲಿ" ಯ ನಡುವಣ ಸಂಬಂಧ ಹೇಗೆ ಕ್ರಮವಾಗಿ ಬೆಳೆಯುತ್ತದೆಂಬುದನ್ನು ಈ ಸಾಲನ್ನು ಬೇರೆ ಬೇರೆ ಸಂದರ್ಭದಲ್ಲಿಟ್ಟು ಪರಿಶೀಲಿಸಬಹುದು. "ನಾನಾದೆ ನೀಲಿ" ಎಂದಾಗ ಎರಡು ಬದಲಾವಣೆಗಳು ನಮ್ಮ ಗಮನಕ್ಕೆ ಬರುತ್ತವೆ. "ನಾನು" (ಮೂರ್ತ ವಸ್ತು) ಅಮೂರ್ತವಾಗುವುದು ಹಾಗೂ "ನಾನು" ಒಂದು ನಿರ್ದಿಷ್ಟ ಬಣ್ಣವಾಗುವುದು. "ನಾನಾದೆ ನಕ್ಷತ್ರನೀಲಿ" ಎಂದಾಗ ಎರಡು ಅಥವಾ ಮೂರು ರೀತಿಯ ಅರ್ಥಪ್ರಕ್ರಿಯೆಗಳು ನಡೆಯುತ್ತವೆ. ಹಿಂದಿನಂತೆಯೆ "ನಾನು" ಅಮೂರ್ತಗೊಳ್ಳುವುದು, ಹಾಗೂ "ನಾನು" ಎನ್ನುವುದು ಒಂದು ನಿರ್ದಿಷ್ಟ ಬಣ್ಣ (= ನೀಲಿಯ ಒಂದು ಪ್ರಕಾರ, "ನಕ್ಷತ್ರ ನೀಲಿ") ವಾಗುವುದು. ("ನಕ್ಷತ್ರನೀಲಿ" ಎಂಬುದು ನಕ್ಷತ್ರ ಮತ್ತು ನೀಲಿ ಎಂಬ ಎರಡು ಪ್ರತ್ಯೇಕ ವಸ್ತುಗಳನ್ನು ಸೂಚಿಸದೆ "ನಕ್ಷತ್ರದ ನೀಲಿ" ಎಂಬರ್ಥದಲ್ಲಿ ಪ್ರಯೋಗವಾಗಿದೆಯೆಂಬುದನ್ನು ಗಮನಿಸಬೇಕು.) ಇವುಗಳ ಜೊತೆಗೆ "ನಕ್ಷತ್ರ" ಎಂಬ ಪದ "ದೂರ" ಎಂಬ ಅರ್ಥಾಂಶವನ್ನೂ ಸೂಚಿಸಬಹುದು. ಆದರೆ "ನಾನಾದೆ ನಕ್ಷತ್ರನೀಲಿ" ಎಂಬ ಭಾಗವನ್ನಷ್ಟೇ ಗಮನಿಸಿದಾಗ ಮೇಲೆ ಹೇಳಿದ ಮೂರು ಪ್ರತಿಕ್ರಿಯೆಗಳಲ್ಲಿ ಮೊದಲನೆಯದು ಮಾತ್ರ ವಿವರಣೆಯ ದೃಷ್ಟಿಯಿಂದ ಉಪಯುಕ್ತ. ಉಳಿದವುಗಳನ್ನೂ ಹೇಳುವುದು ಅತಿವಿವರಣೆಯಾಗುತ್ತದೆ.

ಈಗ "ನಾನಾದೆ ನಕ್ಷತ್ರನೀಲಿ, ಕಂಪಿನಲಾಲಿ;
ದೂರ ತೀರದ ನಿನ್ನ ಬಳಿಗೆ ಕರೆದೆ."

ಎಂಬ ವಿಸ್ತರಿಸಿದ ಕಾವ್ಯಭಾಗವನ್ನು ಗಮನಿಸಬಹುದು. ಇಲ್ಲಿ "ನಕ್ಷತ್ರ" ಎಂಬ ಪದ "ದೂರ" (ಭೌತಿಕ ದೂರವಲ್ಲ) ಎಂಬ ಅರ್ಥಾಂಶವನ್ನೂ ವ್ಯಕ್ತಪಡಿಸುತ್ತದೆಯೆಂಬುದು ಸ್ಪಷ್ಟವಾಗಿದೆ. "ದೂರ ತೀರದ" ಎಂಬ ಭಾಗ "ನಕ್ಷತ್ರ" ವು ಸೂಚಿಸುವ "ನನ್ನ" ಹಾಗೂ "ನಿನ್ನ" ನಡುವೆ ಇರುವ ಅಂತರವನ್ನೆ ಹೇಳುತ್ತದೆ. ಮೇಲೆ ಹೇಳಿದ ಕಾವ್ಯಭಾಗವನ್ನು ಇನ್ನೂ ವಿಸ್ತೃತಗೊಳಿಸಿ, "ನಕ್ಷತ್ರನೀಲಿ" ಎಂಬುದರಿಂದ ವ್ಯಕ್ತವಾಗುವ ಬೇರೊಂದು ಅರ್ಥವನ್ನು ಗಮನಿಸಬಹುದು :

---

[6] ಕೆ. ಎಸ್. ನರಸಿಂಹಸ್ವಾಮಿ : 'ಶಿಲಾಲತೆ'

[7]

[8] E. E. Cummings : "any one lived in a pretty how town."

"ನಾನಾದೆ ನಕ್ಷತ್ರನೀಲಿ, ಕಂಪಿನಲಾಲಿ;
ದೂರತೀರದ ನಿನ್ನ ಬಳಿಗೆ ಕರೆದೆ.
ಆಗ ಚೈತ್ರದ ಮಾವು ಜೂಲುನಾಯಿಯ ಜೋಲಿ,
ತಳಿರ ಕೆನ್ನಾಲಿಗೆಯು ಬೆಂಕಿ ಪರದೆ."


ಇಲ್ಲಿ "ನಕ್ಷತ್ರನೀಲಿ" ಹಾಗೂ "ಕಂಪಿನಲಾಲಿ" ಗಳು ಮಾವು ಚಿಗುರುವುದು ಮುಂತಾದ ಪ್ರಕೃತಿ ವ್ಯಾಪಾರವನ್ನು ಪೋಷಿಸುವ ಶಕ್ತಿ ಎಂಬರ್ಥವನ್ನು ಕೊಡುತ್ತವೆ. ಮೇಲಿನ ಪದ್ಯದಲ್ಲಿ ಒಟ್ಟು ಮೂರು ಹಂತಗಳಲ್ಲಿ ಕ್ರಿಯೆ ಜರುಗುತ್ತದೆ ಹಾಗೂ ಇವುಗಳಿಗನುಗುಣವಾಗಿ "ನಕ್ಷತ್ರನೀಲಿ" ಗೆ ನೀಡುವ ವಿವರಣೆ ಬೇರೆ ಬೇರೆಯಾಗುತ್ತದೆ: (1) "ನಾನು" ನಕ್ಷತ್ರನೀಲಿ ಹಾಗೂ ಕಂಪಿನಲಾಲಿಯಾಗುವುದು; (2) "ನಾನು" "ನಿನ್ನ" ಬಳಿಗೆ ಬರುವುದು; (3) **ಆಗ** ಮಾವು ಚಿಗುರುವುದು.

ಇಲ್ಲಿ ಒಂದು ವಿಷಯ ಗಮನಾರ್ಹವಾಗುತ್ತದೆ. ಮೊದಲ ಎರಡು ಹಂತಗಳಲ್ಲಿ, 'ನಕ್ಷತ್ರನೀಲಿ' ಎಂಬ ಪದಕ್ಕೆ ನೀಡುವ 'ದೂರ' 'ಅಮೂರ್ತ' ಎಂಬ ಅರ್ಥಗಳು ಸಾಧಾರಣೀಕರಣದ ಚೌಕಟ್ಟಿನೊಳಗೆ ಬರುತ್ತವೆ. ಕಾರಣ ಇವು 'ನಕ್ಷತ್ರನೀಲಿ' ಎಂಬ ಪದದಲ್ಲಿ ಅಡಗಿದ ಅನೇಕ ಅರ್ಥಾಂಶಗಳಲ್ಲಿ ಎರಡು ಅಂಶಗಳಾಗಿದ್ದು, ನೇರವಾಗಿಯೆ (ಸಂದರ್ಭದ ಸಹಾಯವಿಲ್ಲದೆಯೂ) ವ್ಯಕ್ತವಾಗುತ್ತವೆ. ಆದರೆ 'ನಕ್ಷತ್ರನೀಲಿ' ಎಂಬುದಕ್ಕೆ 'ಶಕ್ತಿ' ಎಂಬರ್ಥ ಕೊಟ್ಟಾಗ, ಮೊದಲು ಆ ಪದದಲ್ಲಿದ್ದ ಎಲ್ಲ ಅರ್ಥಾಂಶಗಳನ್ನೂ ಕೈಬಿಟ್ಟು ಸಂಪೂರ್ಣವಾಗಿ ಹೊಸ ಅರ್ಥವೊಂದನ್ನು ಆರೋಪಿಸಿದಂತಾಗುತ್ತದೆ. ಇದನ್ನು ಸಂಕೇತ ಎಂದು ಕರೆಯಬಹುದು.

ಈಗ ಈ ಹಿಂದೆ ಕೊಟ್ಟ ಉದಾಹರಣೆಗಳಲ್ಲಿ ಒಂದಾದ "ಐದಾಗಿ ಬಿರಿದ ದಾಳಿಂಬೆನಗೆ ನೀರೊಡೆದು ಹಳದಿಯ ಕೆಂಪರಳಿದೆ" ಎಂಬುದನ್ನು ನೋಡೋಣ. 'ದಾಳಿಂಬೆನಗೆ' ಎಂಬುದನ್ನು ಎರಡು ರೀತಿಗಳಲ್ಲಿ ಅರ್ಥೈಸಬಹುದು: ಒಂದು ದಾಳಿಂಬೆಯ ನಗೆ; ಇನ್ನೊಂದು, ನಗೆಯ ಒಂದು ಪ್ರಕಾರ. ('ಪ್ರೇತನಗೆ' ಎಂಬಂತೆ) 'ಐದಾಗಿ ಬಿರಿದ' ಎಂಬುದನ್ನು ಗಮನಿಸಿದರೆ, ಈ ಎರಡು ಅರ್ಥಗಳಲ್ಲಿ ಮೊದಲನೆಯದು ಪ್ರಕೃತವಾಗುತ್ತದೆ. ಈ ಕಾವ್ಯಭಾಗದಲ್ಲಿ ಹೇಳಲಾದ ಎರಡು ಕ್ರಿಯೆಗಳು (ನಗೆ ನೀರೊಡೆಯುವುದು ಮತ್ತು ಹಳದಿಯ ಕೆಂಪರಳುವುದು) ಒಂದೇ ಅರ್ಥವನ್ನು ಪ್ರತಿಪಾದಿಸುತ್ತವೆ. ಇಲ್ಲಿ 'ನಗೆ' 'ನೀರು' 'ಹಳದಿ' 'ಕೆಂಪು' ಇವುಗಳ ಅರ್ಥಾಂಶಗಳಾವುವೂ ವಿವರಣೆಗೆ ಅವಶ್ಯವಾಗುವುದಿಲ್ಲ. ಒಂದು ಇನ್ನೊಂದಾಗಿ **ಪರಿವರ್ತನಗೊಳ್ಳುತ್ತಿದೆ** ಎಂಬುದಿಷ್ಟೆ ಇಲ್ಲಿ ಮುಖ್ಯವಾದದ್ದು.

"Colourless green ideas sleep" ಹಾಗೂ "he danced his did" ಎಂಬುದನ್ನು ವ್ಯಾಕರಣ ದೃಷ್ಟಿ ಹಾಗೂ ಅರ್ಥರಚನೆಯ ದೃಷ್ಟಿಗಳಿಂದ ನೋಡಿದಾಗ

ಪರಸ್ಪರ ವಿರೋಧವೇ ತೋರುತ್ತದೆ. ಅರ್ಥರಚನೆಯ ದೃಷ್ಟಿಯಿಂದ colourless green - ಇವುಗಳ ನಡುವೆ ನೇರವಾದ ಸಂಬಂಧವಿಲ್ಲ. ಇವೆರಡೂ ideas ಎಂಬ ಪದದೊಡನೆ ಏಕತ್ವಸಂಬಂಧವನ್ನು ಪಡೆದಿವೆ. ಈ ಮೂರು ಪದಗಳ ಅರ್ಥರಚನೆಯನ್ನು ಹೀಗೆ ತೋರಿಸಬಹುದು.[9]



Colourless ಹಾಗೂ green-ಎಂಬ ಪದಗಳು 'ವಿಚಾರಗಳನ್ನು' (ideas) ಪ್ರತ್ಯೇಕವಾಗಿ (ಅಪ್ರಯೋಜಕ ಹಾಗೂ ಹೊಸ - ಎಂಬರ್ಥದಲ್ಲಿ) ಹೊಗಳುತ್ತವೆ. "he danced his did" ಎಂಬ ರಚನೆಯನ್ನು ವಾಕ್ಯದ ಚೌಕಟ್ಟಿನೊಳಗೆ ವ್ಯಾಖ್ಯಾನಿಸುವುದು ಕಷ್ಟ. ಶೂನ್ಯದ ಸ್ಥಾನ NP_2 —> ∅) ದಲ್ಲಿರುವ ಪದಗಳ ಕಡೆಗೆ ವಿಶೇಷವಾಗಿ ಲಕ್ಷ್ಯ ಸೆಳೆಯುವುದನ್ನು ಇಲ್ಲಿ ನೋಡಬಹುದು. ಈ ವಾಕ್ಯವನ್ನು ಕವನದ ಚೌಕಟ್ಟಿನಲ್ಲಿಟ್ಟು ನೋಡಿದಾಗ ಇದು ಸ್ಪಷ್ಟವಾಗುತ್ತದೆ:

" he danced his did
he sang his didn't
....
she laughed his joy
she cried his grief
someones married their everyones. "

ಇಲ್ಲಿಯ ಸಾಲುಗಳು ಅಸ್ತವ್ಯಸ್ತಸ್ಥಿತಿಯೊಂದನ್ನು ಸುಂದರವಾಗಿ ನಿರೂಪಿಸುತ್ತವೆ. ಸಾಮಾನ್ಯವಾಗಿ, ಕ್ರಿಯಾಪದವು ವಾಕ್ಯದಲ್ಲಿ ಅತ್ಯಂತ ಮುಖ್ಯವಾದ ಸ್ಥಾನವನ್ನು ಪಡೆಯುತ್ತದೆ. ಆದರೆ " his did " " his joy " " their everyones " ವಿಶೇಷ ಮಹತ್ವ ದೊರೆಯುತ್ತದೆ. ಈ ಅಂಶವನ್ನು ಗಮನಿಸದಿದ್ದರೆ ಕವನಕ್ಕೆ ನೀಡುವ ವಿವರಣೆ ತಪ್ಪಾಗುತ್ತದೆ.

---

[9] ಹೆಚ್ಚಿನ ವಿವರಣೆಗಳಿಗೆ ನೋಡಿ: chafe W. L.: 'meaning and the structure of language' (1970) chapter 3 & 4

ಸಾಧಾರಣೀಕರಣವು ಬೇರೆ ಬೇರೆ ರೇಖೆ (axis) ಗಳೊಂದಿಗೆ ಕಾರ್ಯ ನಿರ್ವಹಿಸುವ ರೀತಿಯನ್ನು ಈಗ ಸಂಕ್ಷೇಪಿಸಿ ಹೇಳಬಹುದು: ವಾಕ್ಯ ರೇಖೆಯೊಂದಿಗೆ ತಲೆದೋರಿದಾಗ ವಿವಕ್ಷಿತ (ಸಾಧಾರಣೀಕರಣಕ್ಕೆ ಒಳಗಾದ) ಪದ ಪದಸಮೂಹಗಳು ವಿಶೇಷ ಮಹತ್ವ ಪಡೆಯುತ್ತವೆ; ಅರ್ಥರೇಖೆಯಲ್ಲಿ ಅವತರಿಸಿದಾಗ, ಅರ್ಥದ ಸ್ತರ ಸ್ಥಿತ್ಯಂತರಗೊಳ್ಳುತ್ತದೆ.

ಗ್ರಂಥಋಣ

1. Freeman, Donald C : 'Linguistics and Literary Style' (1970)
2. Sebeoc T. A. : 'Style in Language' (1968)
3. Tufte Virginia : 'Grammar as Style' (1971)
4. Richards I. A. : 'Practical Criticism' (1929)
5. Chomsky, Noam : 'Language and mind' (1968)
6. Chafe, W. L. : 'meaning and the structure of language' (1970)

ನಮ್ಮೂರಿನವನು

ವೆಂ. ಶ್ರೀನಿವಾಸ

ಇವನು ಹುಟ್ಟಿದ್ದೇ ಬಲು ಗುಟ್ಟು
ಅದು ಅವರಪ್ಪ ಅಮ್ಮಗಳ ಒಂದು ಪಟ್ಟು
ಯಾವುದರಲ್ಲಿ ಯಾವುದಕ್ಕೂ
ಯಾರಿಗೂ ಕಡಿಮೆ ಇಲ್ಲದ ಈ ಪಟ್ಟಿಂಗ
ನನಗೆ ಪರಿಚಿತನಾದದ್ದೆ ಬಲು ವಿಚಿತ್ರ
ನನ್ನ ಜಾತಕದ ಕರ್ಮ ಒಮ್ಮೆ
ನನಗೆ ಇವನನ್ನು ಪರಿಚಯ ಮಾಡಿಸಿತು ಎಂದರೆ ಸಾಕು
ಇವನ ಮಾತಾಪಿತೃಗಳನ್ನು ಕೇಳಿದ್ದೇನೆ ಕಂಡಿದ್ದೇನೆ
ಅವರ ಹೆಸರು ಹೇಳಿ ಒಮ್ಮೆ
ನನಗೆ ಚಿರಪರಿಚಿತನೂ ಆದ
ಹಾಗೆಯೇ ಬರಬರುತ್ತಾ ಹಳಬನಾದ
ಇವನೇನು ಸಾಮಾನ್ಯನಲ್ಲ
ಮೊನ್ನೆಯೇ ಸತ್ತವನು
ನಮ್ಮೂರ ಮರಳುಗಾಡಿನಲ್ಲಿ ಬಿದ್ದು ಎದ್ದವನು
ಅಡ್ಡಬಿದ್ದ ಬಾವಿಗಳಿಗೆಲ್ಲಾ ಧುಮುಕಿ
ಮೈಮೇಲೆ ಕೆಸರು ಮಾಡಿಕೊಂಡವನು
ಕಾಡಿನ ನಡುವೆ ಹೋಗಿ ದಾರಿ ತಪ್ಪಿ ದಿಕ್ಕುಗೆಟ್ಟರೂ ಪಾರಾರಿ
ಬೆಟ್ಟದ ತುದಿಗೆ ಹತ್ತಿ ಕೂಗಿ ಗಲಭೆ ಎಬ್ಬಿಸಿ
ಇದ್ದ ಶಾಂತಿ ಹಾಳು ಮಾಡಿದವನು
ಇವನೇನು ಶಾಲಾ ಕಾಲೇಜುಗಳಲ್ಲಿ ಅಭ್ಯಾಸ ಮಾಡಿದವನಲ್ಲ
ಸ್ವಸಾಮರ್ಥದಿಂದ
ವ್ಯವಹಾರಕ್ಕಾಗುವಷ್ಟು ಒಂದಷ್ಟು
ಶಾಸ್ತ್ರ, ಪುರಾಣ, ತರ್ಕ, ಲೆಕ್ಕಾಚಾರಾದಿಗಳನ್ನು
ಪಠಿಸಿ ಪಾರಂಗತನಾದವನು
ಈ ಶಕ್ತಿ ಇವನಿಗೇನು ಹೊಸದಲ್ಲ ವಂಶಪಾರಂಪರೆಯಾದದ್ದು
ಇವರಪ್ಪ ತಾತ ನಮ್ಮಪ್ಪ ತಾತಂದಿರ ಸಮಕಾಲೀನರೆಂದು

ಅಷ್ಟೇ ಅಲ್ಲ ಹಿತಚಿಂತಕರೆಂದು ಹೇಳಿದವನು
ನಮ್ಮೂರ ಪಕ್ಕದಲ್ಲಿ ಹರಿಯುವ ನದಿಯೊಂದು
ಇದ್ದಕ್ಕಿದಂತೆ ಅವರ ಮೇಲೆ ಹರಿದು ಬಂದಾಗ
ತನ್ನ ಪ್ರಾಣವನ್ನೇ ಪಣವಿಟ್ಟು
ಹೊಳೆಯನ್ನೇ ತಡೆದು ನಿಲ್ಲಿಸಿ ಪಕ್ಕಕ್ಕೆ ತಿರುಗಿಸಿದವನು
ಅಲ್ಲದೆ ಈಗ ಅದರಲ್ಲಿ ಬಂದ ಕಪ್ಪೆ ಮೀನುಗಳಾದಿ ಹಿಡಿದು
ಗಬಕ್ಕನೆ ನುಂಗಿ ತೇಗಿ
ಹಂದಿಯಂತೆ ಕೊಬ್ಬಿದವನು

ಮಣಿಪ್ರವಾಳ ಭಾಷೆ

ಮೂಲ : ಡಾ॥ ತಿವ್ಯಾವಜ್ಜುಲ ಕೋದಂಡರಾಮಯ್ಯ
ಅನುವಾದ : ಬಿ. ಜೆ. ಪಾಂಡುರಂಗಯ್ಯಶೆಟ್ಟಿ

ದಕ್ಷಿಣ ದೇಶಭಾಷೆಗಳಲ್ಲಿ ಮಲಯಾಳದಲ್ಲಿನ ಮಣಿಪ್ರವಾಳ ಭಾಷೆ ಒಂದು ಕಾವ್ಯ-ಶೈಲಿಯಾಗಿ ರೂಪುಗೊಂಡು, ಅದರಲ್ಲಿ ಅನೇಕ ಉದ್ಗ್ರಂಥಗಳು ರಚಿಸಲ್ಪಟ್ಟಿವೆ. ಮಲಯಾಳ ಸಾಹಿತ್ಯ ಚರಿತ್ರೆಯಲ್ಲಿ ಮಣಿಪ್ರವಾಳ ಯುಗವು ಒಂದು ಸ್ವರ್ಣಯುಗವಾಗಿ ಭಾವಿಸಲ್ಪಡುತ್ತಿದೆ. ಮಣಿಪ್ರವಾಳವು ಮಲಯಾಳಕ್ಕೆ ಒಂದು ವಿಲಕ್ಷಣವಾದ ಕಾವ್ಯ ಭಾಷಾ ಭೇದ. ಅಂಥ ಭಾಷೆಯೊಂದು ರೂಪುಗೊಂಡು ಮಲಯಾಳದಲ್ಲಿ ನೆಲೆಯೂರಲು ಕೆಲವು ಚಾರಿತ್ರಿಕ ಹಾಗೂ ಸಾಮಾಜಿಕ ಪರಿಸ್ಥಿತಿಗಳು ಕಾರಣ.

1. ಪ್ರಾಚೀನ ಕಾಲದಲ್ಲಿ ಕೇರಳದ ಚೇರರಾಜರು "ಶೆಂದಮಿಳ್" ಎಂಬ ಶುದ್ಧ ತಮಿಳನ್ನು ಪ್ರೋತ್ಸಾಹಿಸುತ್ತಿದ್ದರು. ಉತ್ತರ ಭಾರತದಿಂದ ಕೇರಳಕ್ಕೆ ವಲಸೆ ಬಂದ ನಂಬೂದ್ರಿ ಬ್ರಾಹ್ಮಣರು ಸಂಸ್ಕೃತಕ್ಕೆ ಹೆಚ್ಚಿನ ಅಭಿಮಾನ ತೋರಿಸಿದರು. ಇದರ ಫಲವಾಗಿ ಅಲ್ಲಿನ ಪಾಮರ ಜನರಲ್ಲಿಯೂ, ಸಾಮಾನ್ಯ ಪ್ರಜೆಗಳಿದ್ದ ವ್ಯಾವಹಾರಿಕ ಮಲಯಾಳಕ್ಕೆ ಬಹಳ ಕಾಲದವರಿಗೆ ಆದರ ಪ್ರೋತ್ಸಾಹಗಳು ಇಲ್ಲವಾದವು. ಅದಕ್ಕೆ ಅಂದಿನ ಸಮಾಜದಲ್ಲಿನ ಉನ್ನತ ವರ್ಗದವರ ಹೀನದೃಷ್ಟಿ ಕಾರಣ. ಆದರೆ ತಕ್ಕ ಅವಕಾಶ ಆದರಗಳು ಲಭಿಸಿದ ಪಕ್ಷದಲ್ಲಿ ಕಾವ್ಯಭಾಷೆಯಾಗಿ ರೂಪುಗೊಳ್ಳಲು ಮಲಯಾಳವು ಆದಷ್ಟು ಸ್ವಯಂ ಶಕ್ತಿಯುತವಾಗಿಯೇ ಇದ್ದಿತು. ಸ್ಥಳೀಯ ಮಲಯಾಳಿಗಳಿಗೂ ನಂಬೂದ್ರಿ ಬ್ರಾಹ್ಮಣರಿಗೂ ನಡೆದ ವಿವಾಹ ಮೂಲಗಳಿಂದ ಪರಸ್ಪರ ಸಂಬಂಧ ಬಾಂಧವ್ಯಗಳು ಏರ್ಪಟ್ಟಾಗ ಅಂಥ ಅವಕಾಶ ವೊಂದು ಮಲಯಾಳಕ್ಕೆ ಲಭಿಸಿತು. ನಂಬೂದ್ರಿ ಬ್ರಾಹ್ಮಣರು ಆರ್ಯ ಜಾತಿಗಳಿಗೆ ಸೇರಿದವರಾದರೂ ಅವರು ಕ್ರಮೇಣ ತಮ್ಮ ಜಾತ್ಯಹಂಕಾರಗಳನ್ನು ಬಿಟ್ಟು ಅವರೊಂದಿಗೆ ಕಲೆತು ಕೇರಳೀಯರೆಂದೇ ತಮ್ಮನ್ನು ತಾವು ಭಾವಿಸತೊಡಗಿದರು. ಅಂತೆಯೇ ಸ್ಥಳೀಯರಾದ 'ನಾಗಜಾತಿ'ಯವರು ಆರ್ಯ ಸಂಸ್ಕೃತಿ, ಸಂಪ್ರದಾಯಗಳನ್ನು ಬಹಳಷ್ಟು ಅನುಸರಿಸಲು ಕ್ರಮೇಣ ಸಿದ್ಧರಾದರು. ಆದ್ದರಿಂದ ಉಭಯರಿಗೂ ವ್ಯವಹಾರ ಭಾಷೆಯಾದ ಮಲಯಾಳವು ಕ್ರಮವಾಗಿ ಕೆಲವು ಮಾರ್ಪಾಡುಗಳಿಗೆ ಒಳಗಾಗದೆ ಬೇರೆ ಮಾರ್ಗವಿಲ್ಲದಾಯಿತು. ದೈನಂದಿನ ಜೀವನಕ್ಕೆ ಸಂಬಂಧಿಸಿದ

ವ್ಯವಹಾರಗಳಲ್ಲಿ ಸಹಜವಾಗಿ ಏರ್ಪಡುವ ಆದಾನ ಪ್ರದಾನಗಳ ಮೂಲಕ, ಉಭಯ ಭಾಷೆಗಳ ಪದಜಾಲಗಳು ಸಮ್ಮಿಶ್ರಣ ಹೊಂದಿದ ಫಲವಾಗಿ ಕೆಲವು ಮಾರ್ಪಾಡುಗಳು ಆಯಾ ಭಾಷೆಗಳಲ್ಲಾಗಲು ಪ್ರಾರಂಭವಾಯಿತು. ಇಂಥ ವ್ಯವಹಾರದಿಂದ ಮಿಶ್ರ ಭಾಷೆಯೊಂದು ಕ್ರಮವಾಗಿ ವಿಕಾಸಹೊಂದಿ ಅದು ಮತವಿಷಯಗಳಾದ ವೈದಿಕ ಕಾರ್ಯ ಕಲಾಪಗಳಿಗೆ ಸಂಬಂಧಿಸಿದ ಶಾಸ್ತ್ರಸಂಬಂಧಗಳಾದ ವಿಷಯಗಳನ್ನು ವಿವರಿಸುವುದಕ್ಕೆ ಉಪಯೋಗಿಸತೊಡಗಿತು. ಕ್ರಮವಾಗಿ ಅದು ವಿದ್ಯಾವಂತರ ವ್ಯವಹಾರ ಭಾಷೆಯಾಗಿಯೂ ಪರಿಣಮಿಸಿತು.

1.2. ಪೆರುಮಾಳ್ ವಂಶದ ರಾಜರ ನಂತರ ಕೇರಳದಲ್ಲಿ ತಮಿಳಿನ ಪ್ರಭಾವವು ನಶಿಸಲು ಪ್ರಾರಂಭವಾಯಿತು. 'ಕೂತ್ತು', 'ಕೂಡಿಯಾಟ್ಟಂ' ಎಂಬ ನಾಟಕ ಭೇದಗಳು ಕೇರಳದ ಎಲ್ಲ ವರ್ಗದ ಜನತೆಗೂ ಪ್ರೀತಿ ಪಾತ್ರವಾದ ವಿನೋದ ಸಾಧನಗಳಾಗಿ ವ್ಯಾಪ್ತಿಗೆ ಬಂದಾಗ ಅಲ್ಲಿ ಬಳಸುತ್ತಿದ್ದ ಈ ಮಿಶ್ರ ಭಾಷೆ (Hybrid Language) ಜನಾದರಣೀಯವಾಗತೊಡಗಿತು. ಪುರಾಣ ಪ್ರವಚನಗಳಲ್ಲಿ, ವೇದಾಂತ ಪ್ರಸಂಗಗಳಲ್ಲಿ, ವ್ಯಾಖ್ಯಾನಗಳಲ್ಲಿ, ವಿದ್ವದ್ಗೋಷ್ಠಿಗಳಲ್ಲಿ, ಪಂಡಿತರ ವಾಗ್ವಿವಾದಗಳಲ್ಲಿ, ಕವಿ ಪಂಡಿತ ಸಮ್ಮೇಳನಗಳಲ್ಲಿ, ವಿಶೇಷವಾಗಿ ಉಪಯೋಗ ವಾಗುತ್ತಿದ್ದ ಈ ಮಿಶ್ರಭಾಷೆ ಸಹಜವಾಗಿಯೇ ಕಾವ್ಯಕ್ಕೆ ಉಪಯುಕ್ತವಾಗುವುದೆಂಬ ಆಶಯವೇ ಅದು ಕಾವ್ಯಭಾಷೆಯಾಗಿ ಸ್ವೀಕರಿಸಲು ಕಾರಣವೆಂದು ಹೇಳಬಹುದು. ಹೀಗೆ ಕೆಲವು ಶತಮಾನಗಳವರೆಗೆ ಕ್ರಮ ಪರಿಪಾಕವನ್ನು ಸಲ್ಲಿಸುತ್ತಾ ಬಂದ ಈ ಭಾಷೆಯನ್ನು ಕ್ರಮವಾಗಿ ಕೆಲವು ರೀತಿಯ ರಚನೆಗಳಿಗೂ ಉಪಯೋಗಿಸತೊಡಗಿದರು. ಈ ನೂತನ ಭಾಷೆ ಮೊದಲು ಸಂಸ್ಕೃತ ಗ್ರಂಥಗಳ ವ್ಯಾಖ್ಯಾನಗಳಲ್ಲಿ ಪ್ರಯೋಗದಲ್ಲಿದ್ದು ನಂತರ ಅಮೂಲ್ಯ ಕಾವ್ಯ ರಚನೆಗಳಿಗೆ ಉಪಯೋಗಿಸಲ್ಪಟ್ಟಿತು. ಈ ಘಟ್ಟವೇ ಮಲಯಾಳದ ಮಣಿಪ್ರವಾಳ ಯುಗಕ್ಕೆ ಪ್ರಾರಂಭ ಕಾಲ. ಉಭಯ ಭಾಷೆಗಳಲ್ಲಿ ನಿಷ್ಣಾತರಾದ ವಿದ್ವಾಂಸರು ಸಂಸ್ಕೃತ ಮಲಯಾಳಗಳೆರಡರಿಂದಲೂ ಯಥೇಚ್ಛವಾಗಿ ಪದಗುಂಪುಗಳನ್ನು ಸ್ವೀಕರಿಸಿ ಅವುಗಳ ಮಧುರ ಸಮ್ಮಿಳನದಿಂದ ತಮ್ಮ ಕಾವ್ಯಾದಿಗಳನ್ನು ರಚಿಸ ತೊಡಗಿದರು. ತಾವು ತಮ್ಮ ಕಾವ್ಯಾದಿಗಳಲ್ಲಿ ನೂತನವಾಗಿ ರಚಿಸಿದ ಈ ಭಾಷಾರೂಪಕ್ಕೆ 'ಮಣಿಪ್ರವಾಳ'ವೆಂದು ಅದರ ಸ್ವಭಾವಕ್ಕೆ ಸೂಚಕವಾಗಿ ನಾಮಕರಣ ಮಾಡಿದರು. ಸಂಸ್ಕೃತ ಮಲಯಾಳ ಶಬ್ದಗಳ ಸಮ್ಮಿಳನವನ್ನು ಅವರು ಮಣಿಪ್ರವಾಳ ಸಂಜ್ಞೆಯಿಂದ ಸೂಚಿಸಿದರು, ಅವರು ಅದಕ್ಕೆ ಪ್ರಸಾದಿಸಿದ ಈ ನೂತನ ಸಂಜ್ಞೆ ಯಾದೃಚ್ಛಿಕವಾದದ್ದಲ್ಲದೆ ವಿಶೇಷವಾಗಿ ಅರ್ಥಯುತವೆನ್ನುವುದು ಸತ್ಯ. ಮಣಿಪ್ರವಾಳವೆಂದರೆ ಮಣಿಗಳನ್ನೂ ಪ್ರವಾಳ ಗಳನ್ನೂ ಪೋಣಿಸಿದ ಹಾರವೆಂದರ್ಥ. ಇಲ್ಲಿ 'ಮಣಿ' ಮಲಯಾಳ ಶಬ್ದ, 'ಪ್ರವಾಳ' ಸಂಸ್ಕೃತ ಶಬ್ದ. ಮಣಿಗಳು, ಪ್ರವಾಳಗಳು ಭಿನ್ನದ್ರವ್ಯಗಳಾದರೂ ಕಾಂತಿಯಲ್ಲಿ ಅವು

ಬಹಳಷ್ಟು ಹೋಲಿಕೆಯನ್ನು ಪಡೆದಿರುವಂತೆ ಮಲಯಾಳ ಸಂಸ್ಕೃತ ಶಬ್ದಗಳು ಭಿನ್ನ ಭಾಷೆಗಳಿಗೆ ಸೇರಿದ್ದುವಾದರೂ, ಅವುಗಳನ್ನು ಸೇರಿಸುವ ನೈಪುಣ್ಯತೆಯಿಂದ ಒಂದು ವಿಧವಾದ ಸಾರೂಪ್ಯವು ಸಮಾನತ್ವವನ್ನು ಸ್ಫುರಿಸುವಂತೆ ರಚಿತವಾದಂಥ ಭಾಷೆಗೆ ಮಣಿಪ್ರವಾಳವೆಂಬ ಸಂಜ್ಞೆ ಸಾರ್ಥಕವಾಗಿದೆ.

1.3. ಮಣಿಪ್ರವಾಳ ಸಾಹಿತ್ಯ ಕ್ಷೇತ್ರದಲ್ಲಿ ವಿಶೇಷವಾದ ಕೃಷಿಯನ್ನು ನಡೆಸಿದ ಶ್ರೀ ಪಿ. ಶಂಕರನ್ ನಂಬಿಯಾರ್ ಎಂಬ ವಿದ್ವಾಂಸರು ಮಣಿಪ್ರವಾಳದ ಉಗಮವಿಕಾಸವನ್ನು ಕುರಿತು ಹೀಗೆ ಹೇಳಿದ್ದಾರೆ. "ಸಂಸ್ಕೃತ ಕಾವ್ಯಗಳನ್ನು ಪಂಡಿತರಲ್ಲದವರೂ ಸಹ ಸವಿನೋಡಬೇಕೆಂದು ಕೆಲವು ನಂಬೂದ್ರಿ ಬ್ರಾಹ್ಮಣರು ಅಭಿಲಾಷೆಪಟ್ಟಿದ್ದಾರೆ. ಅಂಥವರಿಗೆ ಸಂಸ್ಕೃತ ಶಬ್ದ ಸಮೂಹವನ್ನೂ, ವ್ಯಾಕರಣ ವನ್ನೂ, ಸ್ವಲ್ಪ ಸ್ವಲ್ಪವಾಗಿ ಚತುರತೆಯಿಂದ ಎಟುಕಿಸಿದರೆ ಅವರು ಅನಾಯಾಸವಾಗಿ ಅವನ್ನು ಸ್ವೀಕರಿಸತೊಡಗುವರು. ಅದರ ಪರಿಣಾಮವಾಗಿ ತಮಗೆ ತಿಳಿಯದೆಯೇ ಅವರು ಕಾವ್ಯ ರಸಾಸ್ವಾದನೆ ಮಾಡುತ್ತಾ, ಸಂಸ್ಕೃತವ್ಯಾಕರಣ ರಹಸ್ಯಗಳನ್ನು ಗ್ರಹಿಸತೊಡಗುವರು".

1.4. ಮಣಿಪ್ರವಾಳ ರಚನಾ ವಿಧಾನವು ಯಾವ ಕಾಲದಲ್ಲಿ ಪ್ರಾರಂಭ ವಾಯಿತೋ ಖಚಿತವಾಗಿ ಹೇಳಲಾರೆವು. ಆದರೆ ಕುಲಶೇಖರ ಪೆರುಮಾಳ್ ಎಂಬ ರಾಜನ ಆಸ್ಥಾನ ಕವೀಶ್ವರನಾದ ತೋಲನ್ ಎಂಬ ಕವಿ ರಚಿಸಿದ ಹಾಸ್ಯ ರಸೋತ್ಪಾದಕವಾದ ರಚನೆಯೊಂದಿಗೆ ಇಂಥ ರಚನಾ ವಿಧಾನವು ಪ್ರಾರಂಭವಾಗಿರ ಬಹುದೆಂದು, ಕೆಲವರು ಅಭಿಪ್ರಾಯ ಪಡುತ್ತಾರೆ. ಆ ಕವಿ ಕ್ರಿ. ಶ. 9 ನೆಯ ಶತಮಾನದಲ್ಲಿ ಪ್ರಸಿದ್ಧಿ ಪಡೆದವನೆಂದು ತಿಳಿಯುತ್ತದೆ.

2.1. ಭಾರತೀಯ ಭಾಷೆಗಳೆಲ್ಲವೂ ಸಂಸ್ಕೃತದಿಂದ ಎಷ್ಟೋ ಶಬ್ದಗಳನ್ನು ಸ್ವೀಕರಿಸಿವೆ. ಆದರೂ ಹಾಗೆ ಸ್ವೀಕರಿಸುವುದರಲ್ಲಿ ಆಯಾ ಭಾಷೆಗಳವರು ಕೆಲವನ್ನು ತತ್ಸಮಗಳಾಗಿ ರೂಪಿಸಿಕೊಂಡು ಮತ್ತೆ ಕೆಲವನ್ನು ತದ್ಭವಗಳಾಗಿ ಮಾರ್ಪಡಿಸಿಕೊಂಡು ಅವುಗಳನ್ನು ಗ್ರಹಿಸಿದರು. ಆದರೆ ಮಲಯಾಳದಲ್ಲಿ ಮಾತ್ರ ಹಾಗೆ ನಡೆಯಲಿಲ್ಲ. ಸಂಸ್ಕೃತ ಮಲಯಾಳ ಶಬ್ದಗಳೆರಡೂ ಅಲ್ಲಿ ಕ್ಷೀರ–ನೀರ ನ್ಯಾಯದಂತೆ ಸೇರಿ ಹೋದುವು. ಅದರ ಫಲವಾಗಿ ಮಣಿಪ್ರವಾಳವೆಂಬ ಒಂದು ಹೊಸ ಶೈಲಿ ಮಲಯಾಳದಲ್ಲಿ ಏರ್ಪಟ್ಟಿತು. ಮಣಿಪ್ರವಾಳವೆಂದರೆ ಸಂಸ್ಕೃತ ಹಾಗೂ ದೇಶ ಭಾಷೆಗಳ ಶಬ್ದ ಸಮ್ಮಿಳನವೆಂದೂ, ಅದು ಒಂದು ಮಿಶ್ರಭಾಷೆಯೆಂದೂ, ಇತರೆ ದ್ರಾವಿಡ ಭಾಷೆಗಳವರು ಭಾವಿಸಬಹುದು. ಆದರೆ ಅದು ಅಷ್ಟು ಮಾತ್ರವೇ ಅಲ್ಲ, ಅದಕ್ಕೆ ಮಲಯಾಳದಲ್ಲಿ ಒಂದು ವಿಶಿಷ್ಟವಾದ ಅರ್ಥವುಂಟು. ಮಧುರವಾದ ಮಲಯಾಳ ಸಂಸ್ಕೃತ ಶಬ್ದಗಳ ಸಮ್ಮಿಳನದಿಂದ ಪರಿಮಳವಾಗಿರುವಂಥದ್ದು.

“ ಮಧುರ ಮಧುರ ಭಾಷಾ ಸಂಸ್ಕೃತಾನ್ಯೋನ್ಯ ಸಮ್ಮೇಳನ ಸುರಭಿಲಾ ” – ಎಂದು 'ಲೀಲಾತಿಲಕ' ಎಂಬ ಮಲಯಾಳ ಲಕ್ಷಣ ಗ್ರಂಥದಲ್ಲಿ ನಿರೂಪಿಸಲ್ಪಟ್ಟಿದೆ.

2.2. ಮಣಿಪ್ರವಾಳದಲ್ಲಿ ರಚಿತವಾದ ಕಾವ್ಯಪರಂಪರೆ ನೆಲಸಿದ ನಂತರ ಆ ರಚನಾ ವಿಧಾನಕ್ಕೆ ಸಂಬಂಧಿಸಿದ ಕೆಲವು ವಿಷಯಗಳನ್ನು ರೂಪುಗೊಳಿಸುವ ಅವಶ್ಯಕತೆ ಏರ್ಪಟ್ಟಿತು. ಅಂಥ ನಿಯಮಗಳು ಇಲ್ಲದೆ ಹೋಗಿದ್ದರೆ, ರಚನಾಕಾರರು ತಮ್ಮ ಇಚ್ಛಾನುಸಾರಿಯಾಗಿ ಬರೆಯುವ ಗಂಡಾಂತರವಿದ್ದಿತು. ಅದಕ್ಕೆ ಸಂಬಂಧಿಸಿದ ನಿಯಮಗಳನ್ನು ತಿಳಿಸಲು ಏರ್ಪಟ್ಟ ಲಕ್ಷಣ ಗ್ರಂಥವೇ 'ಲೀಲಾತಿಲಕ'. ಅದು ಕ್ರಿ. ಶ. 14ನೆಯ ಶತಮಾನದಲ್ಲಿ ರಚಿಸಲ್ಪಟ್ಟಿದೆಯೆಂದು ಅಂತಸ್ಸಾಕ್ಷಿಗಳಿಂದ ನಿರ್ಣಯಿಸಲ್ಪಟ್ಟಿದೆ. ಅದು ಸಂಸ್ಕೃತ ಭಾಷೆಯಲ್ಲಿ ರಚಿಸಲ್ಪಟ್ಟ ಮಲಯಾಳ ಲಕ್ಷಣ ಗ್ರಂಥ. ಅದರಲ್ಲಿ ಉದಾಹರಿಸಲ್ಪಟ್ಟ ಮಣಿಪ್ರವಾಳ ರಚನೆಗಳಿಂದ, ಅದು ರಚಿಸಲ್ಪಡುವುದಕ್ಕಿಂತ 4–5 ಶತಮಾನಗಳ ಹಿಂದಿನಿಂದಲೇ ಮಣಿಪ್ರವಾಳವು ಅನೇಕ ಕವಿಗಳನ್ನು ಆಕರ್ಷಿಸಿತ್ತೆಂದೂ, ಅವರು ಅದರಲ್ಲಿ ಅನೇಕ ರೀತಿಯ ರಚನೆಗಳನ್ನೂ– 'ದೇವತಾಸ್ತುತಿ, ರಾಜಪ್ರಶಂಸಾಕೃತಿ, ಸ್ಥಳ ಮಾಹಾತ್ಮ್ಯ, ಪ್ರಕೃತಿ ಚಿತ್ರಣ, ಸಂದೇಶ ಕಾವ್ಯ, ಪರ್ವದಿನ ವರ್ಣನೆ, ಶೃಂಗಾರವರ್ಣನೆ' – ರಚಿಸಿದರೆಂದು ತಿಳಿಯುತ್ತದೆ. 'ಲೀಲಾತಿಲಕ'ದಲ್ಲಿ ಮಣಿಪ್ರವಾಳವು ಉತ್ತಮ, ಮಧ್ಯಮ, ಅಧಮ, ಹೀಗೆ ಒಂಬತ್ತು ವಿಧವಾಗಿ ವಿಭಜಿಸಲ್ಪಟ್ಟಿದೆ. ಅಲ್ಲಿ ಉಪಯೋಗಿಸಲು ಯೋಗ್ಯವಾದ ಸಂಸ್ಕೃತ, ಮಲಯಾಳ ಶಬ್ದಗಳ ನಿಷ್ಪತ್ತಿ ಪರಿಮಾಣದಿಂದ ಈ ಭೇದಗಳು ರೂಪುಗೊಂಡಿವೆ. ಲೀಲಾತಿಲಕದಲ್ಲಿ ಆಯಾ ಭೇದಗಳ ಲಕ್ಷಣವನ್ನು ಹಾಗೂ ಲಕ್ಷ್ಯಗಳನ್ನು ನೋಡಿ.

1. ತದುತ್ತಮ ಭಾಷಾರಸ ಪ್ರಧಾನ್ಯೇ –

“ಪ್ರಲ್ಲಿಕ್ಕೊಂಡಾಳ್ ಉರಕ್ಕ ಪುನರಪಿ ಮಣಿವಾ ಮಲ್ಲಿನಾಳ್ ಮೆಲ್ಲ ಮೆಲ್ಲ.
ಕಾಮಕ್ಕೂತ್ತಿನ್ ನಣಿಞಳ್ ಮದನ ಪರವಶಾಕಾಂತ ಕೈ ಮ್ಮೆ ಮರನ್ನಾಳ್
ವೀರ್ತ್ತಾಳ್ ಬಟ್ಟೇ ವಿಯರ್ತ್ತಾಳ್ ವಿವಶ ಮರುದಡಾಯನ್ನೆವೀಯನ್ನಿರನ್ನಾ
ಶೆನ್ ಮಾರ್ವಿನ್ ಪೊನ್ನುವೀಣ್ಣಪ್ಪಂಗುಳಲ ಗಮೇ ಮಾಳ್ಗಿನಾಳ್ ಉಣ್ಣಿನಜ್ಞಾ.”

(ಪ್ರಥಮ ಶಿಲ್ಪ–12)

2. ಭಾಷಾ ಪ್ರಧಾನ್ಯೇ ರಸ ಸಾಮಾನ್ಯೇ ಉತ್ತಮ ಕಲ್ಪಂ –

ರಸ ಪ್ರಧಾನ್ಯೇ ಭಾಷಾ ಸಾಮ್ಯೇ ಚ.

ಭಾಷಾ ಪ್ರಧಾನ್ಯಂ, ರಸಸಾಮಾನ್ಯಂ –

“ಆಮ್ಬಲ್ ಪ್ರಿಯಾಭರಣ ಮಜ್ಜಿನ ಕಾಲಕೂಟಂ
ಕೊಮ್ಬುಂ ಕುರಾಲ್ ಮೋಟಿ ತುಳಂಬಿನ ಕೆಜ್ಞವೆಲ್ಲಂ
ಚಾಮ್ಪೊಳು ಮೆನ್ಮನಸಿ ಚಾಮ್ಬ ಲಣಿಞ ಕೋಲಂ
ಕಾಮ್ಪೊಡು ಕೂಡ ಮಡು ವೀಡುಗ ಮಸ್ಮಧಾರೇ” (1–14)

ರಸ ಪ್ರಧಾನ್ಯಂ ಭಾಷಾ ಸಾಮ್ಯಂ –

"ಅತ್ಯಾತಾಮ್ರೈ ಮಲಸ್ ಪಿದುರರಕ್ಕಾಮ್ಬ್ವಿಲ್ ಮೇಲನ್ನಿ ನೇರಂ
ಮಂದಂ ಮಂದಂ ಮರುಪಿನನಿಲಾ ವೆನ್ನುತೋನ್ನುಂ ಪ್ರಕಾರಂ
ಕಾಂತಂ ದಂತಚ್ಛದ ರುಚಿಕಲರ್ನ್ನೀಮಲ್ ಮಂದಸ್ಮಿತಾರ್ದ್ರಂ
ನಾಳಕ್ಕಾಣಾಂ ತವ ನಯನಮೇ ನಜ್ಞ್ಗಿ ವಕ್ತ್ರಾರವಿಂದಂ" (I–15)

3. ಸಾಮ್ಯೇ ಮಧ್ಯಂ –

"ಪೊನ್ನೋಲೆಯುಂ ವಳಯುಮಾರಮು ಮೆಣ್ಣಿವೆಲ್ಲಾ
ಮಲ್ಲಾಗಯಿಲ್ಲ ಕಲಭಾಷಿಣಿ ಭೂಷದಾನಿ
ಎಲ್ಲೋರ್ಕ್ಕುಮೇ ರಸಕರಂ ಸತತಂ ನಿಬದ್ಧಂ
ಸೌಜನ್ಯ ಮೆಣದು ವಿಭೂಷಣಮಂಗನಾನಾಂ" (I–16)

4. ಭಾಷಾ ಸಾಮ್ಯೇ ರಸನ್ಯೂನತ್ವೇ ಮಧ್ಯಮಕಲ್ಪಂ –

ರಸ ಸಾಮ್ಯೇ ಭಾಷಾ ನ್ಯೂನತ್ವೇ ಚ
ಭಾಷಾ ಪ್ರಧಾನ್ಯೇ ರಸ ನ್ಯೂನತ್ವೇ ಚ
ರಸ ಪ್ರಧಾನ್ಯೇ ಭಾಷಾ ನ್ಯೂನತ್ವೇ ಚ

ಭಾಷಾ ಸಾಮ್ಯಂ ರಸ ನ್ಯೂನತ್ವಂ –

"ನಟ್ಟುಚ್ಚ ನೇರತ್ತು ದಿವಾಕರೋಽಯು
ಮತ್ಯಂತ ಮಾಹಂತ ಕರೋತಿ ತಾಪಂ
ಮಧ್ಯಸ್ಥರಾಯ್ ನಿರ್ಕ್ಕಿಲು ಮುನ್ನ ತಾನಾಂ
ಮಟ್ಟೋಣ್ಣು ಕಾಲಂ ವಿಯಣಾದ ಕೋಲಂ" (I–17)

ರಸ ಸಾಮ್ಯಂ – ಭಾಷಾ ನ್ಯೂನತ್ವಂ –

"ಅಂಗಂ ತುಂಗಸ್ತನಭರಯುತಂ ಪುಲ್ಗಿ ವಾನ್ ನಸಾವಿಲ್
ಪೋರಾ ಪುಣ್ಯ ಪ್ರಸರ ಮೊರುನಾಳಿನ್ನುಡಯ ವಲ್ಲಭಾಯ
ನಿನ್ನೆಕ್ಕೊಣ್ಣನ್ನಭಿಮತ ಮೆನೆ ಕೆಯ್‌ದೆಲಾಂ ಎರ್ರೊಣಜಿನ್ನೇ
ನಿದ್ರೇ ಭದ್ರೇ ತ್ವಮಪಿ ವಿಧಿನಾ ದುರ್ಲಭಾ ವಲ್ಲಭೇವ" (1–18)

ಭಾಷಾ ಪ್ರಧಾನ್ಯಂ ರಸ ನ್ಯೂನತ್ವಂ –

"ಮುರಣೇನ್ ಕಟಿಲ್ ಕಾಂತಿಯುಂ ಮುಗತ್ತಿನ್
ಪರಿಜುಂ ಪಾಟವಮುಂ ಪರನ್ನ ಮಾದುಂ
ಮರುವಿನದು ಮಂದ ಮಂದ ಮಲ್ಲೇ
ಚರಣಂ ಚಾರು ಚಕೋರ ಲೋಚನಾಯ". (1–19)

ರಸ ಪ್ರಧಾನ್ಯಂ ಭಾಷಾ ನ್ಯೂನತ್ವಂ–

"ಆ ತಾಮ್ರೈರಸಪೂರ್ಣೈರಯುಗಶರನುಡೇ ಬಾಣಪೂತೈರಪಾಂಗೈ
ರವ್ಯಾಜ ಪ್ರೇಮಗರ್ಭೈ ರಮುದರಸ ಮಷೀರೂಷಿತೈರಾರ್ದ್ರಪಾದ್ಯೈಃ
ಪ್ರಾಪ್ತಾನುಜ್ಞಂ ಪ್ರಯಾಂತಂ ಜನಮಿಮನುರಾಗೋಳ್ ಸುಖಂ ನೋಕ್ಕಿನೋಕ್ಕೀ
ತಿಷ್ಠಂತೀಂ ನಾರಣೀದನ್ ದುಹಿತರಮಿತನಾನ್ ನಷ್ಟಧೈರ್ಯಂ ಸ್ಮರಾಮಿ"–.(1–20)

5. ನ್ಯೂನತ್ವೇ ಅಧಮಂ–

"ಆಶೀ ಜನ್ಮೈ ರರಅಿನಂ ನಿಶಿ ನೀಯಮಾನಾ
ಮಾವಿರ್ಭವತ್ಪುಲಕ ಭೂಷಣ ಭೂಷಿತಾಂಗೀಂ
ಅಂಕೇ ನಿವೇಶ್ಯ ಸುದೃಢಂ ತರಸಾ ನವೋಢಾ
ಮಾರ್ಶ್ಳೋಲ್ ಅಧೀರ ನಯನಾಂ ತಜಿಗಿನ್ನ ಧನ್ಯಃ" (–1–21)

ಹೀಗೆ–ಉತ್ತಮ, ಉತ್ತಮ ಕಲ್ಪದಲ್ಲಿ ಎರಡು, ಮಧ್ಯಮ, ಮಧ್ಯಮ ಕಲ್ಪದಲ್ಲಿ ನಾಲ್ಕು, ಹಾಗೂ ಅಧಮ ಎಂದು ಮಣಿಪ್ರವಾಳದಲ್ಲಿನ ಒಂಬತ್ತು ರೀತಿಗಳು ಲೀಲಾತಿಲಕದಲ್ಲಿ ತಿಳಿಸಲ್ಪಟ್ಟಿವೆ. ಮಲಯಾಳವನ್ನು ಸುಸಂಪನ್ನವಾಗಿ ಮಾಡುವಷ್ಟರ ಮಟ್ಟಿಗೆ ಪರಿಮಿತವಾಗಿ ಸಂಸ್ಕೃತ ಶಬ್ದಗಳನ್ನು ಉಪಯೋಗಿಸಬೇಕೇ ಹೊರತು, ಆ ಸ್ವೀಕಾರವನ್ನು ಮಲಯಾಳ ಭಾಷಾ ಸ್ವರೂಪವನ್ನಾಗಿ ಬದಲಿಸುವಂಥದಾಗಿರ ಬಾರದು ಎಂದು ಅಲ್ಲಿ ಸ್ಪಷ್ಟವಾಗಿ ನಿರ್ದೇಶಿಸಲ್ಪಟ್ಟಿದೆ. ಸಂಸ್ಕೃತ ವ್ಯಾಕರಣ ಮರ್ಯಾದೆಗಳು–ಮುಖ್ಯವಾಗಿ ವಿಭಕ್ತ್ಯಂತಗಳಾದ ಸಂಸ್ಕೃತ ಶಬ್ದಗಳು ಹಾಗೆ ಹಾಗೆಯೇ ಶಬ್ದ ಸೌಂದರ್ಯಕ್ಕೆ, ಮಾಧುರ್ಯಕ್ಕೆ ಗ್ರಹಿಸಲ್ಪಟ್ಟರೂ, ಅವು ಮೂಲ ಮಲಯಾಳ ಭಾಷಾ ಸೌಂದರ್ಯಕ್ಕೆ, ವಾಕ್ಯ ನಿರ್ಮಾಣ ಸೂತ್ರಗಳಿಗೆ ಭಂಜಕ ಗಳಾಗಬಾರದು. ಮಣಿಪ್ರವಾಳ ರಚನೆಗೆ ಸಂಬಂಧಿಸಿದ ಲೀಲಾತಿಲಕದಲ್ಲಿ ಪ್ರಧಾನ ವಾಗಿ ಎರಡು ನಿಯಮಗಳು ತಿಳಿಸಲ್ಪಟ್ಟಿವೆ. ಒಂದು–ಅದರಲ್ಲಿ ಉಪಯೋಗಿಸಲ್ಪಡುವ ಮಲಯಾಳ ಶಬ್ದಗಳು ಉತ್ತಮ ಜಾತಿಯುವರಾದ ತ್ರೈವರ್ಣಿಗಳಲ್ಲಿ ಅಧಿಕ ವ್ಯವಹಾರವುಳ್ಳದ್ದಾಗಿರಬೇಕು. ಅಲ್ಲಿ ಗ್ರಹಿಸಲ್ಪಡುವ ಸಂಸ್ಕೃತ ಪದಗಳು ಸುಪರಿ ಚಿತವೂ, ಸರಳವೂ ಆಗಿರಬೇಕು. ಹಾಗೆ ಸಮ್ಮಿಳನ ಹೊಂದುವ ಶಬ್ದಗಳು ಒಂದು ವಿಧವಾದ ಹೋಲಿಕೆಯುನ್ನು ಪಡೆದಿರಬೇಕು.—'ಒಂದೇ ಹಾರದಲ್ಲಿ ಪೋಣಿಸಲ್ಪಟ್ಟ ಮಣಿ ಹಾಗೂ ಪ್ರವಾಳಗಳಂತೆ'—ಹಾಗೆ ನಿರ್ದೇಶಿಸುವುದರಲ್ಲಿನ ಆಶಯವೆಂದು ನಾವು ಗುರುತಿಸಬೇಕಾಗಿದೆ. ರಸವತ್ತಾಗಿ ಮಲಯಾಳ ಶಬ್ದಗಳು ಅಧಿಕವಾಗಿರುವ ರಚನೆ ಉತ್ತಮವೆಂದೂ, ಮಲಯಾಳ, ಸಂಸ್ಕೃತ ಶಬ್ದಗಳು ಸಮಾನವಾಗಿರುವುದು ಮಧ್ಯಮವೆಂದೂ, ಮಲಯಾಳ ಶಬ್ದಗಳಿಗಿಂತ ಸಂಸ್ಕೃತ ಶಬ್ದಗಳು ಅಧಿಕವಾಗಿರುವ ರಚನೆ ಅಧಮವೆಂದೂ, ಮಲಯಾಳ ಶಬ್ದಗಳಿಗೆ ಕೊಡಲ್ಪಟ್ಟ ಪ್ರಾಧಾನ್ಯಾಪ್ರಧಾನ್ಯ ಗಳಿಂದ ಅದರ ಪರಿಗಣನೆಯುನ್ನು ಮಾಡಿದೆ. ಸಂಸ್ಕೃತ ಶಬ್ದಗಳು ಸುಪರಿಚಿತವೂ

ಸರಳವೂ ಆಗಿರಬೇಕೆಂಬ ನಿಯಮದಿಂದಲೇ—ಅವ್ಯಾಜದಿಂದ, ವಿಶೇಷವಾಗಿ ಸಂಸ್ಕೃತ ಪದಗಳೇ ಅಲ್ಲಿ ಪ್ರವೇಶಿಸಲು ಅವಕಾಶ ಹೆಚ್ಚಾಗಿದ್ದರೂ, ಪ್ರಾರಂಭದಶೆಯಲ್ಲಿ ಅಂಥ ಪರಿಸ್ಥಿತಿ ಮಾತ್ರ ಏರ್ಪಡಲಿಲ್ಲ. ನಂತರ ಅಂದರೆ ಕ್ರಿ. ಶ. 15, 16, 17 ನೆಯ ಶತಮಾನಗಳಲ್ಲಿ ರಚಿತವಾದ ಚಂಪೂ ಕಾವ್ಯಗಳಲ್ಲಿಯೂ ಸಂದೇಶ ಕಾವ್ಯಗಳಲ್ಲಿಯೂ, ದೀರ್ಘಸಮಾಸ ಭೂಯಿಷ್ಠವಾದ ರಚನೆಗಳು ಬಹಳವಾಗಿ ಕಂಡುಬರುತ್ತಿದ್ದರೂ ಪೂರ್ವದಶೆಗಳಲ್ಲಿ ರಚಿತವಾದ ಕಾವ್ಯಗಳಲ್ಲಿ ಮಾತ್ರ ಅದು ಉತ್ತಮ ಜಾತಿಗೇ ಸೇರಿದುದೆಂದು ಹೇಳಬಹುದು. ಲೀಲಾತಿಲಕದಲ್ಲಿ ಹೇಳಲ್ಪಟ್ಟ ಈ ಕೆಳಗಿನ ಲಕ್ಷಣ ಪ್ರಧಾನವಾದುದು. 'ಮಲಯಾಳ ಸಂಸ್ಕೃತ ಶಬ್ದ ಸಮ್ಮಿಳನದೊಂದಿಗೆ ಮಣಿ ಪ್ರವಾಳದಲ್ಲಿ ರಚಿಸಲ್ಪಟ್ಟ ಈ ಕಾವ್ಯವು ಮಲಯಾಳ ಕಾವ್ಯವೆಂದೇ ಹೇಳುವ ಸ್ಫೂರ್ತಿ ಪಾಠಕರಿಗೆ ಉಂಟುಮಾಡುವಂಥದ್ದಾಗಿರಬೇಕು. ಅದು ಸಂಸ್ಕೃತ ಕಾವ್ಯವೆನ್ನುವ ಅಭಿಪ್ರಾಯಕ್ಕೆ ಯಾವ ಪರಿಸ್ಥಿತಿಯಲ್ಲೂ ಅವಕಾಶವನ್ನು ಕಲ್ಪಿಸಬಾರದು. ಇದೇ ಮಣಿಪ್ರವಾಳ ರಚನೆಯಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶ. ಇದೇ ಸರಿಯಾದ ಪದ್ಧತಿ'.

2.3.1. ಮಣಿಪ್ರವಾಳದಲ್ಲಿ ರಚನೆಯಾದ ಕಾವ್ಯಗಳೆಲ್ಲವೂ ಸಂಸ್ಕೃತ ವೃತ್ತಗಳಲ್ಲಿ ಬರೆಯಲ್ಪಟ್ಟಿವೆ. ಅವುಗಳಲ್ಲಿ ರಸ, ಅಲಂಕಾರ, ರಚನಾ ವಿಧಾನ ಮುಂತಾದವುಗಳಿಗೆ ಕೊಡಲ್ಪಟ್ಟ ಪ್ರಾಧಾನ್ಯತೆಯನ್ನು ಪರೀಕ್ಷಿಸಿದಲ್ಲಿ, ಮಣಿಪ್ರವಾಳ ದಲ್ಲಿ ಸಂಸ್ಕೃತ ಭಾಷಾ ಪ್ರಭಾವವು ಎಷ್ಟಿದೆಯೆಂಬುದು ಸ್ಪಷ್ಟವಾಗುತ್ತದೆ. ಪ್ರಸಿದ್ಧಿಯಾದ ಮಣಿಪ್ರವಾಳ ಶೈಲಿಯ ಸವಿ ನೋಡಲು 'ಚಂದ್ರೋತ್ಸವ' ಕಾವ್ಯದಲ್ಲಿನ ಶ್ಲೋಕಗಳನ್ನು ಉದಾಹರಣೆಯಾಗಿ ಕೊಡಬಹುದು.

"ಪರಭೃತ ಮೊಳಿ ಚುಟ್ಟುಂ ಮುಟ್ಟು ಮಿಂಡಂಗ ಲಿಟ್ಟುಂ
ಡದಿಲುಂ ಅಧಿಕ ಹೃದ್ಯಂ ದಕ್ಷಿಣ ಭಾರತಾಖ್ಯಂ
ವಿರಳನಿಲ ಮಲರ್ ಮಾದಿನ್ನೆ ಅಂಗಜೆನ್ನುಂ ತ್ರಿಲೋಕೀ
ಚರು ತೊಡು ಕುರಿಪ್ಪೋಲೆ ಚೇರಮಾನ್ನಾಡು ಯುಸ್ಮೃ"

ಈ ಶ್ಲೋಕದಲ್ಲಿ ಕೇರಳದ ವೈಭವವನ್ನು ವರ್ಣಿಸಿದೆ.

2.3.2. ಎಲ್ಲ ಮಲಯಾಳ ಚಂಪೂಕಾವ್ಯಗಳಲ್ಲಿ ಸಂಸ್ಕೃತ ವೃತ್ತಗಳನ್ನೂ ಮತ್ತು ಮಣಿಪ್ರವಾಳ ಶೈಲಿಯನ್ನು ಕಾಣಬಹುದು. ಅಲ್ಲಿನ ವಚನವೂಸಹ ಲಯ ಬದ್ಧವಾಗಿ 'ತರಂಗಿಣಿ' ಎಂಬ ಛಂದೋ ವಿಶೇಷಕ್ಕೆ ಸನ್ನಿಹಿತವಾಗಿದೆ. ಅವರಲ್ಲಿ ನಂಬೂದಿರಿ ರಚಿತವಾದ ರಾಮಾಯಣ ಪ್ರಸಿದ್ಧವಾದುದು. ಅಲ್ಲಿನ ಮಣಿಪ್ರವಾಳ ಶೈಲಿಯನ್ನು ಈ ಶ್ಲೋಕದಲ್ಲಿ ಕಾಣಬಹುದು.

"ಮಂದೀಭೂತೇ ಜಸಾಘೇ ಪರಿಮಳ ಬಹುಲಂ ಕೈಯಿಲಾದಾಯ ಮಾಲಾಂ
ಮಂದಾರಾಭೋಗ ಮಂದಸ್ಮಿತ ಮಧುರ ಮುಖೀ ಮಂಗಳ ಸ್ತ್ರೀ ಸಮೇತಾ
ಮಂದಂ ಮಂದಂ ನಯಂತೀ ಘನ ಜಘನ ಭರಂ ಪ್ರಾಭೃತ ಪ್ರಾಯಮಗ್ರೇ
ಮಂದಾಕ್ಷಾಲಂಕೃತಾಕ್ಷೀ ಮನಸಿಜ ಕಳಿಕಾ ಮೈಥಿಲೀ ಸಾ ನಡನ್ನಾಳ್"

ಸೀತಾಕಲ್ಯಾಣ ಘಟ್ಟದಲ್ಲಿ ಕಲ್ಯಾಣ ಮಂಟಪಕ್ಕೆ ಬರುತ್ತಿರುವ ಸೀತಾದೇವಿಯನ್ನು ಈ ಶ್ಲೋಕದಲ್ಲಿ ವರ್ಣಿಸಿದೆ. ಇದರಲ್ಲಿ 'ಕೈಯಿಲ್', 'ನಡನ್ನಾಳ್' ಎಂಬ ಎರಡು ಮಲಯಾಳ ಶಬ್ದಗಳನ್ನುಳಿದು ಉಳಿದುವೆಲ್ಲಾ ಸಂಸ್ಕೃತ ಶಬ್ದಗಳೇ. ಚಂಪೂ ಕಾವ್ಯಗಳ ಮಣಿಪ್ರವಾಳ ಭಾಷೆಯಲ್ಲಿ ಕಂಡು ಬರುವ ಸಂಸ್ಕೃತ ಶಬ್ದಾಧಿಕ್ಯಕ್ಕೆ ಇದೊಂದು ಒಳ್ಳೆಯ ಉದಾಹರಣೆ.

3.1. 'ಲೀಲಾ ತಿಲಕ' ಲಕ್ಷಣ ಗ್ರಂಥವು ಮಣಿಪ್ರವಾಳ ಶೈಲಿ ಕೇವಲ ಕೇರಳ ಭಾಷೆಯಲ್ಲಿ ಮಾತ್ರವೇ ಇರುವುದೆಂದು ತಿಳಿಸುತ್ತದೆ. ಆದರೆ ಅದು ಸರಿಯಲ್ಲ. ತಮಿಳು, ಕನ್ನಡ, ತೆಲುಗು ಇತರೆ ದಕ್ಷಿಣ ಭಾಷೆಗಳಲ್ಲೂ ಸಹ ಇಂಥ ಶೈಲಿಯೊಂದು ಪ್ರಚಲಿತವಾಗಿದ್ದಿತೆಂದು ತಿಳಿಯುತ್ತದೆ. ಮಣಿಪ್ರವಾಳ ಎಂಬ ಪದವು ಮೊಟ್ಟ ಮೊದಲಿಗೆ ಜೈನಕವಿ ಜಿನಸೇನರು ಷಟ್‌ಖಂಡಾಗಮಕ್ಕೆ ರಚಿಸಿದ ಜಯಧವಳವೆಂಬ ವ್ಯಾಖ್ಯಾನದ ಕೊನೆಯಲ್ಲಿ ಕಂಡು ಬರುತ್ತದೆ. ಜಿನಸೇನರು ಕ್ರಿ. ಶ. 837ರಲ್ಲಿ ಅದನ್ನು ಪೂರ್ಣಗೊಳಿಸಿದರು. ಅಲ್ಲಿ ಈ ರೀತಿ ಇದೆ. "ಮಣಿಪ್ರವಾಳ ನ್ಯಾಯೇನ ಪ್ರೋಕ್ತೋSಯಂ ಗ್ರಂಥ ವಿಸ್ತರಃ." ಅದರಲ್ಲಿನ ಪೂರ್ವಭಾಗಕ್ಕೆ 'ಧವಳ' ಎಂದು ಹೆಸರು. ಅವರ ಗುರುವಾದ ವೀರಸೇನರು ಅದರ ಕರ್ತೃ. ಅವರು ತಮ್ಮ ರಚನೆಯನ್ನು ಮಣಿಪ್ರವಾಳ ಶೈಲಿಯಲ್ಲಿಯೇ ಪೂರ್ಣಗೊಳಿಸಿದ್ದಾರೆ. ಆದರೆ ಅದರಲ್ಲಿ ಅವರು ಸಂಸ್ಕೃತ, ಪ್ರಾಕೃತ ಭಾಷಾ ಮಿಶ್ರವಾದ ಮಣಿಪ್ರವಾಳವನ್ನು ಅವಲಂಬಿಸಿದರು. ಆ ಮಿಶ್ರಣವು ಮಲಯಾಳವನ್ನು ಹೋಲುವಂಥದಲ್ಲ. ಸಂಸ್ಕೃತ ಭಾಷಾ ರಚನೆಗಳು, ಪ್ರಾಕೃತ ಭಾಷಾ ರಚನೆಗಳು, ತಮ್ಮದೇ ಆದ ಸ್ವತಂತ್ರ ರಚನೆಗಳು. ಪ್ರತ್ಯೇಕವಾದ ವಚನ ಭಾಗಗಳೊಂದಿಗೆ ಆ ರಚನೆ ಸಾಗಿದೆ. ಅದೇ ಕ್ರಮವಾಗಿ ಒಂದೇ ವಾಕ್ಯದಲ್ಲಿ ಇಲ್ಲವೇ ಒಂದೇ ಪದ್ಯದಲ್ಲಿ ಸಂಸ್ಕೃತ ವಿಭಕ್ತ್ಯಂತಗಳಾದ ಶಬ್ದಗಳನ್ನು ಯಥಾ ರೀತಿಯಾಗಿ ದೇಶ ಭಾಷಾ ಪದಗಳೊಂದಿಗೆ ಬೆರಸಿ ರಚಿಸುವ ಪದ್ಧತಿಗೆ ದಾರಿಕೊಟ್ಟು ಮಲಯಾಳದಲ್ಲಿರುವ ಮಣಿಪ್ರವಾಳವನ್ನು ಹೋಲುವ ಶೈಲಿಯಾಗಿ ಪರಿಣಮಿಸಿರುವುದು ಸಂಭಾವ್ಯ.

3.2.1. ದಕ್ಷಿಣ ದೇಶದಲ್ಲಿ ಮಧ್ಯಯುಗದಲ್ಲಿ ಪ್ರಚುರವಿದ್ದ ವಿವಿಧ ಭಾಷೆಗಳಿಗೆ ಸೇರಿದ ವಿದ್ವಾಂಸರಿಗೆ ಇದರ ಇರವಿಕೆ ಕುರಿತು ತಿಳಿದಿದ್ದಿತು ಎನ್ನಲು ಆಧಾರಗಳು ಲಭಿಸುತ್ತಿವೆ. ಕಾಶ್ಮೀರ ದೇಶಕ್ಕೆ ಸೇರಿದ ಅಭಿನವಗುಪ್ತನಿಗೂ ಇದರ ವಿಷಯ ಗೊತ್ತಿದ್ದಿತು ಎನ್ನುವುದು ನಮಗೆ ಆಶ್ಚರ್ಯವನ್ನುಂಟುಮಾಡುತ್ತಿದೆ.

ಆತನು ಕ್ರಿ. ಶ. 11 ನೆಯ ಶತಮಾನಕ್ಕೆ ಸೇರಿದವನು. ಭರತನ ನಾಟ್ಯಶಾಸ್ತ್ರಕ್ಕೆ ಆತನು ರಚಿಸಿದ ವ್ಯಾಖ್ಯಾನದಲ್ಲಿ ದಕ್ಷಿಣ ಭಾರತದಲ್ಲಿ ಪ್ರಚಾರವಾಗಿದ್ದ ಈ ಮಣಿಪ್ರವಾಳಶೈಲಿ ಕುರಿತು ಪ್ರಸ್ತಾಪಿಸುವುದು ಮಾತ್ರವೇ ಅಲ್ಲದೆ, ಕಾಶ್ಮೀರ ದೇಶದಲ್ಲಿಯೂ ಭಿನ್ನ ಭಿನ್ನ ಹೆಸರುಗಳಿಂದ ಇಂಥ ಶೈಲಿಯೊಂದು ತನ್ನ ಕಾಲದಲ್ಲಿದ್ದಿತೆಂದು ಹೆಸರಿಸಿದ್ದಾನೆ.

3.2.2. ಭರತನ ನಾಟ್ಯಶಾಸ್ತ್ರದ 32 ನೆಯ ಅಧ್ಯಾಯದಲ್ಲಿ 'ಧ್ರುವಾ-ಗಾನ'ದಲ್ಲಿ ಉಪಯೋಗಿಸಲು ತಕ್ಕ ಭಾಷೆಯನ್ನು ಕುರಿತು ಹೀಗಿದೆ.

" ದಿವ್ಯಾನಾಂ ಸಂಸ್ಕೃತಂ ಗಾನಂ
ಪ್ರಮಾದ್ಯೈಸ್ತು ವಿಧೀಯತೇ
ಅರ್ಧಸಂಸ್ಕೃತಮೇವಂ ತು
ಮಾನುಷಾಣಾಂ ಪ್ರಯೋಜಯೇತ್ "

ನಾಟ್ಯಶಾಸ್ತ್ರ 32–389

ಇಲ್ಲಿನ ಮೂರನೆಯ ಚರಣದಲ್ಲಿರುವ 'ಅರ್ಧ ಸಂಸ್ಕೃತ' ಎಂಬ ಪದವು ನಮಗೆ ಪ್ರಧಾನ. ಈ ಶ್ಲೋಕಕ್ಕೆ ಅಭಿನವಗುಪ್ತನು ಈ ರೀತಿ ವ್ಯಾಖ್ಯಾನ ಬರೆದನು.

" ದಿವ್ಯಾನಾಂ ತು ದೇವ ನೃಪಾಣಾಂ ಪ್ರಮಾಣೈಃ ವ್ಯಾಕರಣಾದಿ ಲಕ್ಷಣೈಃ ಉಪೇತಂ ಸಂಸ್ಕೃತಂ ಗಾನಂ ಶುದ್ಧಂ (ಅಸ್ಯತ್) ತ್ರಿವರ್ಗ ಪ್ರಸಿದ್ಧಂ ಪದಮಧ್ಯೇ ಸಂಸ್ಕೃತಂ ಮಧ್ಯೇ ದೇಶಭಾಷಾದಿಯುಕ್ತಂ ತದೇವ ಕಾರ್ಯಂ. ದಕ್ಷಿಣಾಪಥೇ ಮಣಿಪ್ರವಾಳಮಿತಿ ಪ್ರಸಿದ್ಧಂ. ಕಾಶ್ಮೀರೇ ಶಾಟ ಕುಲಂ ಇತಿ. ಅನ್ಯೇತು ಸಕಲ ಲೋಕ ಪ್ರಸಿದ್ಧಂ ವ್ಯಾಖ್ಯಾನಾನಪೇಕ್ಷಿಭಿಃ ಸಂಸ್ಕೃತೈಃ ಕೃತಂ ಅರ್ಧ ಸಂಸ್ಕೃತಂ ಆಹುಃ. ಅಪರೇ ವರರುಚಿ ಪ್ರಣೀತ ಲಕ್ಷಣಾನ್ವಿತಂ ಶೌರಸೇನ್ಯಾದಿ ದೇಶಭಾಷಾ ವ್ಯತಿರಿಕ್ತಂ ಪ್ರಾಕೃತಂ ಏವ ಅರ್ಧಸಂಸ್ಕೃತಂ ಇತಿ ಮನ್ಯಂತೇ. ಯಸ್ಯ ಯಸ್ಯ ಯಾ ಪಾಠೇ ಭಾಷಾ ತಯೈವ ತಸ್ಯ ಗೀತಂ ಇತಿ ಮುನಿ ಮತಂ ಇತ್ಯಪೇಕ್ಷ್ಯ...."—

ಅಭಿನವ ಭಾರತಿ. 4 ಸಂ. ಪು. 379. (ಗೈಕ್ವಾಡ್ ಓರಿಯಂಟಲ್ ಸೀರೀಸ್–ಸಂಪಾದಕ–ಮಾನವಲ್ಲಿ ರಾಮಕೃಷ್ಣಕವಿ).

" ದೇವ ಪಾತ್ರಗಳ, ರಾಜ ಪಾತ್ರಗಳ ಗಾಯನವು, ವ್ಯಾಕರಣಾದಿ ಲಕ್ಷಣಗಳು ಸಮುಪೇತವಾದ ಶುದ್ಧವಾದ ಸಂಸ್ಕೃತದಲ್ಲಿ ಇರಬೇಕು. ಬ್ರಾಹ್ಮಣರು ಮೊದಲು ಗೊಂಡು ಮಿಕ್ಕ ತ್ರಿವರ್ಗದವರ ಗಾಯನಕ್ಕೆ ದೇಶಭಾಷಾ ಮಿಶ್ರಿತವಾದ ಸಂಸ್ಕೃತವನ್ನು ಉಪಯೋಗಿಸಬೇಕು. (ಮೂಲ ಶ್ಲೋಕದಲ್ಲಿನ ಅರ್ಧ ಸಂಸ್ಕೃತ ಎನ್ನುವ ಮಾತಿಗೆ

ಇದು ವಿವರಣೆ). ದಕ್ಷಿಣಾ ಪಥದಲ್ಲಿ ಇದು ಮಣಿಪ್ರವಾಳವೆಂದು ಪ್ರಸಿದ್ಧವಾಗಿದೆ. ಕಾಶ್ಮೀರದಲ್ಲಿ 'ಶಾಟಕುಲ'ವೆಂದೂ, ಕೆಲವರು ಅರ್ಧ ಸಂಸ್ಕೃತವೆಂಬ ಮಾತಿಗೆ ಸಕಲ ಲೋಕಪ್ರಸಿದ್ಧವೆಂದೂ, ವ್ಯಾಖ್ಯಾನವನ್ನು ಅಪೇಕ್ಷಿಸದವೂ ಆದ ಸಂಸ್ಕೃತ ಪದಗಳಿಂದ ಕೂಡಿದ್ದೆಂದೂ, ವಿವರಿಸುತ್ತಾರೆ. ಮತ್ತೆ ಕೆಲವರು ಅದು ಶೌರಸೇನಾದಿಗಳಿಗೆ ಭಿನ್ನವಾದುದು, ವರರುಚಿ ಪ್ರಣೀತವಾದ ಲಕ್ಷಣಗಳಿಂದ ಕೂಡಿರುವುದು ಎಂಬ ಒಂದು ಪ್ರಾಕೃತ ಭಾಷೆಯೆಂದು ಹೇಳುವರು. ಆದರೆ ಪಾಠ (ವಚನ) ಯಾವ ಭಾಷೆಯಲ್ಲಿದೆಯೋ ಗೀತೆಯೂ ಅದೇ ಭಾಷೆಯಲ್ಲಿರಬೇಕು ಎನ್ನುವ ಮುನಿಮತವನ್ನು ಅನುಸರಿಸುವುದು ಸರಿ."

3.2.3. ಅಭಿನವಗುಪ್ತನ ಈ ವಿವರಣೆಯನ್ನು ಅನುಸರಿಸಿ ಭರತಮುನಿ ಹೆಸರಿಸಿದ ಅರ್ಧಸಂಸ್ಕೃತ ಎಂಬ ಪದಕ್ಕೆ ಮಣಿಪ್ರವಾಳವನ್ನು ಹೋಲುವ ಒಂದು ಭಾಷೆ ಎಂದು ಅರ್ಥ ಸ್ಪಷ್ಟವಾಗುತ್ತಿದೆ. ಕಾಶ್ಮೀರ ದೇಶದಲ್ಲಿ ಪ್ರಚಲಿತವಾಗಿರುವಂತೆ, ಆತನು ಹೆಸರಿಸಿದ 'ಶಾಟಕುಲ'ವೆಂಬ ಭಾಷೆ ಎಂಥದ್ದೊ ತಿಳಿದುಬರುತ್ತಿಲ್ಲ. ಒಟ್ಟಿನಲ್ಲಿ ಆ ಪದ ಸಾಧುವೋ ಅಸಾಧುವೋ ನಮಗೆ ತಿಳಿಯದು. ಇದರಿಂದ ಮಣಿಪ್ರವಾಳ ಭಾಷೆ ಪ್ರಾಚೀನ ಕಾಲದಲ್ಲಿಯೂ ಬಳಕೆಯಲ್ಲಿದ್ದಿತೆಂದು ನಿರೂಪಿತ ವಾಗುತ್ತಿದೆ.

ಮಣಿಪ್ರವಾಳ—ಭಾಷಾಮಿಶ್ರಣ

4.1. ಮಣಿಪ್ರವಾಳಕ್ಕೂ – ಭಾಷಾಮಿಶ್ರಣಕ್ಕೂ ಭೇದವುಂಟು. ಆ ಭೇದವನ್ನು ತಿಳಿಯಲು ಅವುಗಳ ಸ್ವರೂಪ, ಸ್ವಭಾವಗಳನ್ನು ಕುರಿತು ಸ್ವಲ್ಪ ತಿಳಿಯಬೇಕಾಗಿದೆ. ಲೀಲಾತಿಲಕದ ಮೊದಲೆರಡು ಶಿಲ್ಪಗಳಲ್ಲಿ ಮಣಿಪ್ರವಾಳದ ಲಕ್ಷಣವನ್ನು ವಿವರವಾಗಿ ಚರ್ಚಿಸಿದೆ. ಅದನ್ನನುಸರಿಸಿ ಮಣಿಪ್ರವಾಳವು ದೇಶಭಾಷೆ, ಸಂಸ್ಕೃತಗಳ ಸಮ್ಮಿಳನದಿಂದ ಸಿದ್ಧಿಸುತ್ತದೆ. (ಇಲ್ಲಿನ ದೇಶ ಭಾಷೆ– ಮಲಯಾಳ). ಮಲಯಾಳ ಶಬ್ದಗಳನ್ನು ಎರಡು ವಿಧವಾಗಿ ವರ್ಗೀಕರಿಸಬಹುದು : ಅವು ದ್ರಾವಿಡ, ಸಂಸ್ಕೃತ. ದ್ರಾವಿಡ ಶಬ್ದಗಳಲ್ಲಿ 1. ಶುದ್ಧ ಮಲಯಾಳ, 2. ಭಾಷಾಂತರೋದ್ಭವ (ಇತರೆ ದ್ರಾವಿಡ ಭಾಷಾಜನ್ಯಗಳು), 3. ಭಾಷಾಂತರ ಸಮ (ಇತರೆ ದ್ರಾವಿಡ ಭಾಷೆಗಳಿಗೆ ಸಮನಾಗಿ ರೂಪಗೊಂಡವು), ಇವು ಸೇರುತ್ತವೆ. ಹಾಗೆಯೇ ಸಂಸ್ಕೃತ ಶಬ್ದಗಳಲ್ಲಿ ಸಂಸ್ಕೃತೋದ್ಭವಗಳು (ತದ್ಭವಗಳು) ಸಂಸ್ಕೃತ ರೂಪಗಳು (ತತ್ಸಮಗಳು) ಇವೆ. ಇವೆಲ್ಲವೂ ದೇಶಭಾಷಾ ಶಬ್ದಗಳಾಗಿ ಪರಿಗಣಿಸಲ್ಪಡುತ್ತವೆ. ಮಲಯಾಳವು ಬೇರೊಂದು ವಿಧವಾಗಿ ವಿಂಗಡಿಸಲ್ಪಟ್ಟಿದೆ (ಉತ್ಕೃಷ್ಟ–ಅಪಕೃಷ್ಟ). ಇವುಗಳಲ್ಲಿ ಮೊದಲನೆಯದು ತ್ರೈವರ್ಣ್ಯ ಕುಲ

(ಮೇಲ್ಜಾತಿ)ಗಳಲ್ಲಿ ವ್ಯವಹಾರದಲ್ಲಿರುವಂಥದ್ದು. ಇನ್ನೊಂದು ಪಾಮರರು ವ್ಯವಹರಿಸುವಂಥದ್ದು. ಅವುಗಳಲ್ಲಿ ಮೊದಲನೆಯದಕ್ಕೆ ಸೇರಿದ ಭಾಷೆ ಮಣಿಪ್ರವಾಳ ವನ್ನು ಗ್ರಹಿಸುತ್ತದೆ. ಅಲ್ಲಿ ಸೇರಿಸಲ್ಪಡುವ ಮತ್ತೊಂದು ಅಂಗ ಸಂಸ್ಕೃತ. ಆ ಸಂಸ್ಕೃತ ಶಬ್ದಗಳು ಆ ಭಾಷಾ ವ್ಯಾಕರಣದಿಂದ ಸಿದ್ಧಿಸುವ ಸಂಸ್ಕೃತ ವಿಭಕ್ತ್ಯಂತಗಳಾಗಿ ಇರಬೇಕು. ಅಂಥ ಶಬ್ದಗಳು ಸ್ತ್ರೀಯರಿಗೆ ಸುಪರಿಚಿತ ವಾಗಿರಬೇಕು ; ಆಗ ಜನರಂಜಕವಾದ ಅವುಗಳ ಸಮ್ಮಿಳನವು ಸಿದ್ಧಿಸುವುದು. ಸಂಸ್ಕೃತೀಕರಿಸಲ್ಪಟ್ಟ ಮಲಯಾಳ ಶಬ್ದಗಳನ್ನೂ ಸಹ ಮಣಿಪ್ರವಾಳದಲ್ಲಿ ಉಪಯೋಗಿಸಬಹುದು. ಇಲ್ಲಿ ಸಂಸ್ಕೃತೀಕರಣ ಎಂದರೆ ಮಲಯಾಳ ಶಬ್ದಗಳಿಗೆ ಸಂಸ್ಕೃತ ವಿಭಕ್ತ್ಯಂತಗಳನ್ನು ಸೇರಿಸಿ ಸಂಸ್ಕೃತ ಸಂಧಿಕಾರ್ಯಗಳನ್ನು ಪ್ರವರ್ತಿಸುವಂತೆ ಮಾಡಿ ಪ್ರಯೋಗಿಸುವುದು. ಪಾಮರ ಜನರ ವ್ಯವಹಾರದಲ್ಲಿ ಸಹಜವಾಗಿ ಅಂಥ ಪ್ರಯೋಗಗಳು ಇರಲು ಅವಕಾಶವಿಲ್ಲ. ಮಣಿಪ್ರವಾಳ ಭಾಷೆಯಲ್ಲಿ ಮಲಯಾಳ ಸಂಸ್ಕೃತಗಳನ್ನುಳಿದು ಮಿಕ್ಕ ಭಾಷೆಗಳಿಗೆ ಪ್ರವೇಶವಿಲ್ಲ. ಮಲಯಾಳದೊಂದಿಗೆ ಸಂಸ್ಕೃತೇತರ ಭಾಷಾ ಪದಗಳ ಸಮ್ಮಿಳನವು ಸಮ್ಮತವಲ್ಲ. ಮಲಯಾಳ ಸಂಸ್ಕೃತ ಪದಗಳ ಸುಂದರ ಸಮ್ಮಿಳನವೇ ಸಹೃದಯರಿಗೆ ಆನಂದ ಉಂಟುಮಾಡುತ್ತದೆ. ಈ ಸಮ್ಮಿಳನಕ್ಕೆ ಲೀಲಾತಿಲಕದಲ್ಲಿ 'ಯೋಗ' ಎಂಬ ಅರ್ಥವತ್ತಾದ ಪದ ಪ್ರಯೋಗಿಸಲ್ಪಟ್ಟಿದೆ.

4.2. ಮಣಿಪ್ರವಾಳವೆಂಬುದು ಒಂದು ವಿಶಿಷ್ಟ ಕಾವ್ಯಶೈಲಿಯೆಂಬರ್ಥದಲ್ಲಿ ರೂಢವಾಗಿದೆ. ಲೀಲಾತಿಲಕವನ್ನನುಸರಿಸಿ ಮಣಿಪ್ರವಾಳದಲ್ಲಿ ಇತರ ಭಾಷಾ ಪದಗಳಿರಲು ಅವಕಾಶವಿಲ್ಲ. ಹಾಗೆ ಸೇರಿಸಿದ ಪಕ್ಷದಲ್ಲಿ ಅದು ಸಂಪ್ರದಾಯಕ್ಕೆ ವಿರುದ್ಧ. ಆಗ ಅದು 'ಮಿಶ್ರಭಾಷೆ'ಯಾಗುತ್ತದೆಯೇ ಹೊರತು ಮಣಿಪ್ರವಾಳವಲ್ಲ. ದ್ರಾವಿಡ ಭಾಷಾ ಪದಗಳನ್ನು ಮಣಿಪ್ರವಾಳದಲ್ಲಿ ಸೇರಿಸಬಹುದೆಂಬ ವಾದವನ್ನು ಪ್ರತಿಭಟಿಸುವ ಸಂದರ್ಭದಲ್ಲಿ ಲೀಲಾತಿಲಕಕಾರ "ಅಪ್ಪಂ ತುಪ್ಪಂ" ಎಂದು ಇತರ ದ್ರಾವಿಡಭಾಷಾ ಪದಗಳ ಮಿಶ್ರಣವನ್ನು ಮಾಡಿದ ಪಕ್ಷದಲ್ಲಿ ಅದನ್ನು 'ಭಾಷಾ ಮಿಶ್ರಣ'ವೆನ್ನಬಹುದೆಂದು ತಿಳಿಸಿದ್ದಾನೆ. ಮಿಶ್ರಣದಲ್ಲಿ ಯಾವುದನ್ನು ಮತ್ತಾವುದ ರಲ್ಲಿಯಾದರೂ ಸೇರಿಸಬಹುದು ; ಅದಕ್ಕೆ ಒಂದು ನಿಯಮದ ಅವಶ್ಯಕತೆ ಬೇಕಿಲ್ಲ.

4.3.1. 'ಯೋಗ', 'ಮಿಶ್ರ' ಎಂಬ ಪದಗಳು ಈ ಸಂದರ್ಭದಲ್ಲಿ ವಿಶಿಷ್ಟಾರ್ಥದ್ಯೋತಕಗಳಾಗಿ ಪ್ರಯೋಗವಾಗಿರುವುದನ್ನು ನಾವು ಗಮನಿಸಬೇಕಾಗಿದೆ. ಎರಡು ಭಿನ್ನ ದ್ರವ್ಯಗಳ ರಾಸಾಯನಿಕ ಮಿಶ್ರಣದಂತೆಯೇ ಸಂಯೋಗವಾಗುವುದು ಯೋಗ. ಮಿಶ್ರವೆಂದರೆ ಎರಡು ದ್ರವ್ಯಗಳ ಬೆರಕೆಯಷ್ಟೆ. ಅಲ್ಲಿ ರಾಸಾಯನಿಕ ಮಿಶ್ರಣವಂತೆ ಸಂಯೋಗವಿರುವುದಿಲ್ಲ. ರಾಸಾಯನಿಕ ಮಿಶ್ರಣ ಸಿದ್ಧಿಸಲು ಉಭಯ ದ್ರವ್ಯಗಳಿಗೂ ಕಾಲಮಾನ ಮುಂತಾದ ಪರಿಮಿತಿಗಳಿರುವಂತೆಯೇ ಮಣಿಪ್ರವಾಳದಲ್ಲಿ

ಮಲಯಾಳ–ಸಂಸ್ಕೃತಗಳ ಯೋಗ ಸಿದ್ಧಿಸಲು, ಕೆಲವು ನಿಯಮಗಳು ಹಾಗೂ ಪದ್ಧತಿಗಳುಂಟು. ಮಣಿಪ್ರವಾಳವನ್ನು "ಭಾಷಾ ಸಂಸ್ಕೃತ ಯೋಗಂ ಮಣಿಪ್ರವಾಳಂ" ಎಂದು ವಿವರಿಸುವುದರಲ್ಲಿ ಲೀಲಾತಿಲಕಕಾರ ಯೋಗ, ಮಿಶ್ರ ಎಂಬ ಪದಗಳಿಗೆ ಇರುವ ಭೇದವನ್ನು ಗುರುತಿಸಿದನೆಂದು ಹೇಳಬಹುದಾಗಿದೆ. ಆದರೆ ಕೆಲ ವಿದ್ವಾಂಸರು ಆ ಎರಡನ್ನೂ (ಮಣಿಪ್ರವಾಳ–ಭಾಷಾಮಿಶ್ರಣ) ಪರ್ಯಾಯವಾಗಿ ಗ್ರಹಿಸಿರುವುದು ವಿಚಾರಾರ್ಹವಾದುದು.

4.3.2. ಭರತನ ನಾಟ್ಯಶಾಸ್ತ್ರದ ಈ ಶ್ಲೋಕದಲ್ಲಿ—

" ಭಾಷಾವಿಮಿಶ್ರಿತಪದಂ ಪ್ರಮದಾಭಿರಾಮಂ
ರಾಮಾವನಾಶ್ರಯ ವರೀ ಖಲು ಪುಷ್ಪಗಂಧೀ "

'ಭಾಷಾವಿಮಿಶ್ರಿತಪದಂ' ಎಂದರೆ ಸಂಸ್ಕೃತ ದೇಶಭಾಷೆಗಳಿಂದ ಕೂಡಿದ ಮಿಶ್ರಭಾಷೆ. ನಾಟ್ಯಪ್ರದರ್ಶನದಲ್ಲಿ 'ಪಾಠ್ಯ' ಸಂಸ್ಕೃತ ದೇಶಭಾಷಾಮಿಳಿತವಾದ ಮಿಶ್ರಭಾಷೆಯಾಗಿರಬೇಕೆಂದು ತಾತ್ಪರ್ಯ.

ಸರಸ್ವತೀ ಕಂಠಾಭರಣದಲ್ಲಿನ—

" ನಾಟ್ಯಂತಂ ಸಂಸ್ಕೃತೇನೈವ
ನಾಟ್ಯಂತಂ ದೇಶಭಾಷಯಾ
ಕಥಾಂ ಗೋಷ್ಠೀಷು ಕಥಯನ್
ಲೋಕೋ ಬಹುಮತೋ ಭವೇತ್ "

ಈ ಶ್ಲೋಕದಿಂದ ಪುರಾಣಕಥನದಲ್ಲಿ ಮಿಶ್ರಭಾಷೆ ಉಪಯೋಗಿಸಬಹುದೆಂದು ತಿಳಿಯುತ್ತದೆ.

'ಶುಕಸಂದೇಶ'ಕ್ಕೆ ಧರ್ಮಗುಪ್ತನು ರಚಿಸಿದ ವ್ಯಾಖ್ಯಾನದಲ್ಲಿ "ಯತ್ಕಿಲ ಜಗಾದ ಗೋದಭಟ್ಟ ಮಹಾಕವಿ ಮಾನುಷಭಾಷಾಮಿಶ್ರಂ ಮಾರಪೂಜೇತಿ ಮಹಾಪ್ರಬಂಧೇ" ಎಂದಿದೆ. ಮಿಶ್ರಪದವು ಸಂಸ್ಕೃತ ಮತ್ತು ಮಾನುಷಭಾಷೆಗಳ ಸಮ್ಮಿಳನವನ್ನು ತಿಳಿಸುತ್ತದೆ. ಇಲ್ಲಿನ ಮಾನುಷಭಾಷೆ ಜನರ ಬಳಕೆಮಾತು.

'ಕ್ರಿಯಾದೀಪಿಕ'ದಲ್ಲಿನ ಈ ಶ್ಲೋಕಾರ್ಧವನ್ನೂ ಇಲ್ಲಿ ಗಮನಿಸಬಹುದು—

" ಶ್ಲೋಕ ರೂಪೇಣ ಬಂಧಿಚ್ಚು
ಭಾಷಾ ಮಿಶ್ರಿತ ಸಂಸ್ಕೃತೈಃ–"

'ವೀರಚೋಳೀಯಂ' ಎಂಬ ತಮಿಳು ಲಕ್ಷಣಗ್ರಂಥದ ಅಲಂಕಾರಪಟಲದಲ್ಲಿ 'ವಿರವಿಯಲ್' ಎಂಬ ಕಾವ್ಯಭೇದದ ಲಕ್ಷಣವು ಹೀಗೆ ತಿಳಿಸಲ್ಪಟ್ಟಿದೆ.

" ವಡವೆಯುತ್ತು ವಿರವುವದು ವಿರವಿಯಲಾಯ್ "

4.4. ಮೇಲೆ ಉದ್ಧರಿಸಿದ ಆಧಾರಗಳಿಂದ ಭಾಷಾಮಿಶ್ರಣದಲ್ಲಿ ಮಣಿಪ್ರವಾಳದಲ್ಲಿರುವಂತೆಯೇ ಸಂಸ್ಕೃತವು ಒಂದು ಪ್ರಧಾನ ಅಂಗವೆಂದು ತಿಳಿಯುತ್ತಿದೆ. ಆಗ ಅಲ್ಲಿ ಸೇರಲ್ಪಟ್ಟ ಮತ್ತೊಂದು ಭಾಷೆ ಯಾವುದು ? ಎಂಬ ಪ್ರಶ್ನೆ ಏಳುತ್ತದೆ. ಮಣಿಪ್ರವಾಳದಲ್ಲಿ ಅದು ತ್ರೈವರ್ಣಿಕುಲ ಮಾತ್ರವೇ ವ್ಯವಹರಿಸುವ ಉತ್ಕೃಷ್ಟ ಜಾತಿಗೆ ಸೇರಿದ ಮಲಯಾಳ. ಭಾಷಾಮಿಶ್ರಣದಲ್ಲಿ ಅದು ಪಾಮರರ ಭಾಷೆ (ನೀಚಕುಲದವರ) ಎನ್ನಬೇಕಾಗಿದೆ. ಲೀಲಾತಿಲಕಕ್ಕಿಂತಲೂ ಹಿಂದೆ ಭಾಷಾಮಿಶ್ರಣ ಬಳಕೆಯಲ್ಲಿತ್ತು. ಭಾಷಾಮಿಶ್ರಣವು ಮಣಿಪ್ರವಾಳದಂತೆಯೇ ಕೇರಳಕ್ಕೆ ಮಾತ್ರವೇ ಸಂಬಂಧಿಸಿದುದಲ್ಲ, ಇತರ ಭಾಷೆಗಳಲ್ಲೂ ಅಂಥ ಭಾಷಾಮಿಶ್ರಣವು ಇರಲು ಅವಕಾಶವುಂಟು. ಭಾಷಾಮಿಶ್ರಣ ಎಂಬ ಪದಕ್ಕೆ 'ಭಾಷಯಾ ಮಿಶ್ರಂ ಸಂಸ್ಕೃತಂ ಭಾಷಾಮಿಶ್ರಂ' ಎಂದು ವಿಗ್ರಹ ಹೇಳಬಹುದು. ಇಲ್ಲಿ ಭಾಷೆಯೆಂದರೆ ಪಾಮರರ ಭಾಷೆ. ಮಣಿಪ್ರವಾಳದಲ್ಲಿ ಬಳಸತಕ್ಕ ಮಲಯಾಳ ಶಬ್ದಗಳು ತ್ರೈವರ್ಣಿಕರು ಮಾತ್ರ ಬಳಸುವಂಥವು.

ಮಣಿಪ್ರವಾಳ—ಪಾಟ್ಟು

5.1. ಲೀಲಾತಿಲಕದಲ್ಲಿ ಮಣಿಪ್ರವಾಳದೊಂದಿಗೆ 'ಪಾಟ್ಟು' ಎಂಬ ಮತ್ತೊಂದು ಕಾವ್ಯ ಶೈಲಿ ಭೇದವು ಹೆಸರಿಸಲ್ಪಟ್ಟಿದೆ, ಹಾಗೂ ಆ ಎರಡಕ್ಕೂ ಇರುವ ಭೇದವು ಸ್ಪಷ್ಟವಾಗಿ ವಿವರಿಸಲ್ಪಟ್ಟಿದೆ. ಮಣಿಪ್ರವಾಳದಲ್ಲಿರುವಂತೆಯೇ ಪಾಟ್ಟುವಿನಲ್ಲೂ ಭಾಷೆ ಮತ್ತು ಸಂಸ್ಕೃತ ಸಮ್ಮಿಳನವಿರುತ್ತದೆ. ಆದರೆ ಪಾಟ್ಟುವನ್ನು ಮಣಿಪ್ರವಾಳದಿಂದ ಬೇರ್ಪಡಿಸುವ ಮತ್ತೆ ಕೆಲವಂಶಗಳುಂಟು. ಪಾಟ್ಟು ಎನ್ನುವುದು ಗಾಯನ ಕಾವ್ಯ. ಅದರಲ್ಲಿ ಎದುಗೈ (ಪ್ರಾಸ), ಮೋನೈ (ಯತಿ) ಎಂಬ ನಿಯಮಗಳು ಅನುಸರಿಸಲ್ಪಡುತ್ತದೆ. ಮತ್ತೆ ಸಂಸ್ಕೃತದಲ್ಲಿಯ ಸಾಮಾನ್ಯ ವೃತ್ತಗಳಲ್ಲದೆ ವಿಶೇಷ ವೃತ್ತಗಳನ್ನು, ತಮಿಳಿನಲ್ಲಿ ಕಾಣಿಸುವ ಯೋಗ್ಯವಾದ ಛಂದಸ್ಸುಗಳನ್ನು ರಚಿಸಬೇಕು. ಇವು ಮಾತ್ರವೇ ಅಲ್ಲದೆ ಪಾಟ್ಟುವಿನಲ್ಲಿ ಗ್ರಹಿಸಲ್ಪಡುವ ಸಂಸ್ಕೃತ ಪದಗಳು ತಮಿಳಿನಲ್ಲಿನ ಧ್ವನಿಗಳಿಗೆ ಒದಗುವಂತೆ ಮಾರ್ಪಾಡಾಗಿರಬೇಕು. ಸಂಸ್ಕೃತಕ್ಕೂ ತಮಿಳಿಗೂ ಸಮಾನವಾಗಿರುವ ಧ್ವನಿಗಳನ್ನು ಮಾತ್ರ ಮಾರ್ಪಾಡಿಲ್ಲದೆ ಬಳಸಬಹುದು. ಹೀಗೆ ಪಾಟ್ಟು ಸಂಸ್ಕೃತ ಶಬ್ದಗಳನ್ನು ಯಥಾವತ್ತಾಗಿ ಸ್ವೀಕರಿಸದೆ ತಮಿಳು ವರ್ಣಸಮಾಮ್ನಾಯಕ್ಕೆ ಒದಗುವ ರೀತಿಯಲ್ಲಿ ಮಾರ್ಪಾಡುಗಳೊಂದಿಗೆ ಸ್ವೀಕರಿಸುವುದಾದುದರಿಂದ ಅದು ಮಣಿಪ್ರವಾಳದಿಂದ ಭಿನ್ನವಾಗಿದೆ, ಮತ್ತು ಪಾಟ್ಟು ಗಾಯನಕಾವ್ಯವಾದುದರಿಂದ ಅದು ಕವಿತ್ವಕ್ಕೆ ಮಾತ್ರವೇ ಪರಿಮಿತವಾಗಿರುವ ಭಾಷಾಶೈಲಿಯಾಗಿ ನಿಲ್ಲುತ್ತದೆ. ಆದರೆ ಮಣಿಪ್ರವಾಳವು ವಚನದಲ್ಲಿಯೂ, ಇತರ ರಚನೆಗಳಲ್ಲಿಯೂ, ಗ್ರಹಿಸಲ್ಪಡುತ್ತದೆ. ಪಾಟ್ಟುವಿನಲ್ಲಿ ಶಬ್ದಾಲಂಕಾರ ಸಾಧನಗಳಾದ ಪ್ರಾಸ, ಯತಿ, ಪ್ರಾಸ ಪೂರ್ವಾಕ್ಷರ ನಿಯಮ, ಅಂತ್ಯ (ಮುಕ್ತಾಕ್ಷರ ಗ್ರಹಣ)

ಎಂಬುವು ನಿಯತವಾಗಿ ಪಾಲಿಸಬೇಕಾದ ನಿಯಮಗಳು. ಪಾಟ್ಟು ಗಾಯನ ಕಾವ್ಯವಾದ್ದರಿಂದ ಸಾಮಾನ್ಯವಾಗಿ ಪ್ರಾಚೀನ ಕಾಲದಲ್ಲಿನ ಧಾರಣಕ್ಕಾಗಿ ಅವುಗಳನ್ನು ಪಾಟ್ಟುವಿನಲ್ಲಿ ಸೇರಿಸಿರಬಹುದು. ಮಣಿಪ್ರವಾಳದಲ್ಲಿ ಇಂಥ ನಿಯಮಗಳಿಲ್ಲ. ಮಣಿಪ್ರವಾಳವು ಸಾಮಾನ್ಯವಾಗಿ ಸಂಸ್ಕೃತದಲ್ಲಿನ ಸಾಮಾನ್ಯವೃತ್ತಗಳಲ್ಲಿ ರಚನೆಯಾಗಿರುತ್ತದೆ, ಅಲ್ಲಲ್ಲಿ ದೇಸಿಯ ವೃತ್ತಗಳೂ ಸಹ ಇರಬಹುದು. ಆದರೆ ಲೀಲಾತಿಲಕವು ಮಣಿಪ್ರವಾಳವು ಸಂಸ್ಕೃತ ವೃತ್ತಗಳಿಂದಲೇ ನಿಯತವಾಗಿರಬೇಕೆಂದು ನಿರ್ದೇಶಿಸಲಿಲ್ಲ. ಮಣಿಪ್ರವಾಳದ ಛಂದಸ್ಸಿನ ವಿಷಯದಲ್ಲಿ ಯಾವ ನಿರ್ದೇಶವನ್ನೂ ಮಾಡದ ಲೀಲಾತಿಲಕಕಾರ ಪಾಟ್ಟುವಿನಲ್ಲಿ ಮಾತ್ರ ಪಾಲಿಸಿದ ಛಂದೋವಿಷಯಗಳನ್ನು ಕುರಿತು ವಿವರಿಸುವುದರಿಂದ, ಆ ಎರಡೂ ಕಾವ್ಯ ಶೈಲಿಗಳಿಗಿರುವ ಭೇದಗಳನ್ನು ಸ್ಪಷ್ಟಪಡಿಸುವುದು, ಆತನ ಆಶಯವಾಗಿತ್ತೆಂದು ಗ್ರಹಿಸಬಹುದು. ತನ್ನ ಕಾಲದಲ್ಲಿನ ಪಾಟ್ಟು ಕಾವ್ಯಗಳಲ್ಲಿ ಕಂಡುಬಂದ ಛಂದೋಭೇದಗಳೇ ಆತನನ್ನು ಆ ವಿಧದಲ್ಲಿ ಛಂದೋನಿರ್ದೇಶವನ್ನು ಮಾಡುವುದಕ್ಕೆ ಪ್ರೋತ್ಸಾಹಿಸಿರಬಹುದು. ಸಂಸ್ಕೃತ ವೃತ್ತಗಳಿಗಿಂತಲೂ ದ್ರಾವಿಡ ಛಂದಸ್ಸುಗಳಲ್ಲಿ ಗೇಯಧರ್ಮ ವಿಶೇಷವಾಗಿದೆಯೆನ್ನುವುದು ಯಥಾರ್ಥವಾಗಿದೆ. ಆದುದರಿಂದಲೇ ಪಾಟ್ಟು ಕಾವ್ಯಗಳಲ್ಲಿ ದೇಶೀಯ ಛಂದಸ್ಸುಗಳನ್ನು ಬಳಸಲಾಗಿದೆ.

5.2. ಮಣಿಪ್ರವಾಳಕ್ಕೂ ಪಾಟ್ಟುವಿಗೂ ಇರುವ ಪ್ರಧಾನವಾದ ಭೇದವೇ ಯೋಗ. ಮಣಿಪ್ರವಾಳದಲ್ಲಿ ಯೋಗವು ಪ್ರಧಾನವಾಗಿರಬೇಕಾದುದು ಧರ್ಮ. ಪಾಟ್ಟುವಿನಲ್ಲಿ ಇಂಥ ಯೋಗದ ಅವಶ್ಯಕತೆ ಇಲ್ಲ; ಮತ್ತೆ ಪಾಟ್ಟುವಿನಲ್ಲಿ ಪಾಂಡ್ಯಭಾಷೆ (ತಮಿಳು) ಯಲ್ಲಿಯ ಪದಗಳಿಗೆ ಸಮಾನವಾದ ಪದಗಳು ಪ್ರಯೋಗಿಸಲ್ಪಡಬೇಕು. ಇದರಿಂದ ಪಾಟ್ಟುವಿನ ಭಾಷೆ ತಮಿಳಿಗೆ ಹತ್ತಿರವಾಗಿದೆ. ಆದರೆ ಮಣಿಪ್ರವಾಳದಲ್ಲಿನ ಭಾಷೆ ಸಂಸ್ಕೃತಕ್ಕೆ ಹತ್ತಿರವಾಗಿದೆ.

5.3. ಹೀಗೆ ಮಣಿಪ್ರವಾಳದಲ್ಲಿಯೂ, ಪಾಟ್ಟುವಿನಲ್ಲಿಯೂ, ಸಂಸ್ಕೃತ ಮಲಯಾಳ ಶಬ್ದಗಳ ಸಮ್ಮಿಳನವು ಕಾಣಬಹುದು. ಆದರೆ ಮೇಲೆ ಕಾಣಿಸಿದ ಕಾರಣಗಳಿಂದ ಅವು ಎರಡೂ ಈಷದ್ಭೇದ ಕಾವ್ಯ ಶೈಲಿಗಳಲ್ಲ, ಪೂರ್ತಿಯಾಗಿ ಭಿನ್ನವಾದ ಕಾವ್ಯಶೈಲಿ ಭೇದಗಳು.

ಮಣಿಪ್ರವಾಳ—ತಮಿಳು

6.1. ಮಣಿಪ್ರವಾಳ ರಚನಾವಿಧಾನವು ಕೇವಲ ಮಲಯಾಳದಲ್ಲಿ ಮಾತ್ರವಲ್ಲದೆ ತಮಿಳು, ಕನ್ನಡ, ತೆಲುಗು ಭಾಷೆಗಳಲ್ಲೂ ಬಳಕೆಯಲ್ಲಿದ್ದಿತೆಂದು ತಿಳಿಯುತ್ತಿದೆ. ತಮಿಳಿನಲ್ಲಿ ಜೈನರು ವೈಷ್ಣವರು ರಚಿಸಿದ ವ್ಯಾಖ್ಯಾನಗಳಲ್ಲಿ

ಮಣಿಪ್ರವಾಳ ಭಾಷೆ ವಿಸ್ತಾರವಾಗಿ ಉಪಯೋಗವಾಗಿದ್ದಿತು. ಉತ್ತರ ಸಂಗಂ ಯುಗದಲ್ಲಿ ಜೈನರು ರಚಿಸಿದ ಗದ್ಯಕಾವ್ಯಗಳಲ್ಲೂ ಇಂಥ ಭಾಷೆಯನ್ನು ಕಾಣಬಹುದು.

"The works of this period (Post Sangam A. D. 150 to A. D. 500) are the Jain Prose works of the 'mongrel sort of diction' known as Manipravalam Style, which is pleasing neither to the purely Tamil nor the purely Sanskrit ear ; of these prose works Sripuranam and Gadyachintamani deserve mention.[1]"

ವೈಷ್ಣವ ಮತಕ್ಕೆ ಸಂಬಂಧಿಸಿದ ವ್ಯಾಖ್ಯಾನಗಳಲ್ಲಿ ಕಂಡುಬರುವ ಮಣಿಪ್ರವಾಳ ಶೈಲಿಯನ್ನು ಈ ಉದಾಹರಣೆಯಲ್ಲಿ ನೋಡಬಹುದು.

"ಮೂಣ್ಱಾಂ ತಿರುವಾಯ್ಮೊೞಿಯಿಲ್ ಪ್ರಾಪ್ಯಭೂಮಿಯಿಲ್ ಯೋಗ್ಯತೈಯುಯುಂ ಅಂಗುಪ್ಪೋನಾಲ್ ಅಡಿಮೈ ಶೆಯ್ಯುಂ ಪಡಿಯೈಯುಂ ಅನುಸಂಧಿತ್ತು ಪ್ರೀತರಾಯ್ ಅಪ್ಪೋದೇ ಪ್ರಾಪ್ಯ ಭೂಮಿಯಿಲ್ ಶೆಲ್ಲಪ್ಪೆರಾಮೆಯಾಲುಂ ಪಣ್ಡು ಪಲ್ಕಾಲ್ ಓಱಿಂದ ವಾಸನೈಯಾಲುಂ ಪ್ರಕೃತಿಯಿಲೇ ಯಿರಿಕ್ಕಿರಮೈಯೈ ಅನುಸಂಧಿತ್ತುಂ ತಾನ್ ನಿಣೈತ್ತದೇ ಶೆಯ್ಯಕ್ಕಡವದಾನ ಈಶ್ವರನುಡಯ ಸ್ವಾತಂತರ್ಯತ್ತೈ ಅನುಸಂದಿತ್ತುಂ ಅವನುಕ್ಕುತ್ತಮೈ ವಿಷಯೀಕರಿತ್ತಲ್ಲದು ನಿರ್ವಹೊಣಾದ ಪರಮಭಕ್ತಿ ತಮಕ್ಕಿಲ್ಲೈ ಯಾಗವುಂ ಪಾರ್ತ್ತುಂ 'ಇಪ್ಪ್ರಕೃತೀಯಿಲೇ ಇನ್ನಮುಂ ತಮ್ಮೈ ವೈತ್ತರುಳಿಲ್ ಶೆಯ್ ವದಿನ್' ಎನ್ಱುಂ ಭಯತ್ತಾಲೇ ಮಿಗವುಂ ಅವಸರನ್ನರಾನ ಆೞ್ವಾರ್ ತಮ್ಮುಡಯ ದಯೈ ಅನ್ಯಾಪದೇಶತ್ತಾಲೇ ಪೇಶಿಗಿರಾರ್"—. ಮೂರನೆಯ ತಿರುವಾಯ್ಮೊೞಿ

6.2. ಕ್ರಿ.ಶ. 11ನೆಯ ಶತಮಾನಕ್ಕೆ ಸೇರಿದ ವೀರಚೋಳೀಯಂ' ಎಂಬ ತಮಿಳು ಲಕ್ಷಣ ಗ್ರಂಥದಲ್ಲಿ ವಿರವಿಯಲ್, ಕಳವಿಕ್ಕವಿ, ತುರೈಕ್ಕವಿ, ಪಿರಳಿಕ್ಕೈ (ಪ್ರಹೇಳಿಕ) ಮುಂತಾದ ಕಾವ್ಯಭೇದಗಳನ್ನು ವಿವರಿಸುವ ಸಂದರ್ಭದಲ್ಲಿ ಮಣಿಪ್ರವಾಳ ವೆಂಬ ಕಾವ್ಯಭೇದವನ್ನೂ ಹೆಸರಿಸಲಾಗಿದೆ.

---

[1] Tamil—The language and its literature. P–56. ; Introduction to Kamba Ramayanam—A Study

"ಇಡೈಯೇ ವಡವೆಟುತ್ತಿಯಿದಿಲ್
ವಿರವಿಯು ಲೀನ್ಹೆದುಗೈ
ನಡೈಯೇದುಮಿಲ್ಲಾ ಮಣಿಪ್ಪಿರವಾಳ
ನಜ್ಞೈವಚ್ಚೊಲ್ಲಿನ್
ಇಡೈಯೇ ಮುಡಿಯುಂ ಪದಮುಡೈ ತಾ
ಜ್ಕಿಳವಿಕ್ಕವಿಯಿನ್
ತೊಡೈಯೇ ತುಜ್ಕೈನಜ್ ಪಿರಳಿಕ್ಕೈಯಾದಿ
ತುಣಿನ್ದಜಿಯೇ"

ಅಲಂಕಾರ ಪಟಲ-40

ಸಂಸ್ಕೃತ ಧ್ವನಿಗಳಿಂದ ಕೂಡಿದ ರಚನೆ ವಿರವಿಯಲ್, ಪ್ರಾಸನಿಯಮಗಳಿಂದ ಸಂಸ್ಕೃತ ಪದಗಳಿಂದ ಕೂಡಿದ ತಮಿಳುರಚನೆ ಮಣಿಪ್ರವಾಳ. ಕಿಳವಿಕ್ಕವಿಯಲ್ಲಿ ಹೆಚ್ಚು ಭೇದಗಳುಂಟು. ಪಿರಳಿಕೈ (ಪ್ರಹೇಳಿಕ) ಮುಂತಾದ ವಿನಾವಿಕವಿ ರಚನೆಗಳು (ವಿನಾವಿಕವಿ ಎನ್ನುವುದು ತಮಿಳಿನಲ್ಲಿ ಪ್ರಾಶ್ನಿಕ ರೂಪದಲ್ಲಿರುವ ರಚನೆ) ಎಂದು ಮೇಲಿನ ಪದ್ಯದರ್ಥ. ವೀರಚೋಳೀಯಂದಲ್ಲಿ ಅಲಂಕಾರ ಪಟಲದ ಪೊಲ್ಲಣೆ, ತಂತ್ರವೃತ್ತಿ, ತಂತ್ರಗುಣ, ತಂತ್ರಲುರೈ, ನ್ಯಾಯಶಾಸ್ತ್ರದಲ್ಲಿನ ಅನುಮಾನಾದಿಗಳನ್ನು ವಿವರಿಸಿ, ಚಿತ್ರಕವಿತ್ವದ ಬಗ್ಗೆ ತಿಳಿಸಿ, ಚಿತ್ರಕಾವ್ಯ ಭೇದಗಳನ್ನು ವಿವರಿಸಿದನಂತರ ವಿರವಿಯಲ್, ಮಣಿಪ್ರವಾಳ, ಕಿಳವಿಕ್ಕವಿ, ಪಿರಳಿಕೈ ಕಾವ್ಯಭೇದಗಳನ್ನು ಹೇಳಲಾಗಿದೆ. ಆದರೆ ಅಲ್ಲಿನ ಗ್ರಂಥಭಾಗದಲ್ಲಾಗಲಿ, ಅದಕ್ಕೆ ರಚಿಸಲ್ಪಟ್ಟ ವ್ಯಾಖ್ಯಾನಗಳಲ್ಲಾಗಲಿ ಅವಕ್ಕೆ ಲಕ್ಷ್ಯಗಳನ್ನು ಉದಾಹರಿಸಲಿಲ್ಲ. ಇದರಿಂದ ತಮಿಳಿನ ಮಣಿಪ್ರವಾಳದಲ್ಲಿ ಕೆಲವರು ಮುಂದುವರಿಸಿದರು. ಲಾಕ್ಷಣಿಕರೂ ಸಹ ಅದರ ಇರುವಿಕೆಯನ್ನು ಗುರುತಿಸಿ ಕಾವ್ಯಭೇದಗಳಲ್ಲಿ ಅದನ್ನು ಒಂದು ಪ್ರಭೇದವೆಂದು ತಿಳಿದುದಾಗಿ ಗೊತ್ತಾಗುತ್ತದೆ. ಆದರೆ ಈ ರಚನಾವಿಧಾನವು ಈ ಭಾಷೆಯಲ್ಲಿ ಬೇರೆಯಿನ್ನಲಿಲ್ಲ. ಶೆಂದಮಿಳಿನಲ್ಲಿ ಅತ್ಯಂತ ಅಭಿಮಾನವುಳ್ಳ ಕವಿಗಳು ಈ ಮಾರ್ಗವನ್ನು ಗರ್ಹಿಸಿ ಶುದ್ಧ ತಮಿಳಿನಲ್ಲಿಯೇ ಕಾವ್ಯರಚನೆ ಮಾಡತೊಡಗಿದರು.

6.3. ತನ್ನ ಕಾಲದಲ್ಲಿ ಜೈನ ಕವಿಗಳ, ವಿದ್ವಾಂಸರ ಕಾರಣದಿಂದ ತಮಿಳು ಭಾಷೆಗೆ ಒದಗುತ್ತಿದ್ದ ಪ್ರಮಾದಗಳನ್ನು ಗುರ್ತಿಸಿ ತಿರುಜ್ಞಾನ ಸಂಬಂಧರ್ (ಪಂಬಂದರ್) ಎಂಬ ಶೈವಭಕ್ತನು, ಅವರು ಬಳಸಿದ ಮಣಿಪ್ರವಾಳವನ್ನು "ಸಂಕದ ಪಂಗ" (ಸಂಸ್ಕೃತ ಭಂಗ) ಎಂದು ಗರ್ಹಿಸಿದನು; ಅದು ಅತ್ತ ಸಂಸ್ಕೃತವೂ ಅಲ್ಲ ಇತ್ತ ತಮಿಳೂ ಅಲ್ಲ, ಎಂದು ಅದನ್ನು ವಿಮರ್ಶಿಸಿದನು. ಆತನು ಮಾಡಿದ ಮಣಿಪ್ರವಾಳದ ಗರ್ಹಣವನ್ನು ಈ ರಚನೆಯಲ್ಲಿ ನೋಡಬಹುದು.

"ಆಗಮತ್ತೊಡು ಮಂದಿರಂಗಳಮೈಸ್ಸ ಸಂಕದ ಪಂಗಮಾಂ ಪಾದಗಂ"

(ತೇವಾರ, ತಿರುವಾಲವಾಯ್ ಪದಿಗಂ)

ಇದರಿಂದ ತಮಿಳರಿಗೆ ಮಣಿಪ್ರವಾಳವನ್ನು ಕುರಿತು ಎಂಥ ಅಭಿಪ್ರಾಯ ಉಂಟೆಂಬುದು ವ್ಯಕ್ತವಾಗಬಹುದು.[2]

6.4. ತಮಿಳು ಕವಿ ಚಕ್ರವರ್ತಿಗಳಲ್ಲೊಬ್ಬನಾದ ಒಟ್ಟಕ್ಕೂತ್ತರ್ ತನ್ನ ಕಾವ್ಯಗಳಲ್ಲಿ ಸಂಸ್ಕೃತ ಭೂಯಿಷ್ಠವಾದ ಗಂಭೀರವಾದ ಶೈಲಿಯನ್ನು ನಿಕ್ಷೇಪಿಸಿದನು. ಅದು ತಮಿಳರಿಗೆ ಸಹಿಸಲಾರದಾಯಿತು. ಕ್ರಿ. ಶ. 12ನೆಯ ಶತಮಾನದ ಶೇಕ್ಕಿಲಾರ್ ಎಂಬ ಕವಿ ತನ್ನ 'ಪೆರಿಯ ಪುರಾಣ'ವೆಂಬ ಗ್ರಂಥದಲ್ಲಿ ಸಂಸ್ಕೃತ ಭೂಯಿಷ್ಠವಾದ ಶೈಲಿಗೆ ಸ್ವಸ್ತಿ ಹೇಳಿ ಶೆಂದಮಿಳನ್ನು ಪುನರುದ್ಧರಿಸಿ ಭ್ರಷ್ಟವಾಗದಂತೆ ಅದನ್ನು ಸಂರಕ್ಷಿಸಿದನೆಂದು ಅವರು ವಿಶ್ವಾಸದಿಂದ ಸ್ಮರಿಸುವರು.

6.5. ವೈಷ್ಣವ ವ್ಯಾಖ್ಯಾನಗಳಿಂದ ಮಣಿಪ್ರವಾಳ ಭಾಷೆಗೆ ಉದಾಹರಿಸಲ್ಪಟ್ಟ ಲಕ್ಷ್ಯದಿಂದ, ತಮಿಳರು ಉಪಯೋಗಿಸಿದ ಮಣಿಪ್ರವಾಳಕ್ಕೂ, ಮಲಯಾಳದಲ್ಲಿನ ಮಣಿಪ್ರವಾಳಕ್ಕೂ ಸ್ಪಷ್ಟವಾದ ವ್ಯತ್ಯಾಸ ಗೋಚರಿಸುತ್ತದೆ. ಸಂಸ್ಕೃತ ಶಬ್ದಗಳನ್ನು ತಮಿಳು ವಿಭಕ್ತಿಗಳೊಂದಿಗೆ ಸೇರಿಸಿ ತಮಿಳು ಶಬ್ದಗಳೊಂದಿಗೆ ಬೆರೆಸಿ ರಚಿಸಿದುದನ್ನು ಮಣಿಪ್ರವಾಳವೆಂದು ಪರಿಗಣಿಸಿ ಮತ್ತೆ ಅದನ್ನೇ ಅವರು ತಿರಸ್ಕರಿಸಿದರು. ಸಂಸ್ಕೃತ ವಿಭಕ್ತ್ಯಂತಗಳಾದ ಸಂಸ್ಕೃತ ಶಬ್ದಗಳನ್ನು ತಮಿಳು ಶಬ್ದಗಳೊಂದಿಗೆ ಸೇರಿಸಿ ಪ್ರಯೋಗಿಸುವ ಪದ್ಧತಿ ತಮಿಳಿನಲ್ಲಿ ಪ್ರಾಚುರ್ಯ ಪಡೆಯಲಿಲ್ಲ. ಆದಕಾರಣ ತತ್ಸಮಪದ ಭೂಯಿಷ್ಠವಾದ ಭಾಷೆಯೇ ತಮಿಳಿನಲ್ಲಿ ಮಣಿಪ್ರವಾಳವೆಂದು ಪರಿಗಣಿಸಲ್ಪಟ್ಟಿತೆಂದೂ, ಅದು ಅವರ ತೆಗಳಿಕೆಗೆ ಪಾತ್ರವಾಯಿತೆಂದು ನಾವು ಗಮನಿಸಬೇಕಾಗಿದೆ.

ಮಣಿಪ್ರವಾಳ—ಕನ್ನಡ

7.1. ಕನ್ನಡದಲ್ಲಿಯೂ ಮಣಿಪ್ರವಾಳ ರಚನೆ ಬಳಕೆಯಲ್ಲಿದ್ದಿತೆಂದು ತೋರುತ್ತದೆ. ಪಾರ್ಶ್ವಪಂಡಿತ (ಕ್ರಿ. ಶ. 1205) ತನ್ನ ಪಾರ್ಶ್ವನಾಥ ಪುರಾಣ[3]ದಲ್ಲಿ ಜೈನಕವಿ ಅಗ್ಗಳನನ್ನು ಹೀಗೆ ಸ್ತುತಿಸಿದ್ದಾನೆ.

---

[2] "Tamil has always been trying to be true to its genius. There was a danger to this in the age of St. Tirugnana Sambandar and he condemned the hybrid langauge of the Jains which was neither good Sanskrit nor good Tamil. He also very much criticised the corruption of Sanskrit words (Sankata Pankam)." Tamil and other cultures. P-35.

by Dr. T. P. Meenakshi Sundaram

3. ಮದರಾಸು ವಿಶ್ವವಿದ್ಯಾನಿಲಯದ ಪ್ರಕಟಣೆ–1954. ಸಂಪಾದಕರು : ಎಂ. ಮರಿಯಪ್ಪ ಭಟ್ಟ ಮತ್ತು ಎಂ. ಗೋವಿಂದರಾವ್

ಕಂ। ವಾಸ್ತವ ಭಕ್ತಿಯುತಂ ರೂ
ಪಸ್ತವನ ಮಣಿಪ್ರವಾಳಮಂ[4]ಜಿನಿನಾಥ।
ಸ್ಥಾಸ್ತವನಮು[4]ನೊದವಿಸಿ ಭುವ
ನಸ್ತುತನಾದಗ್ಗಳಂಗಗ್ಗಳರೊಳರೇ ॥ 1–62

ಈ ಪದ್ಯದಿಂದ ಜೈನಕವಿ ಅಗ್ಗಳ 'ರೂಪಸ್ತವನ' ವೆಂಬ ಹೆಸರುಳ್ಳ ಗ್ರಂಥವನ್ನು ಮಣಿಪ್ರವಾಳದಲ್ಲಿ ರಚಿಸಿದನೆಂದು ಸ್ಪಷ್ಟವಾಗಿ ತಿಳಿಯುತ್ತಿದೆ. ಕನ್ನಡ ಸಾಹಿತ್ಯದಲ್ಲಿ ಮಣಿಪ್ರವಾಳವನ್ನು ಕುರಿತು ಪ್ರಸ್ತಾಪಿಸುವ ಪ್ರಯೋಗ ಇದೊಂದು ಮಾತ್ರ ಲಭಿಸುತ್ತಿದೆ. ಮತ್ತೆಲ್ಲೂ ಇದರ ಪ್ರಸ್ತಾಪ ಕಂಡುಬರುವುದಿಲ್ಲ.

7. 2. ಅಗ್ಗಳಕವಿ ರಚಿಸಿರುವ 'ಚಂದ್ರಪ್ರಭ ಪುರಾಣ' ಎಂಬ ಚಂಪೂ ಕಾವ್ಯವೊಂದು ನಮಗೆ ಲಭಿಸಿದೆ. ಅದು ಎಂಟನೆಯ ತೀರ್ಥಂಕರನಾದ ಚಂದ್ರಪ್ರಭನ ಚರಿತ್ರೆಯನ್ನು ವರ್ಣಿಸುವ ಕಾವ್ಯ. ಆತನು 'ರೂಪಸ್ತವನ' ವೆಂಬ ಮತ್ತೊಂದು ಗ್ರಂಥವನ್ನು ರಚಿಸಿರುವುದು ನಿಜವಾದ ಪಕ್ಷದಲ್ಲಿ ಅದು ಇಂದು ಪ್ರಾಯಶಃ ನಷ್ಟವಾಗಿದೆಯೆಂದೇ ನಾವು ಭಾವಿಸಬೇಕಾಗಿದೆ. ಆದರೆ ಡಾ॥ ಎಂ. ಚಿದಾನಂದಮೂರ್ತಿ ಅವರು, ರೂಪಸ್ತವನವು ಆತನ ಚಂದ್ರಪ್ರಭ ಪುರಾಣದಲ್ಲಿಯೇ ಒಂದು ಭಾಗವಾಗುತ್ತದೇನೋ ಎಂದು ಅನುಮಾನಿಸಿದ್ದಾರೆ. ಅವರ ಅನುಮಾನಗಳಿಗೆ ಕಾರಣಗಳಿವು. ಜೈನಕವಿಗಳು ಸಾಧಾರಣವಾಗಿ ತಮ್ಮ ಕಾವ್ಯಗಳಲ್ಲಿ ರೂಪಸ್ತವನ, ಗುಣಸ್ತವನ, ವಸ್ತುಸ್ತವನವೆಂಬುವುಗಳನ್ನು ನಿರ್ವಹಿಸುವುದು ಸಂಪ್ರದಾಯ. ಚಂದ್ರಪ್ರಭ ಪುರಾಣದಲ್ಲಿ ವಿವಿಧ ಸಂದರ್ಭಗಳಲ್ಲಿ ಈ ಸ್ತವನಗಳು ಬರುತ್ತವೆ.

12.	153–156	:	ಇಂದ್ರನು ನಾಲ್ಕು ಸಂಸ್ಕೃತ ವೃತ್ತಗಳಲ್ಲಿ ಜಿನನ ಜನ್ಮಾಭಿಷೇಕವನ್ನು ಸ್ತುತಿಸುವನು.
13.	1–9	:	ಜಿನನ ಬಾಲ್ಯವು ಕಂದಗಳಲ್ಲೂ ವೃತ್ತಗಳಲ್ಲೂ ವರ್ಣಿಸಲ್ಪಟ್ಟಿದೆ.
13.	13–25	:	ಚಂದ್ರಪ್ರಭನ ಯೌವನವು ಸಂಸ್ಕೃತಪದ ಭೂಯಿಷ್ಠವಾದ ಪದ್ಯಗಳಲ್ಲಿ ವರ್ಣಿಸಲ್ಪಟ್ಟಿದೆ.
14.	90–97	:	ಇಂದ್ರನು ಮತ್ತೆ ಜಿನನನ್ನು ಅಷ್ಟಕದಲ್ಲಿ ಸ್ತುತಿಸುವನು.
		:	ಈ ಪದ್ಯದಿಂದ ಒಂದೊಂದು ಪದ್ಯದಲ್ಲಿಯೂ ಒಬ್ಬೊಬ್ಬ ತೀರ್ಥಂಕರನಂತೆ ಇಪ್ಪತ್ನಾಲ್ಕು ತೀರ್ಥಂಕರರ ಸ್ತೋತ್ರವು ಇಪ್ಪತ್ನಾಲ್ಕು ಸಂಸ್ಕೃತ ಶ್ಲೋಕಗಳಲ್ಲುಂಟು.

---

[4] 'ಜಿನನಾಸ್ಥಾನಸ್ತವನಮು'-ಎಂದು ಪಾಠಾಂತರ. ಜಿನನ ಆಸ್ಥಾನ ಸ್ತವನ ಈ ಪದ ವಿಭಾಗದಿಂದ ಜಿನನ ಆಸ್ಥಾನಕ್ಕೆ ಸಂಬಂಧಿಸಿದ ಸ್ತವನವೆಂದು ತಿಳಿಯಬಹುದು. ಆದ್ದರಿಂದ ಈ ಪಾಠಾಂತರವೇ ಸರಿ.

ಈ ಕಾವ್ಯದಲ್ಲಿ ಎಲ್ಲಿಯೂ ಮಲಯಾಳದಲ್ಲಿನ ಮಣಿಪ್ರವಾಳವನ್ನು ಹೋಲುವ ಭಾಷಾಶೈಲಿ ಕಂಡುಬರುವುದಿಲ್ಲ. ಕೇವಲ ಸಂಸ್ಕೃತ ಕನ್ನಡಗಳ ಮಿಶ್ರಣವೇ ಮಣಿಪ್ರವಾಳವಾದಲ್ಲಿ ಅದಕ್ಕೆ ಕನ್ನಡ ಸಾಹಿತ್ಯವೆಲ್ಲವೂ ಲಕ್ಷ್ಯವಾಗಬಹುದು. ಆದರೆ ಅಗ್ಗಳನು ಮಣಿಪ್ರವಾಳನ್ನು ರಚಿಸಿದ್ದಿರಬಹುದೆನ್ನುವುದಕ್ಕೆ ಒಂದು ಸೂಚನೆ ಲಭಿಸುತ್ತದೆ. ಚಂದ್ರಪ್ರಭ ಪುರಾಣವನ್ನು ಪರಿಷ್ಕರಿಸಿದ ವಿದ್ವಾಂಸರು ಆ ಗ್ರಂಥದಲ್ಲಿನ ಸುಮಾರು ತೊಂಬತ್ತು ಪದ್ಯಗಳನ್ನು ದೋಷಪೂರ್ಣಗಳೆಂಬ ಕಾರಣ ದಿಂದ ಪ್ರಕಟಿಸದೆ ಬಿಟ್ಟರು. ಅವು ಬಹುಶಃ ಮಣಿಪ್ರವಾಳದಲ್ಲಿ ರಚಿತವಾದ ಕಾರಣ ಅವರು ಅವುಗಳನ್ನು ದೋಷಪೂರ್ಣಗಳೆಂದು ಪರಿಗಣಿಸಿರುವುದು ಸಂಭಾವ್ಯ. ಓಲೆ ಪ್ರತಿಗಳಲ್ಲಿ ಆ ಪದ್ಯಗಳಿರುವ ಭಾಗಗಳನ್ನು ಪರಿಶೀಲಿಸುವುದಲ್ಲದೆ ಈ ಸಮಸ್ಯೆ ಪೂರ್ಣಗೊಳ್ಳದು. ಈಗ ನಮಗುಳಿದಿರುವುದು ಎರಡೇ ಮಾರ್ಗಗಳು: ಒಂದು ಪಾರ್ಶ್ವಪಂಡಿತನು ಹೆಸರಿಸಿದ ವಿಧವಾಗಿ ಅಗ್ಗಳನು ರೂಪಸ್ತವನವೆಂಬ ಗ್ರಂಥವನ್ನು ಮಣಿಪ್ರವಾಳದಲ್ಲಿ ರಚಿಸಿದನು. ಆದರೆ ಅದು ಇಂದು ನಷ್ಟವಾಗಿದೆ. ಎರಡು, ಅಗ್ಗಳನು ರಚಿಸಿದ ಚಂದ್ರಪ್ರಭ ಪುರಾಣದಲ್ಲಿಯೇ ರೂಪಸ್ತವನ ಪ್ರಕಟಿಸದೆ ಬಿಟ್ಟಿರುವ ಒಂದು ಭಾಗ, ಅದು ಮಣಿಪ್ರವಾಳದಲ್ಲಿಯೇ ರಚಿಸಿದ್ದಿರಬಹುದು. ಅದನ್ನು ಪ್ರಕಟಿಸದೆ ಬಿಟ್ಟಿರುವುದು ಅದು ಮಣಿಪ್ರವಾಳದಲ್ಲಿರುವುದರಿಂದಲೇ ಕಾರಣವಾಗಿರಬಹುದು.

7.3. ಅಗ್ಗಳನಿಗೆ ಬಹಳ ಕಾಲದ ಹಿಂದಿನಿಂದಲೇ ಮಣಿಪ್ರವಾಳ ರಚನಾ ವಿಧಾನ ಕನ್ನಡದಲ್ಲಿ ಅಲ್ಲಿಯವರೆವಿಗೂ ಪ್ರಚುರವಾಗಿದ್ದಿತೆಂದು ಊಹಿಸಲು ಕೆಲವು ಆಧಾರಗಳು ಲಭಿಸುತ್ತಿವೆ. ಆದರೆ ಅವಕ್ಕೆ ಮಣಿಪ್ರವಾಳವೆಂಬ ಸಂಜ್ಞೆ ಆ ಕಾಲದಲ್ಲಿ ಇದ್ದಂತೆ ಕಂಡುಬರುವುದಿಲ್ಲ. ಹಾಗೆ ಊಹಿಸಲು ಪ್ರಧಾನವಾದ ಆಧಾರ ಕ್ರಿ.ಶ. 9 ನೆಯ ಶತಮಾನದಲ್ಲಿ ರಚಿತವಾದ ಕವಿರಾಜಮಾರ್ಗ. ಕ್ರಿ.ಶ. 5 ನೆಯ ಶತಮಾನಕ್ಕೆ ಹಿಂದೆಯೇ ತಮಿಳಿನಲ್ಲಿ ಗಣನೀಯವಾದ ಸಾಹಿತ್ಯವು ನೆಲೆಗೊಂಡಿದ್ದಿತು. ಕರ್ನಾಟಕಾಂಧ್ರಗಳಲ್ಲೂ ಆ ವೇಳೆಗೆ ಸಾಹಿತ್ಯ ಸೃಷ್ಟಿಯಾಗಿರಲಿಲ್ಲ. ಆ ಕಾಲದಲ್ಲೂ, ತರುವಾಯ ಬಹಳ ಕಾಲದವರಿಗೂ ಉಭಯ ಪ್ರಾಂತಗಳಲ್ಲಿಯೂ ಪಂಡಿತರಿಗೆ ಸಂಸ್ಕೃತವೇ ಉಪಾದೇಯವಾಗಿದ್ದಿತು. ಆ ಕಾಲದಲ್ಲಿ ಪಾಂಡಿತ್ಯವೆಂದರೆ ಸಂಸ್ಕೃತ ಭಾಷಾ ಪಾಂಡಿತ್ಯವೇ. ಅಂದಿನ ಸಂಸ್ಕೃತ ವಿದ್ವಾಂಸರಿಗೆ ದೇಶಭಾಷೆಯೆಂದರೆ, ಅಲ್ಲಿನ ಸಾಹಿತ್ಯವೆಂದರೆ ತುಚ್ಛಭಾವನೆಯೇ ಹೊರತು, ಅವುಗಳ ಮೇಲೆ ಒಳ್ಳೆಯ ವಿಶ್ವಾಸಾದರಣೆಗಳಿರಲಿಲ್ಲ. ಕ್ರಿ.ಶ. 10 ನೆಯ ಶತಮಾನಕ್ಕೆ ಹಿಂದೆ ಈ ಪರಿಸ್ಥಿತಿ ವಿಷಮವಾಗಿತ್ತು. ಆ ಕಾಲದಲ್ಲಿ ಪಂಡಿತರು ತಮ್ಮಲ್ಲಿ ತಾವು ಸಂಭಾಷಿಸಿಕೊಳ್ಳ ಬೇಕಾಗಿ ಬಂದಾಗ ಸಹಜವಾಗಿ ಸಂಸ್ಕೃತವನ್ನೇ ಬಳಸುತ್ತಿದ್ದರು. ಆದರೆ ಸಂಸ್ಕೃತ ತಿಳಿಯದ ದೇಶೀಯರೊಂದಿಗೆ ಮಾತನಾಡಬೇಕಾಗಿ ಬಂದಾಗ ದೇಶೀ ಭಾಷೆಯನ್ನೇ

ಮಾತನಾಡುತ್ತಿದ್ದರು. ಆದರೆ ಅವರು ಪಂಡಿತರಾದುದರಿಂದ ಅವರ ಸಂಭಾಷಣೆಯಲ್ಲಿ ಹೆಚ್ಚು ಸಂಸ್ಕೃತ ಪದಗಳು ಪ್ರವೇಶಿಸುವುದು ಸಹಜ. ಹಾಗೆ ಸಂಸ್ಕೃತ ಪದಗಳನ್ನು ದೇಶೀಯ ಪದಗಳೊಂದಿಗೆ ಬೆರೆಸಿ ಪ್ರಯೋಗಿಸಬೇಕಾಗಿ ಬಂದಾಗ ಆ ಸಂಸ್ಕೃತ ಪದಗಳನ್ನು ಎಂಥ ರೂಪಗಳೊಂದಿಗೆ ಪ್ರಯೋಗಿಸಬೇಕು ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯಗಳು ಉಂಟಾಗುವುದಕ್ಕೆ ಅವಕಾಶವಿದೆ. ಕೆಲವರು ಸಂಸ್ಕೃತ ಪ್ರಾತಿಪದಿಕಗಳಿಗೆ ದೇಶಭಾಷಾವಿಭಕ್ತಿಗಳನ್ನು ಹತ್ತಿಸಿದ ಪದಗಳನ್ನು ದೇಶಭಾಷಾ ಪದಗಳೊಂದಿಗೆ ಬೆರೆಸಿ ವ್ಯವಹರಿಸುತ್ತಿದ್ದರು. ಪ್ರಾರಂಭದೆಶೆಯಲ್ಲಿ ಸಂಸ್ಕೃತ ಶಬ್ದಗಳನ್ನು ದೇಶೀಶಬ್ದಗಳಾಗಿ ಬೆಳಸಿಕೊಳ್ಳುವ ಪದ್ಧತಿಗಳು ಒಂದು ವ್ಯವಸ್ಥೆ ಇಲ್ಲದೆ, ಹಲವು ವಿಧಗಳಾಗಿರುವುದಕ್ಕೆ ಅವಕಾಶವಿದೆ. ಕವಿರಾಜಮಾರ್ಗಕ್ಕೆ ಪೂರ್ವದ ಕನ್ನಡದಲ್ಲಿದ್ದ ಕವಿಗಳು ಈ ಭಿನ್ನ ಪದ್ಧತಿಗಳಿಗೆ ಸೇರಿದ ತತ್ಸಮೀಕರಣಗಳೊಂದಿಗೆ ತಮ್ಮ ಕಾವ್ಯಗಳನ್ನು ರಚಿಸಿದ್ದರು. ಇದರಿಂದ ಕವಿರಾಜಮಾರ್ಗದ ಕಾಲದಲ್ಲಿನ ಭಾಷಾಪ್ರಯೋಗಕ್ಕೂ, ಅವರ ಭಾಷಾಪ್ರಯೋಗಕ್ಕೂ ಸ್ವಲ್ಪ ವ್ಯತ್ಯಾಸವಿದ್ದಿತು. ಕವಿರಾಜಮಾರ್ಗಕಾರ ತನ್ನ ಪೂರ್ವ ಕವಿಗಳ ತತ್ಸಮೀಕರಣ ಪದ್ಧತಿಗಳನ್ನು ಪರಿಶೀಲಿಸಿ, ತನ್ನ ಕಾಲದಲ್ಲಿದ್ದ ಶಿಷ್ಟಜನ ವ್ಯವಹಾರವನ್ನು ದೃಷ್ಟಿಯಲ್ಲಿಟ್ಟುಕೊಂಡು ಸಂಸ್ಕೃತ ಶಬ್ದಗಳನ್ನು ದೇಶೀಯ ಶಬ್ದಗಳಾಗಿ ಬಳಸಿಕೊಳ್ಳುವ ಪದ್ಧತಿಗಳಿಗೆ ಒಂದು ಸ್ಥಿರವಾದ ವ್ಯವಸ್ಥೆಯನ್ನು ಕಲ್ಪಿಸಿ ನಿರ್ದಿಷ್ಟವಾದ ಒಂದು ಕ್ರಮವನ್ನು ತನ್ನ ಕೃತಿಯಲ್ಲಿ ತಿಳಿಸಿದನು. ಆದ್ದರಿಂದಲೇ ಕವಿರಾಜಮಾರ್ಗದಲ್ಲಿನ ಕನ್ನಡ ಭಾಷೆಗೂ, ನಂತರದ ಕವಿಗಳು ಉಪಯೋಗಿಸಿದ ಭಾಷೆಗೂ ವ್ಯತ್ಯಾಸ ಅಷ್ಟಾಗಿ ಕಂಡುಬರುವುದಿಲ್ಲ. ಆದರೆ ಸಂಸ್ಕೃತ ಭಾಷೆಯಲ್ಲಿ ವಿಶ್ವಾಸಾದರಣೆಯುಳ್ಳ ಕೆಲ ವಿದ್ವಾಂಸರು ದೇಶೀ ಪದ್ಧತಿಯಲ್ಲಿಯೇ ರಚಿಸದೆ ತತ್ಸಮೀಕರಣವನ್ನು ಬಳಸಿಕೊಂಡರು. ಅವರು ಸಂಸ್ಕೃತ ಶಬ್ದಗಳನ್ನು ಸಂಸ್ಕೃತ ವಿಭಕ್ತ್ಯಂತಗಳಾಗಿಯೂ, ದೇಶೀಯ ಪದಗಳನ್ನು ದೇಶೀಯ ವಿಭಕ್ತ್ಯಂತಗಳಾಗಿಯೂ ಪ್ರಯೋಗಿಸುವುದು ಯುಕ್ತವೆಂದು ಭಾವಿಸಿದರು. ಅದಕ್ಕನುಗುಣವಾಗಿ ಕೆಲವರು ಅಂಥ ಭಾಷೆಯಲ್ಲಿ ಕೃತಿಗಳನ್ನು ರಚಿಸಿರುವುದೂ ಸಂಭಾವ್ಯ. ಅದೇ ಕಾಲನಂತರ ಮಣಿಪ್ರವಾಳವೆಂಬ ಹೆಸರಿನಿಂದ ಪ್ರಸಿದ್ಧಿಯಾಗಿರಬೇಕು.

7.4. ಕವಿರಾಜಮಾರ್ಗದಲ್ಲಿ ಚತ್ತಾಣ, ಬೆದಂಡೆಯೆಂಬ ದೇಶೀಕಾವ್ಯ ಭೇದಗಳನ್ನು ಹೆಸರಿಸಿದೆ. ಅವು ಆತನ ಕಾಲಕ್ಕೇ 'ಪಟಗನ್ನಡ'ವೆಂದು ಹೇಳಲಾದ ಭಾಷೆಯಲ್ಲಿ ರಚಿಸಿದ್ದಿತೆಂದು ತಿಳಿಯುತ್ತದೆ. ಆದರೆ ಸಂಸ್ಕೃತ ಭೂಯಿಷ್ಠವಾದ ಶಿಷ್ಟಭಾಷೆಯಂತೆ ಆ ಪಟಗನ್ನಡ ಅವನಿಗೆ ರುಚಿಸಲಿಲ್ಲ. ಆದ್ದರಿಂದ ಆತನು "ವಿರಸಂ ಕರಮವು ದೇಸಿಗೆ ಜರದ್ವಧೂ ವಿಷಯ ಸುರತ ರಸರಸಿಕತೆಯೋಲ್" ಎಂದು ತಿರಸ್ಕರಿಸಿದನು. ಹಾಗೆ ಪಟಗನ್ನಡ ಭಾಷಾ ಪ್ರಯೋಗವನ್ನು ನಿಂದಿಸಿ, ದೇಶ

ಭಾಷೆಗಳೊಂದಿಗೆ ಸಮಸಂಸ್ಕೃತವನ್ನು ಸೇರಿಸಬೇಕೇ ಹೊರತು ಸಂಸ್ಕೃತ ವಿಭಕ್ತ್ಯಂತಗಳಾದ ಪದಗಳನ್ನು ಸೇರಿಸಬಾರದೆಂದು ಕಂಠೋಕ್ತಿಯಾಗಿ ನಿಯಮವನ್ನು ಮಾಡಿದನು.[5] ಮತ್ತೆ ಅಪರಹಃ, ಉಚ್ಚೈಃ, ನೀಚೈಃ, ಮುಹುರ್ಮುಹುಃ, ಇತಸ್ತತಃ, ಪುನಃ, ಅತಃ, ಬಹಿಃ, ಮುಂತಾದವುಗಳನ್ನು ಕನ್ನಡ ಭಾಷಾ ವಾಕ್ಯಗಳೊಂದಿಗೆ ಬಳಸಬಾರದೆಂದೂ, ಹಾಗೆ ಬಳಸಿದರೆ ಕರಡೆ, ಮದ್ದಲೆಗಳನ್ನು ಒಂದೇ ಸಾರಿ ಬಾರಿಸುವುದರಿಂದುಂಟಾಗುವ ಜರ್ಜರ ಧ್ವನಿಯಾಗುತ್ತದೆಂದೂ, ಸಮಸಂಸ್ಕೃತದೊಂದಿಗೆ ಬೆರೆಸಿ ಹೇಳಿದ ಪಕ್ಷದಲ್ಲಿ ಅದು ಸಂಗೀತಾದಿ ಮಧುರ ರಸಗಳನ್ನು ಹೋಲುತ್ತದೆಂದೂ ವಿವರಿಸಿದನು. ಹೀಗೆಯೇ ಅರಸುಕುಮಾರ, ಅಯುತತರ ಕಡೆಗಣ್ಣು, ಕೆಳದಿ ಸಮೇತಂ ಮುಂತಾದ ಮಿಶ್ರಸಮಾಸಗಳು ಪರಿಹಾರ್ಯಗಳೆಂದು, ಅವುಗಳನ್ನು ನರಪತಿತನಯ, ಅಯುತತರಳಾಪಾಙ್ಗ, ಕೆಳದಿಯುರೊಡೆ ಎಂಬುದಾಗಿ ಬಳಸುವುದು ಯುಕ್ತವೆಂದು ಸೂಚಿಸಿದನು. ಇದರಿಂದ ಸಂಸ್ಕೃತ ವಿಭಕ್ತ್ಯಂತಗಳಾದ ಶಬ್ದಗಳನ್ನು ಯಥಾರೀತಿಯಾಗಿ ದೇಶಭಾಷಾಪದಗಳೊಂದಿಗೆ ಬೆರಸಿ ಪ್ರಯೋಗಿಸುವುದು ಮಾತ್ರವೇ ಅಲ್ಲದೆ, ಸಮಾಸಗಳಲ್ಲಿಯೂ ಕೇವಲ ಸಂಸ್ಕೃತ ಪದಗಳೊಂದಿಗೆ ದೇಶೀಯ ಪದಗಳನ್ನು ಸೇರಿಸಿ ಪ್ರಯೋಗಿಸುವುದು ಆತನಿಗೆ ಸರಿಯಲ್ಲವೆಂದು ತಿಳಿಯುತ್ತದೆ. ಇದರಿಂದ ಅಗ್ಗಳನಿಗಿಂತ ಬಹಳ ಪೂರ್ವದಲ್ಲಿಯೇ ಮಣಿಪ್ರವಾಳ ರಚನಾವಿಧಾನ ಕನ್ನಡದಲ್ಲಿದ್ದಿತೆಂದು ಊಹಿಸಬಹುದು. ಆದರೆ ಕವಿರಾಜಮಾರ್ಗದ ರಚನೆಯ ನಂತರ ಆ ರಚನಾವಿಧಾನವು ಬಹಳವಾಗಿ ನಶಿಸಿ ಹೋಗಿ ಅಗ್ಗಳನಂಥ ಒಬ್ಬಿಬ್ಬರು ಕವಿಗಳನ್ನು ಮಾತ್ರ ಅದು ಆಕರ್ಷಿಸಿತು. ಅದಕ್ಕೆ ಸಮುಚಿತವಾದ ಆದರಣೆ ಲಭಿಸದೇ ಹೋದುದೇ ಅದರ ವಿನಾಶಕ್ಕೆ ನಾಂದಿಯಾಯಿತು.

7.5. ಕ್ರಿ.ಶ. 19ನೆಯ ಶತಮಾನದ ಅಂತ್ಯಭಾಗದಲ್ಲಿ 'ಮುದ್ದಣ' ಕನ್ನಡ ಪದಗಳನ್ನೂ, ಸಂಸ್ಕೃತ ಪದಗಳನ್ನೂ ತನ್ನ ರಚನೆಯಲ್ಲಿ ("ಕರ್ಮಣಿ ಸರದೊಳ್ ಚೆಂಬವಳಮಂ ಕೋದಂತಿರೆ, ರಸಮೊಸರೆ, ಲಕ್ಕಣಂ ಮಿಕ್ಕಿರೆ, ಎಡೆಯೆಡೆಯೊಳ್ ಸಕ್ಕದದ ನಲ್ನುಡಿ ಮೆಱೆಯೆ, ತಿರುಳ್ಗನ್ನಡದೊಳೆ ಕಥೆಯನುಸಿರ್ವೆಂ.") ಪ್ರಯೋಗಿಸುತ್ತೇನೆಂದು ಹೇಳಿಕೊಂಡಿದ್ದಾನೆ. ಇದು ನಮಗೆ ಮಣಿಪ್ರವಾಳವನ್ನೇ ಸ್ಫುರಿಸುತ್ತದೆ. ಆದರೆ ಆತನು 'ರಾಮಾಶ್ವಮೇಧ'ವನ್ನು ಹಳಗನ್ನಡದಲ್ಲಿಯೇ ರಚಿಸಿದನು. ಇಲ್ಲಿ ಮಣಿಪ್ರವಾಳದ ಜಾಡು ಎಳ್ಳಷ್ಟೂ ಕಂಡುಬರುವುದಿಲ್ಲ. ಈತನು ಕೇರಳ ದೇಶಕ್ಕೆ ಸಮೀಪದಲ್ಲಿರುವ ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದವನಾದುದರಿಂದ

---

5 ಸಮ ಸಂಸ್ಕೃತಂಗಳೊಳ್ ಸ
ಯ್ತುಮರ್ದಿರೆ ಕನ್ನಡಮನಱಿದು ಪೇೞ್ಗೆಂಬುದಿದಾ।
ಗಮ ಕೋವಿದ ನಿಗದಿತ ಮಾ
ರ್ಗಮಿದಂ ಬೆರಸಲ್ಕಮಾಗದೀ ಸಕ್ಕದದೊಳ್॥ ಕ. ಮಾ. 1–51

ಮಲಯಾಳ ಸಾಹಿತ್ಯದೊಂದಿಗೆ ಆತನಿಗೆ ಸ್ವಲ್ಪ ಪರಿಚಯವಿದ್ದಿತೆಂಬುದಕ್ಕೆ ಅವಕಾಶವಿದೆ. ಅದನ್ನು ಪುರಸ್ಕರಿಸಿಕೊಂಡು ಆ ಚಾಪಲ್ಯದಿಂದ ತನ್ನ ಕಾವ್ಯದಲ್ಲಿನ ಭಾಷೆಯನ್ನು ಕುರಿತು ಆತನು ಮಣಿಪ್ರವಾಳ ಭಾಷಾಜ್ಞಾಪಕದೊಂದಿಗೆ ಮೇಲಿನ ರೀತಿಯಲ್ಲಿ ಹೆಸರಿಸಿದ್ದಿರಬಹುದು.[6]

7.6. ಹೀಗೆ ಕನ್ನಡದಲ್ಲಿ ಮಣಿಪ್ರವಾಳ ರಚನೆ ಅತ್ಯಲ್ಪವಾಗಿ ಮಾತ್ರ ಇದ್ದಿತೆಂದು ಕಂಡುಬರುತ್ತಿದ್ದರೂ, ಅದು ಕನ್ನಡದಲ್ಲಿ ಮಲಯಾಳದಂತೆ ಒಂದು ಪ್ರತ್ಯೇಕ ಕಾವ್ಯಶೈಲಿಯಾಗಿ ನಿಲ್ಲಲಾರದೆ ಹೋಯಿತು.

ಮಣಿಪ್ರವಾಳ–ತೆಲುಗು

8.1.1. ತೆಲುಗಿನಲ್ಲೂ ಮಣಿಪ್ರವಾಳ ರಚನಾವಿಧಾನವು ಒಂದು ಕಾಲದಲ್ಲಿ ಕೆಲವರಿಗೆ ಆದರ ಪಾತ್ರವಾಗಿದ್ದಿತೆಂದು ತಿಳಿಯುತ್ತದೆ. ಕನ್ನಡದಲ್ಲಿನ ಮಣಿಪ್ರವಾಳ ರಚನೆಗೆ ಆದ ಪ್ರೋತ್ಸಾಹ ಪರಿಸ್ಥಿತಿಗಳೇ, ತೆಲುಗಿನ ಮಣಿಪ್ರವಾಳ ರಚನೆಗೂ ಕಾರಣಗಳಾದುವೆಂದು ತಿಳಿಯಬಹುದು. ಪ್ರಾಚೀನ ಕಾಲದಲ್ಲಿ ಕನ್ನಡಕ್ಕೂ ತೆಲುಗಿಗೂ ಈಗಿರುವಷ್ಟು ವ್ಯತ್ಯಾಸಗಳಿರಲಿಲ್ಲ. ಆದ್ದರಿಂದ ಆ ಎರಡೂ ಪ್ರಾಂತಗಳಲ್ಲಿನ ಕವಿಗಳು, ಪ್ರಜೆಗಳು ಒಬ್ಬರನ್ನೊಬ್ಬರು ಭಾಷಾ ಸಾಹಿತ್ಯಗಳಿಂದ ಪರಿಚಯ ಹೊಂದಿರುವುದಕ್ಕೆ ಅವಕಾಶಗಳುಂಟು. ಆದ್ದರಿಂದ ಕವಿರಾಜಮಾರ್ಗಕ್ಕೆ ಪೂರ್ವದಲ್ಲಿ ಕನ್ನಡದಲ್ಲಿ ವ್ಯಾಪಿಸಿದ್ದ ಮಾರ್ಗ ಕವಿತಾಪದ್ಧತಿ ತೆಲುಗಿನಲ್ಲೂ ವ್ಯಾಪಿಸಿರುವುದು ಸಂಭಾವ್ಯ. ಅದರೊಂದಿಗೆ ಸಂಸ್ಕೃತ ಭಾಷಾಭಿಮಾನಿಗಳಾದ ಪಂಡಿತರು ಸಂಸ್ಕೃತ ವಿಭಕ್ತ್ಯಂತಗಳಾದ ಸಂಸ್ಕೃತ ಶಬ್ದಗಳನ್ನು ದೇಶಭಾಷಾ ಪದಗಳೊಂದಿಗೆ ಸೇರಿಸಿ ಬಳಸುತ್ತಿದ್ದ ಮಣಿಪ್ರವಾಳ ಪದ್ಧತಿಯು ಬಳಕೆಯಲ್ಲಿದ್ದಿತು. ಚಾಳುಕ್ಯ ರಾಜರು ಆ ಉಭಯ ಪದ್ಧತಿಗಳನ್ನು ಅಂಗೀಕರಿಸದೆ ದೇಶೀ ಕವಿತೆಗೂ, ಸಂಸ್ಕೃತ ಪದ ಪ್ರಚುರವಲ್ಲದ ತೆಲುಗಿಗೂ ಪ್ರಾಧಾನ್ಯ ಕೊಟ್ಟರು. ಈ ವಿಷಯವು ನನ್ನೆಚೋಡನ ಪದ್ಯ[7]ದಿಂದ ತಿಳಿಯುತ್ತದೆ. ಅವರ ಅಂಥ ಪ್ರಯತ್ನದ ಫಲವೇ ಅಂದಿನ ಶಾಸನಗಳಲ್ಲಿಯೂ, ಸಾಹಿತ್ಯದಲ್ಲಿಯೂ ಕಂಡುಬರುವ ದೇಶೀಕವಿತ್ವ. ಅವರು ಅಂದು ಆ ಪ್ರಯತ್ನ

---

[6] ಕನ್ನಡದಲ್ಲಿನ ಮಣಿಪ್ರವಾಳವನ್ನು ಕುರಿತು ನನಗೆ ಈ ವಿಷಯವನ್ನು ತಿಳಿಸಿದ ಡಾ॥ ಎಂ. ಚಿದಾನಂದಮೂರ್ತಿಯವರಿಗೆ ನನ್ನ ಕೃತಜ್ಞತೆಗಳು.

[7] ನನ್ನೆಚೋಡ—ಕುಮಾರಸಂಭವ 1.23

ಕಂ॥ ಮುನು ಮಾರ್ಗಕವಿತ ದೇಶಂ
ಬುನ ವೆಲಯ್ಙಗ ದೇಶಕವಿತ್ವಬುಟ್ಟಿಂಚಿ ತೆನುಂ
ಗುನಿಲಿಗಿರಂಧ್ರ ವಿಷಯಂ
ಬುನ್ಙಜನ್ಙ ಚಾಳುಕ್ಯರಾಜು ಮೊದಲಗುಪಲವುರ್

ಮಾಡದಿದ್ದ ಪಕ್ಷದಲ್ಲಿ ಮಾರ್ಗಕವಿತಾ ಪದ್ಧತಿಯೋ, ಮಣಿಪ್ರವಾಳ ಪದ್ಧತಿಯೋ ತೆಲುಗು ದೇಶದಲ್ಲಿಯೂ ವ್ಯಾಪಿಸಿ ದೇಶೀ ಕವಿತೆಗೂ ತೆಲುಗಿಗೂ ಸ್ವಲ್ಪ ಅಡ್ಡಿ ಉಂಟಾಗುತ್ತಿತ್ತು.

8.1.2. ಕನ್ನಡದಲ್ಲಿ ಕವಿರಾಜಮಾರ್ಗದ ರಚನೆಯಿಂದ ಮಾರ್ಗಕವಿತೆಗೊಂದು ರಾಜಮಾರ್ಗ ಏರ್ಪಟ್ಟಿತು. ಅಂದಿನಿಂದ ಕನ್ನಡ ಕವಿಗಳು ಆ ಮಾರ್ಗವನ್ನವಲಂಬಿಸಿದರು. ಅದರ ಪ್ರಭಾವವು ತೆಲುಗು ದೇಶಕ್ಕೂ ವ್ಯಾಪಿಸಿತು. ಅದರ ಫಲವಾಗಿ ತೆಲುಗು ಪಂಡಿತಕವಿಗಳ ಆದರವು ಕ್ರಮವಾಗಿ ಮಾರ್ಗಪದ್ಧತಿಯನ್ನೇ ಅನುಸರಿಸ ತೊಡಗಿತು. ನನ್ನಯ್ಯನ ವೇಳೆಗೆ ಆ ಆದರಣೆ ಪ್ರಬಲವಾಯಿತು. ಆದರೆ ಆ ಕಾಲದಲ್ಲಿಯೂ ಸಹ ಮಣಿಪ್ರವಾಳವನ್ನು ಮೆಚ್ಚುವ ಸಂಸ್ಕೃತ ಭಾಷಾಭಿಮಾನಿಗಳಿದ್ದರು. ಆ ಕಾಲದಲ್ಲಿನ ಪರಿಸ್ಥಿತಿಗಳನ್ನನುಸರಿಸಿ ನನ್ನಯ್ಯನಿಗೆ ಕನ್ನಡ ಭಾಷೆಯ ಪರಿಚಯವಿರಲು ಅವಕಾಶವಿದ್ದಿತು. ಆತನ ಸಹಾಧ್ಯಾಯಿಯಾದ ನಾರಾಯಣಭಟ್ಟು ಕನ್ನಡವಲ್ಲಿ ಕವಿತೆಯನ್ನು ಹೇಳಬಲ್ಲ ಪ್ರಾವೀಣ್ಯವನ್ನು ಪಡೆದಿದ್ದನೆಂದು ನಂದಂಪೂಡಿ ಶಾಸನದಿಂದ ನಮಗೆ ತಿಳಿಯುತ್ತದೆ. ಅವನು ಕನ್ನಡದಲ್ಲಿ ಪ್ರಚುರವಾಗಿದ್ದ ಮಾರ್ಗ ಕವಿತಾಪದ್ಧತಿಯನ್ನು ನೋಡಿ ಅದರ ಸೌಂದರ್ಯ ಗಾಂಭೀರ್ಯಗಳಿಗೆ ಮನಸೋತು ತನ್ನ ಮಿತ್ರನಾದ ನನ್ನಯ್ಯನಿಗೆ ಆ ಮಾರ್ಗವನ್ನು ಅನುಸರಣೀಯವೆಂದು ಸೂಚಿಸಿದನು. ಸಂಸ್ಕೃತ ಭಾಷಾಭಿಮಾನಿಗಳು ಮಣಿಪ್ರವಾಳ ಪದ್ಧತಿಯೇ ಉಪಾದೇಯವೆಂದು ವಾದಿಸಿದರು. ಮಹಾಭಾರತದಂಥ ಉದ್ಗ್ರಂಥವನ್ನು ತೆಲುಗಿನಲ್ಲಿ ಹೇಗೆ, ಎಂಥ ಭಾಷೆಯಲ್ಲಿ ಬರೆಯುವುದೆಂದು ಡೋಲಾಯಮಾನ ಚಿತ್ತನಾದ ನನ್ನಯ್ಯ ಭಟ್ಟಾರಕನಿಗೆ 'ಪಾಕಶಾಸನನಿಗೆ ಭಾರತಘೋರ ರಣದಲ್ಲಿ ನಾರಾಯಣನಂತೆ' ನಾರಾಯಣಭಟ್ಟು ಸಹಾಯಕನಾಗಿ ಆತನ ಸಂಶಯ ಮನಸ್ಸನ್ನು ಹೋಗಲಾಡಿಸಿ ಕರ್ಮಮಾರ್ಗಕ್ಕೆ ಆತನನ್ನು ಉನ್ಮುಖನಾಗುವಂತೆ ಮಾಡಿದನು. ನನ್ನಯ್ಯ ಆತನ ಆದೇಶದಂತೆ ಮಾರ್ಗ ಕವಿತಾ ಪದ್ಧತಿಯಲ್ಲಿ ರಚನೆಯನ್ನು ಮುಂದುವರಿಸಿದ. ಸಂಸ್ಕೃತ ಭಾಷಾಭಿಮಾನಿಗಳು ಮೆಚ್ಚಿದ ಮಣಿಪ್ರವಾಳ ಶೈಲಿ ಪರಿಸ್ಥಿತಿಗಳ ಪ್ರಾಬಲ್ಯದಿಂದ ಹಿಂದಕ್ಕೆ ಬಿದ್ದಿತು.

8.1.3. ಆದರೂ ಅವರು ತಮ್ಮ ಅಸಂತೋಷವನ್ನು ಚಾಟೂಕ್ತಿಯಿಂದ ವ್ಯಕ್ತಮಾಡುತ್ತಲೇ ಇದ್ದರು ಎಂಬುದಾಗಿ ನನ್ನೆಚೋಡನ ಪದ್ಯ[8]ದಿಂದ ತಿಳಿಯುತ್ತದೆ. ಅವರಿಗೆ ಸಂಸ್ಕೃತ ಪದಗಳನ್ನು ತತ್ಸಮಗಳಾಗಿ ಮಾಡಿ ದೇಶಭಾಷಾ ಪದಗಳೊಂದಿಗೆ

---

[8] ನನ್ನೆಚೋಡ್ನ-ಕುಮಾರಸಂಭವ 1-28

ಕಂ॥ ಮಾರ್ಗಕುಮಾರ್ಗಮು, ದೇಶಿಯ
ಮಾರ್ಗಮು, ವಗವಂಗ್ಯದಮಕು ಮದಿವದಲಕ ದು।
ಮಾರ್ಗ ಪದವರ್ತುಲನ್ಯದಗು
ಮಾರ್ಗವುಲಂ ದಲ್ಚಪ ನಲ್ಯತಿಮಹಿ ಸುಕವುಲಕುನ್ ॥

ಸೇರಿಸಿ ಹೇಳುವ ಮಾರ್ಗಕವಿತ್ವದ ರೀತಿಯಾಗಲಿ, ಕೇವಲ ದೇಶೀ ಕವಿತ್ವ ರೀತಿಯಾಗಲಿ ಪ್ರೀತಿಯಿಲ್ಲ. ಅವರ ಅಭಿಪ್ರಾಯದಲ್ಲಿ ಸಂಸ್ಕೃತ ಪ್ರಾತಿಪದಿಕಗಳನ್ನು ತತ್ಸಮಗಳಾಗಿ ಮಾಡಿ ಅವುಗಳೊಂದಿಗೆ ದೇಶಭಾಷಾ ಪದಗಳನ್ನು ಸೇರಿಸಿ ಹೇಳುವ ಮಾರ್ಗಪದ್ಧತಿ ಕುಮಾರ್ಗ. ಚಾಳುಕ್ಯರಾಜರು ಬೆಳೆಸಿ ನಿಲ್ಲಿಸಿದ ದೇಶಿ ಕವಿತ್ವ ಅಮಾರ್ಗ. ಈ ಎರಡೂ ಅವರಿಗೆ ಉಪಾದೇಯಗಳಲ್ಲ. ಆದರೆ ಮಾತನಾಡದೆ ಸುಮ್ಮನಿರಲು ಅವರ ಮನಸ್ಸು ಒಪ್ಪುದಿಲ್ಲ. ಆದ್ದರಿಂದ ಅವರು ಒಂದು ನೂತನ ಮಾರ್ಗವನ್ನು–'ಸಂಸ್ಕೃತ ಶಬ್ದಗಳನ್ನು ಸುಬಾದ್ಯಂತಗಳಾಗಿಯೇ ಗ್ರಹಿಸಿ, ದೇಶಿ ಪದಗಳೊಂದಿಗೆ ಸೇರಿಸಿ ಹೇಳುವ ಮಣಿಪ್ರವಾಳ ಮಾರ್ಗವನ್ನು ಅವಲಂಬಿಸಿದರು.' ಈ ಮೂರನೆಯ ಪದ್ಧತಿ ಅವರ ಅಭಿಪ್ರಾಯದಲ್ಲಿ ಸನ್ಮಾರ್ಗ. ಆದರೆ ನನ್ನೆಚೋಡನಿಗಿದು ದುರ್ಮಾರ್ಗ. ದುರ್ಮಾರ್ಗವನ್ನು ಅವಲಂಬಿಸುವ ಮಾರ್ಗಕವಿಗಳನ್ನೇ ಆತನು ತನ್ನ ಪದ್ಯಗಳಲ್ಲಿ ತೆಗಳಿದ್ದಾನೆ. ಸುಕವಿಗಳು (ದೇಶೀ) ಅಂಥ ಮಾರ್ಗಕವಿಗಳನ್ನು ಸ್ಮರಿಸುವಷ್ಟಿಲ್ಲವೆಂದೂ, ಅವರು ನಮ್ಮ ಉಪೇಕ್ಷೆಗೆ ಅರ್ಹರೆಂದೂ ಸೂಚಿಸಿದನು. ಇದರಿಂದ ನನ್ನೆಚೋಡನ ಕಾಲದಲ್ಲಿಯೂ, ಮಣಿಪ್ರವಾಳವನ್ನು ಮೆಚ್ಚುವ ಕೆಲ ಪಂಡಿತರಿದ್ದರೆಂದು ತಿಳಿಯುತ್ತದೆ.

8.2.1. ನನ್ನೆಚೋಡನ ಪದ್ಯಕ್ಕೆ ಮಾಡಿದ ಅರ್ಥವಿವರಣೆಯಿಂದ ಇದು ಕೇವಲ ಊಹೆಯಾಗಿಯೂ ತೋರಬಹುದು. ಆದರೆ ಅಂಥ ಮಣಿಪ್ರವಾಳ ಶೈಲಿಗೆ ಸೇರಿದ ರಚನಾವಿಧಾನವು ತೆಲುಗಿನಲ್ಲಿದ್ದಿತೆಂದು ನಿರ್ಧರಿಸಲು ಪಾಲ್ಕುರಿಕಿ ಸೋಮನಾಥನ ವೃಷಾಧಿಪ ಶತಕದಲ್ಲಿ ಪ್ರಬಲವಾದ ಪ್ರತ್ಯಕ್ಷ ಸಾಕ್ಷಿಯು ನಮಗೆ ಲಭಿಸುತ್ತಿದೆ. ಅಲ್ಲಿ ಮಣಿಪ್ರವಾಳವನ್ನು ಹೆಸರಿಸುವುದು ಮಾತ್ರವೇ ಅಲ್ಲ ಆ ಶೈಲಿಯಲ್ಲಿ ರಚಿಸಿದ ಪದ್ಯಗಳೂ ನಮಗೆ ಲಭಿಸುತ್ತಿವೆ.

8.2.2. ವೃಷಾಧಿಪ ಶತಕದಲ್ಲಿ ಪಾಲ್ಕುರಿಕಿ ಸೋಮನಾಥನು ಸಂಸ್ಕೃತ ಭಾಷಾ ರಚನೆಗಳಾದ ಸ್ತುತಿಗಳಾಗಿ ಆರು ಪದ್ಯಗಳನ್ನು, ತಮಿಳು, ಕರ್ಣಾಟ, ಮಹಾರಾಷ್ಟ್ರ ಭಾಷೆಗಳಲ್ಲಿ ಒಂದೊಂದು ಭಾಷೆಯಲ್ಲಿಯೂ ಒಂದೊಂದು ಪದ್ಯದಂತೆ ಮೂರು ಪದ್ಯಗಳನ್ನು ರಚಿಸಿದ ನಂತರ ಮಣಿಪ್ರವಾಳದಲ್ಲಿ ಹೇಳಿದೆನೆಂದು ಕಂಠೋಕ್ತಿಯಾಗಿ ಹೆಸರಿಸುತ್ತಾ ನಾಲ್ಕು ಪದ್ಯಗಳನ್ನು ರಚಿಸಿದನು. ಕೊನೆಯದಾಗಿ ಬಹು ಭಾಷಾ ಪದಗಳೊಂದಿಗೆ ಕೂಡಿದ ಒಂದು ಪದ್ಯವನ್ನೂ ರಚಿಸಿದನು. ಆದರೆ ಅಲ್ಲಿ ಅದನ್ನು ಮಣಿಪ್ರವಾಳವೆಂದು ಹೆಸರಿಸಲಿಲ್ಲ.

8.2.3. ವೃಷಾಧಿಪ ಶತಕದಲ್ಲಿನ ಪದ್ಯಗಳು.[9]

---

[9] ವೃಷಾಧಿಪ ಶತಕ: ಪದ್ಯಗಳು 59, 60, 61, 63, 64 – ಶ್ರೀ ನಿರ್ಮಲ ಶೈವ ಸಾಹಿತೀ ಗ್ರಂಥಮಾಲೆ – 1969

ಚಂ॥ ಅನಯುಮು ಚೇತುಲಂದು ಭವದಂಘ್ರಿ ಸರೋಜ ಯುಗಂ ನಮಾಮಿ ನೆ
ಮ್ಮನಮುನ ಸಂಸ್ಮರಾಮಿಯುನು ಮಾಟಲ ನಿನ್ ಪರಿವಸ್ಕರೋಮ್ಯಹ
ಮ್ಮನುಚು ಮಣಿಪ್ರವಾಳಮುನ ನಂಕನ ಸೇಯುದು ಭಕ್ತಲೋಕ ಹೃ
ದ್ವನಜ ವಿಹಾರರೋಲ ! ಬಸವಾ ! ಬಸವಾ ! ಬಸವಾ ! ವೃಷಾಧಿಪಾ !
59

ಚಂ ॥ ಅರುಳಗಿರಿ ಪ್ರಸಾದ ಮುಡಯಾನೆ ಭವದ್ಗುಣ ವರ್ಣ ಸಲ್ಪಿ ನಾ
ಕೊರುವನಿ ನೇ ಸ್ಮರಾಮಿ ಸುರ ಸತ್ತ್ರಮ ! ಯೊ ಗಣವರ್ಯ ! ಯಂಚು ನಿ
ಟ್ಲರುದು ಮಣಿಪ್ರವಾಳಮುನ ನಂಕನ ಸೇಯುದು ನಿನ್ನು ಮನ್ಮನೋ
ಹರ ! ಕರುಣಾ ವಿಧೇಯ ! ಬಸವಾ ! ಬಸವಾ ! ಬಸವಾ ! ವೃಷಾಧಿಪಾ !
60

ಚಂ ॥ ಪಾಯದೆ ಒಂದು ಚೇಟಿಗತಿ ಪಾಪ ಅವಾಪರಮನ್ನ ಮಾಮಿಘೋ
ನ್ನಾಯವಿಧೇಯಮಿಾವತರಿಯನ್ಯನಜಾಣು ಕೃತಾರ್ಥಯಂಚು ವಾ
ಗ್ಮ್ರೀಯ ! ಮಣಿಪ್ರವಾಳಮುನದೆಲ್ಲಮುನಿನ್ನುನಲಂಕರಿಂತು ದೇ
ವಾ ! ಮುಮಿ ಬೃಂದವ್ಯಂದ್ಯ ! ಬಸವಾ ! ಬಸವಾ ! ಬಸವಾ ! ವೃಷಾಧಿಪಾ!
61

ಚಂ ॥ ಹಾಡುವೆ ನಾ ಮಹಾ ರಸವನಂಘ್ರಿಯುಗ ಭ್ರಮಗೊಂಡು ಸದ್ಗುಣಾ
ಮಾಡುವೆಯುರ್ಜನು ಬಡೆ ಸಮಗ್ರ ನುತಿ ತ್ವಯಿ ಸತ್ರಿಯನ್ ದಗನ್
ಗೂಡ ಮಣಿಪ್ರವಾಳಮುನೆs ಗೋರಿ ನುತಿಂತುನು ಸಂಚಿತಾರ್ಥಮುಲ್
ಪಾಡಿಗ ನಿವ್ವಟಿಲ್ಲ ಬಸವಾ ! ಬಸವಾ ! ಬಸವಾ ! ವೃಷಾಧಿಪಾ !
63

ಚಂ ॥ ತಿರುಘಡಿ ನಾಮನಂಬುನನು ದೇ ಹೃದಯೇಶ್ವರ ! ಕೆಂ ವಿಧೀಯತಾಂ
ಪರತರತ್ವಂ ಪುರಾಣ ನನು ಪಾಹಿಪಿಘೋ ಅನುಪಾಹಿತಾ ಅವಾ
ವರದನೆ ಘಳ್ಳಿಯಂಚು ನಿನುs ಬ್ರಸ್ತುತಿ ಸೇಯುದುs ಬೆಕ್ಕು ಭಾಪಲನ್
ವರದ ! ವಿವೇಕ ಶೀಲ ! ಬಸವಾ ! ಬಸವಾ ! ಬಸವಾ ! ವೃಷಾಧಿಪಾ !
64

8.2.4. ಮೇಲಿನ ಪದ್ಯಗಳಲ್ಲಿ ಕ್ರಮವಾಗಿ ಸಂಸ್ಕೃತಾಂಧ್ರಗಳು, ತಮಿಳಾಂಧ್ರ ಸಂಸ್ಕೃತಗಳು, ಆಂಧ್ರ ಕರ್ಣಾಟ ಸಂಸ್ಕೃತಗಳು, ಸಂಸ್ಕೃತ ಕರ್ಣಾಟಗಳು, ಸಂಸ್ಕೃತ ದ್ರವಿಡ, ಕರ್ಣಾಟಕಾಂಧ್ರ ಮಹಾರಾಷ್ಟ್ರ ಭಾಷೆಗಳು-ಈ ಭಾಷಾ ಪದಗಳೊಂದಿಗೆ ಸೇರಿದ ಮಣಿಪ್ರವಾಳ ರಚನೆಯುಂಟು. ಇವುಗಳಿಂದ ಸೋಮನಾಥನ ಅಭಿಪ್ರಾಯದಲ್ಲಿ ಸುಬಾದ್ಯಂತಗಳಾದ ಸಂಸ್ಕೃತ ಶಬ್ದಗಳನ್ನು ಯಾವ ಭಾಷಾ ಪದಗಳೊಂದಿಗೆ ಸೇರಿಸಿ ರಚಿಸಿದರೂ ಅದು ಮಣಿಪ್ರವಾಳಗುತ್ತದೆಂಬ ವಿಷಯವು ಸ್ಪಷ್ಟ. ಮಣಿಪ್ರವಾಳದಲ್ಲಿ ಸುಬಾದ್ಯಂತಗಳಾದ ಸಂಸ್ಕೃತ ಪದಗಳು ನಿಯತವಾಗಿ ಇರಬೇಕಾದುದೊಂದು ಧರ್ಮ. ಅಂಥ ಪದಗಳೊಂದಿಗೆ ಯಾವ ಭಾಷಾ ಪದಗಳನ್ನು ಸೇರಿಸಿ ರಚಿಸಿದರೂ ಅದು

ಮಣಿಪ್ರವಾಳವೆಂಬ ಸಂಜ್ಞೆಯಿಂದ ಕರೆಯಿಸಿಕೊಳ್ಳುತ್ತದೆ. ಇದರಿಂದ ಯಾವ ದೇಶಿ ಭಾಷೆಯಲ್ಲಿಯಾದರೂ ಮಣಿಪ್ರವಾಳ ಪದ್ಧತಿ ಇರುವುದಕ್ಕೆ ಅವಕಾಶವಿದೆ. ಒಂದು ದೇಶಭಾಷೆಗೆ ಸೇರಿದ ಪದಗಳನ್ನು ಮಾತ್ರವಲ್ಲದೆ ಹೆಚ್ಚು ದೇಶಭಾಷೆಗಳಿಗೆ ಸೇರಿದ ಪದಗಳನ್ನು ಸಹ ಒಂದುಗೂಡಿಸಬಹುದು. ಆಗಲೂ ಅದು ಮಣಿಪ್ರವಾಳವೇ ಆಗುತ್ತದೆ. ಹೀಗೆ ಪದ್ಯಗಳು ತೆಲುಗಿನಲ್ಲಿ ಮಾತ್ರವೇ ಅಲ್ಲದೆ, ಇತರೆ ಭಾಷೆಗಳಲ್ಲಿಯೂ ಆ ಕಾಲದಲ್ಲಿ ಮಣಿಪ್ರವಾಳ ರಚನಾವಿಧಾನವು ಪ್ರಚಲಿತವಾಗಿದ್ದಿತೆಂದೂ ಸೂಚಿಸುತ್ತಿದೆ.

8.3.1. ಪಾಲ್ಕುರಿಕಿ ಸೋಮನಾಥನ ನಂತರ ಮಣಿಪ್ರವಾಳವು ವಿರಳವಾಗಿಯಾದರೂ ಪ್ರಚಾರದಲ್ಲಿತ್ತೆಂದು ನಾವು ತಿಳಿಯಬಹುದು. ತಿಕ್ಕನ ತನ್ನ 'ನಿರ್ವಚನೋತ್ತರ ರಾಮಾಯಣ'ದ ಪೀಠಿಕೆಯಲ್ಲಿ 'ಜಾತ್ಯಮುಗಾಮಿನೊಪ್ಪಯಿನ ಸಂಸ್ಕೃತಮೆಪ್ಪುಡುsಜೊನ್ಪ' ಎಂದು ವಾಗ್ದಾನ ಮಾಡಿರುವುದೂ ಸುಬಾದ್ಯಂತಗಳಾದ ಸಂಸ್ಕೃತ ಪದಗಳನ್ನು ತೆಲುಗು ಪದಗಳೊಂದಿಗೆ ಸೇರಿಸಿ ಪ್ರಕಟಿಸಬಾರದೆಂಬ ನಿಷೇಧವನ್ನೇ ಸೂಚಿಸುತ್ತದೆ. ಆತನಿಗೆ ಸಮಕಾಲೀನನೇ ಆದ ಕೇತನನೂ ಈ ವಿಷಯವನ್ನೇ ತಿಳಿಸಿದ್ದಾನೆ. ಆತನು ತನ್ನ 'ಆಂಧ್ರ ಭಾಷಾ ಭೂಷಣ'ದಲ್ಲಿ ವೃಷೇಣ, ದಕ್ಷಾಯ, ಪಕ್ಷಿಭಿಃ, ಪುತ್ರಸ್ಯ ಎಂಬ ಸಂಸ್ಕೃತ ವಿಭಕ್ತ್ಯಂತಗಳಾದ ಪದಗಳನ್ನು ; ಅಸ್ತಿ, ಪ್ರಯಾತಿ, ಗಾಯಂತಿ, ಭುಂಕ್ತೇ ಮುಂತಾದ ಕ್ರಿಯಾರೂಪಗಳನ್ನು ; ಗತ್ವಾ, ಹಸಿತ್ವಾ, ಪ್ರಕಾಶ್ಯ, ಸಂತ್ಯಜ್ಯ ಮುಂತಾದ ಕ್ತ್ವಾರ್ಥಗಳನ್ನು ; ಲ್ಯಬಂತಗಳನ್ನು ; ಗಂತುಂ, ಹಂತುಂ ಮುಂತಾದ ತುಮುನ್ನರ್ಥಕ ರೂಪಗಳನ್ನು ತೆಲುಗಿನಲ್ಲಿ ಪ್ರಯೋಗಿಸಬಾರದೆಂದು ನಿಯಮವನ್ನು ಹಾಕಿದನು[10]. 'ಆಂಧ್ರ ಶಬ್ದ ಚಿಂತಾಮಣಿ'ಯಲ್ಲಿನ 'ನಪರಾಸ್ಯವ್ಯಯ ಸುಪ್ತಿಜ್‌ಕ್ತ್ವಾತುಮುನಾಂ' ಎಂಬ ಸೂತ್ರವೂ ಸಹ ಈ ವಿಷಯವನ್ನೇ ತಿಳಿಸುತ್ತಿದೆ.

---

10 ಸೀ ।। ವೃಕ್ಷೇಣ ದಕ್ಷಾಯ ಪಕ್ಷಿಬಿಃ ಪುತ್ರಸ್ಯಯನು ವಿಭಕ್ತುಲು ತೆನುಂಗುನಕುsಜೊರವು
ಅಸ್ತಿ ಪ್ರಯಾತಿ ಗಾಯಂತಿ ಭುಂಕ್ತೇಸಂತಿ ನಯತಿಸ್ಮರತಿಯನು ಕ್ರಿಯಲು ಸೊರವು
ಗತ್ವಾ ಹಸಿತ್ವಾ ಪ್ರಕಾಶ್ಯ ಸಂತ್ಯಜ್ಯನಾsದನರು ಕ್ತ್ವಾಂತಲ್ಯಬಂತಮುಲು ಸೊರವು
ಗಂತುಂ ಪುರೀಂ ರಿಪುಂ ಹಂತುಂ ಸುತಂ ಪಾತುಮನು ತುಮುನ್ನಂತಂಬುಲರಯsಜೊರವು

ಗೀ ।। ಅಪಿ ಚ ತು ಹಿ ವೈ ನ ವಾ ನ ನುಲನsಗs ಬೆಕ್ಕು
ಲವ್ಯಯಂಬುಲು ಚೊರವೆಂದುನಾಂಧ್ರ ಕವಿತನ್
ಬೆಜಿಪದಂಬುಲ ತೋಡನು ದೊರಲಿ ನಿಲ್ಚು
ನವಿ ತೆಲುಂಗುಲು ಗಾವಿಂತುನಭಿಮತಮುಗ ।।

ಆಂಧ್ರ ಭಾಷಾಭೂಷಣ

8. 3. 2. ನಮ್ಮ ವ್ಯಾಕರಣಗಳಲ್ಲಿ ಅನುಕರಣ ವಿಧಾನವನ್ನು ಕುರಿತ ರಚನೆಗಳಾದ ಸೂತ್ರಗಳೂ ಈ ವಿಷಯವನ್ನೇ ತಿಳಿಸುತ್ತವೆ. ಅನುಕರಣ ರಹಿತವಾಗಿ ಸಂಸ್ಕೃತ ವಾಕ್ಯಗಳನ್ನು ಪ್ರಯೋಗಿಸಬಾರದೆಂದು ಒಂದಾನೊಂದು ಕಡೆ ಅನುಕರಣ ರಹಿತವಾಗಿ ಸಂಸ್ಕೃತವಾಕ್ಯವು ಕಂಡುಬಂದು, 'ಜಯಪದಂಬನುಕರಣ ವಿರಹಿತಂಬ ತಜಿಚುಗನ್' ಎಂಬ ಸೂತ್ರವನ್ನು ಬಿಟ್ಟ ಮಹಾಕವಿಗಳ ರಚನೆಗಳಲ್ಲಿ ಕಾಣಿಸಿಕೊಂಡ ಮಣಿಪ್ರವಾಳಚ್ಛಾಯೆಗಳನ್ನು ಪರಿಹರಿಸುವುದಕ್ಕೆಂದೇ ನಾವು ಗುರ್ತಿಸಬೇಕು.

8.4. ನನ್ನಯ್ಯ ಲಕ್ಷ್ಯರೂಪದಲ್ಲಿಯೂ, ತಿಕ್ಕನ, ಕೇತನ, ಆಂಧ್ರಶಬ್ದ ಚಿಂತಾಮಣಿಕಾರರು ಲಕ್ಷಣ ರೂಪದಲ್ಲಿಯೂ ಮಣಿಪ್ರವಾಳವನ್ನು ನಿಷೇಧಿಸಿದ್ದರೂ, ಆಗಾಗ ಸಂಸ್ಕೃತ ವಿದ್ವಾಂಸರು ಹಾಸ್ಯಕ್ಕಾಗಿ ವಿನೋದ ಕ್ರೀಡೆಯಾಗಿ ಮಣಿಪ್ರವಾಳದಲ್ಲಿ ಶ್ಲೋಕಗಳನ್ನು ರಚಿಸುತ್ತಿದ್ದರೆಂಬುದಕ್ಕೆ ಉದಾಹರಣೆಗಳು :[11]

ತಂಡುಲಾಲು ಗೃಹಮುನಂದು ನಸಂತಿ
ತಿಂಡಿಕೈತೆ ಬಹುಮಂದಿ ವಸಂತಿ
ಕುಂಡಲೆಲ್ಲ ಗೃಹಮುನಂದು ಲುಠಂತಿ
ರಂಡನಾ ಕೊಡಕುಲೆಲ್ಲ ಹಸಂತಿ.

ಓಸಿ, ಓಸಿ ವಿನವೇ ಮಮ ವೃತ್ತಂ
ಕಾಶಿ ವೆಡಿತಿನಿಗದೇ ಕಮಲಾಕ್ಷೀ
ನೀಕು ಪುಣ್ಯಮು ಗದೇ ಮೃಗನೇತ್ರೀ
ತೀಯವೇ ಸ್ತನ ತಟೋಪರಿವಸ್ತ್ರಂ

ಪಾಂಥ ಪಂಚಕಮು :

....
ದಟ್ಟ ಮೈನ ವನಮಸ್ತಿ ಪುರಸ್ತಾತ್
ಚೆಟ್ಟುಕಿಂದ ವಿರಯಸ್ವ ಯಥೇಚ್ಛಂ.

ಹೀಗೆ ವಿಭಕ್ತ್ಯಂತಗಳಾದ ಸಂಸ್ಕೃತ ಶಬ್ದಗಳನ್ನು ಯಥಾವತ್ತಾಗಿ ಪ್ರಯೋಗಿಸುವುದು ಮಾತ್ರವೇ ಅಲ್ಲದೆ ತೆಲುಗು ಶಬ್ದಗಳಿಗೂ ಸಂಸ್ಕೃತ ವಿಭಕ್ತಿಗಳನ್ನು ಹತ್ತಿಸಿ ಪ್ರಯೋಗಿಸುವುದೂ ಮಣಿಪ್ರವಾಳದಲ್ಲುಂಟು. ಮಲಯಾಳದಲ್ಲಿಯೂ ಹೀಗೆಯೇ ಮಲಯಾಳ ಶಬ್ದಗಳಿಗೆ ಸಂಸ್ಕೃತ ವಿಭಕ್ತಿಗಳನ್ನು ಹತ್ತಿಸಿ ಪ್ರಯೋಗಿಸುವ ಸಂಪ್ರದಾಯವನ್ನು ಕಾಣಬಹುದು. ಚಾಟುಪದ್ಯ ಮಣಿಮಂಜರಿ ದ್ವಿತೀಯ ಭಾಗ, ಪ್ರಥಮ ಸಂಪುಟದಲ್ಲಿ ಸೇರಿಸಿದ ಈ ಶ್ಲೋಕವನ್ನು ನೋಡಬಹುದು. (ಪೆದ್ದಿಭಟ್ಟು

---

[11] ಇವುಗಳನ್ನು ಜ್ಞಾಪಿಸಿಕೊಂಡು ನನಗೆ ತಿಳಿಸಿದ ಆಚಾರ್ಯ ದಿ। ಶ್ರೀ ಕುಂಭಂಪಾಟಿ ಸುಬ್ರಹ್ಮಣ್ಯ ಶಾಸ್ತ್ರಿಯವರಿಗೆ ನನ್ನ ಕೃತಜ್ಞತೆಗಳು

ಎಂಬ ಸಂಸ್ಕೃತ ಕವೀಶ್ವರನು ವೆಲುಗೋಟಿ ಸಿಂಗಿಭೂಪಾಲನ ಕಾಲದವನು. ಮಲ್ಲಿನಾಥನ ಹೆಸರಿನಲ್ಲಿ ಈತನೇ ಗ್ರಂಥವನ್ನು ರಚಿಸಿದನೆಂದು ಪ್ರತೀತಿ. ಒಂದು ದಿನ ಪೆದ್ದಿಭಟ್ಟು ಹರುಕು ಹರುಕಾದ ಬಟ್ಟೆ ಸುತ್ತಿಕೊಂಡು ಡೊಂಕು ಕೊಂಕಾದ ಕೋಲನ್ನು ಕೈಯಲ್ಲಿ ಹಿಡಿದುಕೊಂಡು ಸಿಂಗಭೂಪತಿಯ ವಿದ್ವತ್ಸಭೆಗೆ ಹೋಗುತ್ತಿರಲು ದಾರಿಯಲ್ಲಿ ಯಾರೋ ಆತನನ್ನು ಕೇಳಿದರಂತೆ ! "ಶಾತಸವರೇ ರಾಜಸಭೆಗೆ ಇಂಥ ವೇಷದಲ್ಲಿ ಹೋಗುತ್ತಿರುವಿರಿ ?" ಎಂದದ್ದಕ್ಕೆ ಉತ್ತರವಾಗಿ ಈ ಶ್ಲೋಕ)

ಕಿಂ ವಾಸಸಾ ಚೀಕರಿ ಬಾಕಿರೇಣ
ಕಿಂ ದಾರುಣಾ ವಂಕರ ಟಿಂಕರೇಣ
ಶ್ರೀ ಸಿಂಗಭೂಪಾಲ ವಿಲೋಕನಾರ್ಥಂ
ವೈದುಷ್ಯಮೇಕಂ ವಿದುಷಾಂ ಸಹಾಯಂ.

ಇಲ್ಲಿ ಚೀಕರಿ ಬಾಕರಿ, ವಂಕರ ಟಿಂಕರ, ಎಂಬ ತೆಲಗು ಶಬ್ದಗಳಿಗೆ ಸಂಸ್ಕೃತ ವಿಭಕ್ತಿ ಪ್ರತ್ಯಯಗಳನ್ನು ಹತ್ತಿಸಿ ಶ್ಲೋಕದಲ್ಲಿ ಪ್ರಯೋಗಿಸಲಾಗಿದೆ. ಇದೂ ಮಣಿಪ್ರವಾಳ ರಚನೆಯೇ ಆಗುತ್ತದೆ.

8.5. ಕಾವ್ಯಗಳಲ್ಲಿ ತೆಲುಗು ವಾಕ್ಯಗಳ ನಿರ್ಮಾಣದೊಂದಿಗೆ ವಿಭಕ್ತ್ಯಂತಗಳಾದ ಸಂಸ್ಕೃತ ಶಬ್ದಗಳನ್ನು ಪ್ರಯೋಗಿಸುವುದನ್ನು ನಿಷೇಧಿಸಿದ್ದು ಮಾತ್ರವೇ ಅಲ್ಲದೆ ಸಮಾಸ ಕಲ್ಪನೆಯಲ್ಲಿಯೂ ಸಂಸ್ಕೃತ ಶಬ್ದದೊಂದಿಗೆ ವಿಕೃತಿ ಶಬ್ದವು ಸಮನಿಸುವುದಿಲ್ಲ ವೆಂದೂ ಅವರು ನಿಯಮದನ್ನು ಹಾಕಿದರು. ಹೀಗೆ ನಿಯಮವನ್ನು ಮಾಡುವುದರಿಂದ ಸಮಾಸ ಕಲ್ಪನೆಯಲ್ಲಿ ಬಹುಶಃ ಮಣಿಪ್ರವಾಳ ಪದ್ಧತಿ ಕಾಣುತ್ತಿದ್ದಿತೆಂದೂ ನಾವು ತಿಳಿಯಬೇಕಾಗಿದೆ. ಈ ನಿಯಮವನ್ನೂ ಅತಿಕ್ರಮಿಸಿ ವ್ಯವಹಾರ ಪ್ರಾಬಲ್ಯ ದಿಂದೆನ್ನುವಂತೆ ನನ್ನಯಾದಿ ಕೆಲವು ಕವಿಗಳು, ಕಪಿಲ ಕಣ್ಣುಗಳು, (ಕಪಿಲ ಕನ್ನುಲು), ಜೀವನಾಡಿ (ಜೀವ ಗಜ್ಜ) ಸಮಾಸಗಳನ್ನು ಪ್ರಯೋಗಿಸಲು ಅವು ಆರ್ಯ ವ್ಯವಹಾರಗಳಾದುದರಿಂದ ಅವುಗಳನ್ನು ಬಳಸಿಕೊಂಡರು. ಸೋಮನಾದಿ ಕೆಲವು ಕವಿಗಳ ರಚನೆಗಳಲ್ಲಿ ಇಂಥ ಮಣಿಪ್ರವಾಳ ಸಮಾಸ ಕಲ್ಪನೆಯು (ವ್ಯಾಕರಣ ದೃಷ್ಟಿಯಲ್ಲಿ ಇವು ಅರಿಸಮಾಸಗಳು) ಹೆಚ್ಚಾಗಿ ಕಾಣಬಹುದು. ಇಂದಿನ ವ್ಯವಹಾರದಲ್ಲಿಯೂ, ಅಂಥ ಸಮಾಸಗಳು ಶುದ್ಧದಂಡ, ಶುದ್ಧತಪ್ಪು, ಹಸ್ತವಾಸಿ ಪ್ರಯೋಗವಾಗುತ್ತಲೇ ಇರುತ್ತವೆ.

8.6. ಇವಲ್ಲದೆ ಶಿಷ್ಟವ್ಯವಹಾರದಲ್ಲಿ ಇಂದಿಗೂ ಪ್ರಯೋಗವಾಗುವ ಕಾಲಕ್ರಮೇಣ, ದೃಷ್ಟ್ಯಾ, ರೂಪೇಣ, ಪ್ರಾಯಶಃ, ಬಹುಶಃ, ವಸ್ತುತಃ, ಅಥವಾ ಇನ್ನೂ ಅನೇಕ ಸಬಾದ್ಯಂತ ಸಂಸ್ಕೃತ ಶಬ್ದಗಳು ಯಥಾವತ್ತಾಗಿ ಕಂಡುಬರುತ್ತಿರುತ್ತವೆ. ಅಂಥ ಪ್ರಯೋಗಗಳೂ ವಿವಿಧ ಕಾಲಗಳಲ್ಲಿ ವ್ಯವಹರಿಸುತ್ತಾ ಬಂದು, ಇಂದಿಗೂ

ವ್ಯವಹಾರದಲ್ಲಿ ಉಳಿದು ನಿಂತಿರುವ ಮಣಿಪ್ರವಾಳದ ಅವಶೇಷಗಳಾಗಿ ಭಾವಿಸಬಹುದು.

ಸಿದ್ಧಾಂತ

9. ಚಾರಿತ್ರಿಕ ಕಾರಣಗಳಿಂದಲೋ, ಸಾಂಸ್ಕೃತಿಕ ಕಾರಣಗಳಿಂದಲೋ ಒಂದು ಭಾಷೆ ಮತ್ತೊಂದು ಭಾಷೆಯ ಮೇಲೆ ಪ್ರಾಬಲ್ಯವನ್ನು ಪಡೆಸಿದಾಗಲೂ, ಎರಡು ಭಾಷೆಗಳಿಗೂ ಸಂಪರ್ಕ ಸಂಭವಿಸಿದಾಗಲೂ ವ್ಯವಹಾರವು ಮೊದಲು ಮಣಿಪ್ರವಾಳದಲ್ಲಿಯೇ ಜರುಗುವುದು ಸಹಜ. ಕೆಲವು ರಚನೆಗಳು ಪ್ರಾರಂಭದಲ್ಲಿ ಅಂಥ ಭಾಷೆಯಲ್ಲಿ ಕಾಣಿಸಿಕೊಳ್ಳುವುದು ಸಂಭಾವ್ಯ. ಕ್ರಮವಾಗಿ ಪ್ರಾಬಲ್ಯಪಡೆಸಿದ ಆ ಭಾಷೆಯಲ್ಲಿನ ಪದಗಳನ್ನು ತಮ್ಮ ತಮ್ಮ ಭಾಷಾಪದ್ಧತಿಗಳಿಗೆ ಅನುಗುಣವಾಗಿ ತತ್ಸಮೀಕರಿಸಿಕೊಂಡು ಇತರೆ ಭಾಷೆಗಳು ಪ್ರಾಬಲ್ಯಹೊಂದುತ್ತಿದ್ದುವು. ಹಾಗಲ್ಲದೇ ಮಣಿಪ್ರವಾಳವೇ ಒಂದು ವಿಶಿಷ್ಟ ಕಾವ್ಯ ಶೈಲಿಯಾಗುವುದೂ, ಅದರಲ್ಲಿಯೇ ವಿಸ್ತಾರವಾದ ಸಾಹಿತ್ಯ ಬೆಳೆಯುವುದು–ಆಶ್ಚರ್ಯಕರ ಸಂಗತಿ ! ಆದಿಕಾಲದಲ್ಲಿ ಅದು ಸಂಸ್ಕೃತ ಪ್ರಾಕೃತ ಭಾಷಾ ಮಿಶ್ರವಾಗಿದ್ದು ಕ್ರಮವಾಗಿ ಮಧ್ಯಯುಗದಲ್ಲಿ ಸಂಸ್ಕೃತ ದೇಶಭಾಷೆಗಳು ಮಿಶ್ರವಾದ ಭಾಷೆಯಾಗಿ ಪರಿಣಮಿಸಿತು. ದಕ್ಷಿಣ ದೇಶ ಭಾಷೆಗಳು ಅದರ ಪ್ರಭಾವವನ್ನು ಕ್ರಮವಾಗಿ ತೊಲಗಿಸಿಕೊಂಡು, ಸ್ವಂತ ಭಾಷಾ ಶೈಲಿಗಳನ್ನು ರಕ್ಷಿಸಿಕೊಂಡು ಮುಂದುವರಿದವು. ಆದರೆ ಮಲಯಾಳದಲ್ಲಿ ಮಾತ್ರ ಅದು ಕೆಲವು ಕಾಲ ಪ್ರಭಾವವನ್ನು ಪಡೆಯಿತು. ಆದರೆ ಆಧುನಿಕ ಕಾಲದಲ್ಲಿ ಅಲ್ಲೂ ಶುದ್ಧ ಮಲಯಾಳವೇ ಪ್ರಮುಖವಾಗಿ ನಿಂತಿತು. ಇಂಗ್ಲಿಷ್ ಭಾಷಾ ಪ್ರಾಬಲ್ಯದಿಂದ ಇಂದಿನ ದೇಶ ಭಾಷಾ ವ್ಯವಹಾರದಲ್ಲಿಯೂ ಮಣಿಪ್ರವಾಳವನ್ನು ಕಾಣಬಹುದು. ಈಗ ಸಂಸ್ಕೃತದ ಸ್ಥಾನವನ್ನು ಇಂಗ್ಲಿಷ್ ಭಾಷೆ ಆಕ್ರಮಿಸಿದೆ.

ಆಧಾರ ಗ್ರಂಥಗಳು

1. P. K. Parameswaran Nair : History of Malayalam Literature Sahitya Akademi, New Delhi 1967
2. Dr. T. P. Meenakshisundaram : History of Tamil Literature Annamalai University, Chidambaram
3. Dr. T. P. Meenakshisundram : Tamil and other cultures. (Exterior Relations of Tamil) Paper Submitted to III conference of International studies – Tamils, Paris 1970

4. Dravidian Linguistic Association – Proceedings of the First All Indian Conference of Dravidian Linguists held at Trivandrum. 1971

5. Unknown Authorship – Lilatilakam

6. Veeracholiam

7. ಆಂಧ್ರಪ್ರದೇಶ್ ಸಾಹಿತ್ಯ ಅಕಾಡೆಮಿ – ದಕ್ಷಿಣ ಭಾರತ ಸಾಹಿತ್ಯಮುಲು

8. ಡಾ॥ ದಿವಾಕರ್ಲ ವೆಂಕಟಾವಧಾನಿ – ಆಂಧ್ರ ವಾಙ್ಮಯಾರಂಭ ದಶ – ಪ್ರಾಜ್ಞನ್ನಯ ಯುಗಮು 1960

9. ಬಂಡಾರು ತಮ್ಮಯ್ಯ (ಸಂ) – ಶ್ರೀ ವೃಷಾಧಿಪ ಶತಕಮು – ಶ್ರೀ ನಿರ್ಮಲ ಶೈವಸಾಹಿತೀ ಗ್ರಂಥ ಮಾಲಿಕ, ಕಾಕಿನಾಡ (ಪ್ರ) 1969

10. ಕೋರಾಡ ರಾಮಕೃಷ್ಣಯ್ಯ : ದಕ್ಷಿಣದೇಶ ಭಾಷಾ ಸಾರಸ್ವತಮುಲು–ದೇಶಿ (ಪ್ರ) 1954

ರೆಕ್ಕೆ ಹುಳ

ಎಂ. ಎನ್. ವ್ಯಾಸರಾವ್

ಈ ಹುಳಕ್ಕೆ ಬಾಲ ನಿಮಿರಿಸುವುದೇ ಕಷ್ಟ
ಪಚ್ಚೆಗಾಪರಿಸಿದ ಪೊಟರೆಗಂಟಿಕೊಂಡೇ ಕುಳಿತ
ಬಿಸಿಲ ಹಬೆ ತಟ್ಟಿದರೆ ಸಾಕು
ರೆಕ್ಕೆ ಮೂಡುತ್ತದೆ, ಬಾಲ ಸುತ್ತಿ ಮೊಟಿ
ಹಾರಿ ಕೊಂಬೆಗೆ ಜೋತಾಡುತ್ತದೆ.

ಹುಳ ಸುತ್ತಿ ಸುತ್ತಿ ಹತ್ತಿ ಇಳಿದು ಎಲೆ
ಹರಿದು ಹಲ್ಲು ಹರಿದರೂ
ಹಸಿವೆಯ ಕಡಾಯಿ
ಯಾರೋ ಬಾಲ ಮೀಟಿದರೆ ತೆರೆದ ಕಿಸಿ ಬಾಯಿ
ಅತ್ತ ಇತ್ತ ಸುತ್ತ ಮುತ್ತ ಸುತ್ತಿ ತಿರುಗಿ
ಮತ್ತೆ ಪೊಟರೆ ಹೊಕ್ಕರೂ
ಹುಳದ ಉದ್ದಗಲ ಒಂದಿಂಚೂ ಬೆಳೆಯುವುದಿಲ್ಲ

ಆದರೂ ಹುಳಕ್ಕೆ ಹೆಮ್ಮೆ
ತನ್ನ ರಂಗು ರಂಗಿನ ಗುಲಾಬಿ ಬಣ್ಣದ ಬಾಲ
ಆಡಿಸುವುದರಲ್ಲೇ ಖುಶಿ
ನೈಲಾನ್ ಗರಿ ಹಚ್ಚಿದ ರೆಕ್ಕೆ ಬಡಿದು
ನೆರಳು ಬೀಳದಿದ್ದರೂ ಕುಂತೂ ಕುಂತೂ ಜಿದಕಿ
ಹಚ್ಚಿ ಹೊಯ್ಯುವ ಹುಚ್ಚು ತವಕ

ಬಾಲ ಮುಟ್ಟಿದರೆ ಕೊಕ್ಕು ಹೊಗಳಿದರೆ
ಬಳಿದ ಬಣ್ಣದೊಳಪದರವಷ್ಟರಲ್ಲೇ ಸುತ್ತಿ
ಹೊಗಳು ಕೀಟಗಳ ಸುತ್ತ ಸಡ ಸಡ ಫಡ ಫಡ
ರೆಕ್ಕೆ ಬಡಿದು
ಬೆಂಕಿ ತಗಲುವ ತನಕ ಗಿರಿಗಿಟ್ಟಲೆ ಸುತ್ತಿ ಹಾಡತ್ತೆ
ಹಾಡಿ ಹಾಡಿ ರೆಕ್ಕೆ ಬಡಿಯತ್ತೆ

ವೇದಾಂತ ಕೇಸರಿ ಸ್ವಾಮಿ ರಾಮತೀರ್ಥ

ಎಸ್. ಬಾಲಚಂದ್ರ ರಾವ್

> "ವೇದಾಂತವನ್ನು ನಿತ್ಯ ಜೀವನದಲ್ಲಿ ಪ್ರಯೋಗಿಸದೆ ಹೋದರೆ ಆದರ ಉಪಯೋಗತಾನೆ ಏನು ? ವೇದಾಂತವಿರುವುದು ಪುಸ್ತಕಗಳಲ್ಲಿ ಅಚ್ಚು ಹಾಕಿಸಿ, ಪೆಟ್ಟಿಗೆಗಳಲ್ಲಿ ಭದ್ರವಾಗಿಸಿ ಪುಸ್ತಕ ಕ್ರಿಮಿಗಳಿಗೆ ಆಹಾರವಾಗಿಸುವುದಕ್ಕಲ್ಲ. ಅದನ್ನು ನೀವು ಜೀವಿಸಬೇಕು...ವೇದಾಂತವು ಪೂರ್ಣವಾದ ಸತ್ಯ (ಚೂರುಚೂರಾದ ಸತ್ಯವಲ್ಲ) ; ಅದನ್ನು ಪೂರ್ಣವಾಗಿಯೇ ಜೀವಿಸದಿದ್ದರೆ, ಅದು ನಾಶಮಾಡುತ್ತದೆ"
>
> ಸ್ವಾಮಿ ರಾಮತೀರ್ಥರು

ಈ ವರ್ಷ ದೇಶದಾದ್ಯಂತ ಸ್ವಾಮಿ ರಾಮತೀರ್ಥರ ಜನ್ಮ ಶತಾಬ್ದಿಯನ್ನು ಆಚರಿಸುತ್ತಿದ್ದೇವೆ. ಮಹಾತ್ಮರ ಜಯಂತಿಗಳು ಮತ್ತು ಜನ್ಮಶತಾಬ್ದಿಗಳು ಒಂದು ರೀತಿಯ ವಿಶೇಷವಾದ ಪರ್ವಕಾಲಗಳು. ಆ ಮಹಾನುಭಾವರು ಲೋಕ ಕಲ್ಯಾಣಾರ್ಥವಾಗಿ ಯಾವ ಜೀವಂತ ಆದರ್ಶಗಳನ್ನು ತಾವು ತಮ್ಮ ಸ್ವಂತ ಜೀವನದಲ್ಲಿ ಅಳವಡಿಸಿಕೊಂಡು, ಅಂತಹ ಅನುಭವದ ಹಾಗೂ ಅನುಭಾವದ ಅಮೃತಪ್ರದವಾದ ಪರಿಪಾಕವನ್ನು ಜನಸಾಮಾನ್ಯರಲ್ಲಿ ಹಂಚಿ ಮುಂದಿನ ಪೀಳಿಗೆಗಳಿಗೋಸ್ಕರ ಬೋಧನೆಯ ರೂಪದಲ್ಲಿ ಹಾಗೂ ಶಿಷ್ಯ ಪರಂಪರೆಯ ಮೂಲಕ ಅಕ್ಷಯವಾಗಿಸುತ್ತಾರೆ. ಅಂತಹ ಮಹಾತ್ಮರ ಜಯಂತಿ ಮತ್ತು ಜನ್ಮಶತಾಬ್ದಿಗಳಂತಹ ಪರ್ವ ಕಾಲಗಳಲ್ಲಾದರೂ ಅವರ ಜೀವನ ಮತ್ತು ಅವರು ಬೋಧಿಸಿದ ಜೀವನದ ಧ್ಯೇಯಗಳನ್ನು ಸ್ಮರಿಸಿ, ಶ್ರವಣ ಮನನ ನಿಧಿಧ್ಯಾಸನಗಳಿಂದ ನಾವೆಲ್ಲರೂ ಸಾಧನಾಮಾರ್ಗವನ್ನು ಹಿಡಿಯಲು ಸ್ಫೂರ್ತಿಯನ್ನು ಪಡೆಯೋಣ. ಸ್ವಾಮಿ ರಾಮತೀರ್ಥರು ಅಂತಹ ಮಹಾತ್ಮರ ತಾರಾಪುಂಜದಲ್ಲಿ ಒಂದು ಪ್ರಥಮ ದರ್ಜೆಯ ತಾರೆ.

ಸ್ವಾಮಿ ರಾಮತೀರ್ಥರು ಕೇವಲ ಮೂವತ್ತುಮೂರು ವರ್ಷಗಳ ಕಾಲ ಬದುಕಿದ ಅಲ್ಪಾಯುಷಿ. ಆದರೆ, ಈ ಅಲ್ಪಕಾಲಾವಧಿಯಲ್ಲಿ ಒಂದೊಂದು ಕ್ಷಣವನ್ನೂ ಅಮೃತಮಯವನ್ನಾಗಿಸಿದರು—ಸಾಮಾನ್ಯ ಜನರಂತೆ ಸುಮ್ಮನೆ ಕಳೆಯಲಿಲ್ಲ! ಅವರ ಜೀವನವು ಸತತವೂ ಮಹಾಶಕ್ತಿಯಿಂದಲೂ, ಶ್ರದ್ಧೆಯಿಂದಲೂ ಕೂಡಿ ಪರಿಪೂರ್ಣತೆಯೆಡೆಗೆ ಅನಂತಸ್ಪರ್ಶಿಯಾದ ವ್ಯಕ್ತಿತ್ವವನ್ನು ಹೊಂದಿತ್ತು. ಸ್ವಾಮಿ ರಾಮರು ಒಂದು ಆದರ್ಶ ತತ್ವವೇ ಹೊರತು ಕೇವಲ ಒಂದು ವ್ಯಕ್ತಿಯಲ್ಲ.

ಅವರ ಜೀವನ ಚರಿತ್ರೆಯು — ಕೇವಲ ಒಬ್ಬ ವ್ಯಕ್ತಿಯ ಜೀವನ ಚರಿತ್ರೆಯಾಗಿರದೆ — ಪಾಶವೀ ಮಾನವತೆಯಿಂದ ದೈವೀಮಾನವತೆಯೆಡೆಗೆ ಸಾಗುತ್ತಿರುವ ಜೀವಾತ್ಮನ ಹೋರಾಟದ ಕಥನವಾಗಿದೆ.

ಮುಂದೆ ಸ್ವಾಮಿ ರಾಮತೀರ್ಥರೆಂದು ಪ್ರಸಿದ್ಧರಾದ "ತೀರ್ಥರಾಮ ಗೋಸ್ವಾಮಿ" ಯವರು ಪಶ್ಚಿಮ ಪಂಜಾಬಿನ ಗುಜರನ್‌ವಾಲಾ ಜಿಲ್ಲೆಯ ಮುರಲೀವಾಲಾ ಎಂಬಲ್ಲಿ ಕ್ರಿ.ಶ. ೧೮೭೩ರ ಅಕ್ಟೋಬರ್ ೨೨ ರಂದು — ಸರಿಯಾಗಿ ನೂರು ವರ್ಷಗಳ ಹಿಂದೆ, ದೀಪಾವಳಿ ಹಬ್ಬದ ಮಾರನೆಯ ದಿನ — ಜನ್ಮ ತಾಳಿದರು. ಗೋಸ್ವಾಮಿ ತುಳಸೀದಾಸರ ವಂಶಸ್ಥರು. ಶಿಶುರಾಮನು ತಾನು ಜನಿಸಿದ ಕೆಲವೇ ದಿನಗಳಲ್ಲಿ ತಾಯಿಯನ್ನು ಕಳೆದುಕೊಂಡ. ಈತನ ಎರಡನೆಯ ವಯಸ್ಸಿನಲ್ಲಿ ಒಬ್ಬ ಪಂಡಿತರ ಎಳೆಯ ಹೆಣ್ಣು ಕೂಸಿನೊಂದಿಗೆ ನಿಶ್ಚಿತಾರ್ಥವಾಗಿ, ಹತ್ತನೆಯ ವಯಸ್ಸಿನಲ್ಲಿ ವಿವಾಹವಾದನು. ಆಗ ಶಿಶುವಿವಾಹದ ಕಾಲವಷ್ಟೆ! ತನ್ನ ಪ್ರಾಥಮಿಕ ಶಿಕ್ಷಣವನ್ನು ತನ್ನ ಊರಿನಲ್ಲಿಯೇ ಮುಗಿಸಿ, ಪ್ರೌಢಶಿಕ್ಷಣಕ್ಕಾಗಿ ಗುಜರನ್‌ವಾಲಾಗೆ ತೆರಳಿ, ಅಲ್ಲಿ ತನ್ನ ಹದಿನೈದನೆಯ ವಯಸ್ಸಿನಲ್ಲಿ ಮೆಟ್ರಿಕ್ಯುಲೇಷನ್ ಮುಗಿಸಿಕೊಂಡ ನಂತರ ಲಾಹೋರ್ ಪಟ್ಟಣದ ಫೋರ್‍ಮನ್ ಕ್ರಿಶ್ಚಿಯನ್ ಕಾಲೇಜನ್ನು ಸೇರಿದರು.

ಗುಜರನ್‌ವಾಲಾದಲ್ಲಿರಬೇಕಾದರೆ ಭಗತ್‌ಧನ್ನಾರಾಮ್ ಎಂಬುವರ ಆತ್ಮೀಯ ಆಶ್ರಯದಲ್ಲಿ ತೀರ್ಥರಾಮನು ಬೆಳೆದ. ಭಗತ್ ಧನ್ನಾರಾಮರು ವೃತ್ತಿಯಲ್ಲಿ ತಾಮ್ರಕಾರರಾದರೂ ಆಂತರಿಕವಾಗಿ ಸಾತ್ವಿಕ ಜೀವನವನ್ನು ನಡೆಸಿ ಆಧ್ಯಾತ್ಮಿಕ ಪ್ರಭೆಯನ್ನು ಹೊಂದಿದವರಾಗಿದ್ದರು. ಬಾಲಕನಾದ ತೀರ್ಥರಾಮನು ಭಗತ್ ಧನ್ನಾರಾಮರಲ್ಲಿ ಇದ್ದ ಅಸಾಧಾರಣವಾದ ದೈವಿಕತೆಯಿಂದ ಪ್ರಭಾವಿತನಾಗಿ ಅವರನ್ನು ಸಹಜವಾಗಿ ತನ್ನ ಜೀವನವನ್ನು ಸಾರ್ಥಕಗೊಳಿಸುವ ಆಧ್ಯಾತ್ಮಗುರುಗಳನ್ನಾಗಿ ಆಯ್ಕೆ ಮಾಡಿದನು. ತನ್ನ ಸದ್ಗುರುವಿನ ಸಂಪರ್ಕ ಉಂಟಾದಾಗಿನಿಂದ ರಾಮನ ಜೀವನವು ಬಹಳಮಟ್ಟಿಗೆ ಅವರಿಂದ ಪ್ರಭಾವಿತವಾಗಿ, ಒಂದು ನಿರ್ದಿಷ್ಟ ಗುರಿಯನ್ನು ಸಾಧಿಸಲಾರಂಭಿಸಿತು.

ತೀರ್ಥರಾಮನು ಕಾಲೇಜ್ ವಿದ್ಯಾಭ್ಯಾಸಕ್ಕಾಗಿ ಲಾಹೋರ್ ಪಟ್ಟಣವನ್ನು ಸೇರಿದನಂತರವೂ ತನ್ನ ಗುರುದೇವನೊಂದಿಗೆ ಪತ್ರಗಳ ಮೂಲಕ ಬಹಳ ಸಂಪರ್ಕವನ್ನು ಹೊಂದಿದ್ದ. ಆತ ಧನ್ನಾರಾಮರಿಗೆ ವಾರಕ್ಕೆ ಮೂರು ಬಾರಿಯಾದರೂ ಪತ್ರ ಬರೆದು ಸಣ್ಣಸಣ್ಣ ವಿಷಯಗಳಲ್ಲೂ ಅವರ ಸಲಹೆಗಳನ್ನು ಕೇಳುತ್ತಿದ್ದ. ರಾಮನಲ್ಲಿ ಎದ್ದು ಕಾಣಿಸುತ್ತಿದ್ದ ಒಂದು ಗುಣವೆಂದರೆ ಮಗುವಿನ ಮುಗ್ಧತೆ ಮತ್ತು ಸರಳತೆ. ಜನ್ಮಕೊಟ್ಟ ತಾಯಿಯನ್ನು ಕಳೆದುಕೊಂಡ ತೀರ್ಥರಾಮನಿಗೆ ಸದ್ಗುರುನಾಥನೇ ತಾಯಿ. ಆತನಿಗೆ ತಂದೆಯೊಂದಿಗೆ ಇದ್ದ ಸಲಿಗೆ ಅಷ್ಟಕ್ಕಷ್ಟೆ. ರಾಮನ

ಕಾಲೇಜ್ ಜೀವನ ಬಹಳ ಸರಳವಾದದ್ದು ಮತ್ತು ಆತನಿಗೆ ಖರ್ಚಿಗೆ ಹಣಬೇಕಾದದ್ದು ಎರಡು ಪದಾರ್ಥಗಳಿಗೆ ಮಾತ್ರ–ಜ್ಞಾನವನ್ನು ವರ್ಧಿಸುವ ಪುಸ್ತಕಗಳು ಮತ್ತು ಅವುಗಳ ಅಧ್ಯಯನ ಮಾಡುವುದಕ್ಕೆ ರಾತ್ರಿಯೆಲ್ಲ ಉರಿಸುವ ದೀಪಕ್ಕಾಗಿ ಎಣ್ಣೆ !

ಆತನಿಗೆ ತಂದೆಯಿಂದ ಯಾವ ಧನಸಹಾಯವೂ ಸಿಗದಿದ್ದರಿಂದಲೂ, ಮತ್ತು ಇತರ ಮೂಲಗಳಿಂದ ಲಭಿಸುತ್ತಿದ್ದ ಹಣವು ಬಹಳ ಅಲ್ಪವಾದ್ದರಿಂದ, ರಾಮನು ಅನೇಕ ದಿನಗಳನ್ನು ದಿನಕ್ಕೆ ಒಪ್ಪತ್ತು ಉಂಡು ಕೆಲವು ಬಾರಿ ಅದೂ ಇಲ್ಲದೆ ಕಾಲ ಕಳೆಯಬೇಕಾಗಿತ್ತು. ಆತನ ಒಂದು ಪತ್ರದಲ್ಲಿ "ನನ್ನ ಮಹತ್ವವಾದ ಆವಶ್ಯಕತೆ ಯೆಂದರೆ ಅಧ್ಯಯನಕ್ಕಾಗಿ ಒಂದು ಏಕಾಂತಸ್ಥಳ ಮತ್ತು ಸಾಕಷ್ಟು ಸಮಯ. ಹೇ ಭಗವಂತ, ಈ ಮೂರನ್ನು ಯಾವಾಗಲೂ ನನಗೆ ಕರುಣಿಸು– 1. ಏಕಾಂತತೆ, 2. ಸಾಕಷ್ಟು ಸಮಯ, ಮತ್ತು 3. ಜ್ಞಾನವನ್ನು ಸಂಪಾದಿಸಬೇಕೆಂಬ ತೀವ್ರ ಆಕಾಂಕ್ಷೆ."

ತೀರ್ಥರಾಮನು 1890ರಲ್ಲಿ ಎಫ್.ಎ. ಪರೀಕ್ಷೆಯಲ್ಲಿ ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣನಾಗಿ ಒಂದು ವಿದ್ಯಾರ್ಥಿವೇತನವನ್ನೂ ಗಿಟ್ಟಿಸಿಕೊಂಡನು. ನಂತರ ಬಿ.ಎ. ಪರೀಕ್ಷೆಗೆ ತನ್ನ ಬಹಳ ನೆಚ್ಚಿನ ವಿಷಯವಾದ ಗಣಿತಶಾಸ್ತ್ರವನ್ನು ತೆಗೆದುಕೊಂಡನು. ಆತನು ಎಷ್ಟೋಬಾರಿ ರಾತ್ರಿಯೆಲ್ಲ ಗಣಿತದ ಕ್ಲಿಷ್ಟವಾದ ಸಮಸ್ಯೆಗಳನ್ನು ಬಿಡಿಸುವು ದರಲ್ಲಿ ಮಗ್ನನಾಗಿರುತ್ತಿದ್ದ. ಒಂದು ಕ್ಲಿಷ್ಟ ಸಮಸ್ಯೆಗೆ ಉತ್ತರ ಸಿಗುವತನಕ ಆತನ ತಲೆಯಲ್ಲಿ ಬೇರೆ ಯಾವ ವಿಷಯಕ್ಕೂ ಅವಕಾಶವಿರುತ್ತಿರಲಿಲ್ಲ. ಆತನಿಗೆ ಗಣಿತಶಾಸ್ತ್ರದಲ್ಲಿದ್ದ ಆಸಕ್ತಿಯು ಕೇವಲ ಶೈಕ್ಷಣಿಕವಾಗಿರದೆ ತೀವ್ರವಾದ ಧಾರ್ಮಿಕ ಶ್ರದ್ಧೆಯಾಗಿತ್ತು. ನಮ್ಮ ಇಂದಿನ ವಿದ್ಯಾರ್ಥಿಗಳಿಗೆ ತೀರ್ಥರಾಮನಿಗಿಂತ ಬೇರೆ ಆದರ್ಶ ಬೇಕೆ? ಆದರೆ, ರಾಮನು ಬಿ.ಎ. ಪರೀಕ್ಷೆಯಲ್ಲಿ ಗಣಿತದಲ್ಲಿ ಪ್ರಥಮನಾಗಿ ಮತ್ತು ಒಟ್ಟು ಅಂಕಗಳಿಂದ ವಿಶ್ವವಿದ್ಯಾನಿಲಯಕ್ಕೇ ಪ್ರಪ್ರಥಮನಾದರೂ ಕೂಡ, ಇಂಗ್ಲೀಷಿನಲ್ಲಿ ಕೆಲವು ಅಂಕಗಳು ಕಡಿಮೆ ಬಂದು ದುರದೃಷ್ಟವಶಾತ್ ಅನುತ್ತೀರ್ಣ ನಾದನು. ತತ್ಪರಿಣಾಮವಾಗಿ, ಸಿಗುತ್ತಿದ್ದ ವಿದ್ಯಾರ್ಥಿವೇತನವು ನಿಂತುಹೋಯಿತು.

ಈ ರೀತಿ ಒಟ್ಟಿಗೆ ಒದಗಿ ಬಂದ ಕಷ್ಟಗಳ ಪರಂಪರೆಯು ಸಾಲದೋ ಎಂಬಂತೆ ತೀರ್ಥರಾಮನು ತನ್ನ ಪತ್ನಿಯನ್ನು ಸಾಕಬೇಕಾಯಿತು. ಈಗ ಇನ್ಯಾವ ಆಧಾರವೂ ಇಲ್ಲದೆ, ಭಗವಂತನನ್ನೇ ಮೊರೆಹೋಗಬೇಕಾಯಿತು. ಆತನ ಒಂದು ಪತ್ರದಲ್ಲಿ ಈ ರೀತಿ ಕಳಕಳಿಯಿಂದ ಪ್ರಾರ್ಥಿಸುತ್ತಾನೆ : "ಹೇ ದೇವ, ಈಗ ರಾಮನು ಪೂರ್ತಿ ಯಾಗಿ ನಿನ್ನವನೇ ಮತ್ತು ನೀನು ನನ್ನವನೇ. ಸತತವಾಗಿ ನಿನ್ನನ್ನು ಪ್ರಾರ್ಥಿಸಿ ಏನೇನು ಪ್ರಾಪ್ತವಾಗುತ್ತದೋ ಅಷ್ಟರಿಂದಲೇ ತೃಪ್ತನಾಗಿರುವುದು ನನ್ನ ಕರ್ತವ್ಯ. ನಿನ್ನ ಕರ್ತವ್ಯವಾದರೋ ರಾಮನನ್ನು ಸರ್ವಥಾ ಕಾಪಾಡುವುದು. ರಾಮನ

ಶರೀರವು ಕೂಡ ಈಗ ಆವನದಲ್ಲ. ಅದು ಕರುಣಾಮಯನಾದ ನಿನಗೇ ಸಂಬಂಧ ಪಟ್ಟದ್ದು. ಆತನನ್ನು ರಕ್ಷಿಸು ಅಥವಾ ನಾಶಮಾಡು–ಅದು ನಿನ್ನ ಇಚ್ಛೆಗೆ ಬಿಟ್ಟದ್ದು." ಇನ್ನೊಂದೆಡೆ ಆತ ಹೀಗೆ ಬರೆಯುತ್ತಾನೆ: "ಬಡತನವು ಬಹಳ ಒಳ್ಳೆಯದು; ಅದು ಭಗವಂತನ ಸಿಂಹಾಸನಕ್ಕೆ ಕಣ್ಣೀರಿನ ಮೆಟ್ಟಲುಗಳನ್ನು ನಿರ್ಮಿಸುತ್ತದೆ". ರಾಮನು ಆತನ ಗುರುವಿಗೆ ಬರೆದ ಒಂದು ಪತ್ರದಲ್ಲಿ "ದೃಢವಾದ ಮನೋನಿಶ್ಚಯ ಮತ್ತು ಆತ್ಮಶಕ್ತಿಗಳಷ್ಟು ಅಮೂಲ್ಯವಾದದ್ದು ಪ್ರಪಂಚದಲ್ಲಿ ಬೇರೊಂದಿಲ್ಲ." ಆತನಿಗೆ ಒದಗಿ ಬಂದ ಕಷ್ಟಕಾರ್ಪಣ್ಯಗಳ ಪರಂಪರೆಯಿಂದ ರಾಮನಲ್ಲಿ ಮೊದಲೇ ಸುಪ್ತವಾಗಿದ್ದ ಆಧ್ಯಾತ್ಮಿಕತೆಯು ಹೊರಹೊಮ್ಮಿತು, ಮಾತ್ರವಲ್ಲದೆ ಸ್ವಪ್ರಯತ್ನ ಮತ್ತು ಆತ್ಮಶಕ್ತಿಗಳಲ್ಲಿ ಬಹಳ ಹೆಚ್ಚಾಗಿ ಆತನಿಗೆ ವಿಶ್ವಾಸ ಬೆಳೆಯಲಾರಂಭಿಸಿತು. ಆತನ ಮಾತಿನಲ್ಲೇ ಹೇಳುವುದಾದರೆ, "ಸ್ವಪ್ರಯತ್ನ ಮತ್ತು ದೃಢ ಸಂಕಲ್ಪಶಕ್ತಿಗೆ ವಿರೋಧವಾದ ವಿಧಿ (fate) ಯನ್ನು ಯಾರು ಧಿಕ್ಕರಿಸುತ್ತಾರೋ, ಅವರಿಗೆ ಅದು ಮಣಿಯುತ್ತದೆ."

ಹೀಗೆ ಅನೇಕ ಕಷ್ಟಗಳ ಮಧ್ಯದಲ್ಲಿ ತೀರ್ಥರಾಮನು 1893ರಲ್ಲಿ ಬಿ. ಎ. ಪರೀಕ್ಷೆಯಲ್ಲಿ ವಿಶ್ವವಿದ್ಯಾನಿಲಯದಲ್ಲೇ ಮೊಟ್ಟಮೊದಲನೆಯ ದರ್ಜೆಯಲ್ಲಿ ಉತ್ತೀರ್ಣನಾಗಿ ಪುನಃ ವಿದ್ಯಾರ್ಥಿವೇತನವನ್ನು ಸಂಪಾದಿಸಿಕೊಂಡನು. ಆತನ ವಿಶೇಷ ಮೆಚ್ಚುಗೆಯ ಗಣಿತಶಾಸ್ತ್ರದಲ್ಲಿ ಕೇವಲ ಒಂಬತ್ತೇ ಪ್ರಶ್ನೆಗಳನ್ನು ಉತ್ತರಿಸಲು ಕೇಳಿದ್ದರೂ ಕೂಡ, ರಾಮನು ಕೊಟ್ಟಿದ್ದಂತ ಬಹಳ ಕಷ್ಟವಾದ ಎಲ್ಲಾ ಹದಿಮೂರು ಪ್ರಶ್ನೆಗಳನ್ನೂ ಉತ್ತರಿಸಿದ್ದನು. ಈಗಾಗಲೇ ರಾಮನು ತನ್ನ ಜೀವನದಲ್ಲಿ ಸಾಧಿಸಬೇಕಾಗಿದ್ದ ಏಕೈಕ ಗುರಿಯನ್ನು ತನ್ನ ಮನಸ್ಸಿನಲ್ಲಿ ರೂಪಿಸಿಕೊಂಡಿದ್ದನು. ಅದೇನೆಂದರೆ, "ನನ್ನ ಜೀವನದಲ್ಲಿ ಏನಾದರೂ ಏಕೈಕ ಆಸೆಯಿದ್ದರೆ ಅದು ಇದೀ ಜೀವನದ ಒಂದೊಂದು ಉಸಿರನ್ನೂ ಜನತೆಯ ಸೇವೆಯ ಮೂಲಕ ಜನಾರ್ದನನ ಸೇವೆ ಮಾಡುವುದು. ಜನತೆಗೆ ನಾನು ಮಾಡಬಹುದಾದ ಅತ್ಯುತ್ತಮ ಸೇವೆಯೆಂದರೆ ಗಣಿತಶಾಸ್ತ್ರವನ್ನು ಬೋಧಿಸುವುದು !"

ರಾಮನು ತನ್ನ ಜೀವನದುದ್ದಕ್ಕೂ ಒಂದು ನಿಮಿಷವನ್ನೂ ಹರಣ ಮಾಡುತ್ತಿರಲಿಲ್ಲ. "ಕಾಯಕವೇ ಕೈಲಾಸ" ಎಂಬುದು ಆತನ ಮಹಾಮಂತ್ರ. ಆತನ ಮಾತಿನಲ್ಲೇ ಹೇಳಬೇಕಾದರೆ, "work is worship and religion is realization". ಒಂದೆಡೆ ಆತನ ವಾಣಿ ಹೀಗಿದೆ: "ಭಾರತ ದೇಶದಲ್ಲಿ ಕಾರ್ಯಕರ್ತರು ಬೇಕಾಗಿದ್ದಾರೆ, ಆದರೆ ಆಲಸೀ ಕಾರ್ಯಕರ್ತರಲ್ಲ!" ಬಿ. ಎ. ಪರೀಕ್ಷೆಯಲ್ಲಿ ಉತ್ತಮ ದರ್ಜೆಯಲ್ಲಿ ಉತ್ತೀರ್ಣನಾದ ಮೇಲೆ ರಾಮನಿಗೆ Tripos ಪರೀಕ್ಷೆಗೋಸ್ಕರ ಇಂಗ್ಲೆಂಡಿಗೆ ಹೋಗುವ ಮನಸ್ಸಿತ್ತು. ಅದಕ್ಕೆ ಅಧಿಕಾರಿಗಳಿಂದ ಬೆಂಬಲವೂ ದೊರಕಿತು. ಆದರೆ ಭಗವಂತನ ಇಚ್ಛೆಯೇ ಬೇರೆಯಿತ್ತು. ಕಾರಣಾಂತರದಿಂದ ಈ ಅವಕಾಶವು ಬೇರೊಬ್ಬರಿಗೆ

ದೊರೆಯಿತು. ರಾಮನು ಕೇವಲ ಒಬ್ಬ Senior Wrangler ಆಗುವುದಕ್ಕಿಂತ ಬೇರೊಂದು ಕ್ಷೇತ್ರದಲ್ಲಿ ಇನ್ನೂ ಉಚ್ಚತರವಾದ ವ್ಯಕ್ತಿತ್ವವನ್ನು ಹೊಂದುವುದು ಭಗವದಿಚ್ಛೆಯಾಗಿರಬೇಕು !

ತೀರ್ಥರಾಮನು ಆದರ್ಶ ವಿದ್ಯಾರ್ಥಿಯೆನಿಸಿಕೊಳ್ಳುತ್ತಿದ್ದರೂ, ಆತನ ಮನಸ್ಸು ಹೆಚ್ಚು ಹೆಚ್ಚಾಗಿ ಅಧ್ಯಾತ್ಮದ ಕಡೆಗೆ ಸಾಗುತ್ತಿತ್ತು. ಆತನಿಗೆ ಬಾಹ್ಯ ವಿಷಯಗಳಲ್ಲಿ ಮತ್ತು ದೈನಂದಿಕ ವ್ಯವಹಾರಗಳಲ್ಲಿ ವಿರಕ್ತಿಯುಂಟಾಗಲಾರಂಭಿಸಿತು. ಆತನಿಗೆ ಅನೇಕ ಮಿತ್ರರು ಆಗಿನ ಕಾಲದಲ್ಲಿ ಬಹಳ ಗರಿಷ್ಠ ಹುದ್ದೆಯೆಂದು ಪರಿಗಣಿಸಲ್ಪಡುತ್ತಿದ್ದ ಪ್ರಾದೇಶಿಕ Civil Service ಗೆ ಸೇರಲು ಒತ್ತಾಯಿಸಿದಾಗ, ತೀರ್ಥರಾಮನು "ನಾನು ಈವರೆಗೆ ಕಷ್ಟಪಟ್ಟು ಸಂಪಾದಿಸಿದ 'ಫಸಲು' ಜನತೆಗೆ ಉಚಿತವಾಗಿ ಸೇವಾರೂಪದಲ್ಲಿ ಹಂಚುವುದಕ್ಕೋಸ್ಕರವೇ ಹೊರತು, ಲಾಭಕ್ಕಾಗಿ ಮಾರುವುದಕ್ಕಲ್ಲ" ಎಂದನಂತೆ.

ರಾಮನಿಗೆ ಅಧ್ಯಯನದಲ್ಲಿ, ಅದರಲ್ಲೂ ವಿಶೇಷವಾಗಿ ಗಣಿತ, ತತ್ವಶಾಸ್ತ್ರ, ಮತ್ತು ಅಧ್ಯಾತ್ಮ ಶಾಸ್ತ್ರಗಳಲ್ಲಿ ಬಹಳ ಆಸಕ್ತಿ. ಆತನು ಭಾರತೀಯ ದರ್ಶನಗ್ರಂಥಗಳನ್ನೂ ಮತ್ತು ಪಾಶ್ಚಾತ್ಯ ತತ್ವಶಾಸ್ತ್ರದ ಪ್ರಸಿದ್ಧ ಗ್ರಂಥಗಳನ್ನೂ ಕರತಲಾಮಲಕ ಮಾಡಿಕೊಂಡಿದ್ದ. ಆತನ ಭಾಷಾಜ್ಞಾನವೂ ಬಹಳ ವಿಸ್ತಾರವಾದುದು–ಪರ್ಶಿಯನ್, ಇಂಗ್ಲೀಷ್, ಹಿಂದಿ, ಸಂಸ್ಕೃತ ಮತ್ತು ಉರ್ದು ಭಾಷೆಗಳಲ್ಲಿ ಬಹಳ ಪಾಂಡಿತ್ಯವನ್ನು ಸಂಪಾದಿಸಿಕೊಂಡಿದ್ದ.

ರಾಮನ ಜೀವನದ ಅಲ್ಪ ಪರಿಮಿತಿಯಲ್ಲಿ ಒಂದೊಂದು ನಿಮಿಷವೂ ಸುವ್ಯಯವಾಗಿತ್ತು. 1906ರಲ್ಲಿ ಆತನು ನಾಲ್ಕು ವೇದಗಳನ್ನೂ ಅಧ್ಯಯನಮಾಡಿ, ಅವುಗಳಲ್ಲಿಯ ಒಂದೊಂದು ಮಂತ್ರವನ್ನೂ, ಅದರ ಅಂತರಾರ್ಥವನ್ನು ಮನಗಂಡು ಮಂತ್ರದ್ರಷ್ಟಾರರ ಹೃದಯವನ್ನು ಚೆನ್ನಾಗಿ ಅರಿತು ಕರಗತ ಮಾಡಿಕೊಂಡಿದ್ದನು. ಭಾರತೀಯ ಪವಿತ್ರವಾದ ಶ್ರುತಿ ಸ್ಮೃತಿ ಗುಚ್ಛದಲ್ಲಿ ತೀರ್ಥರಾಮನಿಗೆ ಅತಿಪ್ರಿಯವಾದವು ಎಂದರೆ ಶ್ರೀಮದ್ಭಗವದ್ಗೀತೆ ಮತ್ತು ಯೋಗವಾಸಿಷ್ಠ. "ಪ್ರಪಂಚದಲ್ಲೇ ಅತಿ ಶ್ರೇಷ್ಠವಾದ ಗ್ರಂಥಗಳಲ್ಲಿ ಯೋಗವಾಸಿಷ್ಠವು ಒಂದು. ಭೂಮಿಯ ಮೇಲೆ ಈ ಶ್ರೇಷ್ಠ ಕೃತಿಯನ್ನು ಓದುವವರು ಯಾರೇ ಆಗಲಿ ಭಗವದ್ಭಾವವನ್ನು ತಪ್ಪಿಸಿಕೊಳ್ಳಲಾರರು, ಸರ್ವವ್ಯಾಪಿಯಾದ ಪರಮಾತ್ಮನೊಂದಿಗೆ ಐಕ್ಯಭಾವವನ್ನು ಹೊಂದದಿರಲಾರರು."– ಈ ಮಾತುಗಳಿಂದ ರಾಮತೀರ್ಥರಿಗೆ ಯೋಗವಾಸಿಷ್ಠವೆಂದರೆ ಎಷ್ಟು ಪ್ರೀತಿಯಿತ್ತೆಂದು ವಿದಿತವಾಗುತ್ತದೆ.

ರಾಮನು ಎಂ.ಎ. ಪರೀಕ್ಷೆಯಲ್ಲಿ ಗಣಿತವನ್ನು ತೆಗೆದುಕೊಂಡು ಪ್ರಥಮ ದರ್ಜೆಯಲ್ಲಿ ಉತ್ತೀರ್ಣನಾದನಂತರ ಕೆಲಕಾಲ ಎಫ್.ಎ. ಮತ್ತು ಬಿ.ಎ. ವಿದ್ಯಾರ್ಥಿ

ಗಳಿಗೋಸ್ಕರ ಅಧ್ಯಾಪನ ಕಾರ್ಯವನ್ನು ಕೈಗೊಂಡನು. ಆತನ ಅಧ್ಯಾಪನ ಕಾರ್ಯವು ಎಷ್ಟು ಉಪಯೋಗಕರವೂ ಮತ್ತು ಜನಪ್ರಿಯವೂ ಆಗಿತ್ತೆಂದರೆ ಬಹಳಷ್ಟು ಅಧ್ಯಾಪಕರೂ ರಾಮನು ನಡೆಸುತ್ತಿದ್ದ ಖಾಸಗಿ ತರಗತಿಗಳಿಗೆ ಬರಲಾರಂಭಿಸಿದರು. ಈ ಸಮಯದಲ್ಲಿ ತೀರ್ಥರಾಮನು ಗಣಿತ ಮಾತ್ರವಲ್ಲದೆ ಇತರ ಅನೇಕ ಗಹನವಾದ ವಿಷಯಗಳನ್ನು ಕುರಿತು ಬಹಳ ಪರಿಣಾಮಕಾರಿಯೂ, ಜನಪ್ರಿಯವೂ ಆದ ಉಪನ್ಯಾಸಗಳನ್ನು ಕೊಡಲಾರಂಭಿಸಿದನು. ಸಿಯಾಲ್‌ಕೋಟ್ ನಗರದಲ್ಲಿ ಸನಾತನ ಧರ್ಮ ಸಭೆಯ ಆಶ್ರಯದಲ್ಲಿ "ಭಾರತದ ಸಮಸ್ಯೆಗಳು" ಎಂಬ ವಿಷಯವಾಗಿ ಒಂದು ಉಪನ್ಯಾಸವನ್ನು ರಾಮನು ಕೊಟ್ಟಾಗ, ಭಾಷಣಾಮಂದಿರವು ಆಸಕ್ತ ಜನಗಳಿಂದ ಕಿಕ್ಕಿರಿದಿತ್ತಲ್ಲದೆ ಶ್ರೋತೃಗಳ ಕಣ್ಣುಗಳು ಕಣ್ಣೀರಿನಿಂದ ಆರ್ದ್ರವಾಗಿದ್ದವು!

ತಾನು ಹಿಂದೆ ವಿದ್ಯಾರ್ಥಿಯಾಗಿದ್ದ ತನ್ನ ನೆಚ್ಚಿನ ಫೋರ್ಮನ್ ಕ್ರಿಶ್ಚಿಯನ್ ಕಾಲೇಜಿನಲ್ಲಿ ಗಣಿತದ ಪ್ರಾಧ್ಯಾಪಕನಾಗಿ ತೀರ್ಥರಾಮನು ಸೇರಿಕೊಂಡನು. ಆಗ ಆತನಿಗೆ ದೊರಕುತ್ತಿದ್ದ ಸಂಬಳ ನೂರು ರೂಪಾಯಿಗಳು. ಅದರಲ್ಲಿ ಬಹಳಷ್ಟು ಭಾಗ ಬಡ ವಿದ್ಯಾರ್ಥಿಗಳ ಸಹಾಯಕ್ಕೆ ಹೋಗುತ್ತಿತ್ತು. ಆತನಿಗೆ ಅತ್ಯವಶ್ಯಕವಾಗಿ ಬೇಕಾಗುವಷ್ಟು ಹಣವನ್ನು ಮಾತ್ರ ತನ್ನ ಸ್ವಂತಕ್ಕೆ ಉಪಯೋಗಿಸುತ್ತಿದ್ದ. ಆತನು ಗುರುಗಳಿಗೆ ಬರೆದ ಪತ್ರದಲ್ಲಿ ಹೀಗೆನ್ನುತ್ತಾನೆ: "ನಾನು ಭಗವಂತನಿಗೋಸ್ಕರ ಮಾಡುತ್ತಿರುವ ಸೇವೆಯಿಂದ ನನಗೆ ದೊರಕುತ್ತಿರುವ ಶಾಂತಿಯೇ ಸಾಕಷ್ಟು ಸಂಬಳ ಎಂದೆನಿಸುತ್ತೇನೆ. ನನಗೆ ಕಾಲೇಜಿನಲ್ಲಿ ಸಿಗುವ ಸಂಬಳದಂತಹ ವಿಷಯಗಳಿಂದ ನಾನು ವರ್ಧಿಸುವುದೂ ಇಲ್ಲ, ಕ್ಷೀಣಿಸುವುದೂ ಇಲ್ಲ. ಮಹದಾನಂದದ ಗಣಿಯೇ ನಾನು." ಈ ಭಾವವನ್ನೇ ತಾನೇ ಶ್ರೀಮದ್ಭಗವದ್ಗೀತೆಯಲ್ಲಿ "ದುಃಖೇಷ್ವನುದ್ವಿಗ್ನ ಮನಾಃ ಸುಖೇಷು ವಿಗತಸ್ಪೃಹಃ" ಎಂದು ಸ್ಥಿತಪ್ರಜ್ಞನ ಲಕ್ಷಣವನ್ನು ಸೂಚಿಸಿರುವುದು!

ತೀರ್ಥರಾಮನು ಆತನ ವಿದ್ಯಾರ್ಥಿಗಳಿಂದ ಮಾತ್ರವಲ್ಲದೆ ಸಹಪ್ರಾಧ್ಯಾಪಕರುಗಳಿಂದಲೂ ಒಬ್ಬ "ಆದರ್ಶ ಪ್ರಾಧ್ಯಾಪಕ"ನೆಂದು ಗೌರವಿಸಲ್ಪಡುತ್ತಿದ್ದ. ಒಂದು ದೊಡ್ಡ ಸಭೆಯಲ್ಲಿ "ಗಣಿತದ ಪ್ರಾಧಾನ್ಯತೆ" ಎಂಬ ವಿಷಯವಾಗಿ ಮಾತನಾಡುತ್ತ, "Mathematics aids Religion in a most remarkable manner and strengthens the foundation of moral character……It makes us humble and week. It tends to do away, with vanity and self-conceit……" ಗಣಿತ ಶಾಸ್ತ್ರವು ರಾಮನ ಬುದ್ಧಿ, ಮನಸ್ಸು ಮತ್ತು ಜೀವನದ ಬೆಳವಣಿಗೆಯಲ್ಲಿ ಬಹಳ ಮಟ್ಟಿಗೆ ಸಹಾಯ ಮಾಡಿತ್ತು. ಇದನ್ನು ತಮ್ಮ ಉಪನ್ಯಾಸ

ಗಳಲ್ಲಿ ಯಾವಾಗಲೂ ಕೃತಜ್ಞತೆಯಿಂದ ತೀರ್ಥರಾಮರು ನೆನೆಸಿಕೊಳ್ಳುತ್ತಿದ್ದರು.

ತೀರ್ಥರಾಮರು ಗಣಿತದ ಪ್ರಾಧ್ಯಾಪಕರಾಗಿ ದುಡಿದ ನಾಲ್ಕು ವರ್ಷಗಳ ಅವಧಿಯಲ್ಲಿ ಎಲ್ಲರಿಂದಲೂ ಒಳ್ಳೆಯ ಹೆಸರನ್ನೂ ಗೌರವವನ್ನೂ ಸಂಪಾದಿಸಿದರು. ಅವರಿಗೆ ಈ ಪ್ರಾಧ್ಯಾಪಕ ವೃತ್ತಿಯಿಂದ ದೊರೆತ ಒಂದು ವಿಶೇಷ ಲಾಭವೆಂದರೆ ತಮ್ಮ ಉಪನ್ಯಾಸಗಳಲ್ಲಿ ಬಹಳ ಗಹನವಾದ ಮತ್ತು ಕ್ಲಿಷ್ಟವಾದ ವಿಷಯಗಳನ್ನೂ ಶ್ರೋತೃಗಳಿಗೆ ಸುಲಭವಾಗಿ ಮನದಟ್ಟಾಗುವಂತೆ ಬೋಧಿಸುತ್ತಿದ್ದರು. ಅವರ ಪ್ರವಚನಗಳ ಇನ್ನೊಂದು ವೈಶಿಷ್ಟ್ಯವೆಂದರೆ ಅವರ ಭಕ್ತಿಪ್ರದವೂ ರಸಮಯವೂ ಆದ ನುಡಿಮುತ್ತುಗಳು ಭಾಗವತರ ಮತ್ತು ಭಕ್ತರ ಭಾವುಕ ಮನಸ್ಸುಗಳನ್ನು ಹೇಗೆ ಸೂರೆಗೊಳ್ಳುತ್ತಿದ್ದವೋ, ಹಾಗೆಯೇ ಅವರ ತಾರ್ಕಿಕ ಮತ್ತು ವೈಜ್ಞಾನಿಕ ವಿಚಾರ ಸರಣಿಯು ವೈಚಾರಿಕ ಮನೋಭಾವವುಳ್ಳ ಶ್ರೋತೃಗಳನ್ನೂ ಆಕರ್ಷಿಸುತ್ತಿತ್ತು.

ತೀರ್ಥರಾಮರು ಪ್ರಾಧ್ಯಾಪಕರಾಗಿ ಬಹಳ ಕೀರ್ತಿ ಹೊಂದಿದವರಾಗಿ ಕೃತಕೃತ್ಯರಾಗಿ ಕಂಡುಬಂದರೂ, ಆಂತರಿಕವಾಗಿ ಅವರ ಮನಸ್ಸು ಬೇರೆಯ ಒಂದು ದಿಶೆಯಲ್ಲಿಯೇ ಸಾಗಿತ್ತು. ಅವರ ಸೂಕ್ಷ್ಮವೂ, ಪ್ರಾಮಾಣಿಕವೂ, ಸರಳವೂ ಆದ ಮನಸ್ಸಿಗೆ ವರ್ಷೇ ವರ್ಷೇ ಗ್ರಾಮಫೋನ್ ರೆಕಾರ್ಡಿನಂತೆ ಹೇಳಿದ್ದನ್ನೇ ಹೇಳುವ ಚರ್ವಿತಚರ್ವಣದಿಂದ ಗಣಿತದ ಪ್ರಮೇಯಗಳು, ಉಪಪ್ರಮೇಯಗಳು, ಒಂದೇ ಮಾದರಿಯ ಸಮಸ್ಯೆಗಳು ಬಹಳ ಶುಷ್ಕವೂ, ಸಪ್ಪೆಯೂ, ನೀರಸವೂ ಆಗಿ ಕಂಡುಬಂದು, ತಮ್ಮ ಜೀವನವನ್ನು ಆದರ್ಶಮಯವೂ ಅರ್ಥಪೂರ್ಣವೂ ಆಗಿಸಬೇಕೆಂಬ ತೀವ್ರವಾದ ಅಭಿಲಾಷೆಗೆ ಹೊರತಾಗಿವೆಯೆಂದೆನಿಸಿದವು. ಇಂತಹ ಮನಸ್ಸಿನ ಒಂದು ತುಮುಲವನ್ನು ಕೆಲಕಾಲ ಹೊಂದಿ ಕೊನೆಯಲ್ಲಿ ತೀರ್ಥರಾಮರು ಒಂದು ದೃಢವಾದ ನಿರ್ಧಾರಕ್ಕೆ ಬಂದರು. ತಮ್ಮ ಪ್ರಾಧ್ಯಾಪಕ ವೃತ್ತಿಗೆ ರಾಜಿನಾಮೆ ಕೊಟ್ಟು ಪಾರಮಾರ್ಥಿಕ ಜ್ಞಾನಾನ್ವೇಷಣೆಗಾಗಿಯೂ ತನ್ಮೂಲಕ ಲೋಕ ಸಂಗ್ರಹಾರ್ಥವಾಗಿಯೂ ಸನ್ಯಾಸವನ್ನು ಸ್ವೀಕರಿಸಿ ತಪಸ್ಸಿಗಾಗಿ ಹಿಮಾಲಯದೆಡೆಗೆ ಸಾಗಿದರು. ಇವರನ್ನು ಈ ರೀತಿ ಅನಿರೀಕ್ಷಿತವಾಗಿ ಬೀಳ್ಕೊಡಬೇಕಾದ ಸಂದರ್ಭ ಬಂದಾಗ ಅವರ ಸಹೋದ್ಯೋಗಿಗಳ ಮತ್ತು ವಿದ್ಯಾರ್ಥಿಗಳ ಕಣ್ಣುಗಳು ಅಶ್ರುಧಾರೆಯನ್ನು ಸುರಿಸಿದ್ದು ಸಹಜವಷ್ಟೆ! ಈ ರೀತಿಯಲ್ಲಿ ತೀರ್ಥರಾಮರ ಆದರ್ಶಮಯವಾದ ವಿದ್ಯಾರ್ಥಿ ಜೀವನವೂ ಮತ್ತು ಆದರ್ಶ ಪ್ರಾಧ್ಯಾಪಕತ್ವವೂ ಕೊನೆಗೊಂಡವು. ಅಂತೆಯೇ ಜನತೆಗೆ ಗಣಿತವನ್ನು ಬೋಧಿಸುವುದರ ಮೂಲಕ ಅತ್ಯುತ್ತಮವಾದ ಸೇವೆಯನ್ನು ಮಾಡಬೇಕೆಂಬ ಅವರ ಆದರ್ಶವೂ ಕೊನೆಗೊಂಡಿತು! ಗಣಿತವನ್ನು ಚೆನ್ನಾಗಿ ಬೋಧಿಸುವ ಶ್ರೇಷ್ಠ ಮಟ್ಟದ ಪ್ರಾಧ್ಯಾಪಕರು ಪ್ರಪಂಚದಲ್ಲಿ

ಸಹಸ್ರಾರು ಮಂದಿಯಿದ್ದಾರೆ. ಆದರೆ ರಾಮತೀರ್ಥರಂತಹ ಮಹಾಜ್ಞಾನಿಗಳೂ, ಅನುಭಾವಿಗಳೂ, ಜಗದ್ವಂದ್ಯರಾದ ಮಾರ್ಗದರ್ಶಿಗಳು ಬಹಳ ವಿರಳವಷ್ಟೆ!

ಈಗ ರಾಮರ ಏಕೈಕ ಆದರ್ಶವೆಂದರೆ ಪರಮಾತ್ಮನನ್ನು ಯಥಾವತ್ತಾಗಿ ಕಾಣುವುದು. ಯಾವ ಶ್ರೇಷ್ಠವಾದ ಭಗವದ್ವಸ್ತುವಿನ ಸಾಕ್ಷಾತ್ಕಾರಕ್ಕಾಗಿ ಅನೇಕಾನೇಕ ಸಂತರೂ, ಋಷಿಗಳೂ, ವೇದಾಂತಿಗಳೂ ತಮ್ಮ ಜೀವಿತಗಳನ್ನು ತಪೋಮಯವಾಗಿಸಿದರೋ ಅಂತಹ ಅತಿಶ್ರೇಷ್ಠವಾದ ಮೋಕ್ಷನಾಮ ಪುರುಷಾರ್ಥ ಸಾಧನೆಯೇ ಸ್ವಾಮಿ ರಾಮತೀರ್ಥರ ಏಕೈಕ ಗುರಿಯಾಯಿತು. ಒಂದೊಂದು ನಿಮಿಷವನ್ನೂ ಶ್ರೀಕೃಷ್ಣ ಪರಮಾತ್ಮನ ಭಕ್ತಿಯಲ್ಲಿಯೂ, ಧ್ಯಾನದಲ್ಲಿಯೂ ಕಳೆಯ-ಲಾರಂಭಿಸಿದರು. ಭಗವಂತನ ನಾಮಸ್ಮರಣೆಯು ಪದೇ ಪದೇ ಅವರನ್ನು ಭಾವಸಮಾಧಿಗೆ ಕರೆದೊಯ್ಯಲಾರಂಭಿಸಿತು. ಭಕ್ತಿಪರವಶತೆಯಿಂದ ಅವರ ಕಣ್ಣುಗಳು ಅಶ್ರುಧಾರೆಯನ್ನು ಸುರಿಸಿ ಎಷ್ಟೋ ಬಾರಿ ತಲೆದಿಂಬು ಒದ್ದೆಯಾಗಿರುತ್ತಿತ್ತು. ಅವರೊಮ್ಮೆ ಹರಿದ್ವಾರದಲ್ಲಿದ್ದಾಗ ಗುರು ಧನ್ನಾರಾಮರು ತಾಯ್ನಾಡಾದ ಪಂಜಾಬಿಗೆ ಬರಬೇಕೆಂದು ಕೇಳಿಕೊಂಡಾಗ ರಾಮತೀರ್ಥರು ಕೊಟ್ಟ ಉತ್ತರ: "ನಾನು ಆತನಲ್ಲಿ ಲೀನನಾಗಿ ನನ್ನ ನಿಜವಾದ 'ಮನೆಗೆ' ಮರಳುತ್ತಿದ್ದೇನೆ. 'ಹರಿದ್ವಾರ'ವನ್ನು ಸೇರಬೇಕಾದರೆ 'ಪಂಜಾಬ'ನ್ನು (ಪಂಚಭೂತಮಯವಾದ ಇಹವನ್ನು) ಬಿಡಬೇಕಾಗುತ್ತದೆ" ಎಂದು.

ಇನ್ನೂ ರಾಮತೀರ್ಥರ ಆಧ್ಯಾತ್ಮಿಕ ಜೀವನದ ಅನುಭಾವಿ ಅನುಭವಗಳನ್ನು ವಿವರಿಸಬೇಕಾದರೆ, ನಾವೇ ಸ್ವತಃ ಅಂತಹ ದಿವ್ಯವಾದ ನೆಲೆಯನ್ನು ಮುಟ್ಟಿದಾಗ ಮಾತ್ರ ಸಾಧ್ಯ. ಭಗವಂತನು ಆ ದಿವ್ಯವಾದ ಅನುಭವದ ಸ್ವಲ್ಪವಾದರೂ ಸವಿಯನ್ನು ಕರುಣಿಸಲೆಂದು ಆತನಲ್ಲಿ ಬೇಡಿಕೊಳ್ಳೋಣ!

ರಾಮತೀರ್ಥರು ತಮ್ಮ ಭಕ್ತಿಯ ಪರಾಕಾಷ್ಠತೆಯಿಂದ ಮತ್ತು ತೀವ್ರವಾದ ತಪಸ್ಸಿನಿಂದ ತಮ್ಮ ಏಕೈಕ ಗುರಿಯಾದ ಆತ್ಮಸಾಕ್ಷಾತ್ಕಾರದ ಅದ್ವೈತಾನುಭೂತಿಯನ್ನು ಪಡೆದು ತಮ್ಮ ಜೀವಿತವನ್ನು ಸಾರ್ಥಕಮಾಡಿಕೊಂಡರು. "ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ" ಎಂಬ ಆದರ್ಶದಂತೆ ತೀರ್ಥರಾಮರು ತಮ್ಮ ಜೀವನ್ಮುಕ್ತಾವಸ್ಥೆಯಲ್ಲಿ ಲೋಕಸಂಗ್ರಹಾರ್ಥವಾಗಿ ಊರಿಂದ ಊರಿಗೆ, ಕಾಡಿಂದ ಕಾಡಿಗೆ, ದೇಶದಿಂದ ದೇಶಕ್ಕೂ ಸಂಚಾರಮಾಡುತ್ತ ತಮ್ಮ ದಿವ್ಯಜೀವನದ ಸವಿಯು ರಸದೌತಣವನ್ನು ಎಲ್ಲರಿಗೂ ಉಣಬಡಿಸಲಾರಂಭಿಸಿದರು. ಅವರೇ ಹೇಳುವಂತೆ, "Filled with the divine fire, I have to preach boldly, fearlessly, even in the face of all sorts of persecution and opposition—what I am realizing here."

ಈ ರೀತಿ ಒಂದು ದೃಢಸಂಕಲ್ಪಮಾಡಿದವರಾಗಿ ತಾವು ಸಂಪಾದಿಸಿದ ವಿಶೇಷವಾದ ಅನುಭವಸಿದ್ಧವಾದ ವೇದಾಂತ ಜ್ಞಾನವನ್ನು ಜಿಜ್ಞಾಸುಗಳಿಗೆ ಹಂಚುತ್ತ, ಅಜ್ಞಾನಾವೃತರಾಗಿ ಸ್ವಾರ್ಥಪರರಾಗಿ ಬುದ್ಧಿಯ ಜಡತೆಯನ್ನು ಹೊಂದಿದ ಭಾರತೀಯರನ್ನು ತಮ್ಮ ಸಿಂಹಗರ್ಜನೆಯಿಂದ ವೇದಾಂತ ಡಿಂಡಿಮದೊಂದಿಗೆ ಎಚ್ಚರಿಸುತ್ತ ಒಬ್ಬೊಬ್ಬ ಸಾಮಾನ್ಯ ವ್ಯಕ್ತಿಯ ಹೃದಯಾಂತರಾಳದಲ್ಲಿಯೂ ಭಗವದ್ಭಕ್ತಿ ಮತ್ತು ಆತ್ಮಜ್ಞಾನಗಳ ಸೊಡರನ್ನು ಬೆಳಗಿಸುತ್ತ ಸಂಚಾರಮಾಡಿದರು. ಅವರ ಪ್ರವಚನಗಳಲ್ಲಿ ಸ್ವಾನುಭವಸಿದ್ಧವಲ್ಲದ ಯಾವ ವಿಷಯಕ್ಕೂ ಅವಕಾಶವೇ ಇರಲಿಲ್ಲ. ಅವರ ಒಬ್ಬ ಅನುಯಾಯಿಗಳ ಮಾತಿನಲ್ಲಿ ಹೇಳುವುದಾದರೆ, "Every word of his was charged with divinity. His words were the brightest and fresh sparks from the anvil of God-Realization."

ರಾಮತೀರ್ಥರ ಸನ್ಮಿತ್ರರ ಹಾಗೂ ಅನುಯಾಯಿಗಳ ಒತ್ತಾಯದ ಮೇಲೆ ಮತ್ತು ತಮ್ಮ ಸ್ವಂತ ದಿವ್ಯ ಅಂತಃಪ್ರೇರಣೆಯಿಂದ ಅವರು ಜಪಾನ್ ಮತ್ತು ಅನಂತರ ಅಮೇರಿಕಾ ದೇಶಗಳಿಗೆ ಭೇಟಿಯಿತ್ತರು. ಈ ಹೊರದೇಶಗಳಲ್ಲಿ ರಾಮತೀರ್ಥರು ಅನುಭವ ವೇದಾಂತ, ಧರ್ಮ, ಭಾರತೀಯ ಸಂಸ್ಕೃತಿ ಅಷ್ಟೇ ಅಲ್ಲದೆ ಅಂದಿನ (ಬ್ರಿಟಿಷರ ದಬ್ಬಾಳಿಕೆಯ ಕಾಲ!) ಭಾರತೀಯರ ದಾರುಣ ಪರಿಸ್ಥಿತಿಯ ವಿಷಯವಾಗಿ ಮನಮುಟ್ಟುವಂತೆ ಬಹಳ ಪ್ರಭಾವಪೂರ್ಣವಾಗಿ ತಮ್ಮ ಉಪನ್ಯಾಸಗಳನ್ನೂ ಪ್ರವಚನಗಳನ್ನೂ ಲಕ್ಷೋಪಲಕ್ಷ ಆಸಕ್ತ ಶ್ರೋತೃಗಳಿಗೆ ದಯಪಾಲಿಸಿದರು. ಅವರು ಅಮೆರಿಕೆಯಲ್ಲಿ ದಯಪಾಲಿಸಿದ ಕೆಲವು ಉಪನ್ಯಾಸಗಳಲ್ಲಿ ಭಾರತೀಯರ ರಾಜಕೀಯ, ಸಾಮಾಜಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಮಟ್ಟಗಳನ್ನು ಹೆಚ್ಚಿಸಲು ಅಮೇರಿಕನ್ನರ ಸಹಾಯವನ್ನು ಬಹಳ ಕಳಕಳಿಯಿಂದ ಕೇಳಿಕೊಂಡಿದ್ದಾರೆ. ಅಷ್ಟೇ ಅಲ್ಲ, ಪಾಶ್ಚಿಮಾತ್ಯರಿಗೆ ಭಾರತೀಯ ಸಂಸ್ಕೃತಿ ಮತ್ತು ವಿಶೇಷವಾಗಿ ವೇದಾಂತದ ವಿಷಯವಾಗಿ ಸರಿಯಾದ ಒಂದು ಚಿತ್ರವನ್ನು ಕೊಟ್ಟು, ಅವರ ದೃಷ್ಟಿಯಲ್ಲಿ ಈ ವಿಷಯಗಳ ಬಗ್ಗೆ ವಿಶೇಷವಾದ ಆಸಕ್ತಿಯನ್ನು ಉಂಟುಮಾಡಿದ ಕೀರ್ತಿಯು ಮಹಾ ವೇದಾಂತಕೇಸರಿಗಳಿಗೆ ಸಲ್ಲುತ್ತದೆ : ಒಬ್ಬರು ಸ್ವಾಮಿ ವಿವೇಕಾನಂದರು, ಇನ್ನೊಬ್ಬರು ಸ್ವಾಮಿ ರಾಮತೀರ್ಥರು.

ಸ್ವಾಮಿ ರಾಮತೀರ್ಥರು ಆದರ್ಶದೇಶಭಕ್ತಿಗೆ ಒಳ್ಳೆಯ ಉದಾಹರಣೆ. ಅವರಿಗೆ ದೇಶಭಕ್ತಿಯೆಂದರೆ ಪವಿತ್ರವಾದ ಮಾತೃಭೂಮಿಯೊಂದಿಗೆ ಪೂರ್ಣವಾದ ಐಕ್ಯಭಾವ. ಅವರು ಪವಿತ್ರವಾದ ಭಾರತಮಾತೆಯೊಂದಿಗೆ ಯಾವ ಮಟ್ಟದ ನಿಕಟ ಐಕ್ಯತೆಯನ್ನು ಹೊಂದಿದ್ದರೆಂದರೆ, ಅವರ ಹೇಳಿಕೆಯಂತೆಯೇ "ನಾನು ನಡೆದಾಗ, ಭಾರತವೇ ನಡೆದಂತೆ ನನಗನಿಸುತ್ತದೆ; ನಾನು ಉಸಿರಾಡಿದಾಗ ಭಾರತವೇ ಉಸಿರಾಡಿದಂತೆ ಅನಿಸುತ್ತದೆ; ನಾನು ಮಾತನಾಡಿದಾಗ ಭಾರತವೇ ಮಾತನಾಡಿದಂತೆನಿಸುತ್ತದೆ.

ನಾನೇ ಭಾರತ! ನಾನೇ ಶಿವ! ನಾನೇ ಶಂಕರ!" ಇನ್ನೊಂದೆಡೆ ಅವರ ಸಿಂಹಗರ್ಜನೆ: "ಓ ಭಾರತೀಯರೆ! ಧರ್ಮ, ಆತ್ಮಸಾಕ್ಷಾತ್ಕಾರ, ಭಗವದ್ದರ್ಶನ ಗಳನ್ನೇ ಆದರ್ಶಗಳನ್ನಾಗಿ ಹೊಂದಿದ ನೀವು ಎಲ್ಲಿಯತನಕ ನಮ್ಮ ದೇಶ ಮತ್ತು ದೇಶಬಾಂಧವರೊಡನೆ ನಿಕಟವಾದ ಐಕ್ಯಭಾವವನ್ನು ಹೊಂದುವುದಿಲ್ಲವೋ, ಅಲ್ಲಿಯ ತನಕ ನಿಮ್ಮ ನೆಚ್ಚಿನ ಗುರಿಯನ್ನು ಖಂಡಿತವಾಗಿಯೂ ಮುಟ್ಟಲಾರಿರಿ. ಇದು ನಿಶ್ಚಯ. ನಿಮ್ಮ ಧಮನಿಧಮನಿಗಳಲ್ಲಿ ಎಲ್ಲಿಯತನಕ ಉಚ್ಚವಾದ ದೇಶಪ್ರೇಮ ವೆಂಬ ರಕ್ತವು ಹರಿಯುವುದಿಲ್ಲವೋ, ಅಲ್ಲಿಯತನಕ ನಿಮ್ಮ ಪರಮ ಗುರಿಯನ್ನು ಹೊಂದಲಾರಿರಿ." ಭಾರತದ ಭವಿಷ್ಯನಿರ್ಮಾಣವನ್ನು ಕುರಿತು ಹೇಳುತ್ತಾರೆ: "The principle of progress demands not only the differentiation of form and function but the integration of spirit and feeling,......... expressing beautifully in organised division of labour and the union of spirit and heart." (Differentiation ಮತ್ತು Integration ಎಂಬವು ಗಣಿತದ ಪಾರಿಭಾಷಿಕ ಶಬ್ದಗಳು.)

ಜಪಾನ್ ಮತ್ತು ಅಮೇರಿಕಾ ದೇಶಗಳಲ್ಲಿ ವೇದಾಂತವನ್ನು ಪ್ರಚಾರಮಾಡಿ ಅನೇಕಾನೇಕ ಮಂದಿಯ ಹೃದಯಗಳನ್ನು ಪರಿವರ್ತಿಸಿ, ಬಹಳಷ್ಟು ಯೋಗ್ಯರಾದ ಶಿಷ್ಯರನ್ನು ಸಂಪಾದಿಸಿ, ಭಾರತಕ್ಕೆ ಮರಳುವ ದಾರಿಯಲ್ಲಿ ಈಜಿಪ್ಟ್ ದೇಶವನ್ನು ರಾಮತೀರ್ಥರು ಸಂದರ್ಶಿಸಿದರು. ಅಲ್ಲಿಯ ಒಂದು ದೊಡ್ಡ ಮಸೀದಿಯಲ್ಲಿ ಇಸ್ಲಾಂ ಪಂಗಡದ ಬೃಹತ್ಸಭೆಯನ್ನು ಕುರಿತು ವೇದಾಂತದ ವಿಷಯವಾಗಿ ಪರ್ಶಿಯನ್ ಭಾಷೆಯಲ್ಲಿ ಬಹಳ ನಿರರ್ಗಳವಾಗಿ ಒಂದು ಪ್ರವಚನವನ್ನು ಕರುಣಿಸಿ ಅಲ್ಲಿಯ ಜನರ ಮೆಚ್ಚುಗೆಯನ್ನು ಪ್ರೀತಿಯನ್ನು ಸಂಪಾದಿಸಿದರು.

ಈ ರೀತಿ ತಮ್ಮ ವೇದಾಂತ ದಿಗ್ವಿಜಯವನ್ನು ಮಾಡಿ ಭಾರತಕ್ಕೆ ಮರಳಿಬಂದು, ಕೆಲಕಾಲ ಊರಿಂದ ಊರಿಗೆ ತಮ್ಮ ದೇಶಬಾಂಧವರಲ್ಲಿಯೇ ವೇದಾಂತಜ್ಞಾನವನ್ನು ಪ್ರಸಾರಮಾಡುತ್ತ ಕಾಲಕಳೆದರು. ಬರಬರುತ್ತ ಅವರು ಹೆಚ್ಚುಹೆಚ್ಚಾಗಿ ಅಂತರ್ಮುಖಿಗಳಾಗಲಾರಂಭಿಸಿದರು. ಉಪನ್ಯಾಸಗಳನ್ನೂ, ಬಾಹ್ಯಸಂಪರ್ಕ ಗಳನ್ನೂ ಕಡಿಮೆಮಾಡಿಕೊಳ್ಳುತ್ತ ಯಾವಾಗಲೂ ಏಕಕಾಲಲ್ಲಿ ತಮ್ಮ ಬಹಳ ಮಮತೆಯ ಮತ್ತು ಪ್ರೀತಿಯ ಗಂಗಾನದಿಯ (ಅವರು ಅದನ್ನು ಬಹಳ ಪ್ರೀತಿ ಯಿಂದ "ಗಂಗೀ" ಎಂದು ಕರೆಯುತ್ತಿದ್ದರು) ತೀರದಲ್ಲಿ ತಮ್ಮಲ್ಲಿ ತಾವೇ ಲೀನರಾಗಿ "ಆತ್ಮನ್ಯೇವಾತ್ಮನಾ ತುಷ್ಟಃ" ಎಂಬಂತೆ ದಿನಗಳನ್ನು ತಳ್ಳಲಾರಂಭಿಸಿದರು. ಆಧ್ಯಾತ್ಮಿ-ಕತೆಯ ಉಚ್ಚಸ್ಥಿತಿಯಾದ ಸಹಜ ಸಮಾಧಿಯಲ್ಲಿರಲಾರಂಭಿಸಿದರು. ತಮ್ಮ ಆಧ್ಯಾತ್ಮಿಕ ಜೀವಿತದ ಪೂರ್ಣತ್ವವನ್ನು ಸಂಪಾದಿಸಿ, ಜನತೆಯ ಉಚ್ಚಶೃಂಗದಲ್ಲಿ ಕೀರ್ತಿಯಿಂದ ಮೆರೆಯುತ್ತಿರುವ ಸಂದರ್ಭದಲ್ಲಿ, ಒಂದುದಿನ - 1960ರ ದೀಪಾವಳಿಯ ದಿನ -

ಬೆಳಿಗ್ಗೆ ತಮ್ಮ ಪ್ರೀತಿಯ ಹಾಗೂ ಪವಿತ್ರವಾದ "ಗಂಗೆ" ಯಲ್ಲಿ ಸ್ನಾನಮಾಡುತ್ತ ಆಕಸ್ಮಾತ್ತಾಗಿ ಮುಳುಗಿ ಹೋದರು. ತಮ್ಮ ಇಹದ ಯಾತ್ರೆಯನ್ನು "ಓಂ! ಓಂ! ಓಂ" ಎಂದು ಪವಿತ್ರವಾದ ಪ್ರಣವೋಚ್ಚಾರದೊಂದಿಗೆ ಮುಗಿಸಿದರು. ಒಂದು ಶರೀರದಲ್ಲಿ ಬದ್ಧರಾದ-ಅಲ್ಲ, ಜೀವನ್ಮುಕ್ತರಾದ-ರಾಮತೀರ್ಥರು ಈಗ ಕೋಟ್ಯಂತರ ಜೀವಿಗಳ ಹೃದಯುಗಳಲ್ಲಿ ರಾರಾಜಿಸಲಾರಂಭಿಸಿದರು.

ಕ್ರಿಸ್ತಶಕ ಹತ್ತೊಂಬತ್ತು ಮತ್ತು ಇಪ್ಪತ್ತನೆಯ ಶತಮಾನಗಳಲ್ಲಿ ಜೀವಿಸಿ, ನಮ್ಮ ಭಾರತಭೂಮಿಯನ್ನು ಪವಿತ್ರಗೊಳಿಸಿ, "ನಾವು ಪವಿತ್ರ 'ಭಾರತ'ದೇಶದ ಬೆಳಕಿನಲ್ಲಿ ತಲ್ಲೀನರಾದವರ ದೇಶದ ಮಕ್ಕಳು"ಎಂಬ ನೆನಪನ್ನು ನಮ್ಮೆಲ್ಲರಿಗೂ ಆಗಿಂದಾಗ್ಗೆ ಮಾಡಿಕೊಟ್ಟಂತಹ ಅತಿಶ್ರೇಷ್ಠರಾದ ಮಹಾತ್ಮರುಗಳಲ್ಲಿ ಸ್ವಾಮಿ ರಾಮತೀರ್ಥರು ಒಬ್ಬರು. ಪರಮಪೂಜ್ಯರೂ, ಪ್ರಾತಃಸ್ಮರಣೀಯರೂ ಆದ ಪರಮಹಂಸ ಶ್ರೀ ರಾಮಕೃಷ್ಣರು, ಸ್ವಾಮೀ ವಿವೇಕಾನಂದರು, ಭಗವಾನ್ ರಮಣ ಮಹರ್ಷಿಗಳು ಮತ್ತು ಮಹಾಯೋಗಿ ಶ್ರೀ ಅರವಿಂದರಂತಹ ಶ್ರೇಷ್ಠ ಸಂತರ ಮತ್ತು ಮಹಾಜ್ಞಾನಿಗಳ ದಿವ್ಯ ತಾರಾಪುಂಜದಲ್ಲಿ ಸ್ವಾಮೀ ರಾಮತೀರ್ಥರು ಒಂದು ಪ್ರಥಮ ದರ್ಜೆಯ ತಾರೆ. ಈ ಮಹಾತ್ಮರ ದಿವ್ಯಜೀವನದ ವೈಖರಿಯು ಮತ್ತು ಅದರಿಂದ ಸೂಚಿತವಾದ ಭಕ್ತಿಜ್ಞಾನಗಳ ಪಾರಮಾರ್ಥಿಕ ಪರಂಪರೆಯು ನಮ್ಮೆಲ್ಲರ ಹೃನ್ಮಂದಿರಗಳಲ್ಲಿ ಎಂದೆಂದಿಗೂ ರಾರಾಜಿಸುತ್ತಿರಲಿ. ಈ ಜ್ಞಾನಿಗಳು ತಮ್ಮ ದಿವ್ಯಚಕ್ಷುಸ್ಸಿನಿಂದ ಕಂಡ ಮುಂಬರುವ ದೈವೀ ಮಾನವಸಮಾಜದ ಕನಸು ಅವರ ಆಶೀರ್ವಾದದಿಂದ ಬಹಳ ಬೇಗ ನನಸಾಗಲಿ !

ಗಾಯಂತಿ ದೇವಾಃ ಕಿಲ ಗೀತಕಾನಿ
ಧನ್ಯಾಸ್ತುತೇ ಭಾರತಭೂಮಿಭಾಗೇ ।
ಸ್ವರ್ಗಾಪವರ್ಗಾಸ್ಪದ ಭೂಮಿಭಾಗೇ
ಭವಂತಿ ಭೂಯಃ ಪುರುಷಾಃ ಸುರತ್ವಾತ್ ॥

ಜಾಣ – ಜಾಣೆ
(ಸಿದ್ಧಕ–ಸಿದ್ಧಿ ಹಾಡು)

ಸಂಗ್ರಹ : ನಿಂಗಣ್ಣ ಸಣ್ಣಕ್ಕಿ

[ಉತ್ತರ ಕರ್ನಾಟಕ ಭಾಗದಲ್ಲಿ ಸಿದ್ಧಕ ಸಿದ್ಧಿ ಜನ ಎಂದು ಹೆಸರುವಾಸಿಯಾದವರಿದ್ದಾರೆ. ಇವರು ವೃತ್ತಿಗಾಯಕರು ; ಜಾನಪದ ಹಾಡುಗಾರರು. ಡೋಲು ಬಾರಿಸುತ್ತ ಗಾಯಕನೊಬ್ಬನು ಜೊತೆ ಚಿಮಣಾ ಸೋಗು ಹಾಕಿಕೊಂಡು ಮನೆ ಮನೆಗೆ ಹೋಗಿ ಹಾಡಿ ಜನರನ್ನು ಸಂತೋಷಗೊಳಿಸುತ್ತಾನೆ. ಇಂತಹ ಜನರ ಜೋಡಿಗಳ ತಂಡವೇ ಅಲ್ಲಲ್ಲಿ ಕಾಣಬರುವುದು.]

ಜಾಣ ಹೊಳಗಿ ಮಾಡ ಜಾಣೇಽ
ಹೊಳಗಿ ಮಾಡ ಜಾಣೇಽ ॥ ಪಲ್ಲವಿ ॥

ಜಾಣೆ ಬ್ಯಾಳಿ ಇಲ್ಲೋ ಜಾಣಾಽ
ಬ್ಯಾಳಿ ಇಲ್ಲೋ ಜಾಣಾಽ

ಜಾಣ ಬೆಳಗಾಂವಕ ಹೋಗತಿನಿ
ಚೀಲ ಬ್ಯಾಳಿ ತರತಿನಿ
ಬೆಳಗಾಂವಕ ಹೋಗತಿನಿ
ಚೀಲ ಬ್ಯಾಳಿ ತರತಿನಿ
ಹೊಳಗಿ ಮಾಡ ಜಾಣೇಽ... ॥ 1 ॥

ಜಾಣೆ ಗೋದಿ ಇಲ್ಲೋ ಜಾಣಾಽ
ಗೋದಿ ಇಲ್ಲೋ ಜಾಣಾಽ

ಜಾಣ ಗೋಕಾಕ ಹೋಗತಿನಿ
ಚೀಲ ಗೋದಿ ತರತಿನಿ
ಗೋಕಾಕ ಹೋಗತಿನಿ
ಚೀಲ ಗೋದಿ ತರತಿನಿ
ಹೊಳಗಿ ಮಾಡ ಜಾಣೇಽ... ॥ 2 ॥

ಜಾಣೆ ಎಣ್ಣಿ ಇಲ್ಲೋ ಜಾಣಾಽ
ಎಣ್ಣಿ ಇಲ್ಲೋ ಜಾಣಾಽ

ಜಾಣ ಗಾಣಗಾಪುರಕ ಹೋಗತಿನಿ
ಡಬ್ಬಿ ಎಣ್ಣಿ ತರತಿನಿ
ಗಾಣಗಾಪುರಕ ಹೋಗತಿನಿ
ಡಬ್ಬಿ ಎಣ್ಣಿ ತರತಿನಿ
ಹೊಳಗಿ ಮಾಡ ಜಾಣೇs... ॥ 3 ॥

ಜಾಣೆ ಕಟಗಿ ಇಲ್ಲೋ ಜಾಣಾs
ಕಟಗಿ ಇಲ್ಲೋ ಜಾಣಾs

ಜಾಣ ದಾಂಡೇಲಿಗೆ ಹೋಗತಿನಿ
ಕ್ವಿಂಟಲ್ ಕಟಗಿ ತರತಿನಿ
ದಾಂಡೇಲಿಗೆ ಹೋಗತಿನಿ
ಕ್ವಿಂಟಲ್ ಕಟಗಿ ತರತಿನಿ
ಹೊಳಗಿ ಮಾಡ ಜಾಣೇs... ॥ 4 ॥

ಜಾಣೆ ಬೆಲ್ಲ ಇಲ್ಲೋ ಜಾಣಾs
ಬೆಲ್ಲ ಇಲ್ಲೋ ಜಾಣಾs

ಜಾಣ ಬಾಗೇವಾಡಿಗಿ ಹೋಗತಿನಿ
ಪೆಂಟಿ ಬೆಲ್ಲಾ ತರತಿನಿ
ಬಾಗೇವಾಡಿಗಿ ಹೋಗತಿನಿ
ಪೆಂಟಿ ಬೆಲ್ಲಾ ತರತಿನಿ
ಹೊಳಗಿ ಮಾಡ ಜಾಣೇs... ॥ 5 ॥

ಜಾಣೆ ಹೋಳಿಗಿ ಒಲಿ ಇಲ್ಲೋ ಜಾಣಾs
ಹೋಳಿಗಿ ಒಲಿ ಇಲ್ಲೋ ಜಾಣಾs

ಜಾಣ ಕುಂಬಾರ ಮನಿಗಿ ಹೋಗತಿನಿ
ಹೊಳಿಗಿ ಒಲಿ ತರತಿನಿ
ಕುಂಬಾರ ಮನಿಗಿ ಹೋಗತಿನಿ
ಹೋಳಿಗಿ ಒಲಿ ತರತಿನಿ
ಹೋಳಗಿ ಮಾಡ ಜಾಣೇs... ॥ 6 ॥

ಜಾಣೆ ಬರೋದಿಲ್ಲೋ ಜಾಣಾs
ಬರೋದಿಲ್ಲೋ ಜಾಣಾs

ಜಾಣ ಬಡಿಗೇರ ಮನಿಗಿ ಹೋಗತಿನಿ
ಬಣ್ಣದ ಬಾರಕೋಲ ತರತಿನಿ
ಬಡಿಗೇರ ಮನಿಗಿ ಹೋಗತಿನಿ
ಬಣ್ಣದ ಬಾರಕೋಲ ತರತಿನಿ
ಹೋಳಗಿ ಮಾಡ ಜಾಣೇs... ॥ 7 ॥

ಜಾಣೆ ಬರೋದಿಲ್ಲೋ ಜಾಣಾs
ಬರೋದಿಲ್ಲೋ ಜಾಣಾs

ಜಾಣ ಸಮಗಾರ ಮನಿಗಿ ಹೋಗತಿನಿ
ಬಾರಿನ ಬಾರಕೋಲ ತರತಿನಿ
ಸಮಗಾರ ಮನಿಗಿ ಹೋಗತಿನಿ
ಬಾರಿನ ಬಾರಕೋಲ ತರತಿನಿ
ಹೋಳಗಿ ಮಾಡ ಜಾಣೇs... ॥ 8 ॥

ಜಾಣೆ ಮಾಡತಿನೋ ಜಾಣಾs
ಮಾಡತಿನೋ ಜಾಣಾs
ಕೂಡಿ ಉಣ್ಣೋಣ ಜಾಣಾs
ಕೂಡಿ ಉಣ್ಣೋಣ ಜಾಣಾs

ಜಾಣ ಹೋಳಗಿ ಮಾಡ ಜಾಣೇss

ಮಂಥನ

---

1. ಅರ್ಜುನವಾಡದ ಶಾಸನ ಸಮೀಕ್ಷೆ

ಅರ್ಜುನವಾಡ ಶಾಸನ ಬಸವಣ್ಣನವರ ವಂಶ, ಕಾಲಗಳನ್ನು ನಿಶ್ಚಯಿಸುವುದಕ್ಕೆ ಕೈಗಂಬವೆಂದು ಪಂಡಿತರ ಅಭಿಪ್ರಾಯವಾಗಿದೆ. ಈ ಶಾಸನ ಬೆಳ್ಗಾಂ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿಗೆ ಮೂರು ಮೈಲುಗಳ ದೂರದಲ್ಲಿ ಇರುವ ಅರ್ಜುನವಾಡ ಎಂಬ ಗ್ರಾಮದಲ್ಲಿ ಸಿಕ್ಕಿತು. ಇದನ್ನು ಮೊಟ್ಟಮೊದಲು ನೋಡಿದ ಕೀರ್ತಿ ಶ್ರೀ ಪಿ.ಜಿ. ಹಳಕಟ್ಟಿ ಅವರದು. ಅವರು ತಮ್ಮ ಶಿವಾನುಭವವೆಂಬ ಮಾಸ ಪತ್ರಿಕೆಯಲ್ಲಿ ಮಾರ್ಚಿ 1928 ನೆಯ ಇಸವಿಯಲ್ಲಿ ಪ್ರಕಟಿಸಿದರು. ಅನಂತರ ಡಾ॥ ಎಸ್. ಶ್ರೀಕಂಠಶಾಸ್ತ್ರಿಯವರು ಶ್ರೀ ಎನ್. ಲಕ್ಷ್ಮೀನಾರಾಯಣರಾವ್ ಅವರು ಎಪಿಗ್ರಾಫಿಯಾ ಇಂಡಿಕ ವಾಲ್ಯೂಮ್ 21 (1931-32)ರಲ್ಲಿ ಬೇರೆ ಬೇರೆಯಾಗಿ ಪ್ರಕಟಿಸಿದರು. ಶ್ರೀ ಪಾಂಡುರಂಗರಾವ್ ದೇಸಾಯಿ ಅವರು ತಮ್ಮ "Basaveshwara and his Times" ಎಂಬ ಪುಸ್ತಕದಲ್ಲಿ ವಿಪುಲವಾಗಿ ಚರ್ಚಿಸಿದರು.

ಈ ಶಾಸನ ಗದ್ಯಪದ್ಯಾತ್ಮಕವಾಗಿದೆ. ಇದರಲ್ಲಿ 35, 36ನೇ ಸಾಲುಗಳು ಬಹಳ ಪ್ರಧಾನವಾಗಿವೆ. ಇವು ಕಂದಪದ್ಯದ ನಾಲ್ಕುಪಾದಗಳಿಗೆ ಸಂಬಂಧಿಸಿವೆ. ಆದರೆ ಇಲ್ಲಿನ ಶಿಲಾಭಾಗ ಭಿನ್ನವಾಗಿ ಕೆಲವು ಅಕ್ಷರಗಳು ಚ್ಯುತವಾಗಿವೆ. ಈ ಅಕ್ಷರಗಳನ್ನು ಮೇಲೆ ಹೇಳಿರುವ ಪರಿಶೋಧಕರೆಲ್ಲರೂ ಊಹಿಸಿ ಕೆಲವು ಮಾರ್ಪಾಡುಗಳನ್ನು ಮಾಡಿದರು. ಅದರಿಂದ ಬಸವಣ್ಣನವರಿಗೆ ಒಬ್ಬ ಅಗ್ರಜನು ಸೃಷ್ಟಿಯಾದನು. ಮಕ್ಕಳೇ ಇಲ್ಲದ ಮಾದಲಾಂಬ, ಮಾದರಸರಿಗೆ ವರಪ್ರಸಾದಿಯಾಗಿ ಬಸವಣ್ಣನೇ ಮೊದಲು ಹುಟ್ಟಿದನು. ಇದು ವೀರಶೈವ ಪುರಾಣಗಳಿಂದ ತಿಳಿದುಬಂದ ಸತ್ಯ. ಈ ಸಾಹಿತ್ಯದ ಸತ್ಯಕ್ಕೂ ಮೇಲೆ ಹೇಳುವ ಶಾಸನ ಸತ್ಯಕ್ಕೂ ಈಗ ವಿರೋಧ ಒದಗಿತು. ಇದರಿಂದ ಶಾಸನದ ಮೂಲ ಪ್ರತಿಬಿಂಬವನ್ನೇ ನೋಡಬೇಕೆಂಬ ಇಚ್ಛೆ ಹುಟ್ಟಿತು. ಹತ್ತಿರದಲ್ಲಿಯೇ ಇರುವ ಕೇಂದ್ರ ಸರ್ಕಾರದ ಶಿಲಾ ಶಾಸನ ಶೋಧನ ಕಾರ್ಯಾಲಯಕ್ಕೆ ಹೋಗಿ ಡಾ॥ ಜಿ. ಎಸ್. ಗಾಯಿ ಅವರನ್ನು ನೋಡಿ, ಅವರ ಹತ್ತಿರ ಈ ವಿಷಯವನ್ನು ಪ್ರಸ್ತಾಪಿಸಿದೆನು. ಅವರು ಶಾಸನದ ಮೂಲ ಪ್ರತಿಬಿಂಬವನ್ನು ತರಿಸಿ ನನಗೆ ತೋರಿಸಿದರು.

ಆ ಶಾಸನದ 35, 36ನೇ ಸಾಲುಗಳು ಹೀಗಿವೆ:

ಸಂಗನ ಬಸವನ ಅಘ್ರು-
-ಗೈ ಕಂ ದೇವರಾಜ ಮುನಿಪನತನಯಂ
ಜಂಗಮ ಪುರುಸಂ-ವರ
ಸಂಗಂ ಪ್ರಿಯಸುತನೆನಿಪ್ಪ ಕಲಿ ದೇವರಸಂ

ಈ ಪದ್ಯದ ಮೊದಲನೇ ಪಾದದ ಅಂತ್ಯಾಕ್ಷರವೂ, ಎರಡನೇ ಪಾದದ ಆದ್ಯಕ್ಷರವೂ ಚ್ಯುತವಾಗಿವೆ. ಮೂರನೆಯ ಪಾದದ ಮೂರನೆ ಗಣದ ಮೊದಲನೆಯ ಅಕ್ಷರವು ಸ್ಖಲಿತವಾಗಿದೆ. ಈ ಪದ್ಯದಲ್ಲಿ ಒಟ್ಟು ಮೂರು ಅಕ್ಷರಗಳು ಖಿಲವಾಗಿರುವಂತೆ ತಿಳಿಯುತ್ತದೆ. ಮೊದಲನೆಯ ಪಾದದ ಅಂತ್ಯಾಕ್ಷರವನ್ನು ಪೂರೈಸುವಾಗ ಹಿಂದಿನ ಪರಿಶೋಧಕರೆಲ್ಲರೂ "ಅಘ್ರು" ಎಂಬ ಪದದಲ್ಲಿ ಇರುವ "ಘ್ರು" ಎಂಬ ಅಕ್ಷರವನ್ನು ಅಲ್ಪ ಪ್ರಾಣವಾಗಿ ಭಾವಿಸಿ "ಜ" ಎಂಬ ಅಕ್ಷರವನ್ನು ಸೇರಿಸಿ "ಅಗ್ರುಜ" ಎಂದು ಓದಿದರು. ಎರಡನೇ ಪಾದದ ಚ್ಯುತವಾದ ಮೊದಲನೆಯ ಅಕ್ಷರವನ್ನು "ಲಿಂ" ಎಂದು ಊಹಿಸಿ "ಲಿಂಗೈಕಂ" ಎಂದು ಓದಿದರು.

ಇದರಿಂದ "ಬಸವನ ಅಗ್ರುಜ ಲಿಂಗೈಕಂ" ಆಗುತ್ತದೆ. ಕಾಲ್ಪನಿಕವಾದ ಈ ಅಕ್ಷರಗಳಿಂದ ಬಸವಣ್ಣನವರಿಗೆ ಇಲ್ಲದೆ ಇರುವ ಮತ್ತೊಬ್ಬ ಅಣ್ಣನು ಹುಟ್ಟಿ ಕೊಂಡನು. ಇದು ಸಾಹಿತ್ಯದ ಸತ್ಯಕ್ಕೆ ವಿರುದ್ಧವಾಗಿದೆ. ಈ ವಿರುದ್ಧವಾದ ಸತ್ಯ ಮೂಡಿಬರಲು ಪ್ರಧಾನವಾದ ಕಾರಣವೇನೆಂದರೆ ಶಾಸನದಲ್ಲಿ ಮಹಾಪ್ರಾಣವಾಗಿ ಕಾಣುವ "ಘ್ರು" ಎಂಬುದನ್ನು ಅಲ್ಪಪ್ರಾಣವಾಗಿ ಭಾವಿಸುವುದು. ಈ ಅಘ್ರುಪದದ ಪಾರ್ಶ್ವದ ಚ್ಯುತಾಕ್ಷರ "ಯು" ಇರಬೇಕು. ಇದು ನನ್ನ ಊಹೆ. ಆಗ ಅಘ್ರುಯು ಆಗುತ್ತದೆ. ಇಲ್ಲಿಯು "ಅ" ಮೇಲೆ ಒಂದು ಚುಕ್ಕಿ ಇದೆ. ಇದು ಶಾಸನದಲ್ಲಿ ಪೂರ್ಣ ಬಿಂದುವಿಗೆ ಚಿಹ್ನೆ. ಮೇಲೆ ಚುಕ್ಕಿ ಇರುವ ಈ ಅಕಾರ 'ಅಂ' ಎಂದು ನಾವು ತಿಳಿಯಬೇಕು. ಇದೇ ಶಾಸನದಲ್ಲಿ ಮತ್ತು ಅರವತ್ತೆಂಟನೇ ಸಾಲುಗಳಲ್ಲಿ "ಭವಹರಂ" "ಕಲುಕಂಟಿ" ಎಂಬ ಶಬ್ದಗಳು ಕ್ರಮವಾಗಿ ಬರುತ್ತವೆ. ರಂ, ಕಂ, ಅಕ್ಷರಗಳ ಮೇಲೆ ಚುಕ್ಕಿಗಳಿವೆ. ಕೆಲವು ಕಡೆ ಅಕ್ಷರಗಳ ಮೇಲೆ ಪೂರ್ಣ ಬಿಂದುಗಳನ್ನು ಕೆತ್ತುವುದು ಉಂಟು. ಇದೇ ಶಾಸನದಲ್ಲಿ 4, 70 ನೇ ಸಾಲುಗಳಲ್ಲಿ ಬೃಂದಕೆ, ಗೊಡೆಯಿಂ ಎಂಬ ಪದಗಳಿವೆ. ಈ ಬೃ, ಯಿ ಎಂಬ ಅಕ್ಷರಗಳ ಮೇಲೆ ಪೂರ್ಣ ಬಿಂದುಗಳಿವೆ. ಕೆಲವು ಕಡೆ ಅಕ್ಷರದ ಪಕ್ಕದಲ್ಲಿ ಪೂರ್ಣ ಬಿಂದುವುಂಟು. ಕೆಲವು ಕಡೆ ಈ ಯಾವ ಚಿಹ್ನೆಯೂ ಇಲ್ಲದೆ ಬರೀ ಅಕ್ಷರ ಮಾತ್ರವೇ ಕಾಣುತ್ತದೆ. ಆ ಅಕ್ಷರದ ಪಕ್ಕದಲ್ಲಿ ಸೊನ್ನೆ ಸೇರಿಸಿಕೊಂಡು ನಾವು ಓದಬೇಕು. ಆಗಲೇ ಅದು ಅರ್ಥ ವಾಗುತ್ತದೆ. ಈ ಶಾಸನದ 62 ನೆಯ ಸಾಲಿನಲ್ಲಿ "ವ ಬತ್ತು" ಇದೆ. 'ವ' ಪಕ್ಕದಲ್ಲಿ ನಾವು ಸೊನ್ನೆ ಸೇರಿಸಿಕೊಂಡು ಓದಬೇಕು. ಅಗ ಅರ್ಥವಾಗುತ್ತದೆ. ಈ

ಕಾರಣಗಳಿಂದ 'ಅ' ಮೇಲೆ ಇರುವ ಚುಕ್ಕಿಯಿಂದಲೂ ಇಲ್ಲಿ ನಾವು ಅಂ ಎಂದು ಓದಬೇಕು. ಆಗ ಶಾಸನ ಪಾಠವು "ಅಂಘ್ರಿ [ಯ]" ಅಥವಾ "ಅಂಘ್ರಿ[ಯ]" ಎಂದಾಗುತ್ತದೆ.

35ನೆಯ ಸಾಲಿನ ಕಂದ ಪದ್ಯದ ಮೊದಲನೆಯ ಅಕ್ಷರ ಬಿಟ್ಟು ಹೋಗಿದೆ. ಆ ಸ್ಥಳದ ಕೆಳಭಾಗದಲ್ಲಿ ವಟ್ರಸುಳಿಯ ಚಿಹ್ನೆ ಛಾಯಾಮಾತ್ರವಾಗಿ ಕಂಡುಬರುತ್ತದೆ. ಬಹುಶಃ ಹಿಂದಿನವರು ಇದರಿಂದ "ಲಿಂ" ಎಂದು ಊಹಿಸಿ "ಲಿಂಗೈಕಂ" ಎಂದು ಓದಿರಬಹುದು. ಆದರೆ ಅರ್ಥ ಮತ್ತು ಶಬ್ದಗಳು ಸರಿಹೊಂದುವುದಿಲ್ಲ. ಛಾಯಾ ರೂಪವಾಗಿರುವ ವಟ್ರಸುಳಿಯಿಂದ ಕೂಡಿದ ಒಂದು ಅಕ್ಷರ ಇರಬೇಕು. ಅದು ಪ್ರಾಯಶಃ "ಭೃಂ" ಎಂದು ನಾನು ಊಹಿಸಿದ್ದೇನೆ. ಈ "ಭೃಂ" ಅಕ್ಷರದೊಡನೆ "ಗೈಕಂ" ಎಂಬ ಅಕ್ಷರಗಳನ್ನು ಸೇರಿಸಿ ಓದುವುದಾದರೆ "ಭೃಂಗೈಕಂ" ಎಂಬ ಪದ ಸಿದ್ಧವಾಗುತ್ತದೆ. ಈಗ ಈ ಸಾಲುಗಳನ್ನು ಹೀಗೆ ಓದಬಹುದು.

ಸಂಗನ ಬಸವನ ಅಂಘ್ರಿ (ಯ)
(ಭೃಂ) ಗೈಕಂ ದೇವರಾಜಮುನಿಪನತನಯಂ

ಇದರಿಂದ ಪಾದ(ಪದ್ಮ)ಗಳಲ್ಲಿ ಭೃಂಗೈಕನಾದ ದೇವರಾಜಮುನಿಯೊಬ್ಬನಿದ್ದನು ಎಂಬ ಅರ್ಥ ಸಿದ್ಧವಾಗುತ್ತದೆ. ದೇವರಾಜಮುನಿಪನು ಬಸವನಿಗೆ ಅಣ್ಣನಲ್ಲ. ಈ ಇಬ್ಬರಿಗೂ ರಕ್ತ ಸಂಬಂಧವಿಲ್ಲ. ಅವರಲ್ಲಿ ಗುರುಶಿಷ್ಯಸಂಬಂಧವೇ ಕಂಡುಬರುತ್ತದೆ. ದೇವರಾಜಮುನಿಪನ ಮಠದ ಶಿಷ್ಯ ಪರಂಪರೆಯನ್ನು ಈ ಶಾಸನ ಸೂಚಿಸುತ್ತದೆ. ಇದನ್ನು ಇನ್ನೂ ಪರಿಶೋಧಿಸಿ ಪರಿಶೋಧಕರು ಸತ್ಯವನ್ನು ಸಾರಬೇಕೆಂದು ನನ್ನ ಪ್ರಾರ್ಥನೆ. ಈ ಪದ್ಯದ ಮೂರನೇ ಪಾದದ ಮೂರನೆ ಗಣದ ಅಧ್ಯಕ್ಷರ "ನೋ" ಎಂದು ಪಿ. ಬಿ. ದೇಸಾಯಿ ಅವರು ಓದಿದರು. ಅದೇ ಸತ್ಯವಾಗಿ ಕಂಡುಬರುತ್ತದೆ.

ಈ ಶಾಸನವನ್ನು ಓದುವಾಗ ಸಹಕರಿಸಿದ ಡಾ. ಜಿ. ಎಸ್. ಗಾಯಿ ಅವರಿಗೆ, ಚರ್ಚಿಸುವಾಗ ಸಹಾಯವಿತ್ತ ಮಿತ್ರರಾದ ಪಂಡಿತ್ ಶ್ರೀ ಸುಬ್ರಮಣ್ಯಶಾಸ್ತ್ರಿ ಅವರಿಗೆ ನಾನು ಬಹಳ ಕೃತಜ್ಞ.

ಬಾಡಾಲ ರಾಮಯ್ಯ

2. 'ವಿಕ್ರಮಾರ್ಜುನ ವಿಜಯ'ದ ಆಶೀಪದ್ಯ

'ವಿಕ್ರಮಾರ್ಜುನ ವಿಜಯ' ಗ್ರಂಥದ ಪ್ರಥಮಾಶ್ವಾಸದ ಆಶೀ ಪದ್ಯ,[1] ಹಲವು ವರ್ಷಗಳಿಂದ ನನ್ನ ಮನಸ್ಸನ್ನು ಸೆಳೆದು ನಿಂತ ಪದ್ಯಗಳಲ್ಲಿ ಒಂದಾಗಿದೆ. ಇದಕ್ಕೆ

---

1 ಸರ್ಗಬಂಧೋ ಮಹಾಕಾವ್ಯಮುಚ್ಯತೇ ತಸ್ಯ ಲಕ್ಷಣಮ್ ।
ಆಶೀರ್ನಮಸ್ಕ್ರಿಯಾ ವಸ್ತು ನಿರ್ದೇಶೋವಾಪಿ ತನ್ಮುಖಂ ॥ ಕಾವ್ಯಾದರ್ಶ

ಕಾರಣವೆಂದರೆ, ಕೆಲ ಪಂಡಿತರು ಕವಿ ಲಕ್ಷ್ಮೀಪತಿ ಅಥವಾ "ಲಕ್ಷ್ಮೀಶ" ಕವಿಯ ಕಾಲವನ್ನು 'ಜೀಯ' 'ಛಪ್ಪನ್ನ' ಮುಂತಾದ ಶಬ್ದಗಳ ಆಧಾರದ ಮೇಲೆ ನಿರ್ಧರಿಸ ಹೊರಟುದು : ಈ ಕಾವ್ಯದಲ್ಲಿ ಪೌಜು, ಜೀಯ, ಚಪ್ಪನ್ನ ಮೊದಲಾದ ಕನ್ನಡೇತರ ಶಬ್ದಗಳ ಪ್ರವೇಶವಾಗಿರುವುದರಿಂದ ಇದು 16ನೆಯ ಶತಮಾನದಲ್ಲಿ ವಿರಚಿತವಾದು ದೆಂದು ನಾವು ನಿರ್ಧರಿಸಬಹುದಾಗಿದೆ.[2] ಶಬ್ದ ಪ್ರಯೋಗವೊಂದೇ ಯಾವ ಕವಿಯ ಕಾಲವನ್ನೂ ನಿರ್ಧರಿಸುವಲ್ಲಿ ಖಚಿತವಾದ ಸಾಧನವಾಗಲಾರದು ಎಂಬ ಎಚ್ಚರವನ್ನು ನನ್ನಲ್ಲಿ ಮೊದಲು ಹುಟ್ಟಿಸಿದುದು ಪಂಪನ ಈ ಕವಿತೆ. ಏಕೆಂದರೆ ಪಂಪನು 'ಜೀಯ' ಎಂಬ ಪದವನ್ನು ಬಳಸಿರುದು ಸ್ಪಷ್ಟವಿದೆ. ಜೀ, ಜೀಯ – ಇವು ಒಂದೇ ಮೂಲದ ಶಬ್ದಗಳು. ಆ ಪದ್ಯವಿಂತಿದೆ :

ಶ್ರೀಯುನರಾತಿ ಸಾಧನಪಯೋನಿಧಿಯೊಳ್ ಪಡೆಮಂ ಧರಿತ್ರಿಯುಂ ।
ಜೀಯನೆ ಬೇಡಿಕೊಳ್ಳದೆ ವಿರೋಧಿ ನರೇಂದ್ರರನೊತ್ತಿಕೊಂಡುಮಾ ॥
ತ್ರೀಯ ಸುಪುಷ್ಟ ವೃಷ್ಟಿಯನೊಡಂಬಡೆ ತಾಳ್ದಿಯುಮಿಂತುದಾತ್ತನಾ ।
ರಾಯಣನಾದ ದೇವನೆಮಗೀಗರಿಕೇಸರಿ ಸೌಖ್ಯ ಕೋಟಿಯುಂ ॥

ಪಂಪನ ಈ ಪದ್ಯ ಸರಳವಾಗಿದ್ದರೂ ವಿದ್ವಾಂಸರಲ್ಲಿ ವಾದವಿವಾದಕ್ಕೆಡೆ ಕೊಟ್ಟಿದೆ. ಪಂಡಿತ ಮುಳಿಯ ತಿಮ್ಮಪ್ಪಯ್ಯನವರು ಒಂದು ವಿಧ[3] ; ಡಾ॥ ಡಿ. ಎಲ್. ನರಸಿಂಹಾಚಾರ್ ಇನ್ನೊಂದು ವಿಧ[4] ; ಮತ್ತು ಡಾ॥ ಎಮ್. ಎಮ್. ಕಲ್ಬುರ್ಗಿ ಇವರು ಮಗುದೊಂದು ವಿಧ[5] – ಹೀಗೆ ಮೂರು ವಿವರಣೆಗಳು ನಮ್ಮ ಮುಂದೆ ಇವೆ. ಈ ಮೂರು ಬಗೆಯ ವಿವರಣೆಗಳಿಗೆ ಕಾರಣ, ಈ ಪದ್ಯದಲ್ಲಿ ಬಂದಿರುವ "ಸುಪುಷ್ಟ ವೃಷ್ಟಿ" ಎಂಬ ಪದದ ಪ್ರಯೋಗ. ಈ ಪದ್ಯದ ಪಾಠ, ಅರ್ಥ–ಇವುಗಳನ್ನು ವಿವೇಚಿಸುವುದೇ ಈ ಲೇಖನದ ಗುರಿ.

ಕನ್ನಡ ಸಾಹಿತ್ಯ ಪರಿಷತ್ತಿನ ಸಂಪಾದಕರು 'ವಿಕ್ರಮಾರ್ಜುನ ವಿಜಯ' ಗ್ರಂಥವನ್ನು ಪರಿಷ್ಕರಿಸಿ ಪ್ರಕಟಿಸುವಾಗ್ಗೆ ತಮಗೆ ಅರ್ಥವಾಗದ ಪ್ರಯೋಗಗಳಿಗೆ

---

2 ಮೈಸೂರು ಸಂಸ್ಥಾನದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆಯಿಂದ ಪ್ರಕಟವಾದ "ಕನ್ನಡ ಜೈಮಿನಿ ಭಾರತ"—ಕವಿ, ಕಾವ್ಯ ವಿಚಾರ, ಪುಟ xviii. ಲಕ್ಷ್ಮೀಪತಿಯ ಕೃತಿಯ ಬಗೆಗೆ ನನ್ನದೊಂದು ಗ್ರಂಥವೇ ಬರಲಿದೆ; ಅಲ್ಲಿ ಇದರ ವಿವರ ನೋಡಬಹುದು

3 ಮುಳಿಯ ತಿಮ್ಮಪ್ಪಯ್ಯ : ನಾಡೋಜ ಪಂಪ

4 ಡಿ. ಎಲ್. ನರಸಿಂಹಾಚಾರ್ : ಕನ್ನಡ ಗ್ರಂಥ ಸಂಪಾದನೆ ; ಪಂಪಭಾರತ ದೀಪಿಕೆ

5 ಎಮ್. ಎಮ್. ಕಲ್ಬುರ್ಗಿ, 'ಪಂಪ ಭಾರತದ ಮಂಗಲ ಪದ್ಯ' 'ಕರ್ನಾಟಕ-ಭಾರತಿ' ಸಂಪುಟ 3 ಸಂಚಿಕೆ 2. ಪುಟ 68-71

ಪ್ರಶ್ನೆಯ ಚಿಹ್ನೆಯನ್ನು ಹಾಕಿ ಊಹಿತಪಾಠಗಳನ್ನು ಕೊಟ್ಟು, ಅದನ್ನು 'ಪ' ಎಂಬ ಸಂಕೇತದಿಂದ ಸೂಚಿಸಿರುವುದುಂಟು, ಅಡಿಟಿಪ್ಪಣಿಯಲ್ಲಿ. ಅವರು ತಾವು ಹಿಡಿದ ಸಂಪಾದನಾ ಮಾರ್ಗವನ್ನು ಕುರಿತು ವಿವರಿಸಿಯೂ ಇದ್ದಾರೆ.[6] ಅವರ ಕ್ರಮದಂತೆ "ಸುಪುಷ್ಪ ವೃಷ್ಟಿ" ಇದರ ಮುಂದೆ ಪ್ರಶ್ನೆಯ ಚಿಹ್ನೆಯೂ ಮತ್ತೆ ಅಡಿಯಲ್ಲಿ "ಸುಪುಷ್ಪ ದೃಷ್ಟಿ" ಎಂಬ 'ಪ' ಸಂಕೇತದ ಊಹಿತಪಾಠವೂ ಇದೆ. ಕಾರಣ 'ಪ' ಎಂಬ ಸಂಕೇತದಿಂದ ಕೂಡಿದ ಅಡಿಟಿಪ್ಪಣಿಗಳನ್ನು ಅಭ್ಯಾಸಿಗಳು ಪಂಪನ ಕವಿತೆಯ ಪಾಠವೆಂದು ಸ್ವೀಕರಿಸುವಲ್ಲಿ ತುಂಬ ಜಾಗರೂಕರಾಗಿರಬೇಕು. ಮತ್ತು ಅವುಗಳನ್ನು ತಿದ್ದುಪಡಿಗಳೆಂದು ಹೇಳಬಹುದೆ ವಿನಾ ಪಾಠಾಂತರವೆಂದು ಕೆಲವರು ಸ್ವೀಕರಿಸು ವಂತೆ[7] ಸ್ವೀಕರಿಸಲು ಸಾಧ್ಯವಿಲ್ಲ. ಉಪಲಬ್ಧ ಹಸ್ತಪ್ರತಿಗಳಲ್ಲಿ 'ಸುಪುಷ್ಪ ವೃಷ್ಟಿ' ಇದು ತ್ರುಟಿತವಾದಂತೆ ಕಂಡುಬರುವದಿಲ್ಲ. ಅರ್ಥಾತ್ ಕವಿಪಾಠ, 'ಸುಪುಷ್ಪ ವೃಷ್ಟಿ' ಇದರಿಂದ ಭಿನ್ನವೆಂದು ಹೇಳಲು ಆಧಾರವಿಲ್ಲ. ಹಸ್ತಪ್ರತಿಗಳಲ್ಲಿ ನ್ಯೂನತೆಗಳಿದ್ದಾಗ ಹೊಸಪಾಠ ಯೋಜನೆ ಸರಿಯಾದುದು. ಸದ್ಯದಲ್ಲಿ ಅಂತಹ ಗ್ರಂಥಪಾಠಾದಿ ನ್ಯೂನತೆಯೊಂದೂ ಇಲ್ಲ. ಆದುದರಿಂದ ಹೊಸಪಾಠ ಯೋಜನೆ ಆವಶ್ಯಕವೆ? ಇದು ಅಭ್ಯಾಸಿಗಳು, ವಿದ್ವಾಂಸರು ವಿಚಾರಿಸಬೇಕಾದ ವಿಷಯ. ವಿದ್ವಾಂಸರ ವಿವರಣೆಗಳನ್ನು ಈಗ ಅವಲೋಕಿಸೋಣ.

1. ದಿ. ಪಂಡಿತ ಮುಳಿಯ ತಿಮ್ಮಪ್ಪಯ್ಯನವರು "ಶ್ರೀಯನರಾತಿ ಸಾಧನ ಪಯೋನಿಧಿಯೊಳ್ ಪಡೆದುಂ............ಸೌಖ್ಯ ಕೋಟಿಯಂ" ಇದನ್ನು ಕುರಿತು ಹೀಗೆ ಬರೆದಿದ್ದಾರೆ: ಪ್ರಥಮಾಶ್ವಾಸದ ಮಂಗಲಾಚರಣವಾದುದರಿಂದ, 'ಉದಾತ್ತ ನಾರಾಯಣನಾದ' ಅರಿಕೇಸರಿಯ ಸಂಪೂರ್ಣೇತಿಹಾಸದ ಸಂಗ್ರಹವೇ ಇಲ್ಲಿ ಸೂಚಿತ ವಾಗುತ್ತಿದೆ, ಎಂಬುದನ್ನು ಮೊದಲು ಭಾವಿಸಬೇಕು. ಈ ಪದ್ಯದಲ್ಲಿ ನಾರಾಯಣ ನಿಗಿಂತಲೂ ಆಧಿಕ್ಯವನ್ನು, ತನ್ನ 'ಉದಾತ್ತ ನಾರಾಯಣ'ನಲ್ಲಿ ಕವಿ ಹೊಳೆಯಿಸು ತ್ತಾನೆ. ಅವನು 'ಪಯೋನಿಧಿಯೊಳ್'ಗೆ ಶ್ರೀ (ಲಕ್ಷ್ಮಿ)ಯನ್ನು ಪಡೆದರೂ,

---

6. ವಿ. ವಿಜಯ; ಕ. ಸಾ. ಪ. ಮುದ್ರಣ, ಉಪೋದ್ಘಾತ, ಪುಟ xvi

7. i) 'ಪಂಪ ಭಾರತದ ಮಂಗಲ ಪದ್ಯ' — ಕರ್ನಾಟಕ ಭಾರತಿ ಸಂಪುಟ 3, ಸಂ. 2. ಪುಟ 68 ಮತ್ತು 69.

ii) ನಾಡೋಜ ಪಂಪ, ಪುಟ 199 ಅಡಿಟಿಪ್ಪಣಿ 1: 'ಸುಪುಷ್ಪ ದೃಷ್ಟಿ' ಎಂದು [ಪ] ಪ್ರತಿಯಲ್ಲಿ ಪಾಠಾಂತರವಿದೆ. ಕಲ್ಬುರ್ಗಿಯವರು: [ಪಾಠಾಂತರ 1-1 ಸುಪುಷ್ಪ ದೃಷ್ಟಿ (ಪ)] – ಎಂದು ಬರೆದಿದ್ದಾರೆ. 'ಪ' ಎಂಬ ಹಸ್ತಪ್ರತಿ ಇದ್ದಾಗ ಈ ಬರವಣಿಗೆಗೆ ಇನಿತು ಬೆಲೆ. 'ಪ' ಎಂಬ ಪ್ರತಿ ಎಲ್ಲಿಯಿದೆ? ಇದು ನಮ್ಮ ನಮ್ರ ಪ್ರಶ್ನೆ. ಪರಿಷತ್ತಿನ ಸಂಪಾದಕರ ಸೂಚಿತ ಪಾಠಗಳು — ಹೊಸಪಾಠ ಯೋಜನೆಗಳು, ಸ್ಖಾಲಿತ್ಯಗಳೇ ಇಲ್ಲದಾಗ ಕವಿ ಪಾಠವಾಗುವ ಬಗೆ ಹೇಗೆ?

'ವಿರೋಧಿ ನರೇಂದ್ರ'ನಾದ ಬಲಿ ಚಕ್ರವರ್ತಿಯಲ್ಲಿ ಬೇಡಿಯೇ 'ಧರಿತ್ರಿಯ'ನ್ನು ಪಡೆದುಕೊಂಡವನು. ಸುರಾಸುರರೊಡಗೂಡಿಯೇ 'ಪಯೋನಿಧಿ' ಮಥನಮಾಡಿ ನಾರಾಯಣನು ಶ್ರೀಯನ್ನು ಪಡೆದನು. ಆದರೂ, ಧರಿತ್ರಿಯನ್ನು ಬೇಡಿಯೇ ಕೊಂಡುದು. ಉಭಯ ಕ್ರಿಯೆಗಳಾದರೂ ಸ್ವೋಪಭೋಗಕ್ಕಾಗಿಯೇ ಪರಿಣಮಿಸಿದವು. ಸ್ವಾರ್ಥವು ಅಷ್ಟರಲ್ಲಿಯೂ ಮುಗಿದುದೆ? ಇಲ್ಲ. **'ಆತ್ಮೀಯ'ರಾದವರ 'ಪುಷ್ಪವೃಷ್ಟಿ'ಯನ್ನೂ ಅವನೊಬ್ಬನೇ 'ತಾಳ್ದಿದ'ನು.** ನಮ್ಮ ನಾಯಕನು ಹಾಗಲ್ಲ. ....ಇತ್ಯಾದಿ.[8] ಇಲ್ಲಿ ದಿವಂಗತರು 'ಪೂ' ಎಂಬ ಅಭಿಧಾರ್ಥವನ್ನು ಸ್ವೀಕರಿಸಿರುವುದು ಸ್ಪಷ್ಟವಿದೆ. 'ಸುಪುಷ್ಪ ವೃಷ್ಟಿ' ಎಂಬ ಪಾಠವನ್ನು ಸ್ವೀಕರಿಸಿರುವುದೂ ನಿಚ್ಚಳವಿದೆ.

2. ದಿ। ಡಾ. ಡಿ. ಎಲ್. ನರಸಿಂಹಾಚಾರ್ಯರು 'ಕನ್ನಡ ಗ್ರಂಥ ಸಂಪಾದನೆ' ಎಂಬ ಗ್ರಂಥದಲ್ಲಿ 'ಪಾಠ ಪರಿಷ್ಕರಣ' ಎಂಬ ವಿಷಯವನ್ನು ವಿವರಿಸುತ್ತ, ಪ್ರಾಚೀನ ಗ್ರಂಥಗಳ ಸಂಪಾದಕನಿಗೆ ಹಲವು ಶಾಸ್ತ್ರಗಳ ಪರಿಚಯ ಇರಬೇಕಾಗುತ್ತದೆ ಎಂದು ತಿಳಿಸುತ್ತ, ಪ್ರಾಚೀನ ಶಾಸ್ತ್ರಗಳ ಪ್ರಭಾವ ಕನ್ನಡ ಕವಿಗಳಲ್ಲಿ ಎಷ್ಟರಮಟ್ಟಿಗೆ ಇದೆಯೆಂಬುದನ್ನು ತೋರಿಸುವದಕ್ಕಾಗಿ ಕೆಲವು ನಿದರ್ಶನಗಳನ್ನು ಕೊಡುತ್ತ ಪಂಪ ಭಾರತದ ಮೊದಲ ಪದ್ಯ "ಶ್ರೀಯುತರಾತಿ ಸಾಧನ ಪಯೋನಿಧಿಯೊಳ್......... ಸೌಖ್ಯ ಕೋಟಿಯಂ" ಕುರಿತ ವಿವರಣೆಯನ್ನು ಈ ಬಗೆಯಾಗಿ ಬರೆದಿದ್ದಾರೆ: "ಇಲ್ಲಿ ಬರುವ "ಸುಪುಷ್ಪ ವೃಷ್ಟಿ" ಎಂಬುದಕ್ಕೆ ಸಂಪಾದಕರು ಪ್ರಶ್ನೆ ಚಿಹ್ನೆಯನ್ನು ಹಾಕಿ ತಮ್ಮ ಸಂದೇಹವನ್ನು ವ್ಯಕ್ತಪಡಿಸಿದ್ದಾರೆ; ಅಲ್ಲದೆ 'ಸುಪುಷ್ಟದೃಷ್ಟಿ' ಎಂದು ಅಡಿ ಟಿಪ್ಪಣಿಯಲ್ಲಿ 1. ಕೊಟ್ಟು ಅದನ್ನು (ಪ) ಎಂದರೆ 'ಕರ್ಣಾಟಕ ಸಾಹಿತ್ಯ ಪರಿಷತ್ತಿನ ಪಾಠ' ಎಂದೂ ಹೇಳಿದ್ದಾರೆ. ಈ ಪದ್ಯದಲ್ಲಿ ಪಂಪ ತನ್ನ ಪೋಷಕನಾಗಿದ್ದ ಅರಿಕೇಸರಿ ರಾಜನನ್ನು ನಾರಾಯಣದೇವರಿಗೆ ಹೋಲಿಸಿ ತನ್ನ ಪೋಷಕನೇ ಆ ದೇವರಿಗಿಂತ ಉದಾತ್ತನೆಂಬುದನ್ನು ನಿರೂಪಿಸಿದ್ದಾನೆ. ದೇವದಾನವರು ಸೇರಿ ಸಮುದ್ರಮಥನ ಮಾಡುವಾಗ ಲಕ್ಷ್ಮಿ ಹುಟ್ಟಿದಳು; ಅವಳನ್ನು ವಿಷ್ಣು ಸದ್ದಿಲ್ಲದೆ ತನ್ನವಳೆಂದು ಪರಿಗ್ರಹಿಸಿದನು. ಶ್ರಮ ಯಾರದೋ, ಫಲ ಮಾತ್ರ ನಾರಾಯಣನಿಗೆ. ಅರಿಕೇಸರಿಯಾದರೆ ಶತ್ರುಸೈನ್ಯ ಸಾಗರವನ್ನು ಸ್ವಬಲದಿಂದ ಮಥಿಸಿ ಜಯಲಕ್ಷ್ಮಿಯನ್ನು ಪಡೆದ; ಆದ್ದರಿಂದ ಅವನು ನಾರಾಯಣನಿಗಿಂತ ಮೇಲು. ವಾಮನ ರೂಪಿ ನಾರಾಯಣ ಬಲಿಯನ್ನು ಯಾಚಿಸಿ ನೆಲವನ್ನು ಪಡೆದ; ಅರಿಕೇಸರಿ ಶತ್ರುರಾಜರನ್ನು ಮೆಟ್ಟಿ ರಾಜ್ಯವನ್ನು ಸಂಪಾದಿಸಿದ. ಯಾರು ಹೆಚ್ಚು? ಅರಿಕೇಸರಿ ತಾನೆ? ಹಾಗೆಯೇ ಅವನು 'ಸುಪುಷ್ಪವೃಷ್ಟಿಯನ್ನು' ಧರಿಸಿಕೊಂಡನು. ನಾರಾಯಣನಿಗೆ ಇಲ್ಲಿ ಬಂದದ್ದೇನು? ಅರ್ಥವೇ ಆಗುವಂತಿಲ್ಲ. 'ಸುಪುಷ್ಟ ದೃಷ್ಟಿ' ಎಂದು

---

[8] ನಾಡೋಜ ಪಂಪ, ಪುಟ 199-200

ಇಟ್ಟುಕೊಂಡರೂ 'ಚೆನ್ನಾಗಿ ಬಲಿತ ಕಣ್ಣು' ಎಂಬ ಅರ್ಥವಾಗುತ್ತದೆ. ಅದು ಇಬ್ಬರಿಗೂ ಇರಬಹುದಲ್ಲ! ಒಬ್ಬನ ಅಗ್ಗಳಿಕೆಯನ್ನು ಇದು ವ್ಯಕ್ತಪಡಿಸುವುದಿಲ್ಲ. 'ಸುಪುಷ್ಪ ದೃಷ್ಟಿ' ಎಂದು ಭಾವಿಸೋಣವೆ? ಒಳ್ಳೆಯ ಹೂಗಣ್ಣನ್ನುಳ್ಳವನು ಎಂದರ್ಥವಾಗುತ್ತದೆ. ಇಲ್ಲವೇ ಹೂವಿನಂತಿರುವ ಕಣ್ಣುಳ್ಳವನು ಎಂದರೆ ಇಬ್ಬರಿಗೂ ನಿಂದೆಯಾಗುತ್ತದೆ; ಈ ಸಂದರ್ಭದಲ್ಲಿ 'ಕಮಲಗಣ್ಣಿನ ದೇವನೇ ಸಾಕೆಮಗೆ ಮಾಡುವುದೇನು' ಎಂಬ ಕುಮಾರವ್ಯಾಸನ ಮಾತನ್ನು (5–8–63), ದುರ್ಯೋಧನ ಕೃಷ್ಣನನ್ನು ತಿರಸ್ಕರಿಸುವುದನ್ನು ನೆನೆಯಬಹುದು. ಆದ್ದರಿಂದ ಇಲ್ಲಿ ಸ್ವೀಕೃತ ಪಾಠವಾಗಲಿ, ಸೂಚಿತ ಪಾಠವಾಗಲಿ, ನಿಯೋಜಿಸಬಹುದಾದ ಪಾಠವಾಗಲಿ ಸಮರ್ಪಕವಾದ ಅರ್ಥವನ್ನು ಕೊಡುವಂತಿಲ್ಲ. **ಇದಕ್ಕೆ ಪಾಠಾಂತರಗಳೇ ಪ್ರತಿಗಳಲ್ಲಿ ಇಲ್ಲದಿರುವುದರಿಂದ ಇಲ್ಲಿನ ಪಾಠ ಬಹಳ ಹಿಂದಿನ ಕಾಲದಲ್ಲೇ ಕೆಟ್ಟುಹೋಗಿರಬೇಕು. ಆ ಸ್ಖಾಲಿತ್ಯ ಇಲ್ಲಿನವರೆಗೂ ಉಳಿದುಕೊಂಡು ಬಂದಿದೆ;**[9] ಸಂಪಾದಕನಿಗೆ ಸವಾಲನ್ನು ಹಾಕುತ್ತಿದೆ. ಇದನ್ನು ಬಿಡಿಸಬೇಕಾದರೆ ಶಿಲ್ಪಶಾಸ್ತ್ರದ ನೆರವು ಬೇಕಾಗುತ್ತದೆ. ರಾಜರೂ ದೇವತೆಗಳೂ ಧರಿಸಬಹುದಾದ ಶಿರೋವೇಷ್ಟನಗಳಲ್ಲಿ ಜಟಾ, ಮೌಳಿ, ಕಿರೀಟ, ಕರಂಡ, ಶಿರಸ್ತ್ರಕ, ಕುಂಡಲ (ಕುಂಚಲ?), ಕೇಶಬಂಧ, ಧಮ್ಮಿಲ್ಲ, ಅಲಕ, ಚೂಡ, ಮಕುಟ ಮತ್ತು ಪಟ್ಟ– ಎಂಬ ಹನ್ನೆರಡು ವಿಧಾನಗಳಿವೆ. ಇವುಗಳಲ್ಲಿ ಕೊನೆಯದಾದ ಪಟ್ಟ ಎಂಬುದರಲ್ಲಿ ಪತ್ರಪಟ್ಟ, ರತ್ನಪಟ್ಟ, ಪುಷ್ಪಪಟ್ಟ ಎಂಬ ಮೂರು ಬಗೆಗಳಿವೆ. ಇಲ್ಲಿ ಹೇಳಿರುವ ಪುಷ್ಪಪಟ್ಟ ಎಂಬುದು ತಲೆಗೆ ಹಾಕಿಕೊಳ್ಳುವ ಒಂದು ತೆರನಾದ ಕಿರೀಟವೆಂದು ಹೇಳಬಹುದು. ಇದನ್ನು ಪಟ್ಟಭಾಜ್ ವರ್ಗದ ದೊರೆಗಳೂ ಸಾಮಂತರೂ ಧರಿಸುತ್ತಿದ್ದರು. ಪಂಪನು ಈ ಶಬ್ದವನ್ನು ತನ್ನ ಪದ್ಯದಲ್ಲಿ ಬಳಸಿರಬೇಕು. ದೇವತಾ ಮೂರ್ತಿಗಳಿಗೆ ಬಗೆ ಬಗೆಯಾದ ಕಿರೀಟಗಳನ್ನು ಶಿಲ್ಪಿಗಳು ಕೆತ್ತುತ್ತಾರೆ. ಅವುಗಳಲ್ಲಿ ಪುಷ್ಪಪಟ್ಟವೊಂದು. ಪ್ರಕೃತ, ನಾರಾಯಣನು ಧರಿಸಿಕೊಂಡಿರುವುದು ಪುಷ್ಪಪಟ್ಟ; ಅರಿಕೇಸರಿ ಹಾಕಿಕೊಂಡಿರುವುದು ಸುಪುಷ್ಪಪಟ್ಟ. ಆದ್ದರಿಂದ ಅವನು ನಾರಾಯಣನಿಗಿಂತ ಮೇಲು ಎಂಬ ಸಮಂಜಸವಾದ ಅರ್ಥವಾಗುತ್ತದೆ. ಇಲ್ಲಿ ಪಂಪನು ಶಿಲ್ಪಶಾಸ್ತ್ರದ ತನ್ನ ಜ್ಞಾನವನ್ನು ಉಪಯೋಗಿಸಿದ್ದಾನೆ. ಊಹಾಬಲದಿಂದಲೂ ಬಾಹ್ಯಸಾಕ್ಷ್ಯಗಳಿಂದಲೂ ಮೇಲಿನ ಪದ್ಯದ ಪಾಠದಲ್ಲಿ 'ಸುಪುಷ್ಪ ಪಟ್ಟ' ಎಂದು ತಿದ್ದಿದರೆ ಪಂಪನು ಉಪಯೋಗಿಸಿರಬೇಕಾದ ಶಬ್ದವನ್ನು ಯೋಜಿಸಿದ ಹಾಗಾಗುತ್ತದೆ. ಇತರ ಕನ್ನಡ ಕವಿಗಳು ಹೀಗೆಯೇ ಇಂಥ ಶಬ್ದಗಳನ್ನು ಬಳಸಿರುವುದು ಕಾಣುತ್ತದೆ." ಇದಕ್ಕೆ ಅಡಿ ಟಿಪ್ಪಣಿ ಇಂತಿದೆ:

[9] ಹೀಗೆ ಹೇಳುವುದಕ್ಕೆ ಶ್ರೀಯುತರು ಒಂದಾದರೂ ಪ್ರಮಾಣ ಒದಗಿಸಿಲ್ಲ. ಯಾವುದೇ ಪಾಠವನ್ನು ತಿದ್ದಬೇಕಾದರೆ ವಿಷಯಕ್ಕೆ ಸಂಬಂಧಿಸಿದ ಪ್ರಮಾಣಗಳು ಅವಶ್ಯ ಬೇಕು. ಶ್ರೀಯುತರ ಮಾತಿಗೆ ಬೆಲೆ ಕೊಡುವದಾದರೆ ಯಾವ ಪ್ರಾಚೀನ ಕೃತಿಯನ್ನೂ ಯಾರು ಹೇಗೆ ಬೇಕೊ ಹಾಗೆ ತಿದ್ದಿ ಅದನ್ನು ಆ ಕವಿ ಕೃತಿಯೆನ್ನಬಹುದು!

ಕ್ರಿ. ಶ. 1109 ರಲ್ಲಿ ನಾರಣದೇವನೆಂಬ ಕವಿ ಒಬ್ಬ ಮಾಧವಭಟ್ಟನನ್ನು ಹೊಗಳುತ್ತ ಅವನು 'ಬುಧಲಲಾಟ ಸ್ಥಿತ ರತ್ನ ಪಟ್ಟ'ನಾಗಿದ್ದನೆಂದು ಹೇಳಿದ್ದಾನೆ. (ಕ. ಕ. ಚ., 1961, ಅನುಬಂಧ 1, ಪು. 14) ಶಬ್ದವಿಹಾರ ಪುಟ 47, ಅಡಿ ಟಿಪ್ಪಣಿ ನೋಡಿ. 'ಪುಷ್ಪ ಪಟ್ಟ' ಎಂಬ ಶಬ್ದವು ಬಾಣನ 'ಹರ್ಷ ಚರಿತ್ರೆ'ಯಲ್ಲಿ ಪ್ರಯುಕ್ತವಾಗಿದೆ. (ನಿರ್ಣಯಸಾಗರ ಪ್ರೆಸ್, ಮುಂಬಯಿ, 1892. ಪು. III) ....ಇದು ಪಂಪನ ಪ್ರಯೋಗಕ್ಕೆ ಹೊಂದಿಕೊಳ್ಳಲಾರದು. (ಹರ್ಷ ಚರಿತ್ರೆಯ ಪ್ರಯೋಗ) ಇಲ್ಲಿ ಅದು ಶಿಲ್ಪಶಾಸ್ತ್ರದ ಪರಿಭಾಷಾ ಶಬ್ದವಲ್ಲ.[10] ಇದೇ ಅಭಿಪ್ರಾಯವನ್ನು 'ಪಂಪ ಭಾರತದ ದೀಪಿಕೆ'ಯಲ್ಲೂ ಶ್ರೀಯುತರು ಉಳಿಸಿಕೊಂಡಿದ್ದಾರೆ.[11] ಶ್ರೀಯುತರು ಅರಿಕೇಸರಿ ಮೇಲು ಎಂಬ ಒಂದು ವಿವರಣೆಯನ್ನು ಮಾತ್ರ ಕೊಟ್ಟಿದ್ದಾರೆ. 'ಉದಾತ್ತತೆಯನ್ನು' ಸಂಪೂರ್ಣ ಕೈಬಿಟ್ಟಿದ್ದಾರೆ. ಶ್ರೀಯುತರ ವಿವರಣೆಯಲ್ಲಿ 'ಉದಾತ್ತತೆಯ' ಗುಣದಿಂದ ಅರಿಕೇಸರಿಯು ನಾರಾಯಣನಿಗಿಂತ ಮೇಲು ಎಂಬ ಪಂಪನ ಆಶೆ ವ್ಯಕ್ತವಾಗಿಲ್ಲ. ಶ್ರೀಯುತರ ವಿವರಣೆಯಲ್ಲಾಗಲಿ, ಅಡಿ ಟಿಪ್ಪಣಿಯಲ್ಲಾಗಲಿ 'ಸುಪುಷ್ಪ ಪಟ್ಟ'ವನ್ನು ಒಬ್ಬರಾದರೂ ಧರಿಸಿದುದಕ್ಕೆ ಉಲ್ಲೇಖವಿಲ್ಲ. ಅರ್ಥಾತ್ 'ಸುಪುಷ್ಪ ಪಟ್ಟ' ಜನಬಳಕೆಯಲ್ಲಿ ಇತ್ತೆನ್ನುವುದಕ್ಕೆ ಆಧಾರವಿಲ್ಲ; ಇರಲಿ.

3. ಪ್ರೊ. ನರಸಿಂಹಾಚಾರ್ಯರ ಈ ವಿವರಣೆಯನ್ನು ಅದರಲ್ಲೂ ಊಹಿತ ಪಾಠವನ್ನು ವಿಶೇಷವಾಗಿ ಆಕ್ಷೇಪಿಸಿದ್ದಾರೆ ಡಾ॥ ಎಮ್. ಎಮ್. ಕಲ್ಬುರ್ಗಿ. ಅವರ ಆಕ್ಷೇಪಣೆಗಳಿಂತಿವೆ:

i. ಮೇಲಣ ಪದ್ಯದ ಮೂರು ಸಂಗತಿಗಳಲ್ಲಿ ಸಮುದ್ರ ಮಂಥನ, ವಾಮನಾವತಾರಗಳು ನಾರಾಯಣನಿಗೆ ಮಾತ್ರ ಸಂಬಂಧಿಸಿದ ವಿಶಿಷ್ಟ ಸಂಗತಿಗಳು. ಈ 'ಪುಷ್ಪಪಟ್ಟ' ನಾರಾಯಣನಿಗೆ ಮಾತ್ರ ವಿಶಿಷ್ಟವಾದ ಕಿರೀಟವಲ್ಲ. ಎಲ್ಲ ದೇವತೆಗಳಿಗೂ ಚಕ್ರವರ್ತಿಗಳಿಗೂ, ಸಾಮಂತರಿಗೂ ಸಾಮಾನ್ಯವಾಗಿರುವ ಕಿರೀಟ.

ii. ಈ ಮೂರು ಸಂಗತಿಗಳಲ್ಲಿ ಮೊದಲಿನ ಎರಡಕ್ಕೆ ಪೌರಾಣಿಕ ಘಟನೆಗಳನ್ನು ಬಳಸಿದ ಕವಿಯು ಮೂರನೆಯದಕ್ಕೆ 'ಸುಪುಷ್ಪಪಟ್ಟ'ಎಂಬ ಕಾಲ್ಪನಿಕ ಅಂಶವನ್ನು ಬಳಸಿರಲಾರ.

iii. ನಾರಾಯಣನದು 'ಪುಷ್ಪಪಟ್ಟ' ಅರಿಕೇಸರಿಯದು 'ಸುಪುಷ್ಪಪಟ್ಟ' ಎಂದು ಡಾ॥ ಡಿ. ಎಲ್. ಎನ್. ಅವರು 'ಸು' ಪ್ರತ್ಯಯದ ಮೇಲೆ ಅವಧಾರಣೆ

---

[10] (i) ಕನ್ನಡ ಗ್ರಂಥ ಸಂಪಾದನೆ, ಪುಟ 164–66
(ii) ಅದೇ ಪು. 166, ಅಡಿ ಟಿಪ್ಪಣಿ, 3

[11] ಪಂಪ ಭಾರತ ದೀಪಿಕೆ, ಪುಟ 1–2

ಕೊಡುತ್ತಾರೆ, ಆದರೆ 'ಸು' ಪ್ರತ್ಯಯದ ಮೂಲಕ 'ಉದಾತ್ತ' ಅರ್ಥ ಕಲ್ಪಿಸಲು ಹೊರಟಿರಲಾರ ಪಂಪ.[12]

ಡಾ॥ ಕಲ್ಬುರ್ಗಿಯವರ ಆಕ್ಷೇಪಣೆಗಳು ಅರ್ಥಗರ್ಭಿತವಾಗಿವೆ. ಆದರೆ 3 ನೆಯ ಆಕ್ಷೇಪಣೆಯಲ್ಲಿ ಶ್ರೀಯುತರು ಡಾ॥ ಡಿ. ಎಲ್. ಎನ್. ಅವರು ಅರಿಕೇಸರಿಯ ಉದಾತ್ತತೆಯ ಬಗ್ಗೆ ಒಂದು 'ಚ'ಕಾರವನ್ನು ಬರೆಯದಿದ್ದರೂ ಬರೆದಿದ್ದಾರೆಂದು ಆರೋಪಿಸಿರುವುದು ತುಂಬ ಆಶ್ಚರ್ಯಕರವಾಗಿದೆ. ಶ್ರೀಯುತರ ಪ್ರಕಾರ ಈ ಪದ್ಯದಲ್ಲಿ.

1. ಶ್ಲೇಷದ ಮೂಲಕ ಅರಿಕೇಸರಿಯ ಉದಾತ್ತತೆಯನ್ನು ಸಾಧಿಸಿದ್ದಾನೆ ಕವಿ.

2. 'ಧರಿತ್ರಿಯಂ ಜೀಯನೆ ಬೇಡಿಕೊಳ್ಳದೆ ವಿರೋಧಿ ನರೇಂದ್ರರನೊತ್ತಿ ಕೊಂಡುಂ' ಎಂಬಲ್ಲಿಗೆ 'ಜೀಯ'ಎಂಬ ಶಬ್ದ ಬಳಸಿದುದರಿಂದ ಅಭಿವ್ಯಕ್ತಿಯನ್ನು ವಾಚ್ಯವಾಗಿಸಿದ್ದಾನೆ ಪಂಪ.[13]

3. 'ಸುಪುಷ್ಪವೃಷ್ಟಿ' 'ಸುಪುಷ್ಪ ದೃಷ್ಟಿ' ಎಂಬ ಪಾಠಗಳಿಗಿಂತಲೂ ಊಹಿತ ಪಾಠವಾದ 'ಸುಪುಷ್ಪಪಟ್ಟ'ಕ್ಕಿಂತಲೂ ಇನ್ನೊಂದು ಊಹಿತ ಪಾಠವಾದ 'ಸುಪುಷ್ಪ ದೃಷ್ಟಿ'ಎಂಬುದೇ ಕವಿಯ ಪಾಠವೆಂದು, ಕೊನೆಯಪಕ್ಷ ಅರ್ಥದೃಷ್ಟಿಯಿಂದ ಹೆಚ್ಚು ಯೋಗ್ಯವಾದ ಪಾಠವೆಂದು ಹೇಳಬಹುದು.[14]

I. ಈ ಪದ್ಯದಲ್ಲಿ ಶ್ಲೇಷಾಲಂಕಾರವಿದೆಯೆ ? ಇದು ವಿಚಾರಿಸಬೇಕಾದ ವಿಷಯ. ನಮಗೆ ಇಲ್ಲಿ ಉಪಮಾನ (ನಾರಾಯಣ) ಉಪಮೇಯ (ಅರಿಕೇಸರಿ)ಗಳಲ್ಲಿ ಉಪಮೇಯವೇ ಉ ಪ ಮಾ ನ ಕ್ಕಿಂ ತ ಶ್ರೇಷ್ಠವೆಂಬುದು 'ಸ್ಫಟಿಕ ಶಲಾಕೆ'ಯಷ್ಟು ಸ್ಪಷ್ಟವಿರುವುದರಿಂದ ಶ್ಲೇಷಾಲಂಕಾರವಿಲ್ಲ. ಇಲ್ಲಿನದು ವ್ಯತಿರೇಕಾಲಂಕಾರ.

"ಉಪಮಾನವತೋಽರ್ಥಸ್ಯ ಯದ್ವಿಶೇಷ ನಿದರ್ಶನಮ್ ।
ವ್ಯತಿರೇಕಂ ತಮಿಚ್ಛನ್ತಿ ವಿಶೇಷಾಪಾದನಾದ್ಯಥಾ ॥ ಭಾಮಹ.

ಉಪಮೇಯಕ್ಕೆ ಉಪಮಾನವನ್ನು ಕೊಟ್ಟಮೇಲೆ, ಉಪಮೇಯದಲ್ಲಿಯೇ ಉಪಮಾನಕ್ಕಿಂತ ಹೆಚ್ಚಿನ ವೈಶಿಷ್ಟ್ಯವಿರುವುದನ್ನು ಎತ್ತಿತೋರಿಸಿದರೆ ಅದಕ್ಕೆ ವ್ಯತಿರೇಕ (= ಅತಿಶಯ ಸೂಚನೆ)ವೆನ್ನುವರು."[15] ಈ ಪದ್ಯದಲ್ಲಿ ಉದಾತ್ತನಾರಾಯಣ

---

[12] ಪಂಪ ಭಾರತ ಮಂಗಲ ಪದ್ಯ–ಪುಟ 69-70

[13] ಅದೇ, ಪುಟ 68-69

[14] ಅದೇ, ಪುಟ 71

[15] i) ಡಾ॥ ಕೆ. ಕೃಷ್ಣಮೂರ್ತಿ, 'ಕನ್ನಡ ಕಾವ್ಯಾಲಂಕಾರ' ಪುಟ 42
ii) ಕನ್ನಡ ಕೈಪಿಡಿ ಭಾಗ-1 ರಲ್ಲಿ 'ವ್ಯತಿರೇಕಾಲಂಕರವನ್ನೂ ನೋಡಿ. ಪುಟ 277 (4ನೆಯ ಮುದ್ರಣ)

ನಾದ ಅರಿಕೇಸರಿ ನಾರಾಯಣನಿಗಿಂತಲೂ (ಉಪಮಾನಕ್ಕಿಂತಲೂ) ಮಿಗಿಲು ಎಂದಿದ್ದಾನೆ ಕವಿ. ಇದು ಗಮನಾರ್ಹವಾದ ಅಂಶ.

II. "ಧರಿತ್ರಿಯಂ ಜೀಯನೆ ಬೇಡಿಕೊಳ್ಳದೆ ವಿರೋಧಿನರೇಂದ್ರರನೊತ್ತಿ ಕೊಂಡುಂ" ಎಂಬಲ್ಲಿ ಡಾ॥ ಕಲ್ಬುರ್ಗಿಯವರಿಗೆ ಕಾಣುವ "ಸಣ್ಣ ದೋಷ"[16] 'ವಾಚ್ಯಾಭಿವ್ಯಕ್ತಿ'–ನಮಗೆ ಕಾಣುತ್ತಿಲ್ಲ. ಏಕೆಂದರೆ ಪಂಪನು ಇಲ್ಲಿ ವಾಮನಾವತಾರದ ಕತೆಯನ್ನು ಸ್ಪಷ್ಟವಾಗಿ ವಿವರಿಸಿ ವಾಚ್ಯಕ್ಕೆಡೆಗೊಟ್ಟಿಲ್ಲ. **ಹೇಳಬೇಕಾದ ಎಲ್ಲ ವಿಷಯುವನ್ನೂ ಮಾತಿನಲ್ಲಿ ಮುಗಿಸಿದರೆ** ಅದು ವಾಚ್ಯ. 'ಧ್ವನಿ'ಯು ಕಾವ್ಯದಲ್ಲಿ ಎಲ್ಲಿಯೂ ಶಬ್ದವನ್ನು ಪೂರ್ತಿಯಾಗಿ ಬಿಟ್ಟು ನಿಲ್ಲುವದಿಲ್ಲ. ಶಬ್ದದಿಂದಲೇ ಅದು ಘಂಟೆಯ ನಾದದಂತೆ ಅನುರಣಿತವಾಗುತ್ತದೆ. ಆನಂದವರ್ಧನ ಅಥವಾ 'ಧ್ವನಿ'ಕಾರನ ಧ್ವನ್ಯಾಲೋಕದ ಈ 'ಕಾರಿಕೆ'ಗಳನ್ನು ಅವಲೋಕಿಸುವುದು ಉಚಿತ:

ಯಥಾ ಪದಾರ್ಥ ದ್ವಾರೇಣ ವಾಕ್ಯಾರ್ಥಃ ಸಂಪ್ರತೀಯತೇ ।
ವಾಚ್ಯಾರ್ಥ ಪೂರ್ವಿಕಾ ತದ್ವತ್ ಪ್ರತಿಪತ್ತಸ್ಯ ವಸ್ತುನಃ ॥

ಪದಗಳ ಅರ್ಥದ ಮುಖಾಂತರವಾಗಿಯೇ ವಾಕ್ಯದ ಅರ್ಥವು ಹೇಗೆ ಗೊತ್ತಾಗುವುದೋ ಹಾಗೆ, ವಾಚ್ಯಾರ್ಥದ ಮೂಲಕವಾಗಿಯೇ ಆ ವ್ಯಂಗಾರ್ಥವು ಗೊತ್ತಾಗುತ್ತದೆ.[17] ಅದುವೆ ಧ್ವನಿ:

ಯತ್ರಾರ್ಥಃ ಶಬ್ದೋ ವಾ
ತಮರ್ಥಮುಪಸರ್ಜನೀಕೃತ ಸ್ವಾರ್ಥೌ ।
ವ್ಯಙ್ಕ್ತಃ ಕಾವ್ಯ ವಿಶೇಷಃ
ಸ ಧ್ವನಿರಿತಿ ಸೂರಿಭಿಃ ಕಥಿತಃ ॥[18]

ಅರ್ಥಾತ್ ವ್ಯಂಗ್ಯಾರ್ಥವೆಂಬುದೇ ಧ್ವನಿ.[19] ಅದು ಶಬ್ದದ ಮೂಲಕವೇ ಪ್ರತೀತವಾಗುತ್ತದೆ. ಪಂಪನ ಕವಿತೆಯ 'ಜೀಯ' ಎಂಬ ಕನ್ನಡ ಶಬ್ದವು ಕೂಡ ಸಹೃದಯ ಓದುಗನಿಗೆ 'ಯಪ್ಪಾ' ಅಥವಾ 'ಅಯ್ಯಾ' ಎಂಬ ವಾಚ್ಯಾರ್ಥವನ್ನು ದಾಟಿ ವಾಮನಾವತಾರದ ಕಥೆಯನ್ನು ಸಂಪೂರ್ಣ ವ್ಯಂಜಿಸುತ್ತದೆ. 'ಜೀಯ' ಎಂಬ ಶಬ್ದ ಇದ್ದಿಲ್ಲವೆಂದರೆ ವಾಮನಾವತಾರದ ಕಲ್ಪನೆಯನ್ನು ಕವಿಗೆ ಆರೋಪಿಸುವುದು ಓದುಗನ ಸ್ವೋಪಜ್ಞ ಕಲ್ಪನೆಯಾಗುತ್ತದೆ.

---

16 ಪಂಪ ಭಾರತದ ಮಂಗಲ ಪದ್ಯ-ಪುಟ 69

17 ಡಾ|| ಕೆ. ಕೃಷ್ಣಮೂರ್ತಿ, ಕನ್ನಡ ಧ್ವನ್ಯಾಲೋಕ, ಪುಟ 11, ಕಾರಿಕೆ 10, ಉದ್ಯೋತ 1

18 ಅದೇ ಗ್ರಂಥ. ಉದ್ಯೋತ 1, ಕಾರಿಕೆ 13

19 ಪ್ರೊ॥ ತೀ. ನಂ. ಶ್ರೀಕಂಠಯ್ಯ : 'ಭಾರತೀಯ ಕಾವ್ಯ ಮೀಮಾಂಸೆ' ಪುಟ 51 (2ನೆಯ ಮುದ್ರಣ).

III. ಪ್ರೊ॥ ಡಿ. ಎಲ್. ಎನ್. ಶಿಲ್ಪಶಾಸ್ತ್ರದ ಶಬ್ದ 'ಸುಪುಷ್ಪಪಟ್ಟ'ಕ್ಕೆ ಮಾರುಹೋಗಿ ಆ ಶಬ್ದವನ್ನೆ ಪಂಪನು ಬಳಸಿರಬೇಕೆಂದು ತಮ್ಮ ಊಹೆಯನ್ನು ಆತನಿಗೆ ಆರೋಪಿಸಿದರೆ, ಡಾ॥ ಕಲ್ಬುರ್ಗಿಯವರು ಮೂರು ಸಂಗತಿಗಳಲ್ಲಿಯೂ ಪಂಪನು ಪೌರಾಣಿಕ ಸಂಗತಿಯನ್ನೇ ಹೇಳಿರಬೇಕೆಂದು ತಮ್ಮ ಮನಸ್ಸಿಗೆ ತೋಚಿದ ವಿಷ್ಣು ತನ್ನ ಕಣ್ಣೆಂಬ ಕಮಲವನ್ನು ಶಿವನಿಗೆ ಅರ್ಪಿಸಿದ ಪೌರಾಣಿಕ ಕಥೆಯ ಸಂಗತಿಯನ್ನು ಕವಿಗೆ ಆರೋಪಿಸಿದ್ದಾರೆ. ಈ ಇಬ್ಬರು ವಿದ್ವಾಂಸರು ಪಂಪನು ವಿವರಿಸಿದ ಕಾವ್ಯದ ಜೀವಾಳವಾದ ಲೌಕಿಕ ದೃಷ್ಟಿ ಹಾಗೂ ಸತ್ಯತೆಯನ್ನೆ ಮರೆತಿದ್ದಾರೆ. ನಾರಾಯಣನು ನೇತ್ರವೆಂಬ ಕಮಲವನ್ನು ಶಿವನಿಗೆ ಅರ್ಪಿಸಿದ; 'ಉದಾತ್ತ ನಾರಾಯಣನಾದ' ಅರಿಕೇಸರಿ ತನ್ನ ನೇತ್ರವೆಂಬ ಕಮಲವನ್ನು ಯಾರಿಗೆ ಅರ್ಪಿಸಿ ಉದಾತ್ತನಾದ ಎಂಬ ಪ್ರಶ್ನೆಗೆ ಕಲ್ಬುರ್ಗಿಯವರ ವಿವರಣೆಯಲ್ಲಿ ಉತ್ತರವಿಲ್ಲ; ಶಿವನಿಗೇ ಅರ್ಪಿಸಿ ಉದಾತ್ತನಾದ ಎಂದು ಹೇಳೋಣವೆಂದರೆ ಮುಂದಿನ ಪದ್ಯದಲ್ಲಿಯೇ ಅರಿಕೇಸರಿ 'ಉದಾರ ಮಹೇಶ್ವರ'ನೂ ಆಗಿದ್ದಾನೆ![20] ಜೈನ ಸಿದ್ಧಾಂತ ಧ್ವಜ ಎತ್ತಿ ಹಿಡಿದ ಪಂಪನಿಗೆ[21] ಈ ಕಾವ್ಯದಲ್ಲಿ ಕೇವಲ ಲೌಕಿಕ ದೃಷ್ಟಿ, ಅದರಲ್ಲೂ ತನ್ನ ಆಶ್ರಯದಾತನ ವಿಷಯವನ್ನೆ ವಿಶೇಷವಾಗಿ ವರ್ಣಿಸಬೇಕಾಗಿದೆ. ಕಾರಣ ಅರಿಕೇಸರಿ ಉದಾತ್ತನಾದ ಕಾರಣವನ್ನು ಒದಗಿಸುವ ಮೂರು ಸಂಗತಿಗಳೂ ಲೌಕಿಕ ವಿಷಯಗಳೇ ಆಗಿದ್ದವೆಂದು ನಮಗೆ ತೋರುತ್ತದೆ. ಮತ್ತೂ ಪೌರಾಣಿಕ ವ್ಯಕ್ತಿಗಳಲ್ಲಿ ಅವು ಇದ್ದು ಉದಾತ್ತಭಾವನೆಗೆ ಎಡೆಕೊಟ್ಟದ್ದಿಲ್ಲ. ಇದೇ ಬಗೆಯ ಪ್ರಶ್ನೆ ಡಾ॥ ಡಿ. ಎಲ್. ಎನ್. ಅವರ 'ಸುಪುಷ್ಪ ಪಟ್ಟ' ಎಂಬ ಹೊಸಪಾಠಯೋಜನೆಯ ಸಂಬಂಧದಲ್ಲಿ ಏಳುತ್ತದೆ. ಶ್ರೀಯುತರ ಪ್ರಕಾರ ಅರಿಕೇಸರಿ 'ಸುಪುಷ್ಪ ಪಟ್ಟ' ಧರಿಸಿದ ಮಾತ್ರಕ್ಕೆ 'ಉದಾತ್ತ ನಾರಾಯಣ ನಾಗುತ್ತಾನೆ. ತಲೆಯ ಮೇಲೆ ಒಂದು ಬಗೆಯ ಕಿರೀಟವನ್ನು ಧರಿಸಿದ ಮಾತ್ರಕ್ಕೆ ಒಬ್ಬ ವ್ಯಕ್ತಿ 'ಉದಾತ್ತ' ಅಥವಾ 'ಉದಾರ'ನಾಗುವ[22] ಬಗೆ ಹೇಗೆ? ಯಾವ ಪಾಠಾಂತರವೂ ಇಲ್ಲದಿದ್ದ "ಸುಪುಷ್ಪ ವೃಷ್ಟಿ" ಎಂಬುದೇ ಕವಿಪಾಠವಿರಬೇಕು ಎಂದು ಬಗೆದಿದ್ದ ನನಗೆ 'ಪಂಪಭಾರತ ಸಂಗ್ರಹ' ಒಂದು ಅಚ್ಚರಿಯನ್ನುಂಟು ಮಾಡಿತು. ಅದೆಂದರೆ "ಸುಪುಷ್ಪ ಪಟ್ಟ" ಎಂಬ ಪ್ರೊ॥ ಡಿ. ಎಲ್. ಎನ್. ಅವರ ಊಹಿತ ಹೊಸಪಾಠ ಯೋಜನೆಯನ್ನು ಕಂಸಗಳಿಲ್ಲದೆಯೆ ಮೂಲಮಾತೃಕೆಯ ಹಾಗೆ

---

20. ವಿ. ವಿಜಯ, ಆಶ್ವಾಸ 1 ; ಪದ್ಯ 2

21. ತ್ರಿಜಗದೊಳಾದಿ ಪುರಾಣಮ ।
ನಜಿತಪುರಾಣಮುಮನೆಸೆಯೆ ಪೇಳ್ದುದಱಿಂದಂ ॥
ದ್ವಿಜವಂಶ ಧ್ವಜ ವೈಶ್ಯ
ಧ್ವಜರೆನ್ನದರೊಳರೆ ಪಂಪನಂ ರತ್ನನುಮಂ ॥

ಅಜಿತ ಪುರಾಣ, ಆ 12 ; ಪ. 39

27. 'ಉದಾತ್ತ' 'ಉದಾರ' ಇವು ಸಮಾನ ಶಬ್ದಗಳು : ಉದಾತ್ತಶ್ಚ ತಥೋದೀರ್ಣೋ-
ಮಹಾತ್ಮೋದಾರ ಉಚ್ಯತೆ. 'ಅಭಿಧಾನ ರತ್ನಮಾಲಾ', ಪುಟ 59

ಅಚ್ಚಿಟ್ಟುದು. ಆಗ ಹೈದರಾಬಾದಿನಲ್ಲಿದ್ದ ನಾನು ಅದರ ಸಂಪಾದಕರಲ್ಲೊಬ್ಬರಾದ ಶ್ರೀಯುತ ಎನ್. ಬಸವಾರಾಧ್ಯರಿಗೆ ಹೊಸ ಪ್ರತಿಯೇನಾದರೂ ದೊರಕಿದೆಯೆ ಎಂದು ಪ್ರಶ್ನಿಸಿ ಪತ್ರ ಬರೆದೆ. ಆ ವಿದ್ವಾಂಸರು ತಮಗೆ ಹೊಸಪ್ರತಿ ದೊರಕಿಲ್ಲವೆಂದೂ ತಾವು "ಪೂಜ್ಯ ಡಿ. ಎಲ್. ಎನ್. ರವರು ಸೂಚಿಸಿದ ತಿದ್ದುಪಡಿಯನ್ನೆ ಮೂಲ ಪಾಠವಾಗಿ ನಾವು ಸ್ವೀಕರಿಸಿದ್ದೇವೆ" ಎಂದು ತಿಳಿಸಿದರು.[23]

'ಸುಪುಷ್ಪ ಪಟ್ಟ' ಇದು ಕವಿಪಾಠವಾಗಿತ್ತೆಂದು ಹೇಳುವುದು ನಮಗೆ ಸರಿಯೆಂದು ತೋರುವದಿಲ್ಲ. ಏಕೆಂದರೆ :

1. ಯಾವ ಉಪಲಬ್ಧ ಪ್ರತಿಯಲ್ಲೂ ಇದು ಪಾಠವಾಗಿತ್ತೆನ್ನುವುದಕ್ಕೆ ಆಧಾರವಿಲ್ಲ.

2. ಪಂಪನು ಈ ಪದಗುಂಫನವನ್ನು ಬಲ್ಲವನಾಗಿದ್ದನೆನ್ನುವುದಕ್ಕೆ ಆತನ ಗ್ರಂಥಗಳಲ್ಲಿ ಪ್ರಮಾಣವಿಲ್ಲ.

3. ಪೂಜ್ಯ ಡಿ. ಎಲ್. ಎನ್. ಅವರು ಅರಿಕೇಸರಿಯು 'ಸುಪುಷ್ಪ ಪಟ್ಟ'ವನ್ನು ಧರಿಸಿದ್ದನೆನ್ನುವದಕ್ಕೆ ಒಂದಾದರೂ ಪ್ರಮಾಣವನ್ನು ಒದಗಿಸಿಲ್ಲ. ಇಷ್ಟೆ ಅಲ್ಲ, ಶ್ರೀಯುತರು ಸತ್ಯವನ್ನೆ ಮರೆತಿದ್ದಾರೆ ; ಅದೆಂದರೆ ಅರಿಕೇಸರಿಯು ಧರಿಸುತ್ತಿದ್ದುದು **'ರತ್ನ ಪಟ್ಟ'** ; 'ಸುಪುಷ್ಪ ಪಟ್ಟ'ವನ್ನಲ್ಲ ! ! ! ಈ ಮಾತಿಗೆ ಪಂಪನ ವಿಕ್ರಮಾರ್ಜುನ ವಿಜಯವೇ ಸಾಕ್ಷಿ. "ಅಯ್ವರುಮನೇಕ ಮಂಗಳಾಭರಣಾಳಂಕೃತಶರೀರರರಿಕೇಸರಿಯುಂ ಕೇಸರಿ ವಿಷ್ಟರದೊಳ್ ಕುಳ್ಳಿರಿಸಿ **ಪಂಚರತ್ನಶಿಖಾವಿರಾಜಮಾನಪ್ಪ ಪಟ್ಟಮನೆತ್ತಿ**..." ಇತ್ಯಾದಿ.[24] ಕಾರಣ ಒಂದುವೇಳೆ ಪಂಪನಿಗೆ ಅರಿಕೇಸರಿಯು ಧರಿಸುತ್ತಿದ್ದ ಕಿರೀಟ ವನ್ನೆ ವರ್ಣಿಸುವ ಇಚ್ಛೆ ಇದ್ದಿದ್ದರೆ ಆತನು ನಿಸ್ಸಂದೇಹವಾಗಿ 'ಸುರತ್ನ ಪಟ್ಟ' ಎಂದು ಅದನ್ನು ವರ್ಣಿಸುತ್ತಿದ್ದನೆ ವಿನಾ 'ಸುಪುಷ್ಪ ಪಟ್ಟ'ವನ್ನಲ್ಲ. ಆಗಲೂ ಕವಿತೆಯ ಛಂದಸ್ಸಿಗೆ ಬಾಧೆ ಬರುತ್ತಿದ್ದಿಲ್ಲ. ರತ್ನಪಟ್ಟವನ್ನು ಜನರು ಧರಿಸುತ್ತಿದ್ದರೆನ್ನುವದಕ್ಕೆ ಸ್ವತಃ ಡಿ. ಎಲ್. ಎನ್. ಅವರೇ ಉದಾಹರಣೆಯನ್ನು ಕೊಟ್ಟಿದ್ದಾರೆ.[25] ಆದುದರಿಂದ 'ಸುಪುಷ್ಪ ಪಟ್ಟ' ಎಂಬ ಹೊಸಪಾಠ ಯೋಜನೆ ಸಾಧು ಸೃಷ್ಟಿಯಲ್ಲ. ಅದು ಕವಿಪಾಠವಾಗಲು ಸಾಧ್ಯವಿಲ್ಲ.

---

23. ಶ್ರೀ ಎನ್. ಬಸವಾರಾಧ್ಯರ ದಿ. 10-6-1971ರ ಪತ್ರ

24. ವಿ. ವಿಜಯ. ಆಶ್ವಾಸ 14–188, ರಾಜ್ಯಾಭಿಷೇಕದ ಸಂದರ್ಭ.

25. 'ಕನ್ನಡ ಗ್ರಂಥ ಸಂಪಾದನೆ' ಪುಟ 166. ಅ.ಟಿ. 3. ಇದರ ಉಲ್ಲೇಖ ಮೇಲೆ ಬಂದಿದೆ. (ನೋಡಿ : ಬುಧಲಲಾಟಸ್ಥಿತ ರತ್ನಪಟ್ಟ)

ಎಲ್ಲ ಪ್ರತಿಗಳಲ್ಲೂ ಇರುವ "ಸುಪುಷ್ಪ ವೃಷ್ಟಿ" ಎಂಬ ಪ್ರಯೋಗದತ್ತ ಈಗ ಹೊರಳೋಣ. ದೊರೆತ ಎಲ್ಲ ಪ್ರತಿಗಳಲ್ಲೂ ಇರುವದರಿಂದ ಇದನ್ನು ಕವಿಪಾಠ ವೆಂದು ಹೇಳಿದರೆ ತಪ್ಪಲ್ಲ. ಅರ್ಥವನ್ನು ಬಿಡಿಸಬೇಕು ಅಷ್ಟೆ. ಪಂಪನ ಕಾಲಕ್ಕೆ ನಾವು 'ಪುಷ್ಪ' ಇದಕ್ಕೆ ಇರುವ ಅರ್ಥಗಳನ್ನು ಪರಿಶೀಲಿಸಿದರೆ ಈ ಗೊಂದಲ ದೂರಾಗು ತ್ತದೆ. 'ಪುಷ್ಪ' ಈಗಿನಂತೆ ಆಗಲೂ 'ಹೂ' ಎಂಬ ಸಾಮಾನ್ಯ ಅರ್ಥವನ್ನು ಹೊಂದಿತ್ತು. ಮತ್ತೆ 'ನಾಣ್ಯ' ಎಂಬ ವಿಶೇಷ ಅರ್ಥವೂ ಇದ್ದಿತು ಅದಕ್ಕೆ. ಕ್ರಿ.ಶ. 945ರಲ್ಲಿ ಬರೆಯಲಾದ ಸಾಲೊಟಗಿಯ ಶಿಲಾಲೇಖದಲ್ಲಿ ಪುಷ್ಪವೆಂಬ ನಾಣ್ಯದ ಪ್ರಸಕ್ತಿ ಇದೆ.

ಶಾಲಾ ವಿದ್ಯಾರ್ಥಿ ಸಂಘಾಯ ಸುದ್ರವ್ಯಾಣಿ ದ್ವಿಜಾತಿಭಿಃ ।
ಪಂಚ ಪುಷ್ಪಾಣಿ ದೇಯಾನಿ ವಿವಾಹೇಸತಿ ತಜ್ಜನ್ಯೈಃ ॥ [26]

ಈ ಶಾಸನವನ್ನು ಸಂಪಾದಿಸಿದ ಪ್ರೊ॥ ಎಫ್. ಕೀಲ್‌ಹಾರ್ನ್ ಹಾಗೂ ಶ್ರೀ ಹೆಚ್. ಕೃಷ್ಣಶಾಸ್ತ್ರಿಗಳು "The word **pushpa** a flower, apparently denotes here a coin" ಎಂದಿದ್ದಾರೆ.[27] ಮತ್ತೊಂದೆಡೆ "The term pushpa 'a flower' might refer to certain early gold coin with floral reverse" ಎಂದಿದ್ದಾರೆ.[28] Indian Epigraphical Glossary ಗ್ರಂಥದಲ್ಲಿ "Pushpa = a coin having the shape or sign of a flower" ಎಂದು ಬರೆದಿದೆ.[29] ಭಾರತದ ಹಲವು ರಾಜಮನೆತನಗಳ ಮತ್ತು ಚಾಳುಕ್ಯರ ನಾಣ್ಯಗಳ ಮೇಲೆ ಕಮಲಗಳನ್ನು ಕೆತ್ತಿದ ಸಂಗತಿಯನ್ನು ವಿದ್ವಾಂಸರು ವಿವರಿಸಿದ್ದಾರೆ.[30] ನಾರಾಯಣನು ಹೊಂದಿದ ಶ್ರೀ (ಲಕ್ಷ್ಮೀ), ಧರಿತ್ರಿ ಮತ್ತು ಪುಷ್ಪವೃಷ್ಟಿ [= ಪುಷ್ಪದ ಅತಿಶಯತೆ—ಎಂದರೆ ನಾರಾಯಣನಲ್ಲಿ ಹಲವು ಕಮಲಗಳು: ನಾಭಿಯಲ್ಲಿ ಕಮಲ, ನೇತ್ರಕಮಲ, ಭಾರ್ಯೆ ಕಮಲೆ (ಪತ್ನಿ ಲಕ್ಷ್ಮಿ, ಕಮಲ ಪುಷ್ಪ ಸಂಜಾತೆ)] ಎಲ್ಲವೂ ಆತನೊಬ್ಬನ ಪಾಲಿಗೆ! ಅರಿಕೇಸರಿಯು ಹೊಂದಿದ ಶ್ರೀ (= ಸಂಪತ್ತು)

---

[26] Ep. Ind. Vol. IV No. 6
[27] ಅದೇ, ಪುಟ 63
[28] ಅದೇ ಪುಟ 58 ; ಅಡಿ ಟಿಪ್ಪಣಿ 1
[29] Dr. D. C. Sircar: 'Indian Epigraphical Glossary' P. 267
[30] (i) Dr. P. L. Gupta: 'Coins', P. 74 (N.B.T. Publication)
(ii) Dr. S. Srikantha Sastry: Sources of Karnataka History, Vol. I. p. XL & XLI

ಧರಿತ್ರಿ ಮತ್ತು ಸುಪುಷ್ಪವೃಷ್ಟಿ (ಒಳ್ಳೆಯ ಪುಷ್ಪವೆಂಬ ಆತ್ಮೀಯ ನಾಣ್ಯವೃಷ್ಟಿ)[31] ಎಲ್ಲವನ್ನೂ ಆತನು ತಾನೂ ಭೋಗಿಸಿದುದಲ್ಲದೆ ಇತರರ ಉಪಭೋಗಕ್ಕೆಂದು ಇನಿತು ದಾನವನ್ನು ಮಾಡಿ ಅಥವಾ ಕೊಟ್ಟು ಸ್ವಾರ್ಥಿಯಾಗದೆ "ಉದಾತ್ತನಾದ". ಅರಿಕೇಸರಿಯು ಹೊಂದಿದ ಮೂರು ವಸ್ತುಗಳೂ ನಾರಾಯಣನು ಹೊಂದಿದ ಮೂರು ವಸ್ತುಗಳಿಗಿಂತ ಶ್ರೇಷ್ಠ [ಶ್ರೀ ಸಾಮಾನ್ಯ ಸಮುದ್ರದಲ್ಲಿ ಹುಟ್ಟಿದವಳಲ್ಲ; ಧರಿತ್ರಿ, ಜೀ ಎಂದು ಯಾಚಿಸಿ (ವಾಮನನ ಹಾಗೆ) ಬೇಡಿದುದಲ್ಲ; ಸುಪುಷ್ಪವೃಷ್ಟಿ– ಸಾಮಾನ್ಯ ಪುಷ್ಪವೃಷ್ಟಿಯಲ್ಲ]. ಪ್ರತಿಯೊಂದು ದೃಷ್ಟಿಯಿಂದ ಉಪಮಾನಕ್ಕಿಂತ ಉಪಮೇಯವೇ ಹೆಚ್ಚು [ಆದುದರಿಂದ ವ್ಯತಿರೇಕಾಲಂಕಾರ]. ನೃಸಿಂಹ (ವಿಷ್ಣು), ಕೇವಲ ನಾರಾಯಣ; ಅರಿಕೇಸರಿ 'ಉದಾತ್ತ ನಾರಾಯಣ'. ಅಂಥ, 'ಉದಾತ್ತ ನಾರಾಯಣ'ನು ಎನಿಸಿದ ಅರಿಕೇಸರಿ 'ಸೌಖ್ಯ ಕೋಟಿ'ಯನ್ನು ದಯಪಾಲಿಸಲಿ ಎಂಬುದು ಕವಿಯ ಹಾರೈಕೆ– ಆಶೀಪದ್ಯದ ಆಶೆ. ಅತ ಏವ 'ಸುಪುಷ್ಪವೃಷ್ಟಿ' ಎಂಬುದೇ ಕವಿಯ ಪಾಠ; ಪ್ರಶ್ನಾರ್ಥಕ ಚಿಹ್ನೆ ಅನಗತ್ಯ; ಊಹಿತ ಪಾಠಗಳಾದ ಹೊಸ ಯೋಜನೆಯ 'ಸುಪುಷ್ಟ ದೃಷ್ಟಿ', 'ಸುಪುಷ್ಪಪಟ್ಟ' ಮತ್ತು 'ಸುಪುಷ್ಪ ದೃಷ್ಟಿ' ಇತ್ಯಾದಿಗಳೆಲ್ಲ ಅನಾವಶ್ಯಕ. ಈ ಹೊಸ ಪಾಠ ಯೋಜನೆಗಳಿಂದ ಕವಿಯ ಆಶಯಕ್ಕೆ ಭಂಗ ಬರುತ್ತದೆ. ಕವಿಯ ಆಶಯಕ್ಕೆ ಭಂಗ ಬಂದರೆ ಆ ಪಾಠ, ಕವಿ ಪಾಠವಾಗಲು ಸಾಧ್ಯವಿಲ್ಲ. ಇದ್ದುದನ್ನು ಇದ್ದಂತೆ ಇಟ್ಟು ಅರ್ಥೈಸುವುದು ಲೇಸು.

ಸೀತಾರಾಮ ಜಾಗೀರ್‌ದಾರ್

---

[31] ನಾಣ್ಯಗಳ ಸೃಷ್ಟಿ, ಸಮೃದ್ಧಿಯಾದಾಗ ಪ್ರಾಚೀನ ಕಾಲದಲ್ಲಿ "ಸುವರ್ಣ ವೃಷ್ಟಿ" ಎಂದು ಅದನ್ನು ವರ್ಣಿಸುವುದು ರೂಢಿ. 'The coins of these Gupta emperors are known chiefly in gold. They issued gold coins so profusely that a contemporary poet has allegorically termed the phenomenon a "rain of gold"— Dr. P. L. Gupta: 'Coins', p. 52.

'ಸುವರ್ಣ' ಎಂಬುದೂ ನಾಣ್ಯ! (ನೋಡಿ : ನಿಷ್ಕ ಮತ್ತು ಸುವರ್ಣ)

—Dr. V. S. Agarwala: 'India As Known To Panini' pp. 259-274

ಕಾರಣ 'ಸುವರ್ಣ ವೃಷ್ಟಿ' ಮತ್ತು 'ಸುಪುಷ್ಪವೃಷ್ಟಿ' ಇವು ಒಂದೇ ಬಗೆಯ ವರ್ಣನೆಗಳು.

ಈ ಲೇಖನವನ್ನು ಬರೆಯುವಲ್ಲಿ ದಿವಂಗತ ಪ್ರೊ. ಮಾನ್ವಿ ನರಸಿಂಗರಾಯರು, ಡಾ।। ಆರ್. ಸಿ. ಹಿರೇಮಠರು (ನನ್ನ ಗುರುಗಳು) ಮತ್ತು ಡಾ।। ಹಾ. ಮಾ. ನಾಯಕ —ಇವರುಗಳಿಗೆ ಋಣಿ ಆಗಿರುವೆ.

ಈ ಸಂಚಿಕೆಯ ಲೇಖಕರು

ವೇಣುಗೋಪಾಲ ಸೊರಬ	ಇಂಗ್ಲೀಷ್ ವಿಭಾಗ, ರೂರಲ್ ಕಾಲೇಜು ಕನಕಪುರ
ವಿ. ಕೃ. ಗೋಕಾಕ್	'ಬೃಂದಾವನ', ವೈಟ್‌ಫೀಲ್ಡ್ ಬೆಂಗಳೂರು
ಎಂ. ಕೆ. ಭಾರತೀರಮಣಾಚಾರ್	ಹಿಂದಿ ವಿಭಾಗ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು-560039
ಡಾ॥ ಜಿ. ಎಸ್. ಶಿವರುದ್ರಪ್ಪ	ನಿರ್ದೇಶಕರು, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು-569039
ಎನ್. ಪ್ರಭುಸ್ವಾಮಿ	ಅರ್ಥಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು
ಡಾ॥ ಎಂ. ಚಿದಾನಂದಮೂರ್ತಿ	ರೀಡರ್, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು-560039
ಡಾ॥ ಕೆ. ಎಸ್. ಷಡಕ್ಷರಪ್ಪ	38, ರಂಗರಾವ್ ರಸ್ತೆ ಬೆಂಗಳೂರು-560064
ಬಿ. ಎಸ್. ಸಣ್ಣಯ್ಯ	ಸಹಾಯಕ ನಿರ್ದೇಶಕ ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ, ಮೈಸೂರು
ಬೆ. ಗೋ. ರಮೇಶ್	72, 'ಅಂಬಿಕಾ', 6ನೇ ಕ್ರಾಸ್ ಮಲ್ಲೇಶ್ವರಂ, ಬೆಂಗಳೂರು-560003
ಗೌರೀಶ ಕಾಯ್ಕಿಣಿ	ಗೋಕರ್ಣ (ಉ.ಕ.)

ಎಂ. ಎಸ್. ಎಸ್. ರಾವ್	ಸಿ-6, ಹೌಸಿಂಗ್ ಸೊಸೈಟಿ ಬಾಗಲಕೋಟೆ
ಜಯಸುದರ್ಶನ	769, 5ನೇ ಬ್ಲಾಕ್, ರಾಜಾಜಿನಗರ ಬೆಂಗಳೂರು_560010
ಗುರುರಾವ್ ದೇಶಪಾಂಡೆ	ಮಲ್ಲಾಡಿಹಳ್ಳಿ (ಹೊಳಲ್ಕೆರೆ ತಾಲ್ಲೂಕು)
ಎಸ್. ವಿ. ರಂಗಣ್ಣ	ನಿವೃತ್ತ ಇಂಗ್ಲೀಷ್ ಪ್ರಾಧ್ಯಾಪಕರು ಕೃಷ್ಣಮೂರ್ತಿಪುರಂ, ಮೈಸೂರು
ಕೃಷ್ಣಪರಮೇಶ್ವರ ಭಟ್ಟ	ಸಹಾಯಕ ಸಂಶೋಧಕರು ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು-560039
ವೆಂ. ಶ್ರೀನಿವಾಸ	ದ್ವಿತೀಯ ಎಂ.ಎ., ವಿದ್ಯಾರ್ಥಿ ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು-560039
ಬಿ. ಜಿ. ಪಾಂಡುರಂಗಯ್ಯಶೆಟ್ಟಿ	220, 'ವಿ.ಎನ್. ನಿಲಯ', 1ನೇ ಮೇನ್ ಸಂಪಂಗಿರಾಮನಗರ, ಬೆಂಗಳೂರು
ಎಂ. ಎನ್. ವ್ಯಾಸರಾವ್	ಯುನೈಟೆಡ್ ಕಮರ್ಷಿಯಲ್ ಬ್ಯಾಂಕ್ ಕೆಂಪೇಗೌಡ ರಸ್ತೆ, ಬೆಂಗಳೂರು
ಎಸ್. ಬಾಲಚಂದ್ರರಾವ್	ಗಣಿತಶಾಸ್ತ್ರ ಅಧ್ಯಾಪಕರು ಎ. ಇ. ಎಸ್. ನ್ಯಾಷನಲ್ ಕಾಲೇಜು ಗೋರಿಬಿದನೂರು
ನಿಂಗಣ್ಣ ಸಣ್ಣಕ್ಕಿ	ನ್ಯೂ ಇಂಗ್ಲೀಷ್ ಸ್ಕೂಲ್, ಗೋಕಾಕ
ಬಿ. ರಾಮಯ್ಯ	ತೆಲುಗು ವಿಭಾಗ ಮಹಾರಾಜಾ ಕಾಲೇಜು, ಮೈಸೂರು
ಸೀತಾರಾಮ ಜಾಗೀರದಾರ	ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ, ಮೈಸೂರು

ಬೆಂಗಳೂರು
ವಿಶ್ವವಿದ್ಯಾಲಯದ ಪ್ರಕಟಣೆಗಳ ವಿವರಗಳಿಗೆ
ದಯವಿಟ್ಟು ವ್ಯವಹರಿಸಿ :

ಉಪ-ನಿರ್ದೇಶಕ
ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು - 560039

ಬೆಂಗಳೂರು ವಿಶ್ವವಿದ್ಯಾಲಯ ಮುದ್ರಣಾಲಯ